# ಮಿತ್ರಲಾಭ

(ನೆನಪುಗಳ ಮೆರವಣಿಗೆ)

ಲಕ್ಷ್ಮಣ ಕೊಡಸೆ

# ಮಿತ್ರಲಾಭ

**(ನೆನಪುಗಳ ಮೆರವಣಿಗೆ)**

*** ಲಕ್ಷ್ಮಣ ಕೊಡಸೆ**

**ಲಕ್ಷ್ಮಣ ಕೊಡಸೆ**

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಹುಂಚ ಹೋಬಳಿಯ ಕೊಡಸೆ ಎಂಬ ಹಳ್ಳಿಯಲ್ಲಿ 1953ರಲ್ಲಿ ಜನಿಸಿದ ಲಕ್ಷ್ಮಣ ಕೊಡಸೆ ಅಪ್ಪಟ ಮಲೆನಾಡಿಗ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ(ಆನರ್ಸ್)., ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂಎ., ಪದವಿ ಗಳಿಸಿದ ನಂತರ ಜೀವನ ನಿರ್ವಹಣೆಗೆ ಸಿಕ್ಕಿದ್ದು ಪತ್ರಿಕಾ ಕ್ಷೇತ್ರ. 'ಜನಪ್ರಗತಿ', 'ಉದಯರವಿ' ವಾರಪತ್ರಿಕೆಗಳಲ್ಲಿ ಮೂರು ವರ್ಷ ಕೆಲಸ ಮಾಡಿ ನಂತರ ನೆಲೆ ನಿಂತದ್ದು 'ಪ್ರಜಾವಾಣಿ'ಯಲ್ಲಿ. 1978ರಿಂದ 2012ರವರೆಗೆ 34 ವರ್ಷ ಪ್ರಜಾವಾಣಿಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುವ ಲಕ್ಷ್ಮಣ ಕೊಡಸೆ, ಕಾಲೇಜು ದಿನಗಳಿಂದಲೂ ಸೃಜನಶೀಲ ಬರಹಗಾರ. ಐದು ಕಥಾಸಂಕಲನ, ಒಂಬತ್ತು ಕಾದಂಬರಿಗಳು, ಪತ್ರಿಕಾ ಬರಹಗಳ ಸಂಕಲನ, ವ್ಯಕ್ತಿಚಿತ್ರಣಗಳು, ಸಂಪಾದಿತ ಕೃತಿಗಳು ಸೇರಿ ಇದುವರೆಗೆ 43 ಕೃತಿಗಳನ್ನು ಹೊರತಂದಿದ್ದಾರೆ. ಇವರ ಸೃಜನಶೀಲ ಸಾಹಿತ್ಯ ಮತ್ತು ಪತ್ರಿಕಾ ಬರಹಗಳ ಸಂಕಲನಗಳು ಎರಡು ಪಿಎಚ್‌ಡಿ ಪದವಿಗಳಿಗೆ ಅಧ್ಯಯನ ಸಾಮಗ್ರಿಯಾಗಿವೆ. ಕರ್ನಾಟಕ ಮಾಧ್ಯಮ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಲಕ್ಷ್ಮಣ ಕೊಡಸೆ ನಿವೃತ್ತಿಯ ನಂತರ ಅಧ್ಯಯನ ಮತ್ತು ಬರವಣಿಗೆಯ ಜೊತೆಗೆ ಗ್ರಾಮೀಣ ಯುವಕ– ಯುವತಿಯರಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉಚಿತವಾಗಿ ತರಬೇತಿ ನೀಡುತ್ತಿರುವ ಸ್ವಯಂ ಸೇವಾ ಸಂಸ್ಥೆ ಆರ್.ಎಲ್.ಜಾಲಪ್ಪ ಅಕಾಡೆಮಿಯ ಕಾರ್ಯದರ್ಶಿಯಾಗಿ ಸಮಾಜಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

****************

## ನನ್ನ ಮಾತು

ನಿತ್ಯವೂ ನಡೆಯುತ್ತಿದ್ದ ಕುಶಲ ಸಂಭಾಷಣೆಯಲ್ಲಿ ಕೊನೆ ಇಲ್ಲದ ಚರ್ಚೆ, ಸಂವಾದಗಳು ನಡೆಯುತ್ತಿದ್ದಾಗ ಒಂದು ದಿನ ತಿಮ್ಮಪ್ಪ 'ಹೀಗೆಯೇ ನಾವು ಮಾತಾಡುತ್ತಿರುತ್ತೇವೆ. ಅದೆಲ್ಲ ಗಾಳಿಯಲ್ಲಿ ಲೀನವಾಗುತ್ತದೆ. ಕನಿಷ್ಠ ನಮ್ಮ ಮಕ್ಕಳಿಗಾದರೂ ನಾವಿಬ್ಬರು ಸತತ ಸಂಪರ್ಕದಲ್ಲಿ ಇದ್ದೆವು ಎಂಬುದಕ್ಕೆ ದಾಖಲೆಯಾದರೂ ಇರಬೇಕು' ಎಂದು ಹೇಳಿದ. ಆ ಕ್ಷಣಕ್ಕೆ ಏನೂ ಅನ್ನಿಸದಿದ್ರೂ ದಿನ ಕಳೆದಂತೆ ನಮ್ಮಿಬ್ಬರ

ಒಡನಾಟದ ಕುರುಹನ್ನು ಯಾವುದಾದರೂ ರೂಪದಲ್ಲಿ ಉಳಿಸಬೇಕೆಂಬ ಮನಸ್ಸಾಯಿತು. ಅದರಂತೆ ಸಿದ್ಧವಾದದ್ದು ಈ ಬರಹ.

ಇದು ಆತ್ಮಕತೆ ಅಲ್ಲ. ಇಬ್ಬರ ಒಡನಾಟದ ಕೆಲವು ನೆನಪುಗಳ ಸಂಗ್ರಹ. ವಿದ್ಯಾಭ್ಯಾಸವು ಒಂದು ಹಂತಕ್ಕೆ ಮುಟ್ಟಿದ ನಂತರ ಉದ್ಯೋಗಕ್ಕಾಗಿ ನಡೆಸಿದ ಕಸರತ್ತು, ನಂತರ ಕಟ್ಟಿಕೊಂಡ ಬದುಕಿನ ಪಯಣದಲ್ಲಿ ಒಬ್ಬರಿಗೊಬ್ಬರು ಮಾನಸಿಕವಾಗಿ ಜೊತೆಯಾಗಿ ಇದ್ದುದರ ಕೆಲವು ಸಮಯ ಸಂದರ್ಭಗಳನ್ನು ಇಲ್ಲಿ ನಿರೂಪಿಸಲು ಯತ್ನಿಸಿದ್ದೇನೆ. ಇದರಲ್ಲಿ ನಾವು ಬೆಳೆದು ಬಂದ ಪರಿಸರ, ಮಾರ್ಗದರ್ಶನ ನೀಡಿದ ಹಿರಿಯರು, ನೆರವಿಗೆ ಬಂದ ಬಂಧು ಮಿತ್ರರು, ಸಹೃದಯಿ ಗೆಳೆಯರು ಪ್ರಾಸಂಗಿಕವಾಗಿ ಕಾಣಿಸಿಕೊಂಡಿದ್ದಾರೆ. ಐದು ದಶಕಗಳಿಗೂ ಮೀರಿದ ಸಹ ಯಾತ್ರೆಯಲ್ಲಿ ಇಬ್ಬರ ವೃತ್ತಿ ಬದುಕುಗಳು ತಾರ್ಕಿಕ ಅಂತ್ಯವನ್ನು ಮುಟ್ಟಿದ ನಂತರ ನಮ್ಮ ಮಾನಸಿಕ ಆರೋಗ್ಯಕ್ಕಾಗಿ ನಡೆಸಿದ ಒಡನಾಟದ ಮೆಲುಕು ಈ ಬರಹದಲ್ಲಿದೆ.

ಪ್ರಜಾವಾಣಿಯಲ್ಲಿದ್ದಾಗ ಜೊತೆಯಾಗಿದ್ದ ಕೇಶವ ಮಳಗಿ ಮತ್ತು ಸತೀಶ್ ಚಪ್ಪರಿಕೆ ಹೊಸಪೀಳಿಗೆಯ ಪ್ರತಿಭಾವಂತ ಬರಹಗಾರರು. ಆರೋಗ್ಯಕರ ಜೀವನದೃಷ್ಟಿಯನ್ನು ಬದುಕು ಬರಹದಲ್ಲಿ ಮೂಡಿಸುತ್ತಿರುವ ಅವರಿಬ್ಬರೂ ನನ್ನ ಈ ಬರಹಕ್ಕೆ ಪ್ರವೇಶ ರೂಪದಲ್ಲಿ ಕೆಲವು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಅವರಿಗೆ ಕೃತಜ್ಞ, ನನ್ನ ಬರಹಗಳಿಗೆ ಸ್ಪಂದಿಸುವ ಹಿರಿಯ ಲೇಖಕಿ ಮೀನಾ ಮೈಸೂರು, ತಮ್ಮ ತಂದೆಯ ನೆನಪುಗಳನ್ನು ವಿಶಿಷ್ಟವಾಗಿ ದಾಖಲಿಸಿದ ಶೈಲಜಾ ಅಂಗಡಿ ಈ ಬರಹಕ್ಕೂ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ಈ ಬರಹದ ಕೆಲವು ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿದಾಗ ಅನೇಕ ಗೆಳೆಯರು ಸ್ಪಂದಿಸಿದ್ದಾರೆ. ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ಅವರಲ್ಲಿ ಕೆಲವರ ಮಾತುಗಳನ್ನು ಇಲ್ಲಿ ಬಳಸಿದ್ದೇನೆ. ಪ್ರತಿಕ್ರಿಯೆ ನೀಡಿದ ಎಲ್ಲ ಸಹೃದಯಿ ಮಿತ್ರರಿಗೂ ಕೃತಜ್ಞ.

ಈ ಕೃತಿಯನ್ನು ಪ್ರಕಟಿಸುತ್ತಿರುವ ಸಜ್ಜನ ಮಿತ್ರ ರವೀಂದ್ರನಾಥ ಸಿರಿವರ ಅವರಿಗೆ ಮನದಾಳದ ಕೃತಜ್ಞತೆಗಳು.

**– ಲಕ್ಷ್ಮಣ ಕೊಡಸೆ**
**ನಂ.45, 2ನೇ ಅಡ್ಡರಸ್ತೆ, ನ್ಯೂ ಬ್ಯಾಂಕ್ ಕಾಲೊನಿ,**
**ಕೋಣನಕುಂಟೆ, ಬೆಂಗಳೂರು– 560 62,**
**ಮೊಬೈಲ್: 9448484726**

***

## ವಯೋವಿಕಾಸದ ಕಥನ

ಲಕ್ಷ್ಮಣ ಕೊಡಸೆ ಕನ್ನಡದ ಹಿರಿಯ ಪತ್ರಕರ್ತರು, ವಿಶಿಷ್ಟ ಬಗೆಯ ಗದ್ಯ ಲೇಖಕರು. ವೃತ್ತಿ ಮತ್ತು ಪ್ರವೃತ್ತಿಗಳೆರಡಕ್ಕೂ ನ್ಯಾಯವೊದಗಿಸುವಂತೆ ಪತ್ರಿಕಾ ವರದಿ, ಲೇಖನ, ಅಂಕಣ ಬರಹಗಳ ಜತೆಜತೆಗೆ ಕಥೆ, ಕಾದಂಬರಿಗಳ ಮೂಲಕ ಒಳಗಿನ ಲೇಖಕನನ್ನು ಜತನದಿಂದ ಕಾಪಾಡಿಕೊಂಡು ಬಂದವರು. ಏಕಕಾಲಕ್ಕೆ ಎರಡು ಹರಿತ ಕಠಾರಿಗಳ ಮೇಲಿನ ಸವಾರಿ ಸುಲಭ ಸಾಧ್ಯವಲ್ಲ. ಹಾಗೆಂದೇ, ಕತ್ತಿಯಲುಗಿನ ಮೇಲೆ ನಡೆಯುತ್ತ ಎರಡೂ ಬದಿಯ ಅಕ್ಷರಲೋಕವನ್ನು ಜಯಿಸಿದವರ ಸಂಖ್ಯೆ ವಿರಳ. ಬಹುಶಃ ಲೇಖಕ ಕೊಡಸೆಯವರಲ್ಲಿ ಅಡಗಿರುವ ಮುಗ್ಧತೆ ಮತ್ತು ಹೊಂದಾಣಿಕೆಯ ಸ್ಥಿತಿ ಎರಡನ್ನೂ ನಿಭಾಯಿಸಲು, ಸಾಧಿಸಲು ಅನುವು ಮಾಡಿಕೊಟ್ಟಿರಬೇಕು. ಬಾಲ್ಯದಿಂದಲೂ ಯಾವುದನ್ನೂ ಕಪಿಯಾಗಿ ನೋಡದ, ಜಾತಿಯ

ಗರಳಕ್ಕೆ ಗಂಟಲನ್ನು ಒಗರಾಗಿಸಿಕೊಳ್ಳದ ಸಮಚಿತ್ತತೆ ಲಕ್ಷ್ಮಣ ಕೊಡಸೆಯವರ ಒಟ್ಟಾರೆ ಬರಹಗಳಲ್ಲಿ ಎದ್ದು ಕಾಣುವ ಅಂಶವಾಗಿದೆ.

ಕೊಡಸೆಯವರ ಈಗಿನ ಕೃತಿಯನ್ನು ಸುಲಭವಾಗಿ ಆತ್ಮಕಥೆ ಎಂದು ಕರೆದುಬಿಡಬಹುದು. ಆದರೆ, ಹಾಗೆ ಕರೆಯಲು ಹಿಂಜರಿಕೆಯಾಗಲು ಕಾರಣ, ಆತ್ಮನಿರೂಪಣೆಯ ಅಂಶಗಳಿದ್ದೂ ಇದು ಅದಕ್ಕಿಂತ ಹೆಚ್ಚಿನದನ್ನು ಹೇಳಲು ಹವಣಿಸುತ್ತಿರುವುದು ಮತ್ತು ಇದು ಕೊಡಸೆಯವರೇ ಹೇಳಿರುವಂತೆ 'ಅಲ್ಪವಿರಾಮ' ಮಾತ್ರವಾಗಿದ್ದು ಬೆಳೆಯುವ ಸಾಧ್ಯತೆಯನ್ನು ಹೊಂದಿರುವುದು.

ವ್ಯಕ್ತಿಯೊಬ್ಬ ಬಾಲ್ಯವನ್ನು ದಾಟುತ್ತ, ತಾರುಣ್ಯಕ್ಕೆ ಕಾಲಿಟ್ಟು ತನ್ನ ಬದುಕನ್ನು ಕಟ್ಟಿಕೊಳ್ಳಲು ನಡೆಸಿದ ಸೆಣೆಸಾಟವನ್ನು ಹಿಡಿದಿಡುವ ಈ ಕೃತಿಯನ್ನು ಇಂಗ್ಲಿಶ್‌ನಲ್ಲಾಗಿದ್ದರೆ ಸುಲಭವಾಗಿ 'ಕಮಿಂಗ್ ಆಫ್ ಏಜ್' ನೆರೆಟೀವ್ ಎಂದು ಹೇಳಿಬಿಡಬಹುದಾಗಿತ್ತು. ಇಂಗ್ಲಿಶ್‌ನಲ್ಲಿಯಾದರೂ 'ಕಮಿಂಗ್ ಆಫ್ ಏಜ್' ಪರಿಕಲ್ಪನೆಯ ಸಾಹಿತ್ಯ, ಸಿನಿಮಾ ಗಮನಾರ್ಹ ಸಂಖ್ಯೆಯಲ್ಲಿ ಲಭ್ಯವಿವೆ. ಆದರೆ, ಇಂತಹ 'ವಯೋವಿಕಾಸ' ಕಥನಗಳಿಗೆ ಕನ್ನಡ ಭಾಷೆ ಇನ್ನೂ ನುಡಿಗಟ್ಟನ್ನು ಟಂಕಿಸಿಕೊಳ್ಳಬೇಕಿದೆ. ಹರೆಯಕ್ಕೆ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು ವ್ಯಾಖ್ಯಾನವಿರಲು ಸಾಧ್ಯ. ಹದಿಮೂರರಿಂದ ಇಪ್ಪತ್ತೊಂದು ವಯೋಮಾನದವರೆಗೆ ಈ ವಯೋವಿಕಾಸವನ್ನು ಗುರುತಿಸಲಾಗುತ್ತದೆ. ಭಾರತೀಯ ಸಮಾಜದಲ್ಲಿ ಗಂಡು ಅಥವ ಹೆಣ್ಣು ಮದುವೆಗೆ ಸಿದ್ಧರಾದರೆಂದರೆ ಅವರು ವಯಸ್ಕರಾದಂತೆ.

ಬಾಲ್ಯ ಪೋಷಕರ ಅವಲಂಬನೆಯಲ್ಲಿ ಕಳೆಯುತ್ತದೆ. ವ್ಯಕ್ತಿ ಇಪ್ಪತ್ತೊಂದರ ಆಸುಪಾಸು ತಲುಪಿದ್ದೇ ತನ್ನ ಬದುಕಿನ ಎಲ್ಲ ಹೊಣೆಗಾರಿಕೆಯನ್ನು, ವೈಯಕ್ತಿಕ ಇಷ್ಟಾನಿಷ್ಟಗಳನ್ನು ತಾನೇ ಸಾಕ್ಷಾತ್ಕರಿಸಿಕೊಳ್ಳುವಂತೆ ರೂಪಾಂತರಗೊಳ್ಳುವುದು ಈ ವಯೋ ವಿಕಾಸದ ಸೋಜಿಗ. ಅವಲಂಬನೆಯು ಸ್ವಾವಲಂಬನೆಯಾಗಿ ಬದಲಾಗುವುದೇ ಇಲ್ಲಿನ ಬಹುಮುಖ್ಯ ಕ್ರಿಯೆ. ಈ ವಿವರಣೆ ಕೊಡಸೆಯವರ ಪ್ರಸ್ತುತ ಕೃತಿಯ ರೂಪುರೇಶೆಯನ್ನು ಚೆನ್ನಾಗಿ ಅರಹುತ್ತದೆ.

ಕೊಡಸೆ ಮಲೆನಾಡಿನವರು. ಬಾಲ್ಯದ ಭಾವಕೋಶವನ್ನು ರೂಪಿಸಿದ ಮಲೆನಾಡು ಪರಿಸರ, ಹರೆಯದ ಬಳಿಕ ಬದುಕು ಕಟ್ಟಿಕೊಟ್ಟ ನಗರಗಳಲ್ಲಿನ ಅನುಭವಗಳ ಮುಖಾಮುಖಿ ಅವರ ಬಹುಪಾಲು ಬರಹಗಳ ಭಿತ್ತಿಯಾಗಿವೆ. ಮಲೆನಾಡಿನ ಲೇಖಕರಿಗೆ ಬದುಕಿನ ಸುಖದುಃಖಗಳನ್ನು ಅಲ್ಲಿನ ದತ್ತವಾದ ಜೀವಪರಿಸರವು ಮೃದುಗೊಳಿಸುವ ಗುಣವನ್ನು ಹೊಂದಿರಬೇಕು. ಬಯಲುಸೀಮೆಯಲ್ಲಿನಂತೆ ಭೌಗೋಳಿಕ ಉಗ್ರತೆ, ರೂಕ್ಷತೆ ಜೀವವ್ಯಾಪಾರವನ್ನು ಇನ್ನಷ್ಟು ಕಹಿಯಾಗಿಸದು.

ಎಲ್ಲ ಒಳ್ಳೆಯ ಸಾಹಿತ್ಯದಂತೆ, ಸದ್ಯದ ವಯೋವಿಕಾಸ ಕಥನವು ಕೇವಲ ಬಾಲಕನೊಬ್ಬ ತರುಣನಾಗಿ ಬೆಳೆಯುವ ಕಥಾನಕ ಮಾತ್ರವಾಗಿರದೆ, ಒಂದು ಸಮುದಾಯದ ಸಾಂಸ್ಕೃತಿಕ ಸಂಕಥನವಾಗಿ ಓದುಗರನ್ನು ಎದುರುಗೊಳ್ಳುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿದೆ. ಈ ಕಥನದಲ್ಲಿ ಬಲಾಢ್ಯ ಶೂದ್ರ ಸಮುದಾಯಗಳ ಆಚೆಗಿರುವ ಬಹುಸಮುದಾಯಗಳ ಮೊದಲ ಮತ್ತು ಎರಡನೆಯ ತಲೆಮಾರಿನ ಶ್ರಮಜೀವಿಗಳು ತಮ್ಮ ಕುಟುಂಬವನ್ನು ಘನತೆಯಿಂದ ಸಲುಹುವುದು, ನಿಧಾನಕ್ಕೆ ಸ್ವಂತ ಪರಿಶ್ರಮದಿಂದ ಸಾಮಾಜಿಕ ಚಲನಶೀಲತೆ ಪಡೆಯುವುದನ್ನು ಕಾಣುತ್ತೇವೆ. ಜನವಿದೂರ ಕಾನನದ ನಡುವೆ ಬದುಕಿದ್ದರೂ, ತಮ್ಮ ಕುಟುಂಬ ಮತ್ತು ಸಮುದಾಯಗಳು ಶಿಕ್ಷಿತರಾಗುವುದರಿಂದ ಮತ್ತು ಸಂಘಟಿತರಾಗುವುದರಿಂದ ಮಾತ್ರ ವೈಯಕ್ತಿಕ–ಸಾಮುದಾಯಿಕ ಉನ್ನತಿಯನ್ನು ಸಾಧಿಸಲು ಸಾಧ್ಯವೆಂಬ ಮುಂಗಾಣ್ಕೆಯನ್ನು ಆ ಹಿರಿಯ ತಲೆಮಾರಿನವರು

ಹೊಂದಿದ್ದರು ಎಂಬುದನ್ನು ಈ ಕಥನವು ಮತ್ತೆ ಮತ್ತೆ ಪ್ರಸ್ತಾಪಿಸುತ್ತದೆ. ದೀವರು ಇಲ್ಲವೆ ಹಳೇಪೈಕದವರು ಎಂದು ಗುರುತಿಸುವ ಸಮುದಾಯದ ಹಿರಿಯರು ತಮ್ಮ ಸತತ ಪರಿಶ್ರಮ ಮತ್ತು ಜಾಣ್ಮೆಗಳಿಂದ ಸಮಾಜದಲ್ಲಿ ಗೌರವ–ಪ್ರತಿಷ್ಠೆ ಪಡೆದ ಬಗೆಯನ್ನು ಈ ಕೃತಿಯು ಚೆಲುವಾಗಿ ನಿರೂಪಿಸುತ್ತದೆ. ಲಕ್ಷ್ಮಣ ಕೊಡಸೆಯವರ ತಂದೆ ಅಂತಹ ದೂರಗಾಮಿ ಕಾಣ್ಕೆಯನ್ನು ಹೊಂದಿದ್ದರು ಎಂಬುದನ್ನು ಇಲ್ಲಿ ಅತ್ಯಂತ ನಿರುದ್ವಿಗ್ನವಾಗಿ ಚಿತ್ರಿಸಲಾಗಿದೆ.

ಮಲೆನಾಡಿನ ಸಂಕಥನವೆಂದರೆ ಕುವೆಂಪು ಮತ್ತು ತೇಜಸ್ವಿಯವರನ್ನು ಪ್ರಸ್ತಾಪಿಸದೆ ಮುಂದುವರೆಯಲು ಹೇಗೆ ಸಾಧ್ಯ? ಆದರೆ, ಕೊಡಸೆಯವರು ಹೊಸನಗರ ತಾಲೂಕಿನ ಶೂದ್ರ ಸಮುದಾಯಕ್ಕೂ, ಕುವೆಂಪು ಅವರ ಕೃತಿಗಳ ಭಿತ್ತಿಯಾದ ತೀರ್ಥಹಳ್ಳಿಯ ಶೂದ್ರ ಸಮುದಾಯಗಳಿಗೂ ಇರುವ ಭಿನ್ನತೆಯನ್ನು ಚೆನ್ನಾಗಿಯೇ ವಿವರಿಸಿದ್ದಾರೆ. ತೀರ್ಥಹಳ್ಳಿ ತಾಲೂಕಿನ ಭೂ ಒಡೆಯರು ಪ್ರಮುಖವಾಗಿ ಒಕ್ಕಲಿಗರು. ಅಲ್ಲಿನ ದೀವರು ಸ್ವಂತಕ್ಕೆ ತೋಟ–ಗದ್ದೆಗಳನ್ನು ಹೊಂದುವಂತಿರಲಿಲ್ಲ. ಮಾತ್ರವಲ್ಲ, ಒಕ್ಕಲಿಗರ ಸಾಂಸ್ಕೃತಿಕ ಮೇಲರಿಮೆಯ ಪ್ರತೀಕವಾದ ಮದುವೆ ಮತ್ತಿತರ ಆಚರಣೆಗಳನ್ನು ಅನುಕರಿಸುವಂತಿರಲಿಲ್ಲ. ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ ಹಳೇಪೈಕದ ಸೇಸನಾಯ್ಕರು ಇಂಥ ದಬ್ಬಾಳಿಕೆಯ ವಿರುದ್ಧ ತಮ್ಮದೇ ಅರ್ಥದಲ್ಲಿ ಧ್ವನಿಯೆತ್ತುವುದನ್ನು ಕಾಣುತ್ತೇವೆ. ವ್ಯತಿರಿಕ್ತವಾಗಿ, ಹೊಸನಗರ ತಾಲೂಕಿನ ಭೂಹಿಡುವಳಿದಾರರಲ್ಲಿ ಹೆಚ್ಚಿನವರು ಲಿಂಗಾಯತರು. ಈ ಕಾರಣವಾಗಿಯೇ ದೀವರು ಅಂಗೈಯಗಲದ ತೋಟ, ಗದ್ದೆಯನ್ನು ಹೊಂದಿ, ಲಿಂಗಾಯತರ ಜಮೀನನ್ನು ಗೇಣಿ ಪಡೆದು ಆದಾಯ ಹೆಚ್ಚಿಸಿಕೊಳ್ಳುವ ಮಾರ್ಗ ಕಂಡುಕೊಂಡಿದ್ದರು ಎಂದು ಕೊಡಸೆ ಹೇಳುತ್ತಾರೆ. ಮಲೆಗಳಲ್ಲಿನ ಮದುಮಗಳು ಕೃತಿಯಲ್ಲಿನ ಅನೇಕ ಪಾತ್ರಗಳು ಕೊಡಸೆಯವರ ಕಥನದಲ್ಲಿ ಜೀವಂತ ವ್ಯಕ್ತಿಗಳಾಗಿ ಬರುತ್ತಾರೆ. ಅಲ್ಲಿನ ಸೇಸನಾಯ್ಕರಂತೆಯೇ ಇಲ್ಲಿಯೂ ಒಂದು ಜೀವಂತ ಪಾತ್ರವಿದೆ. ಮತ್ತು ಆ ಪಾತ್ರವಾದ 'ಬಡಿಯ ನಾಯ್ಕರ' ನಿಜ ಜೀವನದಲ್ಲಿನ ಹೋರಾಟ, ಅವರ ಸುತ್ತ ಕಟ್ಟಿದ್ದ ದಂತಕಥೆ ಮತ್ತು ಅವರು ಪಡೆದ ಯಶಸ್ಸಿನ ನಿರೂಪಣೆ ಮನ ಮುಟ್ಟುವಂತಿವೆ.

ಕುವೆಂಪು ಮತ್ತು ತೇಜಸ್ವಿಯವರ ಕೃತಿಗಳು ಮಲೆನಾಡಿನ ಒಟ್ಟಾರೆ ಶೂದ್ರ ಸಮುದಾಯಗಳ ವಿಕಾಸದ ಕಥೆಯನ್ನು ತೆರೆದಿಟ್ಟರೆ, ಕೊಡಸೆಯವರ ಕೃತಿಗಳು (ಕಾದಂಬರಿ, ಕಥೆ, ಕೆಲವು ಅಂಕಣ ಬರಹಗಳು ಮತ್ತು ಸದ್ಯದ ಕೃತಿ) ಆ ಶೂದ್ರ ಸಮುದಾಯದ, ಒಂದು ನಿರ್ದಿಷ್ಟ ಕೆಳ ಸಮುದಾಯವಾದ ದೀವರ ಜನಾಂಗದ ಬದುಕಿನ ಕಷ್ಟಸುಖಗಳನ್ನು ಅನಾವರಣಗೊಳಿಸುತ್ತವೆ. ಅತ್ಯಂತ ಸಮೀಪದಿಂದ ಕಂಡುಂಡು ಕಥೆಯನ್ನು ಕಂಡಿರಿಸುವುದು; ಅನುಭವಕ್ಕೊಳಗಾದವನು ತನ್ನ ಕಥೆಯನ್ನು ತಾನೇ ಕಥಿಸುವುದು, ಇಷ್ಟೇ ವ್ಯತ್ಯಾಸ. ಆದರೆ, ಲೇಖಕನೊಬ್ಬನ ಕಲಾಭಿಜ್ಞತೆ, ಕುಸುರಿ, ಅಪ್ಪಟ ಪ್ರಾಮಾಣಿಕತೆ ಮತ್ತು ಸ್ವಾನುಭೂತಿಗಳು ಆಯಾ ಕೃತಿಗಳನ್ನು ಎಲ್ಲ ಕಾಲಕ್ಕೂ ಸಮಕಾಲೀನಗೊಳಿಸುವ ಗುಣವನ್ನು ಪಡೆದಿರುತ್ತವೆ.

ಈ ಕೃತಿಯಲ್ಲಿ ಸಾಂಸ್ಕೃತಿಕ ವಿವರಗಳು, ಆಧುನಿಕತೆಯ ಭರಾಟೆಯಲ್ಲಿ ಮರೆಯಾಗಿರಬಹುದಾದ, ಬದುಕಿನ ಭಾಗವೇ ಆಗಿದ್ದ ನುಡಿಗಟ್ಟುಗಳು ಕಿಕ್ಕಿರಿದಿವೆ. ದಡಪೆ, ಹ್ವಾಕೆ, ಇಚ್ಚಾಲು (ನಿರ್ದಿಷ್ಟ ಬಗೆಯ ಉಕ್ಕೆ, ಉಳುಮೆ); ಆಯಾ ಕಾಲಕ್ಕೆ ಆರ್ಥಿಕ ಸ್ಥಿತಿಗತಿ ಅವಲಂಬಿಸಿ ವಿಸ್ತಾರಗೊಳ್ಳುತ್ತ ಹೋಗುವ ಮೂರು–ಐದಂಕಣದ ಹುಲ್ಲಿನ ಮನೆಗಳು, ಪದೋನ್ನತಿಗೊಂಡ ಮಂಗಳೂರು ಹಂಚಿನ ಮನೆಗಳು, 'ರೆಡಿ' (ರೆಡಿಯೊ), ಬೈಸಿಕಲ್, ತೀರ್ಥಹಳ್ಳಿ–ಸಾಗರದ ನಡುವಿನ ಜಲ್ಲಿ ರಸ್ತೆಯಲ್ಲಿ ಕ್ವಚಿತ್ತಾಗಿ ಓಡಾಡುತ್ತಿದ್ದ ಬಸ್ಸು, ಶಿಕಾರಿ ಹುಚ್ಚಿನ

ಯಜಮಾನರು, ಹಸಿಗೆಯ ವಿಧಾನಗಳು, ಕವಳಿಗೆ ಪದ್ಧತಿ ಇತ್ಯಾದಿಗಳು ಓದುಗರಿಗೆ ಕಂಡರಿಯದ ಸಾಂಸ್ಕೃತಿಕ ಲೋಕದ ಚೆಲುವನ್ನು ಕಾಣಿಸಬಲ್ಲವು. ಇಲ್ಲಿ ಪ್ರಸ್ತಾಪಗೊಂಡ ವಿನಿಮಯ ಪದ್ಧತಿಯ ವಿವರಗಳು ಒಂದು ಸಮಾಜ ಹೇಗೆ ಪರಸ್ಪರ ಅವಲಂಬಿತವಾಗಿ ಸ್ವಾವಲಂಬಿಯಾಗಿರಬಲ್ಲುದು ಎಂಬುದನ್ನೇ ತೋರುತ್ತದೆ. ಇಲ್ಲಿನ ವಿನಿಮಯದಲ್ಲಿ ಹಣ ಮತ್ತು ವ್ಯವಹಾರಗಳು ಪ್ರಧಾನವಾಗಿರದೆ 'ಸಂಬಂಧ' ಮತ್ತು 'ಸಾಮಾಜಿಕ ಹೊಣೆಗಾರಿಕೆ' ಮುಂಚೂಣಿಯಲ್ಲಿರುವುದು ಕೂಡ ಇಂದಿನ ಸಮಾಜಕ್ಕೆ ಪಾಠವನ್ನೇ ಹೇಳಬಲ್ಲುದು.

ಈ ಕೃತಿಯನ್ನು ವಿಶಾಲವಾಗಿ ಎರಡು ಭಾಗಗಳಲ್ಲಿ ನೋಡಬಹುದು. ಮೊದಲ ಭಾಗದಲ್ಲಿ ಒಬ್ಬ ಸಾಧಾರಣ ಹುಡುಗ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಿಕ್ಷಣ ಪಡೆದು, ಹೈಸ್ಕೂಲಿಗೆ ದೊಡ್ಡ ಊರು ಸೇರುವುದು. ಆನಂತರ ಪದವಿ, ಸ್ನಾತಕೋತ್ತರ ಪದವಿ ಪಡೆಯುವುದು. ಈ ಶೈಕ್ಷಣಿಕ ಹೋರಾಟವು ಒಂದು ಮಹಾಯಾತ್ರೆ. ಎಲ್ಲ ಬಡ ಸಮುದಾಯಗಳ ಮಕ್ಕಳೂ ಅನುಭವಿಸುವಂಥದ್ದು. ಹೋರಾಟದ ಮೂಲಕ ಶಿಕ್ಷಣ ಪಡೆಯುವುದು ಒಂದು ಹಂತವಾದರೆ, ಬಳಿಕ ಉದ್ಯೋಗ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಎರಡನೆಯ ಘಟ್ಟ. ಈ ಎಲ್ಲ ಹಂತಗಳಲ್ಲಿಯೂ ಕುಟುಂಬ, ಗ್ರಾಮ ಸಮುದಾಯ, ಅಕ್ಕಪಕ್ಕದ ಊರಿನ ಜನ, ಬಳಗ, ಹಿತೈಷಿಗಳು, ಗೆಳೆಯರು ಆಸರೆ ಒದಗಿಸುವುದರಿಂದಲೇ ಬದುಕು ಸಹ್ಯ ಎಂಬ ವಿಶಾಲಾರ್ಥವನ್ನು ಕೃತಿ ನೀಡುತ್ತದೆ. ಸಹಬಾಳ್ವೆಯ ಮನಸ್ಥಿತಿ ಜೀವನದ ಕಡುಕಷ್ಟಗಳನ್ನು ಪಾರು ಮಾಡಿಸುತ್ತದೆ ಎಂಬ ನಿಲುವನ್ನು ವ್ಯಕ್ತಪಡಿಸುತ್ತದೆ.

ಸ್ನಾತಕೋತ್ತರ ಪದವಿಯ ನಂತರ ಸ್ವಾವಲಂಬಿ ಬದುಕಿಗಾಗಿ ನಡೆಸುವ ಪ್ರಯತ್ನಗಳನ್ನು ಎರಡನೆಯ ಭಾಗವೆಂದು ಗುರುತಿಸಬಹುದು. ಆ ಕಾಲದ ಹಿರಿಯ ಸಾಹಿತಿಗಳು, ಸಹಪಾಠಿಗಳು, ಪತ್ರಕರ್ತರು, ಪರಿಚಿತರು, ರಾಜಕೀಯ–ಸಾಂಸ್ಕೃತಿಕ ವಾತಾವರಣದ ವಿವರಗಳು ಇಲ್ಲಿವೆ. ತುರ್ತು ಪರಿಸ್ಥಿತಿ ಮತ್ತು ಆಗಿದ್ದ ಸಾಮಾಜಿಕ ಸನ್ನಿವೇಶದ ಪ್ರಸಂಗಗಳು ಇಂದಿನ ತಲೆಮಾರಿನ ಓದುಗರಿಗೆ ಹೊಸ ವಿವರಗಳಾಗಿ ಕಾಣಬಲ್ಲವು. 1970–80ರ ದಶಕದಲ್ಲಿ ಪದವಿ, ಪ್ರತಿಭೆ, ಹೊಸತನ್ನು ಸಾಧಿಸುವ ಹುಮ್ಮಸ್ಸು, ಸಾಮಾಜಿಕ ಕಳಕಳಿಗಳಿದ್ದರೂ ದೇಶದ ನಿರುದ್ಯೋಗ ಸಮಸ್ಯೆ ಹೇಗೆ ಯುವಕರನ್ನು ಅಪ್ರತಿಭರನ್ನಾಗಿಸಿ, ಹಣ್ಣಾಗಿಸಿತ್ತು ಎಂಬುದು ಕಣ್ಣಿಗೆ ಕಟ್ಟುವಂತಿದೆ. ಈ ಬಗೆಯ ಸನ್ನಿವೇಶವೇ ಆ ಕಾಲದ ಯುವಕರು ವೃತ್ತಿಗಳಲ್ಲಿ ಸಾಧಿಸಿದ ದಕ್ಷತೆ, ಕ್ಷಮತೆ, ಬದ್ಧತೆ ಮತ್ತು ಪ್ರಾಮಾಣಿಕತೆಗೆ ಅನುವು ಮಾಡಿಕೊಟ್ಟಿತೆ? ಮೊದಲ ತಲೆಮಾರಿನ ಸಾಕ್ಷರ ಸಮುದಾಯ ತನ್ನ ಸಾಮಾಜಿಕ ಜವಾಬ್ದಾರಿ ಸರಿಯಾಗಿ ನಿರ್ವಹಿಸದಿದ್ದುದರಿಂದಲೇ ಸಮಾಜವು ವಿಘಟಿತವಾಯಿತೆ? ಎಂಬುದು ಅಧ್ಯಯನ ಯೋಗ್ಯ ವಿಷಯ. ಕೊಡಸೆಯವರ ಬದುಕಿನ ಏಳುಬೀಳಿನ ಕಥೆಯನ್ನು ಓದುಗರು ಕೃತಿಯಲ್ಲಿಯೇ ಎದುರುಗೊಂಡಾಗ ಅತ್ಯಂತ ನಿಖರ ಓದಿನ ಅನುಭವ ಪಡೆಯಬಲ್ಲರು.

ಈ ಕೃತಿ ಏನನ್ನೋ ನೆನಪಿಸಿಕೊಳ್ಳುತ್ತ, ನಿವೃತ್ತಿಯ ಬದುಕಿನ ಪ್ರಸ್ತಾಪದೊಂದಿಗೆ ಅಂತ್ಯವಾಗಿದೆ. ಆದರೆ, ನಾನು ಮಾತ್ರ, ಕೊಡಸೆಯವರು ಮಾರ್ಚ್ ಒಂದು, 1978ರಂದು ಪ್ರಜಾವಾಣಿ ಸೇರಿದ ಘಟನೆಯೊಂದಿಗೆ ಅಂತ್ಯ ಕಲ್ಪಿಸಿಕೊಳ್ಳುವೆ. ಈ ಘಟನೆಗೆ ಒಂದು ಐತಿಹಾಸಿಕ ಮಹತ್ವವಿದೆ. ಅಂದು ಪ್ರಜಾವಾಣಿ ಸೇರಿದ ಆರು ತರುಣರು ಸ್ನಾತಕೋತ್ತರ ಪದವೀಧರರು ಮತ್ತು ಹಿಂದುಳಿದ ಸಮುದಾಯಗಳಿಗೆ ಸೇರಿದವರು. ಕ್ರಮವಾಗಿ, ಲಕ್ಷ್ಮಣ ಕೊಡಸೆ, ಡಿ.ವಿ. ರಾಜಶೇಖರ, ಶಿವಾಜಿ ಗಣೇಶನ್, ಇಂದೂಧರ ಹೊನ್ನಾಪುರ, ಇ.ವಿ. ಸತ್ಯನಾರಾಯಣ ಮತ್ತು ಚೌಡೇಗೌಡ ಬೀಡನಹಳ್ಳಿ ಈ ತರುಣ ಪತ್ರಕರ್ತರು. ಇವರಲ್ಲಿ, ಡಿ.ವಿ. ರಾಜಶೇಖರ ಮತ್ತು ಇಂದೂಧರ ಹೊನ್ನಾಪುರ ಕವಿಗಳೆಂದು ಪರಿಚಿತರಾಗಿದ್ದವರು ಆಮೇಲೆ,

ಪ್ರವೃತ್ತಿಯನ್ನು ಸಂಪೂರ್ಣ ಬಿಟ್ಟುಕೊಟ್ಟಿದ್ದು ಸೋಜಿಗ. ಆ ಅರ್ಥದಲ್ಲಿ ಕೊಡಸೆಯವರು ತಮ್ಮ ಅಂತರಂಗದ ಲೇಖಕನ ಕಿಚ್ಚನ್ನು ಇನ್ನೂ ಉಳಿಸಿಕೊಂಡಿದ್ದಾರೆ. ಹೇಳಬೇಕಿರುವುದು ಅದಲ್ಲ. ಒಂದು ಸಂಕ್ರಮಣ ಕಾಲಘಟ್ಟದಲ್ಲಿ ಪತ್ರಿಕಾಕ್ಷೇತ್ರಕ್ಕೆ ಬಂದ ಕೊಡಸೆ ಪೀಳಿಗೆಯವರು 'ನಡುಕರ' ತಲೆಮಾರಿನವರು. ಆ ಮೊದಲು ಮೇಲ್ಜಾತಿಯ ಪ್ರಾಬಲ್ಯದಲ್ಲಿದ್ದ ಪತ್ರಿಕಾರಂಗ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡ ಕಾಲಘಟ್ಟವಿದು.

ಕೊಡಸೆ ತಲೆಮಾರಿನವರು ಎದುರಿಸಿದ ವೃತ್ತಿ ತಲ್ಲಣ, ಸಂಕಟ, ಸವಾಲು ಮತ್ತು ಅದನ್ನು ವೈಯಕ್ತಿಕ ನೆಲೆಯಲ್ಲಿ ಹಾಗೂ ಸಮಾನ ಮನಸ್ಕ ನೆಲೆಯಲ್ಲಿ ಕಂಡುಕೊಂಡ ಪರಿಹಾರ ಮತ್ತು ಸಾಧ್ಯತೆಗಳನ್ನು ಕೃತಿ ಚರ್ಚಿಸುವುದಿಲ್ಲ. ಅದನ್ನು ಪ್ರತ್ಯೇಕವಾಗಿಯೇ ಬರೆಯಬೇಕು ಎಂದು ಕೊಡಸೆಯವರೇ ಹೇಳಿಕೊಂಡಿದ್ದಾರೆ. ಸಂಘರ್ಷದ ಹಾದಿ ನೀಡಿದ ಒಳನೋಟ, ಪಕ್ವತೆ ಮತ್ತು ಸಾಧ್ಯವಾಗಿಸಿದ ಗುಣಾತ್ಮಕ ಬದಲಾವಣೆಗಳು ಇಂದಿನ ಲೇಖಕರಿಗೆ, ತರುಣ ಪತ್ರಕರ್ತರಿಗೆ ಹೊಸ ಬೆಳಕನ್ನು ಮೂಡಿಸಬಲ್ಲವು. ವೃತ್ತಿಪರತೆ, ವೃತ್ತಿದಕ್ಷತೆ, ವೈಯಕ್ತಿಕ ನೆಲೆಯ ಬದ್ಧತೆ ಮತ್ತು ಸಮುದಾಯಗಳ ಕುರಿತ ಕಳಕಳಿ ಗೈರುಹಾಜರಾಗಿರುವ, ಹುಸಿ ಶ್ರೇಷ್ಠತೆ, ಸ್ವಜನ ಪಕ್ಷಪಾತ, ಜಾತಿ, ಪ್ರಾದೇಶಿಕತೆ, ಉಪಭಾಷೆಗಳ ರಾಜಕಾರಣದಲ್ಲಿ ಮುಳುಗಿರುವ ಈ ತಲೆಮಾರಿನ ಪತ್ರಿಕಾರಂಗದ ವೃತ್ತಿಪರರಿಗೆ ಹಿಂದೆಂದಿಗಿಂತ ಇಂದು ಅಂತಹ ಒಳನೋಟಗಳು ಅಗತ್ಯವಾಗಿವೆ.

ಉಳಿದಂತೆ, ಈಗಾಗಲೇ ಹೇಳಿದಂತೆ ಮನೆಯವರಿಂದ ಅತಿ ಸಾಮಾನ್ಯ ಅನ್ನಿಸಿಕೊಂಡಿದ್ದ ಬಾಲಕನೊಬ್ಬ ತನ್ನ ವಯೋವಿಕಾಸದಲ್ಲಿ ಹೇಗೆ ತನ್ನ ಸ್ವಾವಲಂಬಿ ಬದುಕನ್ನು ರೂಪಿಸಿಕೊಂಡ ಎಂಬುದನ್ನು ಈ ಕೃತಿ ಅತ್ಯಂತ ಪರಿಣಿತ ಭಾಷೆಯಲ್ಲಿ ತೆರೆದಿಡುತ್ತದೆ. ಇಂತಹ ಹಲವು ಕಾರಣದಿಂದಲೇ ಇದೊಂದು ಶುಷ್ಕ ಆತ್ಮನಿರೂಪಣೆಯಾಗದೆ, ಸಾಂಸ್ಕೃತಿಕ–ಸಾಮಾಜಿಕ ಸಂಕಥನವಾಗಿ ಓದುಗರನ್ನು ನಿಧಾನಕ್ಕೆ ಆವರಿಸುವ ಗುಣವನ್ನು ಪಡೆದಿದೆ. ಅಂದಹಾಗೆ, ಲಕ್ಷ್ಮಣ ಕೊಡಸೆ ನಾನು ಕಿರು ಕಾಲಾವಧಿಯಲ್ಲಿ ಪ್ರಜಾವಾಣಿಯಲ್ಲಿದ್ದಾಗ ನನ್ನ 'ಬಾಸ್' ಆಗಿದ್ದವರು. ಅವರ ವಿಶ್ವಾಸಕ್ಕೆ ಕೃತಜ್ಞತೆಗಳು.

**–ಕೇಶವ ಮಳಗಿ**

ಬೆಂಗಳೂರು

***

## ಪ್ರಬುದ್ಧ ಬದುಕು–ಸ್ನೇಹವೊಂದರ ಚದುರಿದ ಚಿತ್ರಗಳು

ಮಲೆನಾಡಿನ ಜನಜೀವನದ ಚಿತ್ರಣಗಳನ್ನು ಸೂಕ್ಷ್ಮ–ಸೃಜನಶೀಲ ಮನಸ್ಸುಳ್ಳ ಯಾವುದೇ ವ್ಯಕ್ತಿ ಬರೆದರೂ ಅದು ಆತ್ಮೀಯವಾಗಿ ಬಿಡುತ್ತದೆ. ವೈಯಕ್ತಿಕವಾಗಿ ನಾನೂ ಕೂಡ ಅಂತಹುದೇ ಪರಿಸರದಲ್ಲಿ ಹುಟ್ಟಿ ಬೆಳೆದ ಕಾರಣದಿಂದಲೋ ಏನೋ, ಲಕ್ಷ್ಮಣ ಕೊಡಸೆ ಅವರ ಈ 'ಮಿತ್ರಲಾಭ'ದ ಮೊದಲ ಭಾಗವನ್ನು ಓದುತ್ತಾ ಹೋದಾಗ ಸುಮಾರು ಆರು ದಶಕಗಳ ತೀರ್ಥಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳ, ಅಲ್ಲಿನ ಜನಜೀವನದ ಚಿತ್ರ ಕಣ್ಣೆದುರು ಬಂದು ನಿಂತಿತ್ತು. ಜೊತೆ–ಜೊತೆಯಲ್ಲಿ ನನ್ನ ಬಾಲ್ಯದ ದಿನಗಳು ಮತ್ತು ಚಪ್ಪರಿಕೆ ಮನೆಯ ಚಿತ್ರಗಳು ಕೂಡ ನೆನಪಾದವು. ಒಂದೇ ವ್ಯತ್ಯಾಸ. ಅವರದ್ದು ಘಟ್ಟದ ಮೇಲಿನ ಮನೆ. ನಮ್ಮದು ಘಟ್ಟದ ಕೆಳಗಿನ, ಪಶ್ಚಿಮ ಘಟ್ಟಗಳ ತಪ್ಪಲಿನ ದಟ್ಟ ಕಾಡಿನ ನಡುವಿನ ಮನೆ.

ಅದೇ ದಟ್ಟ ಕಾನನ. ತೋಟ–ಗದ್ದೆಯಂಚಿನ ಒಂಟಿ ಮನೆ. ಧೋ ಎಂದು ಸುರಿವ ಮಳೆ. ಹಸಿರ ಬತ್ತದ ಗದ್ದೆಗಳು. ಮುಗಿಲಿನತ್ತ ಮುಖಮಾಡಿ ನಿಂತು ತೆನೆ ತೂಗುವ ತೆಂಗು–ಅಡಿಕೆ ತೋಟಗಳು. ಗಟ್ಟಿ ಬೇರಿಗಂಟಿಕೊಂಡೇ ಕಟ್ಟಿದ ಪ್ರಬುದ್ಧ ಬದುಕು–ಭಾವ–ಹೋರಾಟ–ಪ್ರಾಮಾಣಿಕತೆ–ಯಶಸ್ಸು–ಸಾರ್ಥಕ ಭಾವನೆಗಳು.

ಸುಮಾರು ಆರು ದಶಕಗಳ ಹಿಂದೆ ತೀರ್ಥಹಳ್ಳಿ ಸುತ್ತಲಿನ ಗ್ರಾಮಜೀವನ ಹೇಗಿತ್ತು ಎಂಬ ಕುತೂಹಲದ ನಡುವೆ ತೇಲುತ್ತಲೇ, ಅಲ್ಲಿನ ಎರಡು ಹಳ್ಳಿಗಳಲ್ಲಿ ಹುಟ್ಟಿ ಬೆಳೆದ ಲಕ್ಷ್ಮಣ–ತಿಮ್ಮಪ್ಪ ಎಂಬ 'ಮಿತ್ರ'ರಿಬ್ಬರು ತಮ್ಮ ಸ್ವಯಂ ಪ್ರಯತ್ನದಿಂದಲೇ ವಿದ್ಯಾಭ್ಯಾಸ ಮಾಡಿ, ಬದುಕು ಕಟ್ಟಿಕೊಂಡ ಸಂದರ್ಭದಲ್ಲಿನ ಚದುರಿದ ಚಿತ್ರಗಳು ಇಲ್ಲಿವೆ. ಇಲ್ಲಿನ ಚಿತ್ರಗಳು ಶರವೇಗದಲ್ಲಿ ಓಡುತ್ತ, ಬಿಡಿ ಬಿಡಿಯಾಗಿ ಇದ್ದರೂ ಲೇಖಕರು ಏನು ಹೇಳಬೇಕು ಎಂದು ಬಯಸಿದ್ದರೋ, ಅದನ್ನು ಮನತಟ್ಟುವಂತೆ ಹೇಳಿದ್ದಾರೆ.

ಲಕ್ಷಣ ಕೊಡಸೆ– ತಿಮ್ಮಪ್ಪ ಬರುವೆ ಅವರ 'ಜಂಟಿ ಬದುಕು' ಕೇವಲ ಒಂದು ಕೃತಿಯಾಗಿ ಅಥವಾ ಸಾಹಿತ್ಯ–ಸಂಸ್ಕೃತಿಯ ದೃಷ್ಟಿಯಿಂದ ಮಾತ್ರವಲ್ಲ, ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ–ರಾಜಕೀಯ ವಿಕಸನದ ದೃಷ್ಟಿಯಿಂದ ಕೂಡ ಅತ್ಯಂತ ಮುಖ್ಯವಾಗುತ್ತದೆ. ಈ ಮಾತನ್ನು ಕೇವಲ ಇವರಿಬ್ಬರ ಬದುಕು ಅಥವಾ ಜೀವನ ಚರಿತ್ರೆಯ ತುಣುಕುಗಳ ಕುರಿತಂತೆ ಮಾತ್ರ ಹೇಳಲಾಗುವುದಿಲ್ಲ. 1950ರಿಂದ 2020ರ ಈ ಅವಧಿಯ ಏಳು ದಶಕಗಳ ಅವಧಿಯಲ್ಲಿ ಹುಟ್ಟಿ–ಬದುಕಿ–ಬಾಳಿದ ಎಲ್ಲರ ಬದುಕಿಗೂ ಮೇಲಿನ ಮಾತು ಅನ್ವಯಿಸುತ್ತದೆ. ಬದುಕಿನ ಜೊತೆ–ಜೊತೆಯಲ್ಲಿಯೇ ಕಳೆದ ಏಳು ದಶಕಗಳ ಅವಧಿಯಲ್ಲಿ ನಮ್ಮ ದೇಶ ಹೇಗೆ ಸಾಮಾಜಿಕ–ರಾಜಕೀಯ ನೆಲೆಯಲ್ಲಿ ವಿಕಾಸಗೊಂಡಿತು ಎನ್ನುವುದರ ಮೇಲೆ ಕೂಡ ಇಂತಹ ಕೃತಿಗಳು ಪರೋಕ್ಷವಾಗಿ ಬೆಳಕು ಚೆಲುತ್ತಾ ಸಾಗುತ್ತದೆ. ಆ ಕಾರಣದಿಂದಲೇ ಜೀವನ ಚರಿತ್ರೆಗಳು ಅಥವಾ ಇಂತಹ ಚದುರಿದ ಚಿತ್ರಗಳು ಮುಖ್ಯವಾಗುತ್ತವೆ.

ಸ್ವಾತಂತ್ರ್ಯೋತ್ತರದ ಈ ಏಳು ದಶಕಗಳ ಅವಧಿಯಲ್ಲಿ– ಗ್ರಾಮ ಕೇಂದ್ರೀಕೃತ, ಹಸಿದಿದ್ದ, ಜಾತಿ ವ್ಯವಸ್ಥೆಯಲ್ಲಿ ಕಮರಿದ, ಹಸಿರು ಕ್ರಾಂತಿಯಿಂದ ಅರಳಿದ, ತುರ್ತು ಪರಿಸ್ಥಿತಿಯಲ್ಲಿ ನರಳಿದ, ಸಮಾಜವಾದಿ ರಾಜಕೀಯದ ಮೂಲಕ ಮರಳಿ ಜೀವ ಪಡೆದ, ಮುಕ್ತ ಮಾರುಕಟ್ಟೆ– ಜಾಗತೀಕರಣದಿಂದ ಪುಟಿದೆದ್ದ, ಕೋಮುವಾದದಿಂದ ನರಳಿದ, ನಗರ ಕೇಂದ್ರೀಕೃತ, ಬಲಪಂಥೀಯ ರಾಜಕಾರಣದಲ್ಲಿ ಭವಿಷ್ಯ ಕಾಣುತ್ತಿರುವ... ಹಲವು ಭಾರತಗಳಿವೆ. ಸುಮಾರು 36 ವರ್ಷಗಳಿಂದ ಪತ್ರಕರ್ತರಾಗಿರುವ ಲಕ್ಷ್ಮಣ ಕೊಡಸೆ ಈ ಎಲ್ಲ ಹಂತಗಳನ್ನೂ ಅತ್ಯಂತ ಹತ್ತಿರದಿಂದ ಕಂಡವರು. ಬದುಕು–ವೃತ್ತಿಯ ಕಾರಣದಿಂದ ಪ್ರತಿಯೊಂದು ಬೆಳವಣಿಗೆಗೂ ಪ್ರತಿಸ್ಪಂದಿಸಿದವರು.

ಆ ಹಿನ್ನೆಲೆಯಿಂದ ಬಹಳ ನಿರೀಕ್ಷೆ ಇಟ್ಟುಕೊಂಡು ಈ ಕೃತಿಯ ಮೊದಲ ಮೂವತ್ತು ಪುಟಗಳನ್ನು ಓದಿದಾಗ ಇದೊಂದು ಪೂರ್ಣ ಪ್ರಮಾಣದ ಆತ್ಮಚರಿತ್ರೆ ಇರಬಹುದೇ!? ಎಂಬ ಭಾವನೆ ಓದುಗರ ಮನದಲ್ಲಿ ಮೂಡಬಹುದು. ಏಕೆಂದರೆ ಕುವೆಂಪು ಅವರ ಕಾದಂಬರಿಯಲ್ಲಿರುವಂತೆ ಮಲೆನಾಡಿನ ಬದುಕು ಇಲ್ಲಿ ಗಾಢವಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ. ಮಲೆನಾಡಿನ ಬೃಹತ್ ಅವಿಭಜಿತ ಅಥವಾ ಹಿಸ್ಸೆಯಾದ ಕುಟುಂಬಗಳ ನೋವು–ನಲಿವು ಇಲ್ಲಿದೆ. ಅಂತಹ ಬೃಹತ್ ಕೃಷಿ ಕುಟುಂಬಗಳಲ್ಲಿ ಹುಟ್ಟಿ ಬೆಳೆದ ಮಕ್ಕಳ ಕತೆ ಕೂಡ ಇದೆ. ದೊಡ್ಡವರ ದೊಡ್ಡ ಹಾಗೂ ಸಣ್ಣತನಗಳೂ ಇವೆ. ಬೇಸಾಯ–ಬೇಟೆಯ ಬಗೆಗಿನ ವಿವರಗಳು

ಗಮನ ಸೆಳೆಯುತ್ತವೆ. ಆಗಿನ ಕಾಲದಲ್ಲಿ ಗಟ್ಟಿಯಾಗಿ ಬೇರೂರಿದ್ದ ಜಾತಿ ಪದ್ಧತಿ, ಸಂಪ್ರದಾಯಗಳು, ಕಟ್ಟುನಿಟ್ಟಿನ ಸಾಮಾಜಿಕ ವ್ಯವಸ್ಥೆ ಎಲ್ಲದರ ಬಗ್ಗೆ ಕೂಡ ಇಲ್ಲಿ ವಿವರಗಳಿವೆ.

ಆರು ಮಕ್ಕಳಿದ್ದ ತುಂಬು ಕುಟುಂಬದಲ್ಲಿ ಹುಟ್ಟಿದ ಬಾಲಕನೊಬ್ಬ ಕೇವಲ ಪಾಸಾಗುತ್ತಿದ್ದಾನೆ ಮತ್ತು ಸಣಕಲು ದೇಹದವ ಎಂಬ ಕಾರಣದಿಂದಲೇ ವಿದ್ಯೆ ಮುಂದುವರಿಸಲು ಸಿಕ್ಕಿದ ಅವಕಾಶ ಉಪಯೋಗಿಸಿಕೊಂಡು, ವಿದ್ಯೆಯ ಮೂಲಕವೇ ಬದುಕಲ್ಲಿ ಯಶಸ್ವಿಯಾದ ಒಂದು ಪಾಠ ಕೂಡ ಇಲ್ಲಿದೆ. ಇನ್ನೊಂದೆಡೆ ಸಮಷ್ಟಿ ಪ್ರಜ್ಞೆಯ ಸಂಕೇತವಾಗಿ ಲಕ್ಷ್ಮಣನಿಗೆ ಅಂಟಿಕೊಂಡು ಬೆಳೆದು ಬದುಕು ಕಟ್ಟಿಕೊಳ್ಳುವ ತಿಮ್ಮಪ್ಪ ಕೂಡ ಮಹಾನ್ ಸಾಹಸಿಯೇ! 'ದೈಹಿಕವಾಗಿ ನೀನು ಏನು ಎನ್ನುವುದು ಮುಖ್ಯವಲ್ಲ, ಮಾನಸಿಕವಾಗಿ ನೀನು ಎಷ್ಟು ಗಟ್ಟಿ' ಎನ್ನುವುದನ್ನು ತಿಮ್ಮಪ್ಪ ಪ್ರಪಂಚಕ್ಕೆ ಹೇಳಿಕೊಟ್ಟಿದ್ದಾರೆ. ಆ ಪೈಕಿ ಲಕ್ಷ್ಮಣ ಒಬ್ಬ ಕತೆ–ಕಾದಂಬರಿಕಾರ–ಲೇಖಕ–ಪತ್ರಕರ್ತನಾಗಿ ಬದುಕು ಕಟ್ಟಿಕೊಂಡರೆ; ತಿಮ್ಮಪ್ಪ ಒಬ್ಬ ಯಶಸ್ವಿ ಬ್ಯಾಂಕರ್ ಆಗಿ ಯಶಸ್ಸಿನ ಹಾದಿ ಹಿಡಿಯುತ್ತಾರೆ. ಆದರೆ, ಇದು ಕೊಡಸೆಯ ಲಕ್ಷ್ಮಣ ಅಥವಾ ಬರುವೆಯ ತಿಮ್ಮಪ್ಪ ಇಬ್ಬರ ಆತ್ಮಚರಿತ್ರೆಯಲ್ಲ. ಬದಲಾಗಿ ಅವರಿಬ್ಬರ ನಿರ್ಮಲವಾದ ಬಾಲ್ಯ, ಕಷ್ಟದ ಯೌವನ ಕಾಲ ಮತ್ತು ನಂತರದ ಪ್ರಬುದ್ಧ ಬದುಕಿನ ಕೆಲವೊಂದು ತುಣುಕಗಳು.

ಈ ಕೃತಿಯ ಇನ್ನೊಂದು ಒಗ್ಗುವ ಗುಣವೆಂದರೆ, ಎಲ್ಲಿಯೂ 'ನಾನು' ಎಂಬ ಅಹಂ ಎಲ್ಲೂ ಕಾಣುವುದಿಲ್ಲ. ಬದಲಾಗಿ ಪ್ರಾಮಾಣಿಕವಾಗಿ ಬದುಕಿಗೆ ಮತ್ತು ವೃತ್ತಿಗೆ ಅಂಟಿಕೊಂಡರೆ ಮನುಷ್ಯನೊಬ್ಬನ ಬದುಕು ಎಷ್ಟರ ಮಟ್ಟಿಗೆ ಪ್ರಬುದ್ಧವಾಗಿ ಬೆಳೆಯಬಹುದು ಮತ್ತು ಭದ್ರವಾಗಬಹುದು ಎನ್ನುವುದನ್ನು ತಣ್ಣಗೆ ತಿಳಿ ಹೇಳುತ್ತದೆ. ಕೊಡಸೆ ಅವರ ಬರಹದಂತೆಯೇ ಬದುಕು ಕೂಡ ಸರಳ–ಸುಂದರ. ಆ ಕಾರಣದಿಂದಲೇ ಚಿಕ್ಕದಾದರೂ, ಬಹಳಷ್ಟು ನಿರೀಕ್ಷೆಗಳನ್ನು ಹುಟ್ಟಿಸಿ ಅವೆಲ್ಲವನ್ನೂ ಈಡೇರಿಸದಿದ್ದರೂ 'ಮಿತ್ರಲಾಭ' ಆತ್ಮೀಯವಾಗುತ್ತದೆ.

ಮೊದಲ ಬಾರಿಗೆ ಈ ಕೃತಿಯ ಕರಡನ್ನು ಓದಿದಾಗ, ಲಕ್ಷ್ಮಣ ಕೊಡಸೆ ಅವರಿಗೆ 'ಇದೊಂದು ಅಪೂರ್ಣ ಕೃತಿ. ಇದು ನಿಮ್ಮ ಜೀವನ ಚರಿತ್ರೆಯಾಗಿದ್ದರೆ, ಮೊದಲ ಭಾಗವಾದ ಬಾಲ್ಯದಂತೆಯೇ, ವೃತ್ತಿ ಜೀವನದ ಆರಂಭ ಮತ್ತು ನಂತರದ ಭಾಗದಲ್ಲಿ ಇನ್ನೂ ದೀರ್ಘವಾದ ವಿವರಗಳನ್ನು ನೀಡಿ. ನಿಮ್ಮ ಕತೆಯನ್ನು ಪೂರ್ಣವಾಗಿ ಹೇಳಿ' ಎಂದು ನಾನು ಒತ್ತಾಯಿಸಿದೆ. ಏಕೆಂದರೆ ಸುಮಾರು ಹತ್ತು ವರ್ಷಗಳ ಕಾಲ ನಾನು 'ಪ್ರಜಾವಾಣಿ'ಯಲ್ಲಿ ಅವರೊಂದಿಗೆ ಬದುಕು ಸಾಗಿಸಿದ್ದೆ.

ಬದುಕು ಎಂದು ಏಕೆ ಹೇಳುತ್ತಿದ್ದೇನೆಂದರೆ ನಮಗೆಲ್ಲ ಒಂದು ಕಾಲದಲ್ಲಿ 'ಪ್ರಜಾವಾಣಿ'ಯಲ್ಲಿನ ಪತ್ರಕರ್ತನ ಹುದ್ದೆ ಕೇವಲ ಒಂದು ಕೆಲಸವಾಗಿರಲಿಲ್ಲ. ಅದು ನಮ್ಮ ಬದುಕೇ ಆಗಿತ್ತು. ಎಂಬತ್ತು ಮತ್ತು ತೊಂಬತ್ತರದ ದಶಕದಲ್ಲಿ 'ಪ್ರಜಾವಾಣಿ'ಯಲ್ಲಿ ಕೆ. ಎನ್. ಹರಿಕುಮಾರ್ ಕೈಯಲ್ಲಿ 'ಆಫರ್ ಲೆಟರ್' ಪಡೆದ ಬಹುತೇಕರು ಆ ಪತ್ರಿಕೆಗೆ ತಮ್ಮನ್ನು ತಾವು ಸಂಪೂರ್ಣವಾಗಿ ಒಡ್ಡಿಕೊಂಡಿದ್ದರು. ತಮ್ಮ ವೃತ್ತಿಯನ್ನು ಅತ್ಯಂತ ಪ್ರಾಮಾಣಿಕವಾಗಿ ಸ್ವೀಕರಿಸಿದ್ದರು. 'ಪ್ರಜಾವಾಣಿ' ಎಂಬ ವಿಶ್ವಾಸದ ಗೋಪುರ ಕಟ್ಟುತ್ತಲೇ ತಮ್ಮ–ತಮ್ಮ ಬದುಕು ಕೂಡ ಕಟ್ಟಿಕೊಂಡಿದ್ದರು. ಆ ನಿಟ್ಟಿನಲ್ಲಿ ಒಬ್ಬ ಪ್ರಾಮಾಣಿಕ ಪತ್ರಕರ್ತನ ಪೂರ್ಣ ಪ್ರಮಾಣದ 'ಆಟೋ ಬಯಾಗ್ರಫಿ' ಹೊರಬರಲಿ ಎನ್ನುವ ಉದ್ದೇಶ ನನ್ನದಾಗಿತ್ತು.

ಒಟ್ಟಾರೆ ಭಾರತ ದೇಶ ಮತ್ತು ಕನ್ನಡ ಪತ್ರಿಕೋದ್ಯಮ ಎರಡರ ದೃಷ್ಟಿಯಿಂದಲೂ 1978ರಿಂದ 2018ರವರೆಗಿನ 40 ವರ್ಷಗಳ ಅವಧಿ ಅತಿ ಮುಖ್ಯವಾದದ್ದು. ಈ ಕೃತಿಯಲ್ಲಿ ಲಕ್ಷ್ಮಣ ಕೊಡಸೆ ಅವರು 'ಪ್ರಜಾವಾಣಿ' ಸೇರಿದ ದಿನಗಳ ಚಿತ್ರಗಳು ಇವೆ. ಆದರೆ, ಆನಂತರದ ಸುಮಾರು 34 ವರ್ಷಗಳ ಒಳಗಿನ–ಹೊರಗಿನ ಹೋರಾಟದ ಚಿತ್ರವಿಲ್ಲ. ಅನುಭಗಳ ವಿವರವಿಲ್ಲ. ಆ ದೀರ್ಘವಾದ ಬದುಕಿನ ಪೂರ್ಣ ಚಿತ್ರಣ ಈ ಕೃತಿಯಲ್ಲಿ ಇಲ್ಲ. ಆ ಬಗ್ಗೆ ನನ್ನ ಆಕ್ಷೇಪವಿದೆ. ಆದರೆ ಲಕ್ಷ್ಮಣ ಕೊಡಸೆ ಪ್ರಕಾರ ಇದು ಪೂರ್ಣ ಪ್ರಮಾಣದ ಜೀವನ ಚರಿತ್ರೆಯಲ್ಲ, ಅವರ ಮತ್ತು ತಿಮ್ಮಪ್ಪ ಅವರ ಜಂಟಿ ಬದುಕಿನ ಕುರಿತಾದ ಚದುರಿದ ಚಿತ್ರಗಳ ಸಂಗ್ರಹ. ಒಪ್ಪಿಕೊಳ್ಳೋಣ.

ಲಕ್ಷ್ಮಣ ಕೊಡಸೆ ಅವರ ಬಾಲ್ಯ–ತಂದೆ–ತಾಯಿಯ ಕುರಿತು ಈಗಾಗಲೇ 'ಅಪ್ಪನ ಪರಪಂಚ' ಎಂಬ ಸವಿವರವಾದ ಕೃತಿ ಪ್ರಕಟವಾಗಿದೆ. ಹಾಗೆಯೇ ವೃತ್ತಿ ಜೀವನದ ಕುರಿತು 'ಪ್ರಜಾವಾಣಿ ಪರಪಂಚ' ಎಂಬ ದೀರ್ಘವಾದ ಮತ್ತು ಪ್ರಾಮಾಣಿಕವಾದ ಕೃತಿಯೊಂದನ್ನು ಬರೆಯಲೇಬೇಕು ಎಂಬ ಸಲಹೆ ನನ್ನದು. ಆ ಸಲಹೆಯನ್ನು ಅವರು ಸ್ವೀಕರಿಸಿದರೆ ಮಾತ್ರ ಮೇಲಿನ ಆಕ್ಷೇಪವನ್ನು ಹಿಂತೆಗೆದುಕೊಳ್ಳುತ್ತೇನೆ. ಆದಷ್ಟು ಬೇಗ 'ಪ್ರಜಾವಾಣಿ ಪರಪಂಚ' ಬೆಳಕು ಕಾಣಲಿ ಎಂದು ಹಾರೈಸುತ್ತೇನೆ.

**– ಸತೀಶ ಚಪ್ಪರಿಕೆ**

ಬೆಂಗಳೂರು

*******

# ಮಿತ್ರ ಲಾಭ

## (ನೆನಪುಗಳ ಮೆರವಣಿಗೆ)

**ನ**ಮ್ಮೂರು ಒಂದು ಮಜರೆ ಹಳ್ಳಿ. ಸರ್ಕಾರದ ಲೆಕ್ಕದಂತೆ ಮೂಗುಡತಿ ಗ್ರಾಮಕ್ಕೆ ಸೇರಿದ ಹಳ್ಳಿ. ಹುಂಚಾ ಹೋಬಳಿಯ ಮೂಗುಡತಿ ಗ್ರಾಮದ ಎಂಬ ಒಕ್ಕಣೆಯ ನಂತರ ಬರುತ್ತಾ ಇದ್ದುದು ನಮ್ಮೂರ ಹೆಸರು. ಮೂಗುಡತಿ ಗ್ರಾಮಕ್ಕೆ ಇಂಥ ಅನೇಕ ಮಜರೆ ಹಳ್ಳಿಗಳು. ನಮ್ಮದು ಎಷ್ಟೋ ವರ್ಷಗಳ ಹಿಂದೆ ಒಂಟಿ ಮನೆಯ ಹಳ್ಳಿ. ಬಾಲ್ಯದ ದಿನಗಳನ್ನು ಕಳೆಯುವಾಗ ಆರು ಮನೆಗಳಾಗಿದ್ದವು. ಅವುಗಳಲ್ಲಿ ಐದು ನಮ್ಮದೇ ಮನೆಯಿಂದ ಹಿಸ್ಸೆಯಾಗಿ ಪ್ರತ್ಯೇಕವಾಗಿದ್ದವು. ಒಂದು ಮನೆ ನಮ್ಮವರದೇ ಆಗಿದ್ದರೂ ನಮ್ಮ ಮನೆತನಕ್ಕೆ ಸೇರಿದ್ದಲ್ಲ. ನಮ್ಮೂರಿನ ಗದ್ದೆ ಕೋವಿಗೆ ಹೊಂದಿಕೊಂಡು ಇನ್ನೊಂದು ಮಗ್ಗುಲಿಗೆ ಹರಡಿಕೊಂಡಿದ್ದ ಮತ್ತೊಂದು ಹಳ್ಳಿ. ಅಲ್ಲಿ ಏಳು ಮನೆಗಳಿದ್ದವು. ಆ ಹಳ್ಳಿಗೂ ಪ್ರತ್ಯೇಕ ಹೆಸರು. ಅದೂ ಕೂಡ ಮಜರೆ ಹಳ್ಳಿ. ಎರಡೂ ಹಳ್ಳಿಗಳಲ್ಲಿ ಇದ್ದವರು ಒಂದೇ ಆಚರಣೆ ಪದ್ಧತಿಯವರು. ಅಲ್ಲಲ್ಲಿ ಹೆಣ್ಣು ಕೊಟ್ಟು ತಂದುಕೊಂಡ ಹತ್ತಿರದ ಸಂಬಂಧಿಗಳು. ನಮ್ಮೂರಿನ ಎಲ್ಲ ಮನೆಗಳಿಗೂ ಅಲ್ಪಸ್ವಲ್ಪ ಅಡಕೆ ತೋಟ ಇದ್ದುದು

ಪಕ್ಕದ ಹಳ್ಳಿಯವರಿಗಿಲ್ಲದ ವಿಶೇಷ. ಅಡಕೆ ತೋಟ ಇದ್ದರೆ ಆರ್ಥಿಕವಾಗಿ ಅನುಕೂಲಸ್ಥರು ಎಂಬ ನಂಬಿಕೆ. ಎರಡೂ ಹಳ್ಳಿಗಳಿಗೆ ಮಳೆಯನ್ನು ಅವಲಂಬಿಸಿದ ಬೇಸಾಯ. ಸುತ್ತಲೂ ದಟ್ಟಕಾನು ಸುತ್ತುವರಿದ ಕಾರಣ ಮೇ ತಿಂಗಳ ಅಂತ್ಯದ ವೇಳೆಗೆ ಆರಂಭವಾಗುವ ಮಳೆ ಅಕ್ಟೋಬರ್ ತಿಂಗಳವರೆಗೂ ದೊಡ್ಡದಾಗಿ, ಸಣ್ಣದಾಗಿ ಸುರಿಯುತ್ತಿತ್ತು. ನಮ್ಮೂರಿನ ದಕ್ಷಿಣತುದಿಯಲ್ಲಿ ಇದ್ದ ಕೆರೆ ತುಂಬಿದರೆ ಬೇಸಗೆಯಲ್ಲಿ ಹಳ್ಳಿಯ ಅಡಕೆ ತೋಟಗಳಿಗೆ ನೀರಿನ ತೊಂದರೆ ಇಲ್ಲ ಎಂಬ ಸಮಾಧಾನದ ಭಾವ ಮೂಡಿರುತ್ತಿತ್ತು. ಕೆರೆ ತುಂಬಿ ಕೋಡಿ ಬಿದ್ದರೆ ಒಳ್ಳೆಯ ಮಳೆ ಆಗಿದೆ ಎಂಬ ಸಂತೃಪ್ತ ಭಾವ ಹಳ್ಳಿಯ ಹಿರಿಯರಲ್ಲಿ ಮೂಡುತ್ತಿತ್ತು.

ಇಂಥ ಸ್ವರೂಪದ ಹಳ್ಳಿಗಳೇ ನಮ್ಮೂರು ಫಾಸಲೆಯ ಏಳೆಂಟು ಮೈಲುಗಳಲ್ಲಿ ವ್ಯಾಪಿಸಿದ್ದವು. ಆಯಾ ಹಳ್ಳಿಗಳಲ್ಲಿ ಒಬ್ಬೊಬ್ಬ ಯಜಮಾನ ಮನುಷ್ಯರು ಮನೆಯ ದೊಡ್ಡ ದೊಡ್ಡ ಸಮಾರಂಭಗಳಲ್ಲಿ ವಿಶೇಷ ಅತಿಥಿಗಳಂತೆ ಹಾಜರಾಗಿ ಗೌರವಭಾಜನರಾಗುತ್ತಿದ್ದರು. ಮದುವೆ ಮನೆಗಳಲ್ಲಿ ಬಾಡಿಗೆಗೆ ತರುತ್ತಿದ್ದ ಗ್ಯಾಸ್ ಲೈಟ್‌ಗಳ ಪ್ರಖರ ಬೆಳಕಿನಲ್ಲಿ ಯಜಮಾನಿಕೆಯ ಗತ್ತಿನಲ್ಲಿ ಕಾಣುತ್ತಿದ್ದ ಯಜಮಾನರುಗಳ ಹೆಸರುಗಳು ಎಳೆಯ ಬಾಲಕರಾಗಿದ್ದ ನಮಗೆ ವಿಸ್ಮಯಕಾರಿಯಾಗಿರುತ್ತಿದ್ದವು. ಮದುವೆ ಮನೆಗಳಲ್ಲಿ, ಕುರಿ ಔತಣದ ಮನೆಗಳಲ್ಲಿ ಅಗ್ರಾಸನದಲ್ಲಿ ಕುಳಿತುಕೊಳ್ಳುತ್ತಿದ್ದವರಲ್ಲಿ ಕೊಡಸೆ ಕರೇನಾಯ್ಕರು, ಬರುವೆ ಬಡೇನಾಯ್ಕರು, ವಡಾಸುಳ್ಳಿ ಐಯಣ್ಣನಾಯ್ಕರು, ಹುಳುಗದ್ದೆ ಯಲ್ಲನಾಯ್ಕರು, ವಾರಂಬಳ್ಳಿ ರೊಕ್ಕನಾಯ್ಕರು, ಬಿದರಳ್ಳಿ ಕೆರೆಮನೆ ಸಿದ್ದನಾಯ್ಕರು, ಗಂದ್ರಳ್ಳಿ ಧರ್ಮನಾಯ್ಕರು, ಮಂಡ್ಲಿ ಪುಟ್ಟನಾಯ್ಕರು, ಬೆಳ್ಳೂರು ಪಟೇಲ್ ತಮ್ಮಣ್ಣನಾಯ್ಕರು, ಕುರಂಬಳ್ಳಿ ಯಲ್ಲನಾಯ್ಕರು ಸೇರಿದ್ದರು. ಈ ಯಜಮಾನರುಗಳು ಸಮಾರಂಭಗಳಿಗೆ ಬಂದಾಗ ಅವರನ್ನು ಆತಿಥೇಯರು ಗೌರವದಿಂದ ಬರಮಾಡಿಕೊಂಡು ಜಗುಲಿಯ ಅಗ್ರಪೀಠಕ್ಕೆ ಕರೆದೊಯ್ಯುತ್ತಿದ್ದ ರೀತಿಯೇ ಅವರೆಲ್ಲ ಒಂದು ಸೀಮೆಯ ಯಜಮಾನರು ಎಂಬುದನ್ನು ಸಾಂಕೇತಿಕವಾಗಿ ಸೂಚಿಸುವಂತಿರುತ್ತಿತ್ತು.

ತಮ್ಮ ತಮ್ಮ ಹೆಸರುಗಳೊಂದಿಗೆ ಸೇರಿಕೊಳ್ಳುತ್ತಿದ್ದ ಹಳ್ಳಿಯ ಹೆಸರುಗಳು ಮಲೆನಾಡಿನ ಹುಮ್ಚ (ಹೊಂಬುಜ) ಮತ್ತು ಕೆರೆಹಳ್ಳಿ ಹೋಬಳಿಯ ಮೂಲ ವಾಸಸ್ಥಾನಗಳಾಗಿದ್ದವು. ಈ ಯಜಮಾನರುಗಳು ಸ್ವಂತ ಖಾತೆದಾರರೂ, ಕೆಲವರು ಅಡಕೆ ತೋಟಗಳನ್ನು ಅಭಿವೃದ್ಧಿಪಡಿಸಿದ್ದವರೂ ಆಗಿದ್ದರು. ಜೊತೆಗೆ ತಮ್ಮ ತಮ್ಮ ಮನೆಗಳಲ್ಲಿ ಸ್ವಂತ ತಮ್ಮಂದಿರು, ಚಿಗಪ್ಪ ದೊಡಪ್ಪರ ಮಕ್ಕಳ ದೊಡ್ಡ ಕುಟುಂಬಗಳ ಯಜಮಾನಿಕೆಯನ್ನು ವಹಿಸಿಕೊಂಡಿದ್ದವರೆಂದೂ ಹೆಸರಾಗಿದ್ದರು. ಬೆಳೆಯುತ್ತಿದ್ದ ಕುಟುಂಬ ಜನಸಂಖ್ಯೆಗೆ ಅನುಗುಣವಾಗಿ ದುಡಿಮೆಯ ಮಾರ್ಗಗಳನ್ನು ಕಂಡುಕೊಳ್ಳುವ, ಇದ್ದ ಗದ್ದೆ ತೋಟಗಳನ್ನು ವಿಸ್ತರಿಸಿಕೊಳ್ಳುವ ಕೆಲಸಗಳಲ್ಲಿಯೂ ತಮ್ಮಷ್ಟಕ್ಕೆ ತೊಡಗಿಕೊಂಡಿದ್ದರು. ಸ್ವಂತ ಊರಿನಲ್ಲಿ ಮಾತ್ರವಲ್ಲದೆ, ಊರ ಹತ್ತಿರದ ನೆರೆ ಹಳ್ಳಿಗಳಲ್ಲಿ ದುಡಿಯುವುದಕ್ಕೆ ಸಿಗುತ್ತಿದ್ದ ಗದ್ದೆಗಳನ್ನು ಗೇಣಿ ಲೆಕ್ಕದಲ್ಲಿ ಪಡೆಯುವ, ಅದರಲ್ಲಿ ಕುಟುಂಬದ ವರಮಾನವನ್ನು ಅಷ್ಟಿಷ್ಟು ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳುವ ಕಸರತ್ತಿನಲ್ಲಿಯೂ ಇದ್ದರು.

**ಹಳೇಪೈಕ**

ಅಂದಿನ ಜಮೀನ್ದಾರ ಗೌಡರುಗಳಿಂದ ದೀವರು ಇಲ್ಲವೇ ಹಳೇಪೈಕದವರೆಂದು ತಿರಸ್ಕಾರದಿಂದ ಕರೆಸಿಕೊಳ್ಳುತ್ತಿದ್ದ ಈ ಹಿರಿಯರು ಸ್ವಂತ ಸಾಗುವಳಿಯ ಗದ್ದೆ ತೋಟಗಳಿದ್ದ ಜಮೀನುದಾರರೂ ಆಗಿದ್ದರು. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಈ ಭಾಗದಲ್ಲಿದ್ದ ಪರಿಸ್ಥಿತಿ ನೆರೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇರಲಿಲ್ಲ ಎಂಬುದು ಇಪ್ಪತ್ತನೆಯ ಶತಮಾನದ ಆರಂಭಕಾಲದ ಕೆಲವು ಸಾಹಿತ್ಯಿಕ ದಾಖಲೆಗಳಿಂದ

ಸ್ಪಷ್ಟವಾಗಿದೆ. ತೀರ್ಥಹಳ್ಳಿ ತಾಲ್ಲೂಕು, ಹೊಸನಗರದಂತೆಯೇ ಅಪ್ಪಟ ಮಲೆನಾಡಿನ ಭಾಗವೇ ಆಗಿದ್ದರೂ ಅಲ್ಲಿನ ಹೆಚ್ಚಿನ ಭೂಮಿಯ ಒಡೆತನ ಒಕ್ಕಲಿಗರದೇ ಆಗಿದ್ದುದನ್ನು ಕುವೆಂಪು ಅವರ ಕಾದಂಬರಿಯಲ್ಲಿ ನೋಡಬಹುದು. ಅದರಲ್ಲಿ ಹಳೇಪೈಕದವರ ಬಗ್ಗೆ ಬಂದ ಪ್ರಸ್ತಾಪ ಹೀಗಿದೆ:

'ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು ಬಗನಿಯ ಮರದಿಂದ ಕಳ್ಳು ಇಳಿಯಿಸಿ ಕುಡಿದು, ಮಾರಿ, ಜೀವನ ಮಾಡುವ ಹಳೇಪೈಕದವರಿಗೆ (ಇವರಿಗೆ ದೀವರು ಎಂಬ ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ; ಮಹಾ ಅನಾಚಾರವೆಂದೂ ಅನೇಕರ ಮನಸ್ಸು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೇಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ, ಗೌಡ, ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು. ಅಷ್ಟೇ ಅಲ್ಲದೆ, ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೇಪೈಕದವರು ಒಕ್ಕಲಿಗರನ್ನು ಯಾವ ವಿಧದಲ್ಲಿಯೂ ಅನುಕರಿಸಕೂಡದೆಂದು ಮಾಮೂಲು ಕಟ್ಟಾಗಿತ್ತು. ದಿಬ್ಬಣದಲ್ಲಿ ಮದುವೆಯ ಗಂಡು ಕುದುರೆಯ ಮೇಲೆ ಸವಾರಿ ಮಾಡಬಾರದು; ದಂಡಿಗೆಯ ಮೇಲೆ ಕೂತರಂತೂ ಮದುಮಕ್ಕಳಿಗೂ ದಿಬ್ಬಣದವರಿಗೂ ಉಳಿಗತಿಯಿರಲಿಲ್ಲ. ಈ ಚರ್ಚೆ ಸರ್ಕಾರದವರೆಗೂ ಹೋಗಿ, ಅದೂ ಒಕ್ಕಲಿಗರ ಪರವಾಗಿಯೇ ತೀರ್ಮಾನ ಕೊಟ್ಟಿದ್ದರಿಂದ ಮಾಮೂಲಿಗೂ ಮಾತ್ಸರ್ಯಕ್ಕೂ ಕಾನೂನಿನ ಮುದ್ರೆ ಬೇರೆ ಬಿದ್ದಿತ್ತು.'

'ಸರ್ಕಾರದ ಇತ್ಯರ್ಥಕ್ಕೆ ಕಾರಣ ನ್ಯಾಯಪಕ್ಷಪಾತವಾಗಿರಲಿಲ್ಲ; ಬಲ ಪಕ್ಷಪಾತವಾಗಿತ್ತು. ಬಲಿಷ್ಠರೂ, ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ; ನ್ಯಾಯರಕ್ಷಣೆಯೂ ಸುಲಭಸಾಧ್ಯ. ಅದರಲ್ಲಿಯೂ ಮೈಸೂರು ಸಂಸ್ಥಾನದ ಅಂಚಾಗಿ, ದುರ್ಗಮವಾದ ಪರ್ವತಾರಣ್ಯಗಳ ಬೀಡಾಗಿ, ಆಗ ತಾನೇ ನಗರ, ಕೌಲೆದುರ್ಗ ಮೊದಲಾದ ಪಾಳಯಪಟ್ಟುಗಳ ಕಿರುಕುಳಗಳಿಂದ ಪಾರಾಗಿದ್ದ ಮಲೆನಾಡಿಗೆ ಅಲ್ಲಿದ್ದ ಬಹುಸಂಖ್ಯೆಯ ಬಲಿಷ್ಠರ ಇಚ್ಛೆಯಂತೆ ಸರ್ಕಾರದ ಕಾನೂನಾದುದರಲ್ಲಿ ಆಶ್ಚರ್ಯವೇನಿಲ್ಲ.'

'ಸರ್ಕಾರದಿಂದ ಕಾನೂನಾಗಿ ಬಂದ ಮಾತ್ರಕ್ಕೇ ಅನ್ಯಾಯ ನ್ಯಾಯವಾಗುತ್ತದೆಯೇ ಎಂದು ಕೆಲವು ಸ್ವತಂತ್ರದೃಷ್ಟಿಯ ಹಳೇಪೈಕದ ನಾಯಕರು ಅದಕ್ಕೆ ವ್ಯತಿರಿಕ್ತವಾಗಿ ನಡೆಯಲು ಪ್ರಯತ್ನಿಸುತ್ತಿದ್ದರು. ಅವರ ಪ್ರಯತ್ನಕ್ಕೆ ಸರ್ಕಾರವೆಂದಿಗೂ ಅಡ್ಡಿ ಬರುತ್ತಿರಲಿಲ್ಲವೆಂದು ದೇವರಾಣೆ ಹಾಕಿ ಬೇಕಾದರೂ ಹೇಳಬಹುದು. ಆದರೆ ಒಕ್ಕಲಿಗರು ತಮ್ಮ ಹಕ್ಕಿನ ರಕ್ಷಣೆಗಾಗಿ ಪಣ ತೊಟ್ಟಿದ್ದರು!'

'ಒಕ್ಕಲಿಗರ ಜಮೀನುದಾರರ ಆಳುಗಳೂ ಒಕ್ಕಲುಗಳೂ ಆಗಿದ್ದ ಹಳೇಪೈಕದವರು ಬಹಿರಂಗವಾಗಿ ಯಾವ ತಂಟೆತಕರಾರುಗಳ ಗೋಜಿಗೂ ಹೋಗುತ್ತಿರಲಿಲ್ಲ..' (ಮಲೆಗಳಲ್ಲಿ ಮದುಮಗಳು, ಪುಟ 8–9).

ಹೊಸನಗರ ತಾಲ್ಲೂಕಿನಲ್ಲಿ ಹೆಚ್ಚಿನ ಜಮೀನುದಾರರು ಲಿಂಗಾಯತ ಸಮುದಾಯಕ್ಕೆ ಸೇರಿದ್ದರೂ, ಅಲ್ಲಲ್ಲಿ ಒಕ್ಕಲಿಗ ಜಮೀನುದಾರರಿದ್ದರೂ ನಮ್ಮವರ ಪರಿಸ್ಥಿತಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ದಾಖಲಾದಷ್ಟು ಹೀನಾಯವಾಗಿರಲಿಲ್ಲ. ಮಸರು ಸೀಮೆಯ ಯಜಮಾನರಾಗಿ ಸಮುದಾಯದ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವರಿಗೆ ಸ್ವಂತದ ಜಮೀನುಗಳೂ, ಅಡಕೆ ತೋಟಗಳೂ ಇದ್ದವು. ಕೆಲವರಿಗೆ ಊರ ಪಟೇಲಿಕೆಯೂ ಇತ್ತು ಎಂಬುದು ಬೆಳ್ಳೂರು ಪಟೇಲ್ ತಮ್ಮಣ್ಣನಾಯ್ಕರು ಎಂಬ ಹೆಸರಿನಲ್ಲಿ ಧ್ವನಿತವಾಗುತ್ತಿತ್ತು. ಎಳೆಯ ಬಾಲಕನಿದ್ದಾಗ ಬೆಳ್ಳೂರಿಗೆ ಒಂದು ಮದುವೆಗೆ ಅವ್ವನೊಂದಿಗೆ ಹೋಗಿದ್ದವನಿಗೆ ಆ ಮನೆ ಜಗುಲಿಯ ಭರ್ಜರಿ ಕುಸುರಿ ಕೆಲಸದ ಭಾರಿ ಮುಂಡಿಗೆಗಳು, ಭೀಮಾಕಾರದ ತೊಲೆಗಳು, ಗಿಳಿ ಬಳ್ಳಿಗಳ ಚಿತ್ತಾರದ ಬೋದಿಗೆಗಳಿಂದ ಅಲಂಕೃತವಾಗಿದ್ದುದನ್ನು ವಿಸ್ಮಯದಿಂದ ನೋಡಿದ್ದೆ. ಕುರಂಬಳ್ಳಿ ಯಲ್ಲನಾಯ್ಕರ ಮನೆಗೆ

ಹುಡುಗನಾಗಿದ್ದಾಗ ಹೋಗಿ ಅವರ ಜಗುಲಿಯ ವೈಭವಕ್ಕೆ ಮಾರುಹೋಗಿದ್ದೆ. ಹಂಚು ಹೊದಿಸಿದ್ದ ಮುಚ್ಚಿಗೆ ಮನೆಗಳು, ಉದ್ದನೆಯ ಲಾಯದ ಮನೆಗಳು, ಒಳಗಡೆ ಬಾವಂತಿ ಅಂಗಳ ಇದ್ದ ಚೌಕದ ಮನೆಗಳನ್ನು ಅಂದಿನ ದಿನಗಳಲ್ಲಿ ಕಂಡಿದ್ದೆ. ತಮ್ಮ ತಮ್ಮ ಗದ್ದೆ ತೋಟಗಳಿರುವಲ್ಲಿ ಮನೆಯವರ ಸಂಖ್ಯಾಬಲಕ್ಕೆ ಅನುಗುಣವಾಗಿ ಮುಚ್ಚಿಗೆ ಮನೆಗೆ ನಾಲ್ಕು ಕಡೆಯಿಂದಲೂ ಚಾಚಿಕೊಂಡ ಕಡಿಮಾಡುಗಳಲ್ಲಿ ಪ್ರತ್ಯೇಕವಾದ ಗುಡುಬೆಗಳನ್ನು (ಕೊಠಡಿಗಳಿಗೆ ಈ ಹೆಸರು) ನೋಡಿದ್ದೆ. ಕೆಲವರ ಮನೆಗಳಂತೂ ಶತಮಾನಗಳಷ್ಟು ಕಾಲದಿಂದ ಉಳಿದುಕೊಂಡು ಬಂದಿದ್ದವು. ನಮ್ಮ ಕೊಡಸೆಯ ಹಳ್ಳಿ ಮನೆ ಇಪ್ಪತ್ತನೆಯ ಶತಮಾನದ ಆರಂಭಕಾಲದಿಂದಲೂ ಅಸ್ತಿತ್ವದಲ್ಲಿದ್ದು ಕಾಲಕಾಲಕ್ಕೆ ವಿಸ್ತರಣೆಯಾಗುತ್ತಾ ಒಂದು ಘಟ್ಟದಲ್ಲಿ ಹಿಸ್ಸೆಯಾಗಿ ಬೇರೆ ಬೇರೆ ಮನೆಗಳಾಗಿ ಮರಿ ಹಾಕಿದ್ದರೂ ಮೂಲಮನೆಯ ಸ್ವರೂಪವನ್ನು ಆ ಭಾಗಕ್ಕೆ ವಾರಸುದಾರರಾಗಿ ಭಾಗ ಪಡೆದವರು ಉಳಿಸಿ ಅದರಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಂಡಿರುವುದನ್ನು ಕಾಣಬಹುದು.

ಆಗಿನ ಒಂದು ಕಾಲಘಟ್ಟದಲ್ಲಿ ಬೆಳ್ಳೂರು ಎಂಬ ಗುಡ್ಡದಳ್ಳಿಯ ಮೂರು ಮನೆಗಳೂ ಅವಿಭಕ್ತ ಕುಟುಂಬದ ಮಾದರಿಯಾಗಿದ್ದವು. ಜನರಿಂದ ತುಂಬಿದ್ದವು. ಬೆಳ್ಳೂರು ಪಟೇಲ್ ತಮ್ಮಣ್ಣನಾಯ್ಕರ ಮನೆ, ಅದೇ ಹಳ್ಳಿಯ ಮಂಡ್ಲಿ ಪುಟ್ಟನಾಯ್ಕರ ಮನೆ ಮತ್ತು ಬರುವೆ ಲೋಕನಾಯ್ಕರ ಮನೆಗಳಲ್ಲಿ ಹತ್ತಾರು ಕುಟುಂಬಗಳು ನೆಲೆಸಿದ್ದವು. ಹೊರಗಿನ ವಹಿವಾಟು ನೋಡಿಕೊಳ್ಳುವ ಯಜಮಾನನೇ ಸಂಬಂಧಿಕರ ಮನೆ ಹಬ್ಬ, ಮದುವೆಗಳಲ್ಲಿ ಭಾಗವಹಿಸುತ್ತಿದ್ದ. ಮನೆಯಲ್ಲಿ ಹೆಚ್ಚಿನ ಜನರಿದ್ದಷ್ಟೂ ಸಂಬಂಧಿಕರಲ್ಲಿ ಹೆಚ್ಚಿನ ಗೌರವ. ಸ್ವಂತದ್ದಾದ ಆಸ್ತಿಯೂ, ಅದಕ್ಕೆ ತಕ್ಕಂತೆ ದುಡಿಮೆಯೂ ಇದ್ದ ಕಾರಣ ಹಳ್ಳಿಯಲ್ಲಿಯೂ ಅವರು ಇತರ ಕುಟುಂಬಗಳಿಂದ ಗೌರವ ಪಡೆಯುತ್ತಿದ್ದರು. ಬೆಳ್ಳೂರಿನ ಮೂರು ದೊಡ್ಡ ಕುಟುಂಬಗಳಂತೆಯೇ ಹೆಚ್ಚಿನ ಜನ ಬಲವಿದ್ದ ಇನ್ನಷ್ಟು ಕುಟುಂಬಗಳೆಂದರೆ ಕುರಂಬಳ್ಳಿ, ವಡಾಸುಳ್ಳಿ, ಬಿದರಳ್ಳಿಯ ಕೆರೆಮನೆ, ಕರಿಗೆರಸಿನ ಕೃಷ್ಣನಾಯ್ಕರು, ಹಾರೇಗಪ್ಪದ ಮನೆ, ಮಾಕೋಡು ಭದ್ರನಾಯ್ಕರ ಮನೆಗಳು. ಈ ಎಲ್ಲಾ ಮನೆಗಳಿಗಿಂತ ಹೆಚ್ಚಿನ ಜನಸಂಖ್ಯೆ ಇದ್ದ ಕುಟುಂಬ ಮಂಡಾನಿ ಎಂಬ ಹಳ್ಳಿಯ ದೊಡ್ಡ ಮನೆ. ಹೊಸನಗರಕ್ಕೆ ಸನಿಹದಲ್ಲಿದ್ದ ಮಂಡಾನಿಯವರ ಮನೆಯಲ್ಲಿ ಆ ಕಾಲದಲ್ಲಿ ನೂರಕ್ಕೂ ಹೆಚ್ಚಿನ ಜನ ಒಂದೇ ಸೂರಿನ ಅಡಿಯಲ್ಲಿ ಇದ್ದರು.

ನಾನು ಎಳೆಯನಾಗಿದ್ದಾಗ ಈ ಯಜಮಾನರುಗಳ 'ಸಭೆ'ಗಳನ್ನು ಬೆರಗಿನಿಂದ ನೋಡುತ್ತಿದ್ದೆ. ಅವರು ಬರುವುದು ವಿಶೇಷ ಠೀವಿಯಲ್ಲಿ ಎಂಬ ಭಾವ ಮೂಡುತ್ತಿತ್ತು. ಮಲೆನಾಡಿನ ಮನೆಗಳು ಒಂಟಿ ಒಂಟಿಯಾಗಿರುವಂಥವು. ಸಾಲುಮನೆಗಳ ಹಳ್ಳಿಗಳು ಅಲ್ಲಿ ಅಪರೂಪ. ನಮ್ಮ ಬಂಧುಗಳ ಮನೆಗಳೆಲ್ಲ ಮೂರಂಕಣ, ಐದಂಕಣ ವಿನ್ಯಾಸದ ಹುಲ್ಲಿನ ಮನೆಗಳು. ಕೆಲವರ ಮನೆಗಳಲ್ಲಿ ಹಂಚು ಹೊದಿಸಿದ ಸಿರಿವಂತಿಕೆ. ಗದ್ದೆ ಕೋವಿನ ಅಂಚಿನಲ್ಲಿ ಹಕ್ಕಲು, ಬ್ಯಾಣಕ್ಕೆ ಜಾಗ ಬಿಟ್ಟುಕೊಂಡು ತಮಗೆ ಅನುಕೂಲ ಎನಿಸಿದ ಸ್ಥಳದಲ್ಲಿ ನೆಲದಿಂದ ಎರಡು ಮೂರು ಅಡಿ ಎತ್ತರದಲ್ಲಿ ಪಾಯ ಹಾಕಿ ಕಟ್ಟಿದ ಮನೆಗಳು. ಅವರವರ ಗದ್ದೆ ತೋಟ ಹಕ್ಕಲುಗಳಿಗೆ ಕೇಂದ್ರ ಸ್ಥಳದಲ್ಲಿ ಕಟ್ಟಿದ ಅಂಥ ಮನೆಗಳಿಗೆ ಸುತ್ತ ಬೇಲಿಯದೇ ರಕ್ಷಣೆ. ಮನೆಗೆ ಬರುವವರು ಬೇಲಿಯಲ್ಲಿ ನಿರ್ಮಿಸಿದ ದಡಪೆಯನ್ನು ದಾಟಬೇಕು. ಕವೆಗೋಲಿನಂತೆ ಕೆಳಗಡೆ ಕಿರಿದಾಗಿ ಮೇಲಕ್ಕೆ ಅಗಲವಾಗಿರುವ ದಡಪೆ ಸಾಕಷ್ಟು ಸ್ಥೂಲಕಾಯರೂ ದಾಟುವಷ್ಟು ವಿಸ್ತಾರವಾಗಿರುತ್ತವೆ. ಜಾನುವಾರುಗಳು ನುಸುಳದಂತೆ ತಡೆಯುವುದಕ್ಕೆ ಈ ದಡಪೆಯ ರಕ್ಷಣೆ. ವಿಶೇಷ ಸಮಾರಂಭಗಳಿಗೆ ಗಣ್ಯರನ್ನು ಆಹ್ವಾನಿಸಿದ ಆತಿಥೇಯರು ದಡಪೆಯನ್ನು ದಾಟಿ ಒಳಬಂದವರಿಗೆ ಅಲ್ಲಿನ ವಾಡಿಕೆಯಂತೆ ಕಾಲು ತೊಳೆದುಕೊಳ್ಳಲು ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದರು. ಇಂಥ ಯಜಮಾನರುಗಳು ದಡಪೆಯನ್ನು

ದಾಟುತ್ತಿದ್ದಂತೆ ಮನೆಯ ಯಜಮಾನನೇ ಹತ್ತಿರ ಹೋಗಿ ನಗುಮುಖದಿಂದ ಬರಮಾಡಿಕೊಳ್ಳುತ್ತಿದ್ದ. ಮುಂಬಾಗಿಲ ಸಮೀಪ ಇರಿಸಿದ್ದ ಹಂಡೆಯಿಂದ ತಾನೇ ಕೈಯಾರೆ ಚೆಂಬಿನಲ್ಲಿ ನೀರನ್ನು ಎತ್ತಿ ಕಾಲು ತೊಳೆದುಕೊಳ್ಳಲು ನೀಡುತ್ತಿದ್ದ. ಯಜಮಾನರುಗಳೆಲ್ಲ ಅಂದಿನ ಕಾಲಕ್ಕೆ ಅನುಗುಣವಾದ ಚರ್ಮದ ಮೆಟ್ಟುಗಳನ್ನು ಹಾಕುತ್ತಿದ್ದರು. ಹೆಚ್ಚಿನ ಸಂದರ್ಭಗಳಲ್ಲಿ ಆ ಮೆಟ್ಟುಗಳು ಕೆಸರು ಮಣ್ಣು ದೂಳಿನ ಹೊಡೆತಕ್ಕೆ ಸಿಲುಕಿ ಚರ್ಮದ ಬಣ್ಣವನ್ನೂ ಕಳೆದುಕೊಂಡಿರುತ್ತಿದ್ದವು. ಕಲ್ಲು ಮುಳ್ಳುಗಳಿಂದ ರಕ್ಷಣೆ ಪಡೆಯುವುದಕ್ಕಾಗಿಯೇ ಮೆಟ್ಟುಗಳನ್ನು ಹಾಕುತ್ತಾ ಇದ್ದುದರಿಂದ ಅವುಗಳ ಬಾಹ್ಯರೂಪಕ್ಕೆ ಯಾರೂ ಗಮನ ಕೊಡುತ್ತಿರಲಿಲ್ಲ. ಕೆಲವು ಯಜಮಾನರು ಮೆಟ್ಟುಗಳನ್ನು ಕಳಚಿ ಮನೆ ಮುಂದಿನ ಕಡಿಮಾಡಿನ ಈಸಿನ ಮೇಲೆ ಇರಿಸುತ್ತಿದ್ದರು. ಚರ್ಮದ ಚಪ್ಪಲಿಗಳ ಮೃದುವಾದ ಬಾರುಗಳು ಮನೆಯ ನಾಯಿಗಳಿಗೆ ಪ್ರಿಯವಾದರೆ ಎಂಬ ಎಚ್ಚರಿಕೆ. 'ನಾಯಿ ಹಿಂಡು ಮೆಟ್ಟು ಕಡಿದುಬಿಟ್ಟಾವು' ಎಂಬ ಎಚ್ಚರಿಕೆಯ ನುಡಿಯನ್ನು ಸ್ವಗತದಂತೆ ಹೇಳುತ್ತಲೇ ಅವನ್ನು ಸೂರನಡಿ ಮುಚ್ಚಿಟ್ಟು ಕಾಲು ತೊಳೆದುಕೊಳ್ಳಲು ಮುಂದಾಗುತ್ತಿದ್ದರು. ಅವರು ಕಾಲು ತೊಳೆದುಕೊಳ್ಳುವ ರೀತಿಯೂ ನನ್ನ ಗಮನವನ್ನು ಸೆಳೆದಿತ್ತು. ಪಾದದ ಮುಂಭಾಗಕ್ಕೆ ಮೊದಲು ನೀರನ್ನು ಹನಿಸುತ್ತಿದ್ದರು. ಬಲಪಾದದ ಹಿಂಭಾಗವನ್ನು ಎಡಪಾದದ ಬೆರಳುಗಳಿಂದಲೂ ಎಡಪಾದದ ಹಿಂಭಾಗವನ್ನು ಬಲಪಾದದ ಬೆರಳುಗಳಿಂದಲೂ ನೆನೆಸಿ ಎರಡೂ ಪಾದಗಳಿಗೆ ಒಟ್ಟಾಗಿ ನೀರು ಬೀಳುವಂತೆ ಚೆಂಬನ್ನು ಮಗುಚಿದರೆ ಕಾಲು ತೊಳೆದುಕೊಳ್ಳುವ ಪ್ರಕ್ರಿಯೆ ಪೂರ್ಣಗೊಳ್ಳುತ್ತಿತ್ತು. ಎರಡೂ ಕಾಲುಗಳನ್ನು ಕಾಲುಗಳಿಂದಲೇ ತೊಳೆದುಕೊಳ್ಳುವ ಕ್ರಿಯೆ ಯಾಂತ್ರಿಕವೆಂಬಂತೆ ನಡೆಯುತ್ತಿದ್ದರೆ ಪಾದಗಳಿಗೆ ನೀರು ಹಾಕಿಕೊಳ್ಳುತ್ತಲೇ ಆತಿಥೇಯನ ಜೊತೆ ಕುಶಲ ಸಂಭಾಷಣೆ ಮುಂದುವರಿಸುತ್ತಿದ್ದರು.

**'ಯಜಮಾನರು'**

ಅಲ್ಲಿಂದ ಅವರು ಮನೆಯ ಒಳಗೆ ಪ್ರವೇಶಿಸುತ್ತಿದ್ದರು. ಗ್ಯಾಸ್‌ಲೈಟ್ ಎಂಬ ಹೆಸರಿನಲ್ಲಿ ಪ್ರಖರವಾಗಿ ಬೀಳುತ್ತಿದ್ದ ಪೆಟ್ರೋಮ್ಯಾಕ್ಸ್ ದೀಪದ ಬೆಳಕಿನಲ್ಲಿ ಅವರ ಪ್ರವೇಶ ಅಲ್ಲಿ ಮೊದಲು ಸೇರಿದ್ದವರಲ್ಲಿ ಒಂದು ಸಂಚಲನವನ್ನು ಉಂಟುಮಾಡುತ್ತಿತ್ತು. ತಮ್ಮಷ್ಟಕ್ಕೆ ಏನೇನೋ ಮಾತಾಡಿಕೊಳ್ಳುತ್ತಿದ್ದವರು ದನಿಯನ್ನು ತಗ್ಗಿಸುತ್ತಿದ್ದರು. 'ಕುರಂಬಳ್ಳಿ ಯಜಮಾನರು' ಎಂದೋ, 'ಕೊಡಸೆ ಯಜಮಾನರು' ಎಂದೋ 'ಬರುವೆ ಬಡೇನಾಯ್ಕರು' ಎಂದೋ ಮೆಲ್ಲಗೆ ಹೇಳಿಕೊಂಡು ಕ್ಷಣ ಹೊತ್ತು ತಮ್ಮ ಮಾತು ನಿಲ್ಲಿಸಿ ಯಜಮಾನರಿಗೆ ಮನೆ ಜಗುಲಿಯ ಗೋಡೆಯ ಬದಿ ಹಾಸಿದ್ದ ತಡಿಯ ಕಡೆಗೆ ಮಾರ್ಗ ತೋರಿಸುತ್ತಿದ್ದರು. ಅಲ್ಲಿಗೆ 'ಶ್ರೀಮದ್ಗಾಂಭೀರ್ಯ'ದಂತಹ ಭಂಗಿಯಲ್ಲಿ ನಿಧಾನವಾಗಿ ಸಾಗುತ್ತಿದ್ದ ಯಜಮಾನರುಗಳು ಮೊದಲೇ ಅಲ್ಲಿ ವಿರಾಜಮಾನರಾಗಿದ್ದ ಬಂಧುಗಳನ್ನು ಗುರುತಿಸಿ ಒಬ್ಬೊಬ್ಬರನ್ನೂ ವಿಚಾರಿಸಿ ತಮಗಾಗಿ ಬಿಟ್ಟ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದರು.

ಮದುವೆ ಇರಲಿ, ಹಬ್ಬವಿರಲಿ, ಇಂಥ ಸಮಾರಂಭಕ್ಕೆ ಆಗಮಿಸಿದವರು ಲೋಕಾರೂಢಿಯಂತೆ ಮಾತಿಗೆ ತೊಡಗುತ್ತಿದ್ದರು. ಅವರ ಮಾತುಕತೆಗಳೆಲ್ಲ ಹುಡುಗರಾಗಿದ್ದ ನಮಗೆ ಆಸಕ್ತಿ ಹುಟ್ಟಿಸುತ್ತಿದ್ದವೆಂದು ಈಗ ಹೇಳುವುದು ಕಷ್ಟ. ಆದರೆ, ಅವು ಅಂದು ಹಿರಿಯ ಯಜಮಾನರುಗಳಿಂದ ಬರುತ್ತಾ ಇದ್ದ ಕಾರಣ ಕಿವಿಗೆ ಬೀಳುತ್ತಿದ್ದವು. ಬೇಸಗೆಯ ದಿನಗಳಾದರೆ ಮುಂಗಾರಿಗೆ ಮೊದಲಿನ ಮಳೆಯ ವಿಚಾರ ಪ್ರಸ್ತಾಪವಾಗುತ್ತಿತ್ತು. 'ಹ್ವಾದರ್ಸ ಇಷ್ಟು ಹೊತ್ತಿಗಾಗಲೇ ಎರಡು ಮೂರು ಜೋರು ಮಳೆ ಬಿದ್ದು ತ್ವಾಟಕ್ಕೆ

ಅನುಕೂಲವಾಗಿತ್ತು. ಈ ವರ್ಷ ಮಳೆ ಬೀಳದೆ ತ್ವಾಟಕ್ಕೆ ನೀರೇ ಇಲ್ಲದೆ ಮರದ ಚಂಡೆ ಒಣಗಿ ಹೋಗ್ತಾ ಇದಾವೆ' ಎಂಬುದು ಒಬ್ಬರ ಅಳಲಾದರೆ, 'ಗದ್ದೇಲಿ ಪಸೆಯೇ ಇಲ್ಲದೆ ಹ್ವಾಕೆ ಉಕ್ಕೇನೇ ಆಗಿಲ್ಲ ನಮ್ಮ ಕಡೆ' ಎಂದು ಇನ್ನೊಬ್ಬ ಯಜಮಾನರು ಪ್ರತಿಯಾಗಿ ಹೇಳುತ್ತಿದ್ದರು.

'ಹ್ವಾಕೆ', 'ಇಚ್ಚಾಲು' ಎಂಬ ಅಂದಿನ ರೈತಾಪಿ ಪಾರಿಭಾಷಿಕ ಪದಗಳು ನನ್ನ ಎಳವೆಯಿಂದಲೂ ಪರಿಚಿತವಾದವು. ಚಳಿಗಾಲದ ಕೊನೆಯ ವೇಳೆಗೆ ಗದ್ದೆ ಕೊಯ್ಲು ಮುಗಿಯುತ್ತಿತ್ತು. ಸಂಕ್ರಾಂತಿಯ ಸುಮಾರಿಗೆ ಬಿಸಿಲು ಚುರುಕಾಗುತ್ತಿತ್ತು. ಗದ್ದೆಯ ಪಸೆ ನಿಧಾನವಾಗಿ ಆರಿ ಮಣ್ಣೆಲ್ಲ ಗಟ್ಟಿಯಾಗಿ ಬಿಡುತ್ತಿತ್ತು. ಗದ್ದೆಯಲ್ಲಿ ನೀರಿನ ಪಸೆ ಇದ್ದಾಗಲೇ ನೇಗಿಲಿನಿಂದ ಒಂದು ಸಲ ಉತ್ತಿದರೆ ಕೆಳಗಿದ್ದ ಮಣ್ಣು ಮೇಲೆ ಬಂದು ಬಿಸಿಲ ಝಳಕ್ಕೆ ಕಾಯುತ್ತಿತ್ತು. ಗದ್ದೆಯ ಮಣ್ಣನ್ನು ಸಡಿಲಗೊಳಿಸಲು ಮೊದಲ ಸಲಕ್ಕೆ ಉಕ್ಕೆ ಹೊಡೆಯುವುದಕ್ಕೆ ಹ್ವಾಕೆ ಎಂದು ಕರೆಯುತ್ತಿದ್ದರು. ಗದ್ದೆಯಲ್ಲಿ ತಂಪಿದ್ದ ಜಾಗದಲ್ಲಿ ನೇಗಿಲಿನಿಂದ ಹೂಡಿ ಕೆಲವು ದಿನ ಬಿಡುತ್ತಿದ್ದರು. ಮುಂಗಾರು ಪೂರ್ವದಲ್ಲಿ ಬೀಳುವ ಅಡ್ಡ ಮಳೆಗಳಲ್ಲಿ ಬಿರುಸಾಗಿ ಬಿದ್ದ ಹದ ಮಳೆಯ ನಂತರ ಹ್ವಾಕೆಯ ಉಕ್ಕೆ ಹೊಡೆದ ಗದ್ದೆಗಳನ್ನು ಇನ್ನೊಮ್ಮೆ ಹೂಡುತ್ತಿದ್ದರು. ಹ್ವಾಕೆ ಉಕ್ಕೆ ದಕ್ಷಿಣೋತ್ತರವಾಗಿದ್ದರೆ ಇಚ್ಚಾಲು ಎಂಬ ಎರಡನೇ ಸರದಿಯ ಉಕ್ಕೆ ಅದಕ್ಕೆ ಅಡ್ಡಲಾಗಿ ಪೂರ್ವ–ಪಶ್ಚಿಮವಾಗಿರುತ್ತಿತ್ತು. ಎರಡನೇ ಸಾಲಿನ ಉಕ್ಕೆ ಎಂಬುದನ್ನು ಇಚ್ಚಾಲು (ಎರಡನೇ ಸಾಲು) ಎಂದು ಕರೆಯುತ್ತಿದ್ದರು. ಹ್ವಾಕೆಯ ಉಕ್ಕೆ ಗದ್ದೆಯ ಪಸೆ ಇದ್ದ ಜಾಗಕ್ಕಷ್ಟೇ ಸೀಮಿತವಾಗಿದ್ದರೆ ಇಚ್ಚಾಲಿನ ಉಕ್ಕೆ ಇಡೀ ಗದ್ದೆಯನ್ನು ವ್ಯಾಪಿಸಿರುತ್ತಿತ್ತು. ಗದ್ದೆಯ ತಳಮಣ್ಣು ಮೇಲೆ ಬಂದು ಒಳಗಿದ್ದ ಕ್ರಿಮಿಕೀಟಗಳ ಮೊಟ್ಟೆ ಮರಿಗಳು ಬಿಸಿಲಿನ ಝಳಕ್ಕೆ ಸಾಯುತ್ತಿದ್ದವು. ಮಣ್ಣು ಸಡಿಲವಾಗುತ್ತಿತ್ತು. ಇಚ್ಚಾಲಿನ ಉಕ್ಕೆಯ ನಂತರ ಕೆಲವು ದಿನ ಬಿಸಿಲಿಗೆ ಬಿಟ್ಟು ಕೊರಡನ್ನು ಹೊಡೆದು ಮಣ್ಣನ್ನು ಸಮಮಾಡುವುದು ನಂತರದ ಪ್ರಕ್ರಿಯೆ.

ಬೇಸಗೆಯ ಆರಂಭದ ದಿನಗಳಲ್ಲಿ ಗದ್ದೆ ಬಿತ್ತುವವರೆಗಿನ ಹಂತಗಳನ್ನು ತಮ್ಮ ಮಾತುಕತೆಗಳಲ್ಲಿ ಈ ಯಜಮಾನರುಗಳು ವಿಸ್ತರಿಸಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬರ ಮನೆಯವರು ಇನ್ನೂ ಹ್ವಾಕೆಯ ಹಂತದಲ್ಲಿದ್ದರೆ ಇನ್ನೊಬ್ಬರು ಇಚ್ಚಾಲಿಗಾಗಿ ಹದಮಳೆಯ ನಿರೀಕ್ಷೆಯನ್ನು ಪ್ರಕಟಿಸುತ್ತಿದ್ದರು. ಮತ್ತೊಬ್ಬರು 'ನಾವು ಇಚ್ಚಾಲು ಮುಗಿಸಿ ಕೊಲ್ಡು ಹೊಡೀತಾ ಇದೀವಿ' ಎಂದು ಮುಂದಿನ ಪ್ರಗತಿಯನ್ನು ಹೇಳಿಕೊಂಡರೆ ಮಗದೊಬ್ಬರು 'ನಮ್ಮಲ್ಲಿ ಬಿತ್ತನೆಗಿಂತ ನಟ್ಟಿ ಮಾಡಾದೆ ಕ್ರಮ' ಎಂದು ಹೇಳುತ್ತಿದ್ದರು.

ಕಳೆದ ಶತಮಾನದ ಅರವತ್ತರ ದಶಕದಲ್ಲಿ ದೇಶದಲ್ಲಿ ಹಸಿರುಕ್ರಾಂತಿ ಆರಂಭವಾಗಿದ್ದರೂ ಮಲೆನಾಡಿನ ನಮ್ಮ ಹಳ್ಳಿಗೆ ಇನ್ನೂ ಕಾಲಿರಿಸಿರಲಿಲ್ಲ. ದಬ್ಬಣಸಾಲೆ, ಜೋಳಗ, ವಾಳ್ಯ ಎಂಬ ಹೆಸರಿನ ದಪ್ಪ ಅಗುಳಿನ ಬತ್ತದ ತಳಿಗಳೂ, ಸಣ್ಣವಾಳ್ಯ ಹೆಸರಿನ ಸಣ್ಣ ಅಗುಳಿನ ಬತ್ತದ ತಳಿಗಳೂ ಬಳಕೆಯಲ್ಲಿದ್ದವು. ನಮ್ಮ ಸುತ್ತಲಿನ ಎಲ್ಲ ಹಳ್ಳಿಗಳಲ್ಲಿಯೂ ಮಳೆ ಆಸರೆಯ ಬೇಸಾಯ ಕ್ರಮ. ಪ್ರತಿ ಹಳ್ಳಿಯಲ್ಲಿ ಸಣ್ಣ ಕೆರೆಗಳಿದ್ದರೂ ಕೆರೆಯ ನೀರು ಬೇಸಗೆಯ ದಿನಗಳಲ್ಲಿ ತೋಟದ ಬೆಳೆಗಳಿಗೆ ಎಂಬಂಥ ಪದ್ಧತಿ ಜಾರಿಯಲ್ಲಿತ್ತು. ಎರಡನೇ ಬೆಳೆಯ ಕಲ್ಪನೆಯೇ ಬಂದಿರಲಿಲ್ಲ. ಸಣ್ಣವಾಳ್ಯ ತಳಿಯ ಜೊತೆಗೆ ಕೆಲವರು ಕೊಯಮತ್ತೂರು ಸಣ್ಣ ಎಂಬ ಸಣ್ಣ ಅಗುಳಿನ ತಳಿಯನ್ನು ಬೆಳೆಯುತ್ತಿದ್ದರು. ಬೀಜವನ್ನು ಗದ್ದೆಗೆ ನೇರವಾಗಿ ಬಿತ್ತುವುದೇ ಅಂದು ಪ್ರಚಲಿತವಿದ್ದ ಬೇಸಾಯ ಕ್ರಮ. ಅದಕ್ಕೆ ಹಲವು ಹಂತಗಳು. ಹ್ವಾಕೆ ಇಚ್ಚಾಲು ಉಕ್ಕೆಗಳ ನಂತರ ಕೊರಡು ಹೊಡೆದು ಸಪಾಟಾಗಿ ಹದವಾಗಿದ್ದ ಗದ್ದೆಯ ಮೇಲೆ ಕೊಟ್ಟಿಗೆ ಗೊಬ್ಬರವನ್ನು ತಳಿದು ಇನ್ನೊಂದು ಸಲ ಉಕ್ಕೆ ಹೊಡೆದು, ಗದ್ದೆ ಹಾಳಿಗಳ (ಅಂಚುಗಳ) ಕಳೆಯನ್ನೆಲ್ಲ ಗುದ್ದಲಿಯಿಂದ ಕೆತ್ತಿ ಸಮ ಮಾಡಿ ಮತ್ತೊಮ್ಮೆ ಕೊರಡು

ಹೊಡೆದು ಸಪಾಟು ಮಾಡಿದ ನಂತರ ಕೂರಿಗೆಯಿಂದ ಬತ್ತ ಬಿತ್ತುವವರೆಗೆ ಒಂದು ಹಂತ. ನಂತರ ಬೀಜದಿಂದ ಮೊಳಕೆ ಒಡೆಯುವ ಬತ್ತದ ಸಸಿಗಳಿಗೆ ಕಳೆಯ ಬಾಧೆ ನಿವಾರಣೆ ಮಾಡುವುದು, ಅದರೊಂದಿಗೆ ಸಸಿಯ ಬುಡದಲ್ಲಿ ಮಣ್ಣನ್ನು ಸಡಿಲಗೊಳಿಸಿ ಹೆಚ್ಚಿನ ಕವಲುಗಳು ಒಡೆಯುವಂತೆ ಉತ್ತೇಜಿಸುವ ಪ್ರಕ್ರಿಯೆಗೆ ಮುಂದಾಗುವುದು, ಇದನ್ನು ಬರ ಹೊಡೆಯುವುದು ಎಂದು ಕರೆಯುತ್ತಿದ್ದರು. ಬತ್ತದ ಸಸಿಗಳು ಮಧ್ಯದಲ್ಲಿ ಬರುವಂತೆ ಕುಂಟೆಯನ್ನು ಹೊಡೆಯುವುದು ನಾಜೂಕಿನ ಕೆಲಸ. ಆ ವೇಳೆಗೆ ಗೇಣಿಗಿಂತಲೂ ಎತ್ತರ ಬೆಳೆದ ಸಸಿಗಳಿಗೆ ಉಳುಮೆಯ ಎತ್ತುಗಳ ಬಾಯಿ ಹಾಕದಂತೆ ಅವುಗಳ ಬಾಯಿಗೆ ಬುಟ್ಟಿಯಂಥ ಬೆತ್ತದ ಕುಕ್ಕೆ (ಸಲಕರಣೆ) ಯನ್ನು ಕಟ್ಟುತ್ತಿದ್ದರು. ಈ ಕೆಲಸಗಳೆಲ್ಲ ಮಳೆ ಕೂರುವವರೆಗೆ ನಡೆಯುತ್ತಿದ್ದವು. ಮುಂಗಾರು ಮಳೆ ಬಿದ್ದು ಗದ್ದೆಗಳಲ್ಲಿ ನೀರು ತುಂಬಿ ನಿಂತಾಗ ಇನ್ನೊಂದು ಸಲ ಕುಂಟೆ ಹೊಡೆದು ಸಾಲುಗಳ ಮಧ್ಯೆ ಎದ್ದ ಕಳೆಗಳನ್ನು ನಿವಾರಿಸಿ ಸಸಿಗಳ ಬುಡಗಳನ್ನು ಸಡಿಲಗೊಳಿಸುವ ಕೆಲಸ. ಇದಕ್ಕೆ ಆಲ ಹೊಡೆಯುವುದು ಎಂಬ ಪರಿಭಾಷೆ.

'ಗದ್ದೆ ಬಿತ್ತಿ ಆಗಿಲ್ಲ', 'ಈ ಸಲ ಹದ ಮಳೆ ಬಂದೇ ಇಲ್ಲ ಮಾರಾಯ್ರಾ, ಅದಕ್ಕೆ ನಟ್ಟಿ ಮಾಡಾದೇ ಸರಿ ಅಂತ ಹಂಗೆ ಬಿಟ್ಟು ಬಿಟ್ಟಿದೀವಿ' ಅಂತಲೂ ಈ ಯಜಮಾನರುಗಳು ತಮ್ಮ ಬೇಸಾಯದ ಚಟುವಟಿಕೆಗಳ ಮಾಹಿತಿಗಳನ್ನು ಹಂಚಿಕೊಳ್ಳುತ್ತಿದ್ದರು.

ಎಂಥ ದೊಡ್ಡ ಮನೆಯ ಯಜಮಾನಿಕೆಯನ್ನು ವಹಿಸಿದ್ದರೂ, ಇಪ್ಪತ್ತು ಮೂವತ್ತು ಎಕರೆ ಗದ್ದೆ, ಆರೇಳು ಎಕರೆ ಅಡಕೆ ತೋಟಗಳ ಉಸ್ತುವಾರಿ ಹೊತ್ತವರಾಗಿದ್ದರೂ ಈ ಯಜಮಾನರುಗಳ ಮಾತುಕತೆಯೆಲ್ಲವೂ ಬೇಸಾಯದ ಕೆಲಸದ ಹಂತಗಳು, ತೋಟಕ್ಕೆ ಮಣ್ಣು ಹೊಡೆಸುವುದು, ಸೊಪ್ಪು ಹಾಕುವುದು, ಗೊಬ್ಬರದ ಪ್ರಮಾಣ ಹೆಚ್ಚಿಸಲು ಕೊಟ್ಟಿಗೆಗೆ ದರಗು, ಸೊಪ್ಪುಗಳನ್ನು ಹಾಕುವುದು ಇತ್ಯಾದಿ ಕೆಲಸಗಳ ಸುತ್ತಮುತ್ತ ಹರಿದಾಡುತ್ತಿದ್ದವು. ಮಳೆಗಾಲದ ಆರಂಭದ ದಿನಗಳಾದರೆ, ಅಗೆ ಹಾಕುವುದು, ಗದ್ದೆಗಳ ಹಾಳಿ ಕಡಿಯುವುದು (ಇದಕ್ಕೆ ಅಂಚು ಕೆತ್ತುವುದು ಎಂಬುದು ಮಲೆನಾಡಿನ ಕೆಲವು ಕಡೆ ಇರುವ ಮಾತು), ಗದ್ದೆ ತೋಟಗಳ ರಕ್ಷಣೆಗೆ ಬಿದಿರು ಮುಳ್ಳುಗಳ ಬೇಲಿ ಮಾಡುವುದು ಇತ್ಯಾದಿ ಕೆಲಸಗಳ ಸುತ್ತ ಮಾತುಕತೆಗಳು ಸುತ್ತುತ್ತಿದ್ದವು. ನಾಗರಿಕ ಜಗತ್ತಿನ ಸಂಪರ್ಕದ ಕುರುಹು ಎಂದರೆ ಅವರು ಪೇಟೆಯ ತಿರುಗಾಟಕ್ಕೆ ಸಂಬಂಧಿಸಿ ಆಡುತ್ತಿದ್ದ ಮಾತುಗಳಷ್ಟೆ. ಹತ್ತಿರದ ಪೇಟೆಯಲ್ಲಿನ ಅಕ್ಕಿ ಗಿರಣಿಗೆ ಮಿಲ್ಲು ಎಂಬ ಹೆಸರು ಬಳಕೆಗೆ ಬಂದಿದ್ದರಿಂದ ಮನೆಗೆ ಅಕ್ಕಿ ಮಾಡಿಸಲು ಹೋಗುತ್ತಿದ್ದ ಮಿಲ್ಲಿನಲ್ಲಿಯೇ ಬತ್ತವನ್ನೂ ಮಾರಿ ಅದರಿಂದ ಬರುತ್ತಿದ್ದ ದುಡ್ಡಿನಲ್ಲಿ ಮನೆಗೆ ಬೇಕಾದ ಸಾಮಾನು ತರುತ್ತಿದ್ದುದು ಅಲ್ಲಿನವರಿಗೆ ಪರಿಚಿತವಿದ್ದ ಸಂಗತಿ. ಅವೆಲ್ಲ ವಿದ್ಯಮಾನಗಳೂ ಮಾತಿನಲ್ಲಿ ಸುಳಿಯುತ್ತಿದ್ದವು. ಅಡಕೆ ತೋಟ ಇದ್ದ ಯಜಮಾನರುಗಳು ಅಡಕೆ ಧಾರಣೆ ಏರಿದ ಇಲ್ಲವೇ ಇಳಿದ ಬಗ್ಗೆ ಮಾತಿನಲ್ಲಿ ಸೇರಿಸುತ್ತಿದ್ದರು. ಹಳ್ಳಿಯಿಂದ ಹಳ್ಳಿಗೆ ಕಾಲುಹಾದಿಯಲ್ಲಿಯೇ ಕ್ರಮಿಸುತ್ತಿದ್ದ ಜನರಿಗೆ ಸಾಗರ– ತೀರ್ಥಹಳ್ಳಿಯ ಮಧ್ಯೆ ಜಲ್ಲಿ ರಸ್ತೆಯಲ್ಲಿ ಒಂದು ಬಸ್ಸಿನ ಸಂಚಾರ ಆರಂಭವಾಗಿದ್ದುದೂ ಕ್ರಾಂತಿಕಾರಕ ಬದಲಾವಣೆಯ ಸೂಚನೆಯಾಗಿತ್ತು. ಯಾರು ಯಾವ ವಿಷಯವನ್ನು ಪ್ರಸ್ತಾಪಿಸಿದರೂ ಪೇಟೆಯಲ್ಲಿ, ಶಿವಮೊಗ್ಗದಲ್ಲಿ ಆಗುತ್ತಿದ್ದ ಬದಲಾವಣೆಗಳ ಬಗ್ಗೆ ಆಗುತ್ತಿದ್ದ ಬೆರಗನ್ನು ಮುಚ್ಚಿಕೊಂಡವರಲ್ಲ.

ಒಮ್ಮೆ 'ಸಣ್ಣದೊಂದು ಪೆಟ್ಟಿಗೆ ಮಾರಾಯ. ಅದರೊಳಗೆ ಸೆಲ್ಲು, ಅದೇ ನಾವು ಬ್ಯಾಟರಿಗೆ ತಗಳ್ತೀವಲ್ಲ, ಅವನ್ನು ಹಾಕ್ಯಂಡು ಟೇಸನ್ನು ತಿರುಗಿಸಿದರೆ ಸಿನಿಮಾ ಹಾಡು ಬತ್ತಾವಂತೆ. ಅದೇ ಪ್ಯಾಟೆ ಕಿಣಿ ಹೋಟಲಾಗೆ

ಹಾಕಿರ್ತಾರಲ್ಲ..' ಎಂದು ಒಬ್ಬ ಯಜಮಾನರು ರೇಡಿಯೋ ಬಗ್ಗೆ ವಿಷಯ ಪ್ರಸ್ತಾಪಿಸಿದರು. 'ಅದಕ್ಕೆ ಕರಂಟು ಬೇಕೇನ್ರಪ್ಪ..' ಎಂದು ಇನ್ನೊಬ್ಬ ಯಜಮಾನರು ಅನುಮಾನ ವ್ಯಕ್ತಪಡಿಸಿದರು. 'ಕರಂಟು ಇಲ್ದೇ ಇದ್ರೂ ಬ್ಯಾಟರೀಲೆ ನಡೀತದಂತೆ' ಎಂದು ಸಭಿಕರಲ್ಲಿ ಯಾರೋ ತಮ್ಮದೂ ಇರಲಿ ಎಂದು ಸೇರಿಸಿದರು. ಟ್ರಾನ್ಸಿಸ್ಟರ್ ರೇಡಿಯೋ ಪ್ರಚಾರ ಆರಂಭದ ಹಂತದಲ್ಲಿತ್ತು. ಈ ಯಜಮಾನರ ಬಾಯಲ್ಲಿ ರೇಡಿಯೋ ಎಂಬ ಹೆಸರು ಕೂಡ ಸ್ಪಷ್ಟವಾಗಿ ಬರುತ್ತಿರಲಿಲ್ಲ. ತಲೆಗೆ ಉಣ್ಣೆಯ ಟೋಪಿ ಧರಿಸಿದ್ದು ರಾತ್ರಿ ಮಲಗುವಾಗ ಹೊದ್ದುಕೊಳ್ಳಲು ಉಣ್ಣೆಯ ಶಾಲನ್ನು ತಮ್ಮ ಬಗಲು ಚೀಲದಲ್ಲಿ ತರುತ್ತಿದ್ದ ಯಜಮಾನರೊಬ್ಬರು ಅದನ್ನು 'ರೆಡಿ' ಎಂದು ಕರೆಯುತ್ತಿದ್ದರು. ಆ ದಿನಗಳಲ್ಲಿ ರೇಡಿಯೋ ಮಾತ್ರವಲ್ಲ, ಬೈಸಿಕಲ್ ಕೂಡ ಅಪೂರ್ವವಾಗಿತ್ತು. ಯಾವ ಹಳ್ಳಿಗೂ ಸರ್ಕಾರದ ಕಡೆಯಿಂದ ಸಂಪರ್ಕ ಮಾರ್ಗ ನಿರ್ಮಾಣವಾಗಿರಲಿಲ್ಲ. ತಮ್ಮ ಮನೆಗಳಿಂದ ಸರ್ಕಾರಿ ರಸ್ತೆಯವರೆಗೆ ಮಾಡಿಕೊಳ್ಳುತ್ತಿದ್ದ ಗಾಡಿ ಹಾದಿಯನ್ನು ಪ್ರತಿ ವರ್ಷ ಮಳೆಗಾಲಕ್ಕೆ ಮೊದಲು ಹಳು ಸವರಿ ಮಳೆನೀರು ಹರಿದು ಹೋಗುವಂತೆ ದುರಸ್ತಿ ಮಾಡಿಸುವವರೂ ಇದ್ದರು. ಆದರೆ ಹೆಚ್ಚಿನ ಹಳ್ಳಿಗಳಿಗೆ ಗಾಡಿ ಹಾದಿಯೇ (ಚಕ್ಕಡಿಗಾಗಿ ಮಾಡಿದ ಕಚ್ಚಾ ಹಾದಿ) ರಾಜಮಾರ್ಗವಾಗಿತ್ತು.

ನಮ್ಮ ಯಜಮಾನರುಗಳ ಊರುಗಳಿಂದ ಪೇಟೆ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ರಸ್ತೆಗೆ ಡಾಂಬರು ಹಾಕಿದ ಮೇಲೆ ತೀರ್ಥಹಳ್ಳಿಯಿಂದ ಸಾಗರಕ್ಕೆ ಹಾಗೂ ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ಬೆಳಗ್ಗೆ ಮತ್ತು ಸಂಜೆಯ ಹೊತ್ತಿಗೆ ಬಸ್ಸುಗಳ ಸಂಚಾರ ಆರಂಭವಾಗಿದ್ದು ಇವರ ಓಡಾಟಕ್ಕೆ ಎಷ್ಟೋ ಅನುಕೂಲವಾಗಿತ್ತು. ಬೆಳಗಿನ ಬಸ್ಸು ಒಂಬತ್ತು ಗಂಟೆಯ ಸುಮಾರಿಗೆ ಮತ್ತು ಸಂಜೆಯ ಬಸ್ಸು ಐದರ ಸುಮಾರಿಗೆ ಊರ ಹತ್ತಿರ ಹಾದು ಹೋಗುತ್ತಿದ್ದಾಗ ಅದಕ್ಕೆ ಹೊಂದಿಕೊಂಡು ತಮ್ಮ ಓಡಾಟದ ಸಮಯವನ್ನು ನಿಗದಿಪಡಿಸಿಕೊಳ್ಳುವುದು ಅನಿವಾರ್ಯವಾಯಿತು. ಆದರೆ ನಂತರ ಮನೆಗಳಿದ್ದ ಹಳ್ಳಿಗಳೆಲ್ಲ ಕಾಡಿನ ಅಂಚಿನಲ್ಲಿಯೋ, ಕಾಡಿನ ಮಧ್ಯದಲ್ಲಿಯೋ ಇದ್ದ ಕಾರಣ ಅಲ್ಲಿಗೆಲ್ಲ ಹೋಗುವುದಕ್ಕೆ ಕಾಲ್ನಡಿಗೆಯ ವಿನಾ ಅನ್ಯಮಾರ್ಗವಿರಲಿಲ್ಲ. ಮನೆಯ ಯಜಮಾನಿಕೆಯ ಲಕ್ಷಣವಾಗಿ ಉದ್ದ ತೋಳಿನ ಅಂಗಿ, ಕಚ್ಚೆ ಪಂಚೆ, ಕುವೆಂಪು ಕಾದಂಬರಿಗಳಲ್ಲಿ ಬರುವಂತೆ ಹಾಸನದ ಟೋಪಿಯೋ ದಪ್ಪ ಮುಂಡಾಸೋ ಇಲ್ಲವೇ ಕುರಂಬಳ್ಳಿ ಯಲ್ಲನಾಯ್ಕರಂತೆ ಗಾಂಧಿ ಟೋಪಿಯನ್ನೋ ಧರಿಸಿರುತ್ತಿದ್ದ ಯಜಮಾನರುಗಳು ಶ್ರಮದ ಕೆಲಸಗಳಿಗೂ ಒಗ್ಗಿ ಹೋಗಿದ್ದವರು. ಹಂಗಾಮಿನ ಕೆಲಸಗಳಲ್ಲಿ ಗದ್ದೆ ತೋಟಗಳಲ್ಲಿ ಮೈಮುರಿಯುವಂತೆ ದುಡಿಯುತ್ತಿದ್ದವರು. ಆದ್ದರಿಂದ ಆಳ್ತನದಲ್ಲಿ ಗಡುಸಾಗಿಯೂ, ಯಜಮಾನಿಕೆಯ ಗತ್ತಿನಿಂದಲೂ ತೋರುತ್ತಿದ್ದರು.

* * *

**ತಿಮ್ಮಪ್ಪನ 'ಬರುವೆ'**

ಮಲೆನಾಡಿನ ಕುಗ್ರಾಮದಿಂದ ಹೊಟ್ಟೆಪಾಡು ಅರಸಿ ಬೆಂಗಳೂರು ಸೇರಿ ಅಲ್ಲಿಯೇ ಓದು, ಉದ್ಯೋಗ ಮುಗಿಸಿ ರೆವಿನ್ಯೂ ನಿವೇಶನದಲ್ಲಿ ಸಣ್ಣ ಮನೆ ಕಟ್ಟಿಕೊಂಡು ನೆಲೆಸಿರುವ ನಾನು ಊರಿಗೆ ಹೋಗಲು ಬಂದಾಗಲೆಲ್ಲ ಶಿವಮೊಗ್ಗದಲ್ಲಿ ತಿಮ್ಮಪ್ಪನ ಮನೆಗೆ ಭೇಟಿ ಕೊಡುವುದು ಅಭ್ಯಾಸ. ಬೆಂಗಳೂರನ್ನು ಯಾವತ್ತು, ಎಷ್ಟು ಹೊತ್ತಿಗೆ ಬಿಡುತ್ತಿದ್ದೇನೆ ಎಂದು ಒಮ್ಮೆ ಸೂಚನೆ ಕೊಡುವುದಷ್ಟೆ ನನ್ನ ಕೆಲಸ. ಉಳಿದದ್ದು ತಿಮ್ಮಪ್ಪ ನೋಡಿಕೊಳ್ಳುತ್ತಾನೆ. ನಾನು ಹೊರಡಬೇಕಿದ್ದ ದಿನ ತಿಳಿಸಿದರೂ ಸಾಕು. ಅವತ್ತು ಬೆಳಗಿನ ಜಾವವೇ ನನ್ನನ್ನು ಎಚ್ಚರಿಸುವುದು ಅವನ ದೂರವಾಣಿ ಕರೆ. ನಾನು ಎದ್ದು 'ಇಷ್ಟು ಹೊತ್ತಿಗೆ ಹೊರಡುತ್ತಿದ್ದೇನೆ' ಎಂದರೆ ಅಷ್ಟು ಹೊತ್ತಿಗೆ ಇನ್ನೊಂದು ಕರೆ. ಅಲ್ಲಿಂದ ನಾನು ಹೊರಟ ಸಮಯ, ಪ್ರಯಾಣ ಮಾಡಿದ ಮಾರ್ಗ, ಸಾಗಿದ

ದೂರ, ಸೇರಿದ ಜಾಗ.. ಇವೆಲ್ಲವನ್ನೂ ಕರಾರುವಾಕ್ಕಾಗಿ ಲೆಕ್ಕ ಹಾಕುತ್ತಾ ನಾನು ಶಿವಮೊಗ್ಗ ತಲುಪುವವರೆಗೂ ನಿಗಾ ಇರಿಸುತ್ತಿದ್ದವನು ಅವನು. ನಗರ ಪ್ರವೇಶಿಸಿ ತುಂಗಾ ಸೇತುವೆಯನ್ನು ತಲುಪಿದ ತಕ್ಷಣ ಅದನ್ನು ತಿಳಿಸಿದರೆ ಅವನ ಮನೆ ತಲುಪುವವರೆಗಿನ ಸಮಯವೂ ಅವನಿಗೂ ಗೊತ್ತು. ಐದು ನಿಮಿಷ ತಡವಾದರೆ ಮತ್ತೆ ಫೋನು. ಇಷ್ಟರ ಮಟ್ಟಿಗಿನ ನಿಗಾ ವಹಿಸುವುದು ಮುಖ್ಯಮಂತ್ರಿಯ ಪ್ರವಾಸಕ್ಕೆ ಮಾತ್ರ ಎಂದು ಎಷ್ಟೋ ಸಲ ಬೆರಗಾಗಿದ್ದೇನೆ. ತಿಮ್ಮಪ್ಪನ ಮನೆ ಸೇರಿದರೆ ಅದು ಬೇರೆಯೇ ಪ್ರಪಂಚ. ಚಡ್ಡಿ ಹಾಕಿಕೊಂಡು ಮಾಧ್ಯಮಿಕ ಶಾಲೆಗೆ ಹೋಗಿಬರುತ್ತಿದ್ದಾಗಿನ ದಿನಗಳ ಮರುಕಳಿಕೆ.

* * *

ರಿಪ್ಪನ್ ಪೇಟೆಯ ನೂತನ ಮಾಧ್ಯಮಿಕ ಶಾಲೆಗೆ ಐದನೇ ತರಗತಿಗೆ ನಾನು ಸೇರಿದಾಗ ತಿಮ್ಮಪ್ಪನ ಪರಿಚಯವಾಯಿತು. ಅಲ್ಲಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿದ್ದ ಬರುವೆ ಅವನ ಊರು (ಇದೇ ಹೆಸರಿನ ಇನ್ನೊಂದು 'ಬರುವೆ' ಹೊಸನಗರ ತಾಲ್ಲೂಕಿನಲ್ಲಿಯೇ ನಿಟ್ಟೂರು ಸಮೀಪ ಇದೆ). ಪೇಟೆಯಿಂದ ಕಾಲುನಡಿಗೆಯ ದಾರಿ. ಮಧ್ಯೆ ವಿಶಾಲವಾದ ಗದ್ದೆಯ ಕೋವು. ಗದ್ದೆಯಲ್ಲಿ ಸಣ್ಣ ಹಳ್ಳಗಳಿದ್ದರೂ ಅವೆಲ್ಲ ಅಂಥ ಅಪಾಯಕಾರಿಯಾದವಲ್ಲ. ಅವನು ಪೇಟೆಯ ಶಾಲೆಯಲ್ಲಿ ಒಂದನೇ ತರಗತಿಯಿಂದ ಓಡಾಡುತ್ತಾ ಇದ್ದವನು. ನಾನು ಪ್ರಾಥಮಿಕ ಶಾಲೆಯನ್ನು ಊರಿನ ಸಮೀಪದ ಕಣಬಂದೂರು ಮತ್ತು ಜಂಬಳ್ಳಿಯಲ್ಲಿ ಮುಗಿಸಿ ಐದನೇ ತರಗತಿಗೆ ಪೇಟೆಗೆ ಬಂದವನು. ಪೇಟೆ ನಮ್ಮೂರಿಗೆ ಹತ್ತು ಕಿಲೋಮೀಟರ್ ದೂರ ಇದ್ದ ಕಾರಣ ಪೇಟೆಗೆ ಮೂರು ಕಿಲೋಮೀಟರ್ ದೂರದಲ್ಲಿದ್ದ ಹುಳುಗದ್ದೆಯ ಸೋದರ ಮಾವನ ಮನೆಯಲ್ಲಿ ಆಶ್ರಯ ಪಡೆದಿದ್ದೆ. ಅದು ಪೇಟೆಯಿಂದ ಹೊಸನಗರದ ಕಡೆ ಹೋಗುವ ಸರ್ಕಾರಿ ರಸ್ತೆಯಲ್ಲಿ ಎರಡು ಕಿಲೋಮೀಟರ್ ಸಾಗಿ ನಂತರ ಬಲಕ್ಕೆ ಅಗುಚಿ ಕಾಡು ಹಾದಿಯಲ್ಲಿ ಒಂದು ಕಿಲೋಮೀಟರ್ ದೂರದಲ್ಲಿದ್ದ ಹಳ್ಳಿ. ಕಾಡು ಹಾದಿಯೆಂದರೆ ದಟ್ಟವಾಗಿದ್ದ ಕಾಡಿನಲ್ಲಿ ಎತ್ತಿನ ಗಾಡಿ ಸಂಚಾರಕ್ಕೆ ಮಾಡಿದ್ದ ಹಾದಿ. ಮಳೆಗಾಲದಲ್ಲಿ ನೀರು ಹರಿದು ಹಳ್ಳದಂತೆ ಆಗಿರುತ್ತಿತ್ತು. ಮಳೆಗಾಲ ಮುಗಿದು ಚಳಿಗಾಲವೂ ಕಳೆದು ಬೇಸಿಗೆ ಪ್ರಾರಂಭವಾಗುವಾಗ ಅದರ ಅಂಚನ್ನು ಕಡಿದು ರಸ್ತೆಯ ರೂಪು ಕೊಡುತ್ತಿದ್ದರು. ಆಗಿದ್ದ ಪಂಚಾಯ್ತಿಯ ಅಭಿವೃದ್ಧಿ ಕೆಲಸವೆಂದರೆ ಅದೊಂದು ಮಾತ್ರ. ಕುಗ್ರಾಮದಂತಿದ್ದ ನಮ್ಮೂರಲ್ಲಿ ಪ್ರಾಥಮಿಕ ಶಾಲೆ ಮುಗಿಸಿ ಪೇಟೆಯ ಶಾಲೆಗೆ ಬಂದವನಿಗೆ ಹೊಂದಿಕೊಳ್ಳಲು ಸಾಕಷ್ಟು ಸಮಯ ಹಿಡಿದಿತ್ತು. ನಮಗೆ ಐದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ. ವರ್ಣಮಾಲೆ. ಸಣ್ಣ ಮತ್ತು ದಪ್ಪ ಅಕ್ಷರಗಳನ್ನು ಪ್ರತಿ ಮಾಡುವ ಕಾಪಿ ಪುಸ್ತಕ. ನಮಗಿಂತ ಎರಡು ವರ್ಷ ಮೇಲಿನ ತರಗತಿಯಲ್ಲಿದ್ದ ಪೇಟೆಯ ಹುಡುಗರಲ್ಲಿ ಕೆಲವು ಉಡಾಳರು 'ಇಟ್ ಅದು, ಬಟ್ ಆದರೆ, ವಾಟ್ ಏನು?' ಎಂದು ನಮ್ಮನ್ನು ಪ್ರಶ್ನಿಸಿ ಕಕ್ಕಾಬಿಕ್ಕಿಯಾಗಿಸಿ ಮಜಾ ತೆಗೆದುಕೊಳ್ಳುತ್ತಿದ್ದರು. ಹಳ್ಳಿಗಳಿಂದ ಬಂದಿದ್ದ ನಮಗೆ ಅದೇ ರ್‍ಯಾಗಿಂಗ್ ಅನುಭವ.

ಆ ದಿನಗಳಲ್ಲಿಯೇ ನನ್ನೊಟ್ಟಿಗೆ ಜೊತೆಯಾದವನು ತಿಮ್ಮಪ್ಪ. ಹಳ್ಳಿಯ ಪೆದ್ದುತನ ನಮ್ಮಲ್ಲಿ ಎಷ್ಟು ಗಾಢವಾಗಿತ್ತು ಎಂದರೆ ನಾವು ಹಾಕಿಕೊಂಡು ಬಂದಿದ್ದ ಅಂಗಿ ನಿಕ್ಕರು ತುಂಬ ಕೊಳೆಯಾಗಿದೆ ಎಂದು ಒಂದು ದಿನ ಮೇಷ್ಟರೊಬ್ಬರು ನಮ್ಮಿಬ್ಬರನ್ನೂ ತರಗತಿಯಿಂದ ಹೊರಕ್ಕೆ ಕಳಿಸಿದ್ದರು. ಅದೊಂದು ಸಮಾನ ಅಂಶದಿಂದಲೇ ನಮ್ಮಿಬ್ಬರ ಒಡನಾಟ ಆಪ್ತವಾಗಿಪ್ರಾರಂಭವಾಗಿರಬೇಕು. ಓದಿನಲ್ಲಿ ಇಬ್ಬರೂ ಹಿಂದೆ ಬಿದ್ದಿರಲಿಲ್ಲ. ಆ ದಿನಗಳಲ್ಲಿ ಕನ್ನಡ ಪದ್ಯಗಳನ್ನೂ, ಇಂಗ್ಲಿಷ್ ಪದ್ಯಗಳನ್ನೂ ಉರು ಹಚ್ಚಿಕೊಂಡು ತರಗತಿಯಲ್ಲಿ ಒಪ್ಪಿಸಬೇಕಿದ್ದ ಶಿಕ್ಷಣ ಪದ್ಧತಿ. ಅದು ಪ್ರತಿ ಶನಿವಾರ ಇರುತ್ತಿತ್ತು. ಆ ಹೊತ್ತಿಗೆ ಉರು ಹೊಡೆದು

ಬಚಾವಾಗುತ್ತಿದ್ದೆವು. ಇಬ್ಬರೂ ಬೇರೆ ಬೇರೆ ಸಾಲುಗಳಲ್ಲಿ ಕುಳಿತುಕೊಳ್ಳುತ್ತಿದ್ದೆವು. ನಾವು ಮಧ್ಯಾಹ್ನಕ್ಕೆ ಊಟ ತರುತ್ತಿರಲಿಲ್ಲ. ಊಟದ ಬಿಡುವಿನಲ್ಲಿ ಪೇಟೆಯ ಹುಡುಗರು ಮನೆಗೆ ಹೋಗಿ ಊಟ ಮುಗಿಸಿ ಬರುತ್ತಿದ್ದರೆ, ಬೆಳಗ್ಗೆ ಮನೆಯಲ್ಲಿ ಏನನ್ನೋ ತಿಂದು ಬರುತ್ತಿದ್ದ ನಮ್ಮಿಬ್ಬರಿಗೆ ಮಧ್ಯಾಹ್ನದ ಊಟದ ಕಲ್ಪನೆಯೂ ಇರುತ್ತಿರಲಿಲ್ಲ. ಸಂಜೆ ಶಾಲೆ ಮುಗಿಸಿ ಮನೆ ಸೇರಿದ ಮೇಲೆಯೇ ನಮ್ಮ ಹೊಟ್ಟೆಗೆ ಏನಾದರೂ ಬೀಳುತ್ತಾ ಇದ್ದುದು. ಆ ದಿನಗಳಲ್ಲಿ ಅಮೆರಿಕದ ರವೆಯಿಂದ (ಕೇರ್ ಸಂಸ್ಥೆ?) ಮಧ್ಯಾಹ್ನಕ್ಕೆ ಉಪ್ಪಿಟ್ಟು ಮಾಡಿಕೊಡುವ ವ್ಯವಸ್ಥೆ ಕೆಲವು ಸಮಯವಷ್ಟೇ ಜಾರಿಗೆ ಬಂದಿತ್ತು. ಅದು ಕೆಲವೇ ದಿನಗಳು ಮಾತ್ರ (ಹಾಗೆ ಬಾಲ್ಯದ ದಿನಗಳಲ್ಲಿ ಮಧ್ಯಾಹ್ನದ ಊಟ ತಪ್ಪಿಸಿಕೊಂಡು ಅಭ್ಯಾಸವಾಗಿದ್ದ ನಮಗೆ ಅದು ಮತ್ತೆ ಅಭ್ಯಾಸವಾದದ್ದು ನಾವಿಬ್ಬರೂ ಓದು ಮುಗಿಸಿ ಕೆಲಸಕ್ಕೆ ಸೇರಿದ ಮೇಲಷ್ಟೆ). ಇಂಗ್ಲಿಷ್ ಭಾಷಾ ಕಲಿಕೆ ಐದನೇ ತರಗತಿಯಿಂದ ಆರಂಭವಾಗಿದ್ದರೆ ಹಿಂದಿ ಭಾಷೆಯ ಪರಿಚಯ ಆರನೇ ತರಗತಿಯಿಂದ ಪ್ರಾರಂಭವಾಗಿತ್ತು. ವರ್ಣಮಾಲೆಯ ಜೊತೆಗೆ ಸರಳವಾದ ವಾಕ್ಯರಚನೆಯ ಪಾಠಗಳು. ಅದೇ ಮೊದಲ ಸಲಕ್ಕೆ ಒಬ್ಬ ಟೀಚರು ಬಂದಿದ್ದರು. ಅವರು ಹಿಂದಿ ಪಾಠ ಮಾಡುತ್ತಿದ್ದರು. ಪದ್ಯಗಳನ್ನು ಉರು ಹೊಡೆದು ಒಪ್ಪಿಸುವ ಶಿಕ್ಷಾ ವಿಧಾನವೂ ಇತ್ತು. ಆ ಟೀಚರು ಮೈಸೂರು ಹಿಂದಿ ಪ್ರಚಾರ ಸಭೆ ನಡೆಸುತ್ತಿದ್ದ ಪ್ರಥಮ ಪರೀಕ್ಷೆಗಾಗಿ ಕೆಲವು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದ್ದರು. ಸಂಜೆ ಐದು ಗಂಟೆಗೆ ನಿತ್ಯದ ತರಗತಿಗಳು ಮುಗಿದ ನಂತರ ಒಂದು ಗಂಟೆಯ ಹೊತ್ತು ವಿಶೇಷ ಪಾಠ. ಆಗ ಆರನೇ ತರಗತಿಯಲ್ಲಿದ್ದೆ. ನಾನೂ ಅದಕ್ಕೆ ಸೇರಿಕೊಂಡೆ. ಕೆಲವು ತಿಂಗಳ ನಂತರ ಪರೀಕ್ಷೆಯೂ ನಡೆಯಿತು. ನಾವು ಏಳನೇ ತರಗತಿಗೆ ಬಂದಾಗ ಅದರ ಫಲಿತಾಂಶ ಬಂದಿತು. ಫಲಿತಾಂಶವನ್ನು ನೋಡಿದ ಮೇಷ್ಟರುಗಳು 'ಲಕ್ಷ್ಮಣ... ರಾಜ್ಯಕ್ಕೆ ಆರನೇ ರ್‍ಯಾಂಕು..' ಎಂದು ಉದ್ಗರಿಸಿದ್ದರು. ರ್‍ಯಾಂಕ್ ಜೊತೆಗೆ ಎರಡೂವರೆ ರೂಪಾಯಿ ನಗದು ಬಹುಮಾನವೂ ಇದೆ ಎಂದು ತಿಳಿಯಿತು. ಅದನ್ನು ತರಗತಿಯಲ್ಲಿ ಪ್ರಕಟಿಸಿದ್ದರು.

ಮಾಧ್ಯಮಿಕ ಶಾಲೆಯಲ್ಲಿ ನಾವು ಮೂರು ವರ್ಷ ಕಳೆದು ಪಬ್ಲಿಕ್ ಪರೀಕ್ಷೆ ಎದುರಿಸಿ ಪಾಸಾದೆವು. ಪೇಟೆಗೆ ಹೈಸ್ಕೂಲು ಬಂದು ಮೂರು ವರ್ಷಗಳಾಗಿತ್ತು. ಪೇಟೆಯ ಹೊರಗೆ ಹೊಸಕಟ್ಟಡದಲ್ಲಿ ಹೈಸ್ಕೂಲು. ತಿಮ್ಮಪ್ಪನಿಗೂ ನನಗೂ ನಡೆಯಲು ಇನ್ನೂ ಒಂದು ಕಿಲೋಮೀಟರ್ ದೂರದ ಸ್ಥಳ. ನಮಗೆ ಅದೇನೂ ಲೆಕ್ಕವಾಗಿರಲಿಲ್ಲ. ಪಬ್ಲಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದರಿಂದ ಹೈಸ್ಕೂಲಿಗೆ ಸೇರಿಸಿದ್ದರು. ಹೈಸ್ಕೂಲಿಗೆ ಸೇರಿದ ಮೇಲಷ್ಟೆ ನಮ್ಮಿಬ್ಬರ ಒಡನಾಟ ನಿಕಟವಾಯಿತು. ಮಾಧ್ಯಮಿಕ ಶಾಲೆಯಲ್ಲಿದ್ದಾಗ ಓದಿನ ವಿಷಯದಲ್ಲಿ ನಾವು ಚರ್ಚೆ ಮಾಡಿದ ನೆನಪೇ ಇಲ್ಲ. ನಿತ್ಯವೂ ಮಧ್ಯಾಹ್ನದ ಬಿಡುವಿನಲ್ಲಿ ಮಾತಾಡುತ್ತಿದ್ದೆವು. ಮಾತಿನಲ್ಲಿ ಓದಿಗೆ ಸಂಬಂಧಿಸಿದ್ದಕ್ಕಿಂತಲೂ ಸುತ್ತಲಿನ ವಿದ್ಯಮಾನಗಳಿಗೆ ಸಂಬಂಧಿಸಿದ ಸಂಗತಿಗಳೇ ಪ್ರಮುಖವಾಗಿರುತ್ತಿದ್ದವು. ನಾನು ಆಶ್ರಯಪಡೆದಿದ್ದ ಹುಳುಗದ್ದೆ ಮಾವನ ಮನೆಯಲ್ಲಿನ ಸಂಗತಿಗಳು, ಬರುವೆಯ ಅವನ ಮನೆಯಲ್ಲಿನ ವಿದ್ಯಮಾನಗಳು ಸ್ವಾರಸ್ಯಕರವಾಗಿ ಮಾತಿನ ಮಧ್ಯೆ ಸುಳಿಯುತ್ತಿದ್ದವೇನೋ. ಎಲ್ಲಿಯವರೆಗೆ ಓದಬೇಕು, ಓದಿ ಯಾವ ವೃತ್ತಿಯನ್ನು ಹಿಡಿಯಬೇಕು ಎಂಬ ಭವಿಷ್ಯದ ನಿರೀಕ್ಷೆಗಳೊಂದೂ ನಮ್ಮ ಮಾತಿನಲ್ಲಿ ಸೇರುತ್ತಿರಲಿಲ್ಲ. ಹೈಸ್ಕೂಲಿಗೆ ಸೇರಿದ ಮೇಲೆ ವಿಜ್ಞಾನದ ವಿಷಯಗಳೋ, ಕಲಾ ವಿಷಯಗಳೋ ಆಯ್ಕೆಯ ಪ್ರಶ್ನೆ ಇತ್ತು. ಆಗ ಇದ್ದ ಮುಖ್ಯೋಪಾಧ್ಯಾಯರು ತಮ್ಮ ಸಹೋದ್ಯೋಗಿಗಳ ಜೊತೆ ಚರ್ಚಿಸಿ ನಾವು ಏಳನೇ ತರಗತಿಯಲ್ಲಿ ಗಳಿಸಿದ್ದ ಅಂಕಗಳ ಆಧಾರದ ಮೇಲೆ ಪ್ರತಿ ವಿದ್ಯಾರ್ಥಿಯ ಸಂದರ್ಶನ ನಡೆಸಿ ಯಾರಿಗೆ ಸೈನ್ಸ್, ಯಾರಿಗೆ ಆರ್ಟ್ಸ್ ಎಂಬುದನ್ನು ಅವರೇ ನಿರ್ಧರಿಸಿ ಪ್ರಕಟಿಸಿದ್ದರು. ಅದರಂತೆ ನಾವಿಬ್ಬರೂ ಸೈನ್ಸ್ ವಿಭಾಗಕ್ಕೆ

ಆಯ್ಕೆಯಾಗಿದ್ದೆವು. ಮಾಧ್ಯಮಿಕ ಶಾಲೆಗೆ ಬಂದಾಗ ಇಂಗ್ಲಿಷ್ ವರ್ಣಮಾಲೆಯಿಂದ ಕಲಿಕೆ ಪ್ರಾರಂಭವಾಗಿದ್ದಂತೆ ಹೈಸ್ಕೂಲಿನಲ್ಲಿ ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಸಮಾಜ ವಿಜ್ಞಾನ, ಪೌರನೀತಿ, ಗಣಿತದಲ್ಲಿ ಬೀಜಗಣಿತ, ರೇಖಾಗಣಿತ ವಿಷಯಗಳು ಹೊಸದಾಗಿ ಕಲಿಕೆಯ ಪಟ್ಟಿಯಲ್ಲಿ ಸೇರಿದ್ದವು. ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷಾ ಪಠ್ಯಗಳು ಅದುವರೆಗೆ ಓದಿದ್ದ ಪಾಠಗಳಿಗಿಂತಲೂ ಮೇಲು ದರ್ಜೆಯವಾಗಿದ್ದವು. ಹಳಗನ್ನಡವೂ ಇತ್ತು. ಹೊಸ ವಿಷಯಗಳನ್ನು ಕಲಿಯಲು ಇಬ್ಬರೂ ಉತ್ಸುಕರಾಗಿದ್ದೆವು.

ತಿಮ್ಮಪ್ಪನಿಗೆ ಎಳವೆಯಲ್ಲಿ ಪೋಲಿಯೋಗೆ ತುತ್ತಾಗಿ ಅವನ ಒಂದು ಕಾಲು ಶಕ್ತಿಹೀನವಾಗಿತ್ತು. ನಡೆಯುವುದಕ್ಕೆ ದೊಣ್ಣೆಯ ಆಸರೆ. ಆದರೆ ಅವನಿಗೆ ಒಂದು ಕಾಲು ಊನವಾಗಿದೆ ಎಂಬುದಾಗಲೀ, ಅವನು ನಡೆಯುವಾಗ ದೊಣ್ಣೆಯನ್ನು ಅವಲಂಬಿಸಬೇಕು ಎಂಬುದಾಗಲೀ ನನ್ನ ಪ್ರಜ್ಞಾವಲಯದಿಂದ ಎಂದೋ ಮರೆಯಾಗಿ ಹೋಗಿತ್ತು. ನಿತ್ಯವೂ ಆಪ್ತ ಒಡನಾಟದಲ್ಲಿರುತ್ತಾ ಮೂರು ವರ್ಷ ಮಾಧ್ಯಮಿಕ ಶಾಲೆಯಲ್ಲಿ ಕಳೆದಿದ್ದರಿಂದ ಅವನ ದೈಹಿಕ ಸಮಸ್ಯೆ ನನ್ನ ಗಮನಕ್ಕೆ ಬರುತ್ತಲೂ ಇರಲಿಲ್ಲ. ಅವನ ತಂದೆ ಬರುವೆ ಬಡಿಯನಾಯ್ಕರ ಬಗ್ಗೆ ನಮ್ಮ ಮನೆಯಲ್ಲಿ ಅಪ್ಪ ಅವ್ವ ಮಾತಿನ ಮಧ್ಯೆ ಪ್ರಸ್ತಾಪ ಮಾಡುತ್ತಾ ಇದ್ದರು. ನಾನು ಓದಲು ಸೇರಿಕೊಂಡಿದ್ದ ಹುಳುಗದ್ದೆ ಮಾವನ ಮನೆಯಲ್ಲೂ ಬಡಿಯನಾಯ್ಕರ ಹೆಸರು ಪ್ರಸ್ತಾಪಕ್ಕೆ ಬರುತ್ತಿತ್ತು. ಮಾವನ ಮಾತಿನಲ್ಲಿ ಅವರು ದೊಡ್ಡ ಶಿಕಾರಿದಾರರೆಂಬ ಮೆಚ್ಚುಗೆ ಇರುತ್ತಿತ್ತು. 'ಬರುವೆ ಬಡೇಬಾವ ನಾಕಾಳು ಹೊರೆ ಹಂದಿ ಹೊಡೆದಿದ್ದಾನಂತೆ..' ಎಂದು ಹೇಳುತ್ತಾ ಇದ್ದುದು ನನ್ನ ಕುತೂಹಲ ಕೆರಳಿಸುತ್ತಿತ್ತು. ನಮ್ಮೂರಿಗೆ ಹಳ್ಳ ಇಲ್ಲವೇ ಹೊಳೆಯ ಸಂಪರ್ಕ ಇರಲಿಲ್ಲ. ನಮ್ಮ ಮನೆಗೆ ಸನಿಹದಲ್ಲಿ ಇದ್ದ ಕೆರೆಯೇ ನಮಗೆ ಹತ್ತಿರದ ಜಲಮೂಲ. ಮುಂಗಾರು ಜೋರಾದಾಗ ಹೊಸನೀರು ಕೆರೆಗೆ ನುಗ್ಗುತ್ತಿದ್ದ ಸಂದರ್ಭದಲ್ಲಿ ಕೆರೆಯಲ್ಲಿ ಹೊಸನೀರಿಗೆ ಎದುರಾಗಿ ನುಗ್ಗುತ್ತಿದ್ದ ಹತ್ತುಮೀನು ಹಿಡಿಯುವ ಸಾಹಸವಷ್ಟೆ ನನಗೆ ಸ್ವಲ್ಪಮಟ್ಟಿಗೆ ಪರಿಚಯವಿದ್ದದ್ದು.

ಮಾಧ್ಯಮಿಕ ಶಾಲೆ ಸೇರಿಕೊಳ್ಳಲು ಹುಳುಗದ್ದೆಗೆ ಬಂದೆ. ಅಲ್ಲಿನ ಪರಿಸರ ನನಗೆ ತುಂಬ ಹೊಸದಾಗಿತ್ತು. ಗದ್ದೆ ಕೋವಿನ ಕೊನೆಯಲ್ಲಿ ಹಳ್ಳ ಹರಿಯುತ್ತಿತ್ತು. ಮಾವನಿಗೆ ಶಿಕಾರಿಯ ತಲುಬು. ಮನೆಯಲ್ಲಿ ಲೈಸನ್ಸ್ ಇದ್ದ ಕೋವಿಯೂ ಇತ್ತು. ಆದರೆ ಮಾವ ಶಿಕಾರಿ ಮಾಡುತ್ತಿರಲಿಲ್ಲ. ಅವನ ಗೆಳೆಯ ತಿಮ್ಮಾಚಾರಿ ಎಂಬ ಅಕ್ಕಸಾಲಿಗನಿಗೆ ಕೋವಿಯಿಂದ ಶಿಕಾರಿ ಮಾಡುವ ಹುಚ್ಚು. ಅವನು ಮಾವನ ಬಂದೂಕಿನಿಂದ ತನ್ನ ಶಿಕಾರಿಯ ತಲುಬನ್ನು ತೀರಿಸಿಕೊಳ್ಳುತ್ತಿದ್ದ. ಬೇಸಗೆಯಲ್ಲಿ ಗದ್ದೆ ಬಿತ್ತಿದ ಮೇಲೆ ನಳನಳಿಸುತ್ತಿದ್ದ ಬತ್ತದ ಎಳೆಯ ಪೈರನ್ನು ತಿನ್ನಲು ರಾತ್ರಿ ಹೊತ್ತಿಗೆ ಬರುತ್ತಿದ್ದ ಮೊಲಗಳನ್ನು ಎದುರುಗೊಳ್ಳಲು ತಿಮ್ಮಾಚಾರಿಯ ತಂಡ ಸಿದ್ಧವಾಗಿರುತ್ತಿತ್ತು. ತಿಮ್ಮಾಚಾರಿಯೊಂದಿಗೆ ನನಗಿಂತ ಎರಡು ವರ್ಷ ಹಿರಿಯನಾಗಿದ್ದ ಮಾವನ ದೊಡ್ಡ ಮಗ ವೆಂಕಟೇಶ ಶಿಕಾರಿಗೆ ಜೊತೆಯಾಗುತ್ತಿದ್ದ. ತಲೆಯಲ್ಲಿ ಕಟ್ಟಿಕೊಂಡಿದ್ದ ಬ್ಯಾಟರಿಯ ಪ್ರಖರ ಬೆಳಕಿಗೆ ಕಂಗೆಟ್ಟು ನಿಂತು ಬಿಡುವ ಮೊಲಗಳಿಗೆ ಗುರಿ ಇಟ್ಟು ಗುಂಡು ಹಾರಿಸುವ ಶಿಕಾರಿ ಅದು. ಎಷ್ಟೋ ದಿನ ರಾತ್ರಿ ಊಟದ ನಂತರ ಬ್ಯಾಟರಿಯನ್ನು ತಲೆಗೆ ಕಟ್ಟಿಕೊಂಡು ಕೋವಿ ಹಿಡಿದು ಹೊರಡುತ್ತಿದ್ದ ತಿಮ್ಮಾಚಾರಿ ಮನೆಗೆ ಸಮೀಪದ ಗದ್ದೆ ತಲುಪುತ್ತಲೇ ಗುಂಡು ಹಾರಿಸುವ ಸದ್ದು ಕೇಳಿ ಬಂದದ್ದುಂಟು. ಚರೆ ಗುಂಡು ತಲೆಗೋ, ಎದೆಗೋ ಬಿದ್ದ ತಕ್ಷಣ ಪರಲೋಕ ಪ್ರಯಾಣ ಮಾಡುತ್ತಿದ್ದ ಮೊಲವನ್ನು ಜೊತೆ ಇದ್ದ ಮಾವನ ಮಗ ಹಿಡಿದುಕೊಳ್ಳುತ್ತಿದ್ದ. ಗದ್ದೆ ಹರದಲ್ಲಿ ಇನ್ನಷ್ಟು ದೂರ ಸಾಗಿದರೆ ಗ್ರಾಚಾರ ಕೆಟ್ಟ ಇನ್ನೊಂದು ಮೊಲವೂ ತಿಮ್ಮಾಚಾರಿಯ ಬ್ಯಾಟರಿಯ ಬೆಳಕಿಗೆ ಕಣ್ಣು ಕೊಟ್ಟು ಪರಲೋಕ ಯಾತ್ರೆಗೆ ಸಜ್ಜಾಗುತ್ತಿತ್ತು.

ಮಾವನ ಮನೆಯ ಜಗುಲಿಯಲ್ಲಿ ಚಾಪೆ ಹಾಕಿಕೊಂಡು ಮಲಗಿದ್ದ ನಾನು ನಿದ್ದೆಗೆ ಜಾರುವ ಮೊದಲೇ ತಿಮ್ಮಾಚಾರಿ ಶಿಕಾರಿಯೊಂದಿಗೆ ಮನೆಗೆ ಬಂದರೆ ಹಾಸುಗೆಯಿಂದ ಎದ್ದು ಆಗಿರುವ ಶಿಕಾರಿಯನ್ನು ನೋಡಿ ಸಂಭ್ರಮಪಡುತ್ತಿದ್ದೆ. ಒಳಕೋಣೆಯಲ್ಲಿ ಮಲಗಲು ಅಣಿಯಾಗುತ್ತಿದ್ದ ಮಾವನೂ ಎದ್ದು ಜಗುಲಿಗೆ ಬರುತ್ತಿದ್ದ. ತುಕುಡಿಯ ಸಮೇತ ಬಂದ ತಿಮ್ಮಾಚಾರಿಯಿಂದ ಶಿಕಾರಿಯ ವಿವರಗಳನ್ನು ಕೇಳುತ್ತಾ ಅವನಿಗೆ ಎಲೆ ಅಡಿಕೆಯ ಗೌರವ ನೀಡಿ ಕೂಡಲೇ ಮೊಲದ ಹಸುಗೆಗೆ ಅಣಿಯಾಗುತ್ತಿದ್ದ. ಮಾವನ ಮಗ ವೆಂಕಟೇಶನೊಂದಿಗೆ ನಾನೂ ಜೊತೆ ಸೇರುತ್ತಿದ್ದೆ.

**ಹಸಿಗೆಯ ಕೌಶಲ್ಯ**

ಕೋಳಿ, ಕಾಡುಕೋಳಿ, ಮಂಗಟ್ಟೆ, ಮೊಲ, ದೊಡ್ಡ ಗಾತ್ರದ ಕೆಂದಳಿಲು, ಉಡ, ಹಾರುಬಡಿಯ, ಹಂದಿ, ಮಿಕ (ಜಿಂಕೆಗೆ ಮಿಕ ಅಂತಲೇ ಹೇಳುತ್ತಾ ಇದ್ದುದು), ಕಾನುಕುರಿ, ಕಡ (ವೆ) ಮೊದಲಾದ ಪಕ್ಷಿ, ಪ್ರಾಣಿಗಳೆಲ್ಲ ನಮ್ಮ ಕಡೆಯ ಅಡಿಗೆ ಮನೆಯ ಅತಿಥಿಗಳು. ಅವುಗಳನ್ನು ಅಡುಗೆಗೆ ಸಿದ್ಧಪಡಿಸುವ ವಿಧಾನ ಒಂದೊಂದಕ್ಕೆ ಒಂದೊಂದು ರೀತಿಯದು ಎಂಬುದನ್ನು ಮಾವನ ಮನೆಯಲ್ಲಿ ಇದ್ದಾಗ ಖುದ್ದಾಗಿ ನೋಡುವ ಅವಕಾಶ ನನಗೆ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿದೆಸೆಯಲ್ಲಿ ಪ್ರಾಪ್ತವಾಗಿತ್ತು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದೆ. ಹಸಿಗೆಯಲ್ಲಿ ಭಾಗಿಯಾಗಿ ಸಣ್ಣ ಹುಲ್ಲುಗತ್ತಿಯಿಂದ ಹೆಚ್ಚಿಕೊಡುವ ಕೆಲಸ ಮಾಡಬಲ್ಲವನಾಗಿದ್ದೆ. ಊರಲ್ಲಿದ್ದಾಗ ಕೋಳಿ ಹಸಿಗೆಯಲ್ಲಿ ನೀರು ಹಾಕುವ ಕೆಲಸದಿಂದಲೇ ಆರಂಭವಾಗಿತ್ತು ನನ್ನ ಸೇವೆ. ಕೊಯ್ಯುವ ಮೊದಲಿಗೆ ಅದರ ಕಾಲಿಗೂ ಬಾಯಿಗೂ ನೀರು ಹನಿಸಿ ಕೊಯ್ದ ನಂತರ ಬಾಯಿಗೆ ಇನ್ನೊಮ್ಮೆ ನೀರು ಬಿಡುವ ಪವಿತ್ರ ಕರ್ತವ್ಯವೂ ಪರಿಚಿತವಾಗಿತ್ತು. ಸ್ತಬ್ಧವಾದ ಕೋಳಿಯನ್ನು ನೀರಿನಿಂದ ತೊಳೆದು ಬೆಂಕಿಯಲ್ಲಿ ಕಾಯಿಸುವುದರಿಂದ ಹಸಿಗೆಯ ಪ್ರಕ್ರಿಯೆ ಆರಂಭವಾಗುತ್ತಿತ್ತು. ಬೆಂಕಿಯಲ್ಲಿ ಚೆನ್ನಾಗಿ ಕಾದ ನಂತರ ತಿಪ್ಪುಳನ್ನು ಸುಲಭವಾಗಿ ಬಿಡಿಸುವುದು ನಂತರದ ಕ್ರಿಯೆ. ಎಲ್ಲ ಭಾಗದ ತಿಪ್ಪುಳನ್ನು ತೆಗೆದು ಮತ್ತೊಮ್ಮೆ ಹದ ಬೆಂಕಿಯಲ್ಲಿ ಸುಟ್ಟು ನಂತರ ಚೆನ್ನಾಗಿ ತೊಳೆಯುವುದು ಹಸಿಗೆಯ ಪ್ರಮುಖ ಹಂತ. ತೊಳೆದ ನಂತರ ಬಿಡಿ ಭಾಗಗಳನ್ನು ಹರಿತವಾದ ಕತ್ತಿಯಿಂದ ಬೇರ್ಪಡಿಸಿ ಮೆತ್ತನೆಯ ಭಾಗಗಳನ್ನು ಹಾಗೆಯೇ ಹೆಚ್ಚುವುದಕ್ಕೆ ಇಟ್ಟು ರೆಕ್ಕೆ, ಪಕ್ಕೆಗಳು, ಕಾಲು, ಎದೆಭಾಗವನ್ನು ಕೊಚ್ಚುಗೊಲ್ಪಿನ ಮೇಲೆ ಇಟ್ಟು ಸಮ ಪ್ರಮಾಣದಲ್ಲಿ ಕೊಚ್ಚಲು ಕೊಟ್ಟು ನಂತರ ಬಿಡಿ ಬಿಡಿ ತುಂಡುಗಳನ್ನಾಗಿ ಹೆಚ್ಚುವುದು ಹಸಿಗೆಯ ಅಂತಿಮ ಹಂತ. ಕೋಳಿಯ ಒಳಭಾಗದ ಪಿತ್ಥಕೋಶವನ್ನು ರಾಶಿಗೆ ಸೇರಿಸುತ್ತಿದ್ದರೂ, ತೊಳ್ಳೆ ಗುಂಡಿಗೆಗಳನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಕೆಂಡದಲ್ಲಿ ಸುಟ್ಟು ಹಸಿಗೆಯ ಹಂತದಲ್ಲಿಯೇ ಭಕ್ಷಿಸುವುದು ಶಿಕಾರಿಯ ಅಲಿಖಿತ ನಿಯಮ. ಕರುಳ ಭಾಗವನ್ನು ಸಾಮಾನ್ಯವಾಗಿ ಸ್ವಚ್ಛಗೊಳಿಸುವುದಕ್ಕಿಂತ ಬಾಲ ಅಲ್ಲಾಡಿಸುತ್ತಾ ಸುತ್ತುವರಿಯುತ್ತಿರುವ ನಾಯಿಗಳು ತಿನ್ನಲೆಂದು ಹೊರಕ್ಕೆ ಎಸೆಯುವುದೇ ಪದ್ಧತಿಯಾಗಿತ್ತು.

ಮಾವನ ಮನೆಯಲ್ಲಿ ತರಾವರಿ ಹಸಿಗೆಯ ವಿಧಾನಗಳಿಗೆ ತೆರೆದುಕೊಂಡೆ. ಮೊಲದ ಹಸಿಗೆಯ ಪ್ರಾಥಮಿಕ ಹಂತ ಒಲೆಯ ಬೂದಿಯನ್ನು ಉಜ್ಜಿ ರೋಮಗಳನ್ನು ನಿವಾರಿಸುವುದು. ಕಟ್ಟಿಗೆ ಒಲೆಯಲ್ಲಿ ಒಂದೆಡೆ ಸಂಗ್ರಹವಾಗಿರುತ್ತಿದ್ದ ಬೂದಿಯಿಂದ ಚೆನ್ನಾಗಿ ಉಜ್ಜಿದರೆ ರೋಮಗಳು ಸರಾಗವಾಗಿ ಕಿತ್ತು ಬರುತ್ತಿದ್ದವು. ಅದರಲ್ಲಿ ಮಾವ ತುಂಬ ಪರಿಣಿತನಾಗಿದ್ದ. ಹತ್ತು ಹದಿನೈದು ನಿಮಿಷಗಳಲ್ಲಿ ಮೊಲದ ಮೈ ರೋಮವೆಲ್ಲ ಸ್ವಚ್ಛವಾಗಿ ಹದವಾದ ಬೆಂಕಿಯಲ್ಲಿ ಸುಡುವುದಕ್ಕೆ ಅಣಿಯಾಗುತ್ತಿತ್ತು. ಹದವಾದ ಬೆಂಕಿಯಲ್ಲಿ

ಕಾಯುವಾಗ ಅಳಿದುಳಿದ ರೋಮಗಳು ನಿವಾರಣೆಯಾಗುತ್ತಿದ್ದವು. ಎಲ್ಲ ಭಾಗಗಳನ್ನು ತಿರುಗಿಸಿ ತಿರುಗಿಸಿ ಬೆಂಕಿಯಲ್ಲಿ ಕಾಯಿಸುವಾಗ ವಿಶಿಷ್ಟ ಪರಿಮಳವೊಂದು ಹೊರಡುತ್ತಿತ್ತು. ಚರ್ಮದ ಭಾಗ ಲಘುವಾಗಿ ಸುಟ್ಟ ನಂತರ ಅದನ್ನು ಸ್ವಚ್ಛವಾದ ನೀರಿನಲ್ಲಿ ಚೆನ್ನಾಗಿ ತೊಳೆದು ಚಿಕ್ಕ ಚಿಕ್ಕ ತುಂಡುಗಳಾಗುವ ಹಂತಕ್ಕೆ ಸಿದ್ಧವಾಗುತ್ತಿತ್ತು. ಸ್ವಚ್ಛವಾದ ನೀರಿನಿಂದ ಎಲ್ಲಾ ಭಾಗಗಳನ್ನು ತೊಳೆದ ನಂತರ ಹರಿತವಾದ ಕತ್ತಿಯಿಂದ ಬಿಡಿ ಭಾಗಗಳನ್ನು ಬೇರ್ಪಡಿಸಿ ಸಣ್ಣ ತುಂಡುಗಳನ್ನು ಮಾಡುವುದಕ್ಕೆ ಕೊಚ್ಚುಗೊಲ್ಪಿಗೆ ರವಾನಿಸಲಾಗುತ್ತಿತ್ತು. ಅಲ್ಲಿ ಕತ್ತಿಯಿಂದ ಹದವಾದ ತುಂಡುಗಳನ್ನು ಮಾಡಿ ನಂತರ ಬಿಡಿ ತುಂಡುಗಳನ್ನು ಹೆಚ್ಚಲು ಹಾಕಲಾಗುತ್ತಿತ್ತು. ಬಾಡಿಸಿದ ಬಾಳೆ ಎಲೆಯ ಮೇಲೆ ಸಣ್ಣ ಹಲ್ಲುಗತ್ತಿಯನ್ನು ಹಿಡಿದು ಕುಳಿತಿರುತ್ತಿದ್ದವರು ಕೊಚ್ಚಿ ಹಾಕಿದ ಬಿಡಿ ಭಾಗಗಳನ್ನು ಎತ್ತಿಕೊಂಡು ಸಣ್ಣ ಸಣ್ಣ ತುಂಡುಗಳನ್ನು ಹೆಚ್ಚುತ್ತ ರಾಶಿ ಹಾಕುತ್ತಿದ್ದರು. ಹಸಿಗೆ ಮಾಡಲು ಬಾಡಿಸಿದ ಬಾಳೆ ಎಲೆಗಳನ್ನು ಹಾಸುವುದಕ್ಕೆ ಹಂಪು ಹಾಕುವುದು ಎಂದು ಕರೆಯುತ್ತಿದ್ದರು. ಹತ್ತು ಹದಿನೈದು ನಿಮಿಷಗಳಲ್ಲಿ ಮೊಲದ ಹಸಿಗೆಯ ಕೆಲಸ ಮುಗಿಸಿ ಅಡಿಗೆ ಪಾತ್ರೆಗೆ ರವಾನೆಯಾಗುವ ಅಂತಿಮ ಹಂತಕ್ಕೆ ತಲುಪುತ್ತಿತ್ತು.

ಶಿಕಾರಿಯಾದ ಮಿಕದ ಹಸಿಗೆ ಕುರಿ, ಮೇಕೆಗಳ ಹಸಿಗೆಯಂತೆ. ಹರಿತವಾದ ಚಾಕು ಹಿಡಿದು ಹಿಂಗಾಲುಗಳಿಂದ ಆರಂಭಿಸಿ ಚರ್ಮವನ್ನು ನಾಜೂಕಾಗಿ ಸುಲಿದು ಬಿಡಿ ಭಾಗಗಳನ್ನು ಬೇರ್ಪಡಿಸಿ ನಂತರ ಕೊಚ್ಚುವ, ಸಣ್ಣ ಸಣ್ಣ ತುಂಡುಗಳನ್ನಾಗಿ ಹೆಚ್ಚುವ ಕ್ರಿಯೆಯಲ್ಲಿ ಮುಂದುವರಿಯುವ ವಿಧಾನ. ಉಡ ಮತ್ತು ಹಾರುಬಡಿಯ ಕೂಡ ಚರ್ಮ ಸುಲಿಸಿಕೊಂಡೇ ಸಣ್ಣ ಸಣ್ಣ ತುಂಡುಗಳಾಗುವ ಹಂತಕ್ಕೆ ಬರುತ್ತಿದ್ದವು. ಕಾಡು ಹಂದಿಯ ಹಸಿಗೆಗೆ ವಿಶೇಷ ಪರಿಣತಿಯೇ ಬೇಕಾಗಿತ್ತು. ಅದರ ದಪ್ಪನೆಯ ಮೈ, ದಟ್ಟವಾಗಿದ್ದ ರೋಮಗಳು. ಚರ್ಮ ಸುಲಿಯುವ ಪ್ರಶ್ನೆಯೇ ಇರುತ್ತಿರಲಿಲ್ಲ. ದಪ್ಪನೆಯ ಚರ್ಮಕ್ಕೆ ಅಂಟಿಕೊಂಡ ಕೊಬ್ಬಿನ ಅಂಶವೂ ಬಾಡಿನ ಬಲವರ್ಧನೆಯಲ್ಲಿ ಪ್ರಮುಖವಾಗಿದ್ದ ಕಾರಣ ಇಡೀ ದೇಹವನ್ನು ದೊಡ್ಡ ದೊಡ್ಡ ಕುಂಟೆಗಳ ಮೇಲೆ ಇರಿಸಿ ಹದವಾಗಿ ಸುಟ್ಟು ರೋಮಗಳನ್ನು ನಿವಾರಿಸುವ ಕೆಲಸದಿಂದ ಹಸಿಗೆಯ ವಿಧಿ ಪ್ರಾರಂಭವಾಗುತ್ತಿತ್ತು. ಇಬ್ಬರು ಮೂವರು ಅದರ ಎರಡೆರಡು ಕಾಲುಗಳನ್ನು ಹೆಬ್ಬಳ್ಳಿಗಳಿಂದ ಬಿಗಿದು ಕಟ್ಟಿ ನಡುವೆ ಬಿದಿರು ಗಳು ತೂರಿಸಿ ಅದನ್ನು ಎತ್ತಿ ಎತ್ತಿ ಮಗ್ಗುಲಿನಿಂದ ಮಗ್ಗುಲಿಗೆ ಬೆಂಕಿಯ ಮೇಲೆ ಕಾಯಿಸುತ್ತಿದ್ದರು. ಕೀಸಿ ಹರಿತಮಾಡಿದ ಅಡಿಕೆ ದಬ್ಬೆಗಳಿಂದ ಇನ್ನಿಬ್ಬರು ಆಚೆಗೊಬ್ಬ ಈಚೆಗೊಬ್ಬ ಹಂದಿಯ ಚರ್ಮವನ್ನು ಮರಗೆಲಸದವರು ಹತ್ತರಿ ಹಿಡಿಯುವಂತೆ ಹೆರೆಯುತ್ತಿದ್ದರು. ಇಡೀ ದೇಹದ ಎಲ್ಲ ಭಾಗಗಳೂ ಚೆನ್ನಾಗಿ ಬೆಂಕಿಯಲ್ಲಿ ಕಾದು ರೋಮರಹಿತವಾದ ನಂತರ ಅದನ್ನು ಬೆಂಕಿಯಿಂದ ಹೊರಗಡೆ ಎತ್ತಿ ತಂದು ಸ್ವಚ್ಛವಾದ ನೀರಿನಿಂದ ತೊಳೆದು ನಂತರವೇ ಬಿಡಿ ಭಾಗಗಳನ್ನು ಬೇರ್ಪಡಿಸುತ್ತಿದ್ದರು. ಹಂದಿಯ ಎಲುಬುಗಳು ಬಲಿಷ್ಠವಾಗಿರುವ ಕಾರಣ ಕೊಚ್ಚುವುದಕ್ಕೆ ಬಲವಾದ ಕೊಡಲಿಯನ್ನು ಬಳಸುತ್ತಿದ್ದರು. ಮಿಕ, ಹಂದಿ, ಕಡದಂತಹ ವನ್ಯಪ್ರಾಣಿಗಳ ಶಿಕಾರಿಯಾದಾಗ ಊರಿನ ಐದಾರು ಮಂದಿಯಾದರೂ ಹಸಿಗೆಗೆ ಕೈ ಹಾಕುವುದು ಅಗತ್ಯವಾಗಿತ್ತು. ಕೊಳಗಗಟ್ಟಲೆ ಸಿಗುತ್ತಿದ್ದ ತುಕುಡಿಯನ್ನು ಊರಿನ ಆಪ್ತರಿಗೆ ಮತ್ತು ಹತ್ತಿರದ ಸಂಬಂಧಿಕರಲ್ಲಿ ಹಂಚಿ ಸಂಭ್ರಮಿಸುವುದು ಶಿಕಾರಿದಾರರ ಖಯಾಲಿಯೂ ಆಗಿತ್ತು. ಮಾವನ ಮನೆಯಲ್ಲಿದ್ದಾಗ ನನಗೆ ಇಂಥ ಅನೇಕ ಸಂಭ್ರಮದ ದಿನಗಳ ಅನುಭವಗಳೂ ಆಗಿದ್ದವು.

ಒಮ್ಮೆ ಹುಳುಗದ್ದೆಯಲ್ಲಿ ನಾಲ್ಕು ಆಳಿಗೂ ಮಿಕ್ಕಿದ ಕಾಡುಹಂದಿಯ ಶಿಕಾರಿ ಆಗಿದ್ದ ದಿನ ನಾನು ಶಾಲೆಗೆ ಉಳಿ ಹಾಕಿ ಹಸಿಗೆಯ ಜಾಗಕ್ಕೆ ಹೋಗಿದ್ದೆ. ಮಾವನ ಮನೆಗೆ ಇನ್ನೂರು ಅಡಿ ದೂರದಲ್ಲಿ

ಮಕ್ಕಿಗದ್ದೆಗೆ ಅಂಟಿಕೊಂಡ ಹಕ್ಕಲಿನಲ್ಲಿ ಹಂಪು ಹಾಸಿ ಹಸಿಗೆಗೆ ಅಣಿಗೊಳಿಸಿದ್ದರು. ಅನೇಕ ಶಿಕಾರಿದಾರರೂ ಹಸಿಗೆಯ ಸಂದರ್ಭದಲ್ಲಿ ಭಾಗಿಯಾಗಿದ್ದರು. ಜನ ಸಿಕ್ಕಿದರೆ ಸ್ವಾರಸ್ಯಕರವಾಗಿ ಮಾತಾಡುವ ಮಾವ ಶಿಕಾರಿಯ ವಿವರಗಳನ್ನೆಲ್ಲ ಹಂಚಿಕೊಳ್ಳುತ್ತಿದ್ದ. ಅವತ್ತು ಬಂದಿದ್ದವರಲ್ಲಿ ಬರುವೆ ತಿಮ್ಮಪ್ಪನ ತಂದೆ ಬಡಿಯನಾಯ್ಕರೂ ಇದ್ದರು. ಅವರನ್ನು ಮಾವ ಬಡೇಬಾವ ಎಂದು ಆಪ್ತವಾಗಿ ಕರೆಯುತ್ತಿದ್ದ. ಹಸಿಗೆ ಮಾಡುತ್ತಲೇ ತಮ್ಮ ತಮ್ಮ ಶಿಕಾರಿಯ ಸಾಹಸಗಳನ್ನು ಹೇಳಿಕೊಳ್ಳುತ್ತಿದ್ದರು. ಅವರ ಮಾತುಗಳಲ್ಲಿ ಪುಣ್ಯೋಜಿ ಎಂಬ ಪ್ರಖ್ಯಾತ ಶಿಕಾರಿದಾರನ ಹೆಸರು ಬಂದು ಹೋಗಿತ್ತು. ಬಡೇನಾಯ್ಕರೂ, ಪುಣ್ಯೋಜಿಯೂ ಒಂದು ಕದ್ದಿಂಗಳ ರಾತ್ರಿ ಎದುರಾಬದುರು ಸಿಕ್ಕಿ ಕಾಡು ಹಂದಿ ಎಂದು ಪರಸ್ಪರ ಭ್ರಮಿಸಿ ಬಂದೂಕು ಗುರಿ ಮಾಡಿಕೊಂಡು ಸವಡು ಸಿಗುವುದಕ್ಕೆ ಹೊಂಚುತ್ತಿದ್ದಾಗ ಎದುರಿಗೆ ಬರುತ್ತಾ ಇರುವುದು ಕಂಬಳಿಕೊಪ್ಪೆ ಹಾಕಿರುವ ವ್ಯಕ್ತಿ, ಕಾಡು ಹಂದಿಯಲ್ಲ ಎಂದು ತಿಳಿದು ದೊಡ್ಡ ಅಪಾಯದಿಂದ ಪಾರಾಗಿದ್ದರಂತೆ. ಈ ಘಟನೆ ರೆಕ್ಕೆ ಪುಕ್ಕಗಳನ್ನು ಹೊತ್ತು ಜಾನಪದ ಕಥೆಯಂತೆ ಆಗಾಗ, ಬೇರೆ ಬೇರೆ ಸಂದರ್ಭಗಳಲ್ಲಿ ಅನುರಣಿಸುತ್ತಿತ್ತು.

**'ಬರ್ಮ'ನಿಗೆ ಪೂಜೆ**

ಮಾಧ್ಯಮಿಕ ಶಾಲೆಯಲ್ಲಿದ್ದ ಮೂರು ವರ್ಷ ಮಾತ್ರವಲ್ಲದೆ, ಹೈಸ್ಕೂಲಿನ ಮೊದಲ ವರ್ಷದ ವರೆಗೆ ನಾನು ತಿಮ್ಮಪ್ಪನ ಮನೆಗಾಗಲೀ, ತಿಮ್ಮಪ್ಪ ನಮ್ಮ ಮನೆಗಾಗಲೀ ಬಂದ ನೆನಪಿಲ್ಲ. ಒಂಬತ್ತನೇ ತರಗತಿಯಲ್ಲಿದ್ದಾಗ ದೀಪಾವಳಿಯ ನಂತರ ಬರುವೆಯಲ್ಲಿ ನಡೆಯುವ ಬ್ರಹ್ಮನ ಪೂಜೆಗೆ (ಸ್ಥಳೀಯವಾಗಿ ಬರ್ಮನ ಪೂಜೆ) ನಾನು ಒಬ್ಬ ಅತ್ತಿಗೆಯೊಟ್ಟಿಗೆ ಹೋಗಿದ್ದೆ. ಬರುವೆಯ ದೊಡ್ಡ ಕೆರೆಯ ಮೇಲುಬದಿ ಬಯಲಿನಲ್ಲಿ ನೆಲೆ ಹಾಕಿದ್ದ ಗುಡಿಯಲ್ಲಿ ಬರ್ಮನ ನೆಲೆ. ಅದೇನೂ ಚತುರ್ಮುಖ ಬ್ರಹ್ಮನ ಪ್ರತಿಮೆಯಲ್ಲ. ನಮ್ಮ ಕಡೆಯ ಎಲ್ಲ ಸ್ಥಳೀಯ ದೈವಗಳ ಗುರುತಿಗೆ ಇರುವಂತೆ ಮರದ ಬುಡದಲ್ಲಿ ಕೆಲವು ಕಿರುಶೂಲಗಳನ್ನು ಹುಗಿದಿಟ್ಟ ತಾಣ. ಅದರ ಎದುರಿಗೆ ಎರಡೂ ಬದಿಯಲ್ಲಿ ಪರಿಸೆಗಳಲ್ಲಿ ಇರುವಂತೆ ಕಡಲೆ ಪುರಿ, ಬೆಂಡು ಬತ್ತಾಸು, ಖಾರಾ ಸೇವು, ಮಣಿಸರಗಳು, ಬಲೂನು, ಐಸ್ ಕ್ಯಾಂಡಿ, ಕಿತ್ತಲೆ ಹಣ್ಣು ಇತ್ಯಾದಿ ಪರಿಸೆಯಲ್ಲಿ ಕಾಣುವ ತರಾವರಿ ಅಂಗಡಿಗಳು ಬಿರುಸಿನಲ್ಲಿ ವ್ಯಾಪಾರಕ್ಕೆ ಅಣಿಯಾಗಿದ್ದವು. ನನ್ನ ಅತ್ತಿಗೆ ಬರ್ಮನ ಪೂಜೆ ಮಾಡಿಸುವುದರಲ್ಲಿ ನಿರತರಾಗಿದ್ದಾಗ ಬರ್ಮನ ಗುಡಿಯ ಹತ್ತಿರ ಸುತ್ತ ಕುತೂಹಲದಿಂದ ನೋಡುತ್ತಾ ನಿಂತಿದ್ದ ನನ್ನನ್ನು ತಿಮ್ಮಪ್ಪ ಕಂಡು ಮಾತಾಡಿಸಿದ. ಅವನ ಮನೆ ಕೆರೆ ದಂಡೆಯ ಆಚೆ ಬದಿ ಇದ್ದುದು ನನಗೆ ಅವತ್ತೇ ಗೊತ್ತಾಗಿದ್ದು. ಅತ್ತಿಗೆಗೆ ಹೇಳಿ ನಾನು ತಿಮ್ಮಪ್ಪನೊಂದಿಗೆ ಅವನ ಮನೆ ಕಡೆ ಹೊರಟೆ. ಅಲ್ಲಿಂದ ಹತ್ತು ನಿಮಿಷಗಳಲ್ಲಿ ಅವನ ಮನೆ ಸೇರಿದ್ದಾಯ್ತು. ಮನೆಯಲ್ಲಿ ಅವನ ತಾಯಿ, ಗೊಬ್ಬೆ ಸೆರಗು ಕಟ್ಟಿದ್ದ ಹಿರಿಯ ಮುತ್ತೈದೆ ನನ್ನ ಪರಿಚಯವಾಗುತ್ತಲೇ ತುಂಬ ಆಪ್ತವಾಗಿ ಮಾತಾಡಿಸಿದರು. 'ತಮ್ಮ ಕಣೋ ನೀನು..' ಎಂದು ಹೇಳುತ್ತಾ ಊರಿನಲ್ಲಿದ್ದ ಅವ್ವ, ಅಪ್ಪ ಸೇರಿ ಎಲ್ಲರ ಕುಶಲವನ್ನು ವಿಚಾರಿಸಿದರು. ಅವರು ನಮ್ಮ ಮನೆತನದ, ನನ್ನ ಅಪ್ಪನನ್ನು ಹೆಸರು ಹಿಡಿದು ಕರೆಯುತ್ತಿದ್ದ ದೊಡಪ್ಪನ ಮಗಳಂತೆ. ತವರಿನ ಕುಡಿಯಾಗಿದ್ದ ನನ್ನನ್ನು ವಾತ್ಸಲ್ಯದಿಂದ ಮಾತಾಡಿಸುತ್ತ ತಕ್ಷಣವೇ ಊಟಕ್ಕೆ ಎಬ್ಬಿಸಿದರು. 'ಅವ್ವನಿಗೆ ತಮ್ಮನಾದರೆ ನನಗೆ ನೀನು ಮಾವ ಅಂತ ಆಯ್ತಲ್ಲ, ಮಾವ, ಕಂಸ ಮಾವ' ಎಂದು ತಿಮ್ಮಪ್ಪ ನಗೆಯಾಡುತ್ತಾ ನನ್ನನ್ನು ಊಟಕ್ಕೆ ಕರೆದೊಯ್ದ. ಪ್ರೀತಿಯಿಂದ ಬಡಿಸಿದ ಊಟ ಅತ್ಯಂತ ಆಪ್ಯಾಯಮಾನವಾಗಿತ್ತು. ಊಟ ಮುಗಿಸಿ ನನಗಾಗಿ ಕಾಯುತ್ತಿದ್ದ

ಅತ್ತಿಗೆಯನ್ನು ಊರಿಗೆ ಕರೆದೊಯ್ಯಲು ಬರ್ಮನ ಗುಡಿಯತ್ತ ಧಾವಿಸಿದೆ. ತಿಮ್ಮಪ್ಪ ಅಲ್ಲಿಯವರೆಗೂ ಬಂದು ನನ್ನನ್ನು ಬೀಳ್ಕೊಟ್ಟ.

ಮಾಧ್ಯಮಿಕ ಶಾಲೆಯಲ್ಲಿ ನಾವು ಹುಡುಗರೇ ಇದ್ದೆವು. ಹೈಸ್ಕೂಲಿಗೆ ಬಂದಾಗ ನಮ್ಮೊಂದಿಗೆ ಕೆಲವು ಹುಡುಗಿಯರು ಇದ್ದರು. ಹದಿಹರೆಯಕ್ಕೆ ಕಾಲಿರಿಸುತ್ತಿದ್ದ ವಯಸ್ಸಿನಲ್ಲಿ ಅವರೆಡೆಗೆ ಆಕರ್ಷಣೆ ಇತ್ತಾದರೂ ಒಬ್ಬರನ್ನೂ ಮಾತನಾಡಿಸುವ ಧೈರ್ಯ ಇರಲಿಲ್ಲ. ನಮ್ಮಷ್ಟಕ್ಕೆ ನಾವು, ಅವರಷ್ಟಕ್ಕೆ ಅವರು. ಅದೊಂದು ದಿನ ನಮ್ಮ ತರಗತಿಯ ಮುಂದಾಳಾಗಿ ವರ್ತಿಸುತ್ತಿದ್ದ ಹುಡುಗನನ್ನು ಹೆಡ್ಮಾಸ್ಟರ್ ಮುರುಗೇಂದ್ರಪ್ಪನವರು ಕರೆಸಿದರು. ಅದೇನು ವಿಚಾರಣೆ ನಡೆಸಿದರೋ, ಅವನು ವಾಪಸು ಬರುತ್ತಿದ್ದಂತೆ ತರಗತಿಗೆ ಬಂದ ಕೆಮಿಸ್ಟ್ರಿ ಮೇಷ್ಟರು ಜಿಎಂಜೆ (ಜಿ.ಎಂ.ಜಯದೇವಯ್ಯ) 'ಏನು ಎಲ್ಲರಿಗೂ ಬುಡ ಬಲಿದಿದೆಯೇನ್ರಲೇ..' ಎಂದು ತಮ್ಮದೇ ಧಾಟಿಯಲ್ಲಿ ಬೈಯ್ದು ಹೋದರು. ತರಗತಿಯಲ್ಲಿ ಗುಸು ಗುಸು. ತರಗತಿಯಿಂದ ಹೊರಗೆ ಬಂದಾಗ ಅಲ್ಲಲ್ಲಿ ಗುಂಪು ಗುಂಪಾಗಿ ನಿಂತಿದ್ದ ಹುಡುಗರ ಗುಸು ಗುಸು ಮಾತಿನಲ್ಲಿ ಗೊತ್ತಾಗಿದ್ದು ಹೆಡ್ಮಾಸ್ಟರು ಕರೆಸಿದ್ದ ಹುಡುಗ ನಮ್ಮದೇ ತರಗತಿಯಲ್ಲಿ ಎದ್ದು ಕಾಣುವಂತಿದ್ದ ಹುಡುಗಿಗೆ ಪ್ರೇಮ ಪತ್ರ ಬರೆದಿದ್ದ ಎಂಬ ಸುದ್ದಿ. ಒಂದೆರಡು ದಿನ ನಮ್ಮ ಮೇಷ್ಟರಿಗೆಲ್ಲ ನಮ್ಮ ತರಗತಿಗೆ ಬಂದು ಉಪದೇಶ ಮಾಡುವುದೇ ಕೆಲಸವಾಯಿತು. ಮುಂದಾಳಾಗಿ ವರ್ತಿಸುತ್ತಿದ್ದ ಹುಡುಗ ತಾನು ಅದಕ್ಕೆ ಕಾರಣ ಅಲ್ಲವೆಂದು ದೇವರ ಮೇಲೆ ಆಣೆ ಹಾಕುವುದಾಗಿ ಹೇಳುತ್ತಿದ್ದ. ದಿನವೆಲ್ಲ ಅದೇ ಚರ್ಚೆ. ತರಗತಿಯಲ್ಲಿ ಉಡಾಳರಂತೆ ವರ್ತಿಸುವ ಹುಡುಗರೂ ಇದ್ದರು. ಪೇಟೆಯ ಹುಡುಗರಿಗಿಂತಲೂ ಸುತ್ತಮುತ್ತಲ ಹಳ್ಳಿಗಳಿಂದ ಬಂದಿದ್ದ ನಮ್ಮಂಥ ಹುಡುಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪ್ರೇಮಪತ್ರ ಬರೆದ ಆರೋಪಕ್ಕೆ ಗುರಿಯಾದ ಹುಡುಗ ನನಗೂ ಗೆಳೆಯನಾಗಿದ್ದ. ಅವನನ್ನು ಸಿಕ್ಕಿಸಲು ನಮ್ಮ ತರಗತಿಯಲ್ಲಿಯೇ ಉಡಾಳರಂತೆ ವರ್ತಿಸುತ್ತಿದ್ದವನೊಬ್ಬ ಪ್ರೇಮಪತ್ರದ ಪ್ರಕರಣ ಸೃಷ್ಟಿಸಿರಬಹುದೆಂದು ತರ್ಕಿಸಿದೆ. ಹೈಸ್ಕೂಲಿಗೆ ಬರುವಾಗ, ವಾಪಸು ಹೋಗುವಾಗ ಈ ಘಟನೆಯೇ ತಲೆಯೊಳಗೆ ಸುಳಿಯುತ್ತಿತ್ತು. ಒಂದೆರಡು ಪತ್ತೇದಾರಿ ಕಾದಂಬರಿ ಓದಿದ್ದೆನಾದ್ದರಿಂದ ಈ ಘಟನೆಯನ್ನು ವಿಸ್ತರಿಸಿ ಒಂದು ಪತ್ತೇದಾರಿ ಕಥೆಯನ್ನು ಬರೆದೆ. ಎಕ್ಸರ್‌ಸೈಜ್ ಹಾಳೆಯಲ್ಲಿ ಹತ್ತೋ ಹನ್ನೆರಡೋ ಪುಟಗಳಷ್ಟು ದೀರ್ಘವಾಗಿ ವಿಸ್ತರಿಸಿದ ಕಥೆ. ಅದನ್ನು ಮನೆಯಲ್ಲಿ ಬರೆದು ಮುಗಿಸಿದಾಗ ಏನನ್ನೋ ಸಾಧಿಸಿದ ಭಾವ. ಅದನ್ನು ತಿಮ್ಮಪ್ಪನಿಗೆ ಕೊಟ್ಟು ಓದಿಸುವವರೆಗೂ ಸಮಾಧಾನ ಇರಲಿಲ್ಲ. ಮರುದಿನ ತರಗತಿಯಲ್ಲಿ ಬಿಡುವು ಮಾಡಿಕೊಂಡು ಅವನಿಗೆ ಕೊಟ್ಟೆ. ಹೈಸ್ಕೂಲಿನ ಹಿಂಬದಿಯಲ್ಲಿ ಒಂದು ಕಡೆ ನಿಂತುಕೊಂಡು ಅವನು ಅಷ್ಟನ್ನೂ ಓದಿದ. ನಾನು ಪ್ರೇಮಪತ್ರ ಪ್ರಕರಣದಲ್ಲಿ ಸಿಲುಕಿದ ಗೆಳೆಯನ ಹೆಸರನ್ನು ಬದಲಿಸಿರಲಿಲ್ಲ. ಆದರೆ, ಅದರ ಜಾಡನ್ನು ಹಿಡಿದು ಪತ್ತೆ ಮಾಡಲು ನಾನೇ ಹೋದಂತೆ ಉತ್ತಮ ಪುರುಷನಲ್ಲಿ ನಿರೂಪಣೆ ಮಾಡಿದ್ದೆ. 'ಕಥೆ'ಯನ್ನು ಓದಿ ಮುಗಿಸಿದ ತಿಮ್ಮಪ್ಪ 'ಚೆನ್ನಾಗಿದೆಯಲ್ಲೋ... ಮೇಷ್ಟ್ರಿಗೆ ತೋರಿಸು' ಎಂದು ಹೇಳಿದ. ತಿಮ್ಮಪ್ಪ ವ್ಯಕ್ತಪಡಿಸಿದ ಮೆಚ್ಚುಗೆಯಿಂದ ಖುಷಿ ಆಯಿತು. ಆದರೆ, ಅದನ್ನು ಮೇಷ್ಟರಿಗೆ ತೋರಿಸಲು ಹೋಗಲಿಲ್ಲ. ಆ ಕಥೆಯನ್ನು ಎಲ್ಲಿ ಇಟ್ಟೆನೋ...

ಒಂಬತ್ತನೆಯ ತರಗತಿಯನ್ನು ಮುಗಿಸಿದ ನಂತರ ನಮ್ಮಿಬ್ಬರದು ಪಬ್ಲಿಕ್ ಪರೀಕ್ಷೆ ಇರುವ ಹತ್ತನೆಯ ತರಗತಿ. ನಾನು ಹುಳುಗದ್ದೆಯಲ್ಲಿ ಐದು ವರ್ಷ ಕಳೆದಿದ್ದೆ. ನನ್ನ ಮೊದಲ ಮೂರು ವರ್ಷಗಳ ಊಟದ ವೆಚ್ಚವನ್ನು ಭರಿಸಲು ಮನೆಯಿಂದ ವೀಳೆಯದೆಲೆಯ ವರ್ತನೆಯ ಬತ್ತವನ್ನು ಒದಗಿಸಲಾಗುತ್ತಿತ್ತು. ಊರಲ್ಲಿ ಅಪ್ಪನ ವಿಶೇಷ ಮುತುವರ್ಜಿಯಿಂದ ಪ್ರತಿ ವಾರಕ್ಕೆ ಮೂವತ್ತು ಕಟ್ಟು ವೀಳೆಯದೆಲೆಯನ್ನು ಊರಿನ ಹಾಗೂ

ಹುಳುಗದ್ದೆ ಕಡೆಯ ಬಳಕೆದಾರರಿಗೆ ಪೂರೈಸುವ ವ್ಯವಸ್ಥೆ ಇತ್ತು. ತೋಟದ ಕೆಲಸದಲ್ಲಿ ಪರಿಣಿತನಾಗಿದ್ದ ಅಪ್ಪ ಸಾಕಷ್ಟು ವೀಳೆಯದೆಲೆ ಮತ್ತು ಮೆಣಸಿನ ಹಂಬುಗಳನ್ನು ಅಡಿಕೆ ಮರಗಳಿಗೆ ಹತ್ತಿಸಿದ್ದ. ವೀಳೆಯದೆಲೆ ಸಮೃದ್ಧವಾಗಿ ಸಿಗುತ್ತಿದ್ದವು. ಊರಲ್ಲಿದ್ದ ಮೂರನೆಯ ಅಣ್ಣನಿಗೆ ಪ್ರತಿ ಶನಿವಾರ ಮಧ್ಯಾಹ್ನ ಮತ್ತು ಭಾನುವಾರ ಬೆಳಗ್ಗೆ ಎಲೆ ಕೊಯ್ಯುವ ಕೆಲಸ. ಒಂದು ನೂರು ಎಲೆಗಳಿಗೆ ಕಟ್ಟು ಎಂತಲೂ ಐವತ್ತು ಎಲೆಗಳಿಗೆ ಕವಳಿಗೆ ಎಂತಲೂ ಲೆಕ್ಕ ಹಾಕಲಾಗುತ್ತಿತ್ತು. ನಮ್ಮೂರಿನ ಸುತ್ತಮುತ್ತಲ ಎರಡು ಹಳ್ಳಿಗಳು, ಹೆದ್ದಾರಿಪುರದ ಐದು ಮನೆಗಳು, ಹುಳುಗದ್ದೆಯ ಸುತ್ತಲಿನ ನಾಲ್ಕು ಮನೆಗಳಿಗೆ ಪ್ರತಿ ಸೋಮವಾರ ವೀಳೆಯದೆಲೆಗಳನ್ನು ಪೂರೈಸುವುದು ನಮ್ಮ ಮನೆಯ ಹೊಣೆಯಾಗಿತ್ತು. ಒಂದು ನೂರು ಎಲೆಗಳಿರುವ ಒಂದು ಕಟ್ಟು ವೀಳೆಯದೆಲೆ ಅವರ ಒಂದು ವಾರದ ಬಳಕೆಗೆ ಸಾಕಾಗುತ್ತಿತ್ತು. ತಮ್ಮ ವಾರದ ಅಗತ್ಯಕ್ಕೆ ಅನುಗುಣವಾಗಿ ಅವರು ವರ್ತನೆಯನ್ನು ನಿಗದಿ ಪಡಿಸುತ್ತಿದ್ದರು. ಒಂದೆರಡು ಮನೆಗಳು ಒಂದು ಕಟ್ಟು ಒಂದು ಕವಳಿಗೆ ಎಲೆಯನ್ನು ನಿಗದಿ ಮಾಡಿಕೊಂಡಿದ್ದರು. ಅಂದರೆ ನೂರೈವತ್ತು ಎಲೆಗಳು. (ಗ್ರಾಮೀಣ ಭಾಗದ ಆಗಿನ ಅರ್ಥನೀತಿಯಂತೆ ಒದಗಿಸುವ ಸೇವೆಗೆ ವಿನಿಮಯ ರೂಪದಲ್ಲಿ ಬತ್ತವನ್ನು ಪಡೆಯಲಾಗುತ್ತಿತ್ತು. ರೈತರು ತಾವು ಇತರೆ ಕಸುಬುದಾರರಿಂದ ಪಡೆಯುವ ಸೇವೆಗಳಿಗೆ ಹೀಗೆ ಬತ್ತವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದ ಪದ್ಧತಿ ಆಗ ಬಳಕೆಯಲ್ಲಿತ್ತು. ಚೌರದ ಸೇವೆ ತಲೆ ಲೆಕ್ಕದಲ್ಲಿ ನಿಗದಿಯಾಗಿರುತ್ತಿತ್ತು. ಗಂಡಸರು ತಿಂಗಳಿಗೆ ಒಮ್ಮೆ ಚೌರ, ವಾರಕ್ಕೆ ಒಂದು ಸಲ ಮುಖಕ್ಷೌರ, ಹುಡುಗರಾದರೆ ತಿಂಗಳಿಗೆ ತಲೆಗೆ ಕ್ಷೌರ. ಗಂಡಸರು ಕೆಲವೊಮ್ಮೆ ಚೌರದವರಿಂದ 'ಅದಕ್ಕೆ'ಂದೇ ಇರಿಸಿದ್ದ ಕತ್ತಿಯನ್ನು ಪಡೆದು ಸ್ವಂತ ಸೇವೆಯನ್ನು ಮಾಡಿಕೊಳ್ಳುವುದೂ ಇತ್ತು. ಕಮ್ಮಾರಸಾಲೆಯಲ್ಲಿ ನೇಗಿಲ ಕುಳ, ಕತ್ತಿಗಳನ್ನು ಹೆಣೆಸುವುದು, ಕತ್ತಿಗಳಿಗೆ ಮರದ ಹಿಡಿಗಳನ್ನು ಹಾಕುವುದು, ಎತ್ತಿ ಗಾಡಿಗಳಿಗೆ ಹಳಿ ಕಟ್ಟುವುದು ಇತ್ಯಾದಿ ಸೇವೆಗಳಿಗೂ ಬತ್ತದ ವಿನಿಮಯ ಇರುತ್ತಿತ್ತು. ವರ್ಷಕ್ಕೆ ಒಮ್ಮೆ ಬಂದ ಬೆಳೆ ಸಮೀಕ್ಷೆ ಮಾಡಿ ಪಹಣಿಯಲ್ಲಿ ದಾಖಲು ಮಾಡುವ ಶ್ಯಾನಬೋಗರೂ, ಕಾಡಿನಲ್ಲಿ ವರ್ಷಕ್ಕೆ ಆಗುವಷ್ಟು ಕಟ್ಟಿಗೆಯನ್ನು ಕಡಿದು ಸಂಗ್ರಹಿಸಿಕೊಳ್ಳುವುದಕ್ಕಾಗಿ ಆಯಾ ಭಾಗದ ಅರಣ್ಯ ಸಂರಕ್ಷಕನೂ (ಗಾರ್ಡ್ ಸಾಹೇಬರು), ಜನನ ಮರಣಗಳಂಥ ಸೂತಕದ ದಿನಗಳಲ್ಲಿ ಹಾಜರಾಗಿ ಶುದ್ಧೀಕರಣದ ಸೇವೆ ನೀಡುವ ಮಡಿವಾಳರು, ಭೂರೆ ಹಬ್ಬಕ್ಕೆ ಅಗತ್ಯವಾದ ಭೂರೆ ಮಗೆಯನ್ನು ವರ್ಷಕ್ಕೊಮ್ಮೆ ತಂದುಕೊಡುವ ಕುಂಬಾರರು– ಹೀಗೆ ಬತ್ತದ ವಿನಿಮಯಕ್ಕೆ ಕಾಯಂ ಗಿರಾಕಿಗಳಾಗಿದ್ದರು.) ಪ್ರತಿ ವಾರ ಒಂದು ಕಟ್ಟು ವೀಳೆಯದೆಲೆ ನೀಡುತ್ತಾ ಇದ್ದುದಕ್ಕೆ ವರ್ಷಕ್ಕೆ ಒಂದು ಖಂಡುಗ ಬತ್ತ ಪಡೆಯಲಾಗುತ್ತಿತ್ತು. ಹುಳುಗದ್ದೆ ಭಾಗದಿಂದ ಬರುತ್ತಿದ್ದ ಬತ್ತವನ್ನು ಓದಿನ ನಿಮಿತ್ತ ಅಲ್ಲಿ ಆಶ್ರಯಪಡೆದಿದ್ದ ನನ್ನ ಊಟದ ಬಾಬತ್ತಾಗಿ ಅಲ್ಲಿಗೆ ಕೊಡಲಾಗುತ್ತಿತ್ತು.

ನಾನು ಹೈಸ್ಕೂಲು ಸೇರಿಕೊಂಡಾಗ ಮಾವನಿಗೆ ಬತ್ತ ಕೊಡುವ ಸ್ಥಿತಿಯಲ್ಲಿ ನಮ್ಮ ಮನೆಯವರು ಇರಲಿಲ್ಲ. ಏಕೆಂದರೆ ತೋಟದಲ್ಲಿ ವೀಳೆಯದೆಲೆಯ ಕೃಷಿ ಚೆನ್ನಾಗಿರಲಿಲ್ಲ. ಆ ವೇಳೆಗಾಗಲೇ ಮನೆಯ ಯಜಮಾನಿಕೆಯನ್ನು ಅಪ್ಪ ದೊಡ್ಡಣ್ಣನಿಗೆ ಬಿಟ್ಟುಕೊಟ್ಟಿದ್ದ. 'ಇವನಿಗೆ ಊಟಕ್ಕೂ ಕೊಟ್ಟು ಮೇಲಿನ ಖರ್ಚಿಗೂ ಕೊಟ್ಟು ಓದಿಸಲು ಆಗುವುದಿಲ್ಲ, ಮನೆಯಲ್ಲಿ ಎತ್ತು ಕಾಯುವುದಕ್ಕೆ ಜನ ಇಲ್ಲ. ಅವನು ಸ್ಕೂಲು ಬಿಟ್ಟು ಎತ್ತು ಕಾಯಲಿ' ಎಂದು ಮನೆಯ ಯಜಮಾನಿಕೆ ವಹಿಸಿದ್ದ ದೊಡ್ಡಣ್ಣ ಫರಮಾನು ಹೊರಡಿಸಿದ್ದ. ಅಪ್ಪನ ಸಿದ್ಧಾಂತ 'ಪಾಸಾಗುವವರೆಗೆ ಓದಲಿ, ಪಾಸಾಗದಿದ್ದರೆ ಮನೆಗೆ ಬಂದು ಮೇಳಿ ಹಿಡಿಯಲಿ' ಎಂಬುದಾಗಿತ್ತು. ನಾನು ಏಳನೆಯ ತರಗತಿಯಲ್ಲಿ ಪಾಸಾಗಿದ್ದೆ. ಅಲ್ಲದೆ ಆರನೇ ತರಗತಿಯಲ್ಲಿ ಇದ್ದಾಗಲೇ ಮೈಸೂರು ಹಿಂದಿ ಪ್ರಚಾರ

ಸಭೆಯಿಂದ ನಡೆದಿದ್ದ ಪ್ರಥಮ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲದೆ ರಾಜ್ಯಕ್ಕೆ ಆರನೆಯ ರ್‍ಯಾಂಕು ಪಡೆದಿದ್ದೆ. ಅದು ಅಪ್ಪನಿಗೆ ಗೊತ್ತಿತ್ತು. ಅಲ್ಲದೆ ಆಗಿನ ನನ್ನ ಆಳ್ತನ, ಹದಿಮೂರುನೆಯ ವರ್ಷದಲ್ಲಿದ್ದರೂ ಹತ್ತು ವರ್ಷದವನಂತೆ ಬೀಕಲು ಬೀಕಲಾಗಿದ್ದೆ. ನನ್ನ ಹಿಂದೆ 'ಬಡೆ ಬತ್ತು' ಎಂದು ನನ್ನ ತಮ್ಮನೂ ವ್ಯಂಗ್ಯವಾಡುವಷ್ಟು ದುರ್ಬಲ ದೇಹಸ್ಥಿತಿ ಇತ್ತು. ಅಪ್ಪನಿಗೆ ಅದೊಂದೇ ಕಾರಣವಾಯಿತು. 'ಚೆನ್ನಾಗಿ ಓದುತ್ತಾ ಇರುವ ಹುಡುಗನನ್ನು ಬಿಡಿಸಿ ಮನೆಯಲ್ಲಿ ಎತ್ತು ಕಾಯಲು ಹಾಕಬಾರದು' ಎಂದು ಘೋಷಿಸಿದ. ನನ್ನ ಅದೃಷ್ಟಕ್ಕೆ ಆ ಸುಮಾರಿನಲ್ಲಿ ರಾಜ್ಯದಲ್ಲಿ ಜಾರಿಯಲ್ಲಿದ್ದ ಪಾನನಿರೋಧ ರದ್ದಾಗಿ ಶೇಂದಿ, ಸಾರಾಯಿ ಉತ್ಪಾದನೆ, ಮಾರಾಟ ಆರಂಭವಾಯಿತು. ಅಪ್ಪ ಮನೆಯ ತೆಂಗಿನ ಮರಗಳಿಂದ ಶೇಂದಿ ತೆಗೆಯುವ ಪರಿಶ್ರಮದ ಕೆಲಸವನ್ನು ಒಪ್ಪಿಕೊಂಡ. ಅದರಲ್ಲಿ ದಿನವೂ ಅಷ್ಟಿಷ್ಟು ಹಣ ಸಿಗುತ್ತಿತ್ತು. ಅದೇ ಧೈರ್ಯದ ಮೇಲೆ 'ಅವನನ್ನು ನಾನು ಓದಿಸುತ್ತೇನೆ' ಎಂದು ಘೋಷಿಸಿದ. ನಾನು ಏಳನೆಯ ತರಗತಿಗೆ ಶಾಲೆಗೆ ಶರಣು ಹೊಡೆದು ಎತ್ತು ದನಗಳನ್ನು ಕಾಯುವ ಕೆಲಸಕ್ಕೆ ಹೋಗುವುದು ತಪ್ಪಿತು. ಅಪ್ಪ ನನ್ನ ಓದಿನ ಖರ್ಚಿಗೆ ಹಣ ಕೊಡುವುದು ಎಂದಾದಮೇಲೆ ಊಟಕ್ಕೆ ಮಾವನ ಮನೆಗೆ ಬತ್ತವನ್ನು ಕೊಡುವುದಕ್ಕೆ ಯಜಮಾನ ದೊಡ್ಡಣ್ಣ ಒಪ್ಪಿಕೊಂಡ. ಹಾಗೆ ನಾನು ಹೈಸ್ಕೂಲಿನ ಮೊದಲ ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

**ಪಬ್ಲಿಕ್ ಪರೀಕ್ಷೆಗೆ ತಯಾರಿ**

ಈ ವರ್ಷ ಎಸ್ಸೆಸ್ಸೆಲ್ಸಿ, ಪಬ್ಲಿಕ್ ಪರೀಕ್ಷೆ, ಆದ್ದರಿಂದ ಹೆಚ್ಚು ಗಂಭೀರವಾಗಿ ಓದಿನಲ್ಲಿ ತೊಡಗಿಕೊಳ್ಳಬೇಕು ಎಂದು ನಾನು ತಿಮ್ಮಪ್ಪ ತರಗತಿಗಳು ಪ್ರಾರಂಭವಾದ ದಿನಗಳಲ್ಲಿಯೇ ಯೋಚಿಸಿದೆವು. ಅವನು ಬರುವೆಯಿಂದ ಅಂದಾಜು ಎರಡು ಕಿಲೋಮೀಟರ್ ನಡೆದುಕೊಂಡು ಬರುವುದು, ನಾನು ಹುಳುಗದ್ದೆಯಿಂದ ಅಂದಾಜು ನಾಲ್ಕು ಕಿಲೋಮೀಟರ್ ನಡೆದುಕೊಂಡು ಬರುವುದು, ಮತ್ತೆ ಮನೆಗೆ ಹೋದ ಮೇಲೆ ಅಲ್ಲಿ ಬಂದು ಹೋಗುವ ನೆಂಟರ ಮಾತುಕತೆಗಳ ಮಧ್ಯೆ ಓದಿಗೆ ಗಮನ ಕೊಡುವುದು ಅಷ್ಟರಲ್ಲಿಯೇ ಇದೆ ಎಂದು ನಮ್ಮದೇ ತರ್ಕದಲ್ಲಿ ಯೋಚಿಸಿದೆವು. ಪೇಟೆಯಲ್ಲಿ ನಮ್ಮದೇ ಒಂದು ಕೋಣೆ ಹಿಡಿದರೆ ಅದರಲ್ಲಿ ಅಡುಗೆ ಮಾಡಿಕೊಂಡು ಶಾಲೆಗೆ ಹೋಗಿ ಬಂದು ಒಟ್ಟಾಗಿ ಅಭ್ಯಾಸ ಮಾಡಬಹುದೆಂದು ಬಾಡಿಗೆ ಕೋಣೆಗಾಗಿ ತಲಾಶು ಆರಂಭಿಸಿದೆವು. ಮೇಘರಾಜ ಅಂತ ನಮ್ಮ ಸಹಪಾಠಿಗೆ ನಮ್ಮ ಕೋಣೆಯ ಹುಡುಕಾಟದ ಸುಳಿವು ಸಿಕ್ಕಿತು. ಅವನು ಪೇಟೆಯಲ್ಲಿಯೇ ಇದ್ದವನು. ಒಂದು ಬೆಳಗ್ಗೆ ಹೊಸನಗರ ರಸ್ತೆಯಲ್ಲಿ ಮಸೀದಿಯ ಹಿಂದೆ ನೇರವಾಗಿ ಸಾಗರ ರಸ್ತೆಗೆ ಸಂಪರ್ಕ ಕಲ್ಪಿಸುವ ಕಚ್ಚಾ ರಸ್ತೆಯಲ್ಲಿ ನಮ್ಮಿಬ್ಬರನ್ನು ಕರೆದೊಯ್ದು ಹಿತ್ತಲಿನ ಮಧ್ಯೆ ಇದ್ದ ಒಂದು ಮನೆಗೆ ಮುಟ್ಟಿಸಿದ. ಅಲ್ಲಿ ಹಂಚು ಹೊದಿಸಿದ ಒಂದು ಕೊಟ್ಟಿಗೆಯಂಥ ಜಾಗವೇನೋ ಇತ್ತು. ಆದರೆ ಅದಕ್ಕೆ ಕೋಣೆಯ ಸ್ವರೂಪ ಇರಲಿಲ್ಲ. ಅದಕ್ಕೆ ಸ್ವಲ್ಪ ದೂರದಲ್ಲಿ ಮನೆ ಮಾಲೀಕರ ವಾಸದ ಮನೆ. ಹಿತ್ತಲಿನಲ್ಲಿ ಒಂದು ಕೋಣೆ ಹಾಕಿ ಅದರಿಂದ ಬಾಡಿಗೆ ಪಡೆಯುವ ತಂತ್ರ ಇದ್ದಿರಬಹುದು. ಆತನನ್ನು ಮೇಘರಾಜ 'ಚನ್ನಪ್ಪಣ್ಣ' ಎಂದು ನಮಗೆ ಪರಿಚಯಿಸಿದ್ದ. ಆತನಿಗೆ ನಡುವಯಸ್ಸಿರಬೇಕು. ನಾವಿಬ್ಬರೂ ಅಲ್ಲಿ ಉಳಿದುಕೊಂಡು ಅಡಿಗೆ ಮಾಡಿಕೊಳ್ಳುತ್ತಾ ಎಸ್ಸೆಸ್ಸೆಲ್ಸಿ ಪಬ್ಲಿಕ್ ಪರೀಕ್ಷೆಗೆ ಓದಿಕೊಳ್ಳುವವರು ಎಂಬುದನ್ನು ಕೇಳಿದ ಚನ್ನಪ್ಪಣ್ಣ ತುಂಬ ಖುಷಿಯಿಂದ ನಮಗೆ ಕೋಣೆಯನ್ನು ಸಿದ್ಧಪಡಿಸಿ ಕೊಡುವುದಾಗಿ ಹೇಳಿದ. ಕೊಟ್ಟಿಗೆಯಂತೆ ಇದ್ದ ಆ ಹೊರ ಮನೆಗೆ ಒಂದು ಕಡೆ 'ಸಿಂಗಲ್ ಪನ್ನ ಗೋಡೆ ಹಾಕಿದರೆ ಒಳ್ಳೆಯ ಕೋಣೆಯಾಗುತ್ತದೆ. ನಾಲ್ಕು ದಿನದಲ್ಲಿ ರೆಡಿ ಆಗುತ್ತೆ' ಅಂತ ಹೇಳಿ ನಮ್ಮಿಂದ

ಖಚಿತ ಭರವಸೆಯನ್ನು ನಿರೀಕ್ಷೆ ಮಾಡಿದ. ಮೇಘರಾಜ ಮುಂಗಡವಾಗಿ ಹಣ ನೀಡಲು ಹೇಳಿದಾಗ ಇಬ್ಬರೂ ತಡಕಾಡಿ ಹತ್ತು ರೂಪಾಯಿ ಹೊಂದಿಸಿ ಅದನ್ನು ಚನ್ನಪ್ಪಣ್ಣನಿಗೆ ಕೊಟ್ಟೆವು. ಸದ್ಯ ಉಳಿದುಕೊಳ್ಳುವುದಕ್ಕೆ ನೆಲೆಯಾಯಿತು. ಇನ್ನು ಪಟ್ಟಾಗಿ ಕುಳಿತು ಓದುವುದೇ ಎಂದುಕೊಳ್ಳುತ್ತಾ ಅಲ್ಲಿಂದ ಹೈಸ್ಕೂಲಿನತ್ತ ಹೊರಟೆವು.

ದಾರಿಯಲ್ಲಿಯೇ ನಮಗೆ ಒಂದೊಂದೇ ಪ್ರಶ್ನೆಗಳು ಏಳತೊಡಗಿದವು. ಕೋಣೆ ಸಿಕ್ಕಿ ಆಯಿತು. ಅಡುಗೆ ಮಾಡಿಕೊಳ್ಳಬೇಕಾದರೆ ಅದಕ್ಕೆ ಅಡುಗೆ ಮನೆಯಂಥ ಜಾಗ ಬೇಕು, ಕಟ್ಟಿಗೆ ಒಲೆಯಾದರೆ, ಸೌದೆ ತರಬೇಕು, ಸ್ಟವ್ ಇಟ್ಟುಕೊಳ್ಳುವುದಿದ್ದರೂ ಅದಕ್ಕೆ ಸೀಮೆಎಣ್ಣೆ ಹೊಂಚಿಕೊಳ್ಳಬೇಕು. ಬಾವಿಯಿಂದ ನೀರು ತರಬೇಕು. ನೀರು ಸಂಗ್ರಹಕ್ಕೆ ದೊಡ್ಡದೊಂದು ಪಾತ್ರೆ ಇಟ್ಟುಕೊಳ್ಳಬೇಕು. ಬೆಳಗ್ಗೆ ತಿಂಡಿ ಮಾಡಿಕೊಳ್ಳಬೇಕು. ಮಧ್ಯಾಹ್ನಕ್ಕೆ ಊಟವನ್ನೂ ಬೆಳಗ್ಗೆಯೇ ಸಿದ್ಧಮಾಡಿರಬೇಕು. ಸಂಜೆಗೆ ಮತ್ತೆ ಅನ್ನ ಮಾಡಿಕೊಳ್ಳಬೇಕು. ಊಟದ ತಟ್ಟೆಯನ್ನೂ, ಅಡುಗೆಯ ಪಾತ್ರೆಗಳನ್ನೂ ನಾವೇ ತೊಳೆದುಕೊಳ್ಳಬೇಕು. ಅನ್ನ ಮಾಡಿಕೊಂಡರೆ ಸಾಂಬಾರಿಗೆ ಏನು ಮಾಡುವುದು? ಅದನ್ನು ಹೋಟಲಿನಿಂದ ತಂದರೆ ಅದಕ್ಕೆ ಪ್ರತಿನಿತ್ಯ ದುಡ್ಡು ಕೊಡಬೇಕು.. ಅದುವರೆಗೆ ಮನೆಯಲ್ಲಿ ಕೂಡ ಅಡುಗೆ ಮನೆಯನ್ನು ಊಟಕ್ಕೆ ಅಲ್ಲದೆ ಬೇರೆ ಯಾವುದಕ್ಕೂ ಪ್ರವೇಶಿಸದೆ ಇದ್ದ ನಮ್ಮಿಬ್ಬರಿಗೆ ಅನ್ನ ಮಾಡಿಕೊಳ್ಳುವುದೂ ಸೇರಿದಂತೆ ಅಡುಗೆ ವ್ಯವಹಾರದ ಯಾವ ಬಾಬು ಕೂಡ ಅಪರಿಚಿತವಾಗಿದ್ದುದು ಮನವರಿಕೆ ಆಗಿ ಉತ್ಸಾಹವೆಲ್ಲ ಇಳಿಯತೊಡಗಿತು.

'ಲಕ್ಷ್ಮಣ ಮತ್ತು ತಿಮ್ಮಪ್ಪ ಬಾಡಿಗೆ ರೂಮು ಮಾಡಿಕೊಂಡು ಪೇಟೆಯಲ್ಲಿ ಉಳಿದುಕೊಳ್ಳುತ್ತಾರಂತೆ' ಎಂಬ ಸುದ್ದಿ ಎಸ್ಸೆಸ್ಸೆಲ್ಸಿಗೆ ಬಂದಿದ್ದ ನಮ್ಮ ಸಹಪಾಠಿಗಳಲ್ಲಿ ಚರ್ಚೆಗೆ ಹರಿದಾಡತೊಡಗಿತ್ತು. ಪೇಟೆಯಲ್ಲಿ ನಮ್ಮದೇ ವಿದ್ಯಾರ್ಥಿ ನಿಲಯವೂ ಇದ್ದು ಅದರಲ್ಲಿ ಮುಳುಗಡೆ ಪ್ರದೇಶಗಳಿಂದ ಬಂದಿದ್ದ ನಮ್ಮ ಅನೇಕ ಸಹಪಾಠಿಗಳು ಉಳಿದುಕೊಂಡಿದ್ದರು. ಅಡುಗೆ ಮಾಡುವವರ ಸಮಸ್ಯೆ ಇತ್ತು. ಆದರೂ ಹಿಂದಿನ ನಾಲ್ಕು ವರ್ಷಗಳಿಂದ ಅಲ್ಲಿ ನಮ್ಮ ಸಹಪಾಠಿಗಳೂ, ದೂರದ ಊರುಗಳಿಂದ ಓದಲು ಬಂದಿದ್ದವರೂ ಅಲ್ಲಿ ತಿಂಗಳಿಗೆ ತಲಾ ಹದಿನೈದು ಕೆಜಿ ಅಕ್ಕಿಯನ್ನೂ ಮೇಲು ಖರ್ಚಿಗೆ ಎಲ್ಲರಿಗೂ ಸಮಾನವಾಗಿ ಎಷ್ಟು ಪಾಲು ಬರುವುದೋ ಅಷ್ಟನ್ನು ಹಾಕಿಕೊಂಡು ಓದಿನಲ್ಲಿ ತೊಡಗಿಕೊಂಡಿದ್ದರು. ಇಂಥ ಒಂದು ವ್ಯವಸ್ಥೆ ಇರುವಾಗ ಇವರಿಬ್ಬರು, ತರಗತಿಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಬಲ್ಲವರು, ಯಾಕೆ ಬೇರೆ ಕಡೆ ಕೋಣೆ ಹಿಡಿದು ಉಳಿದುಕೊಳ್ಳುತ್ತಾರೆ ಎಂಬುದು ಪ್ರಶ್ನೆಯಾಗಿ ಪರಿಣಮಿಸಿತ್ತು. ಕೊಟ್ಟಿಗೆಯಂಥ ಮಾಡಿನ ಕಟ್ಟಡದಲ್ಲಿ ಚನ್ನಪ್ಪಣ್ಣ ಕಟ್ಟಿಸುವುದಾಗಿ ಹೇಳಿದ 'ಸಿಂಗಲ್ ಪನ್ನ ಗೋಡೆಯ ಪ್ರತ್ಯೇಕ ಕೋಣೆ'ಯಲ್ಲಿ ಉಳಿದುಕೊಂಡು ನಾವೇ ಅಡಿಗೆ ಮಾಡಿಕೊಂಡು ಓದಿಕೊಳ್ಳುವುದೋ, ಈಗಾಗಲೇ ಅಂಥ ವ್ಯವಸ್ಥೆ ಇರುವ ವಿದ್ಯಾರ್ಥಿನಿಲಯದಲ್ಲಿ ಸೇರಿಕೊಂಡು ಅಡುಗೆಯ ಯಾವ ಚಿಂತೆಯೂ ಇಲ್ಲದೆ ಓದಿನ ಬಗ್ಗೆ ಗಮನ ಹರಿಸುವುದೋ ಎಂಬುದು ನಮ್ಮಿಬ್ಬರಲ್ಲಿಯೂ ಜಿಜ್ಞಾಸೆಯಾಗಿ ತಳಮಳವಾಯಿತು. ಚನ್ನಪ್ಪಣ್ಣನಿಗೆ ಮುಂಗಡವಾಗಿ ಕೊಟ್ಟ ಹಣವೇನೂ ಆಗಿನ ಕಾಲಕ್ಕೆ ಸಣ್ಣದಾಗಿರಲಿಲ್ಲ. ವಿದ್ಯಾರ್ಥಿನಿಲಯದಲ್ಲಿ ನಮಗೆ ಬರಬಹುದಾಗಿದ್ದ ತಿಂಗಳ ಖರ್ಚು ಏಳೋ ಎಂಟೋ ರೂಪಾಯಿ ಎಂದು ಕೇಳಿದ ಮೇಲಂತೂ ನಾವು ದುಡುಕಿನ ನಿರ್ಧಾರ ಕೈಗೊಂಡದ್ದು ಸ್ಪಷ್ಟವಾಯಿತು. ಒಂದೆರಡು ದಿನ ಮಾನಸಿಕವಾಗಿ ತೊಳಲಾಡಿ ಚನ್ನಪ್ಪಣ್ಣ ಕಟ್ಟಿಸಿಕೊಡಲಿದ್ದ ಬಾಡಿಗೆ ಕೋಣೆಗೆ ಹೋಗುವ ಯೋಜನೆಯನ್ನು ಕೈಬಿಟ್ಟೆವು. ಅಷ್ಟೇ ಅಲ್ಲದೆ, ಮುಂಗಡ ಕೊಟ್ಟವರು ಕೋಣೆಗೆ ಬಾಡಿಗೆಗೆ ಯಾಕೆ ಬಂದಿಲ್ಲ ಎಂದು ಚನ್ನಪ್ಪಣ್ಣ ಎಲ್ಲಾದರೂ ಕೇಳಬಹುದೆಂದು ಹೆದರಿ ಆ ರಸ್ತೆಯಲ್ಲೇ ಓಡಾಡುವುದನ್ನು ಬಿಟ್ಟೆವು. ನಮಗೆ ಕೋಣೆ ಕೊಡಿಸುವುದರಲ್ಲಿ ಆಸಕ್ತಿ ವಹಿಸಿದ್ದ ಮೇಘರಾಜನೂ ನಾವು ಅಲ್ಲಿಗೆ ಹೋಗದೆ ಇರುವುದನ್ನು

ನೆನಪು ಮಾಡಲಿಲ್ಲ. ಮುಂಗಡ ಹಣ ಕೊಟ್ಟಿದ್ದನ್ನು ಮರೆತು ವಿದ್ಯಾರ್ಥಿನಿಲಯಕ್ಕೆ ಸೇರಿಕೊಂಡೆವು. ಚನ್ನಪ್ಪಣ್ಣನನ್ನು ಆ ನಂತರದ ವರ್ಷಗಳಲ್ಲಿ ಈ ವರೆಗೂ ಒಮ್ಮೆಯೂ ನೋಡಿಲ್ಲ (ಆತನ ಆತ್ಮಕ್ಕೆ ಶಾಂತಿ ಇರಲಿ). ಆದರೆ ಅಂಥ, ಹಿಂದು ಮುಂದು ಯೋಚಿಸದೆ, ಸಮಸ್ಯೆಯ ಸ್ವರೂಪಗಳನ್ನು ಅರ್ಥ ಮಾಡಿಕೊಳ್ಳದೆ ದುಡುಕಿನ ನಿರ್ಧಾರ ಕೈಗೊಳ್ಳುವ ನಮ್ಮ ಅಭ್ಯಾಸವನ್ನು 'ಚನ್ನಪ್ಪಣ್ಣ ಸಿಂಡ್ರೋಮ್' ಎಂದೇ ನಂತರದ ದಿನಗಳಲ್ಲಿ ಹೆಸರಿಟ್ಟುಕೊಂಡೆವು. ಈ ಚನ್ನಪ್ಪಣ್ಣ ಸಿಂಡ್ರೋಮ್ ನಮ್ಮಿಬ್ಬರಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡು ಆಗಾಗ ಆತ್ಮಾವಲೋಕನಕ್ಕೆ ಎಡೆ ಮಾಡಿಕೊಟ್ಟಿರುವುದನ್ನು ಮರೆಯಲಾಗದು.

* * *

**ಹಾಸ್ಟಲು ವಾಸ**

ಎರಡು ಸಂಸಾರಗಳಿಗೆ ಅನುಕೂಲವಾಗುವಷ್ಟು ಸ್ಥಳಾವಕಾಶವಿದ್ದ ಎರಡು ಭಾಗಗಳಿದ್ದ ಕಟ್ಟಡದ ಒಂದು ಭಾಗದಲ್ಲಿ ನಮ್ಮ ವಿದ್ಯಾರ್ಥಿನಿಲಯವಿತ್ತು. ಇನ್ನೊಂದು ಭಾಗದಲ್ಲಿ ನಮ್ಮ ಹೈಸ್ಕೂಲು ಹೆಡ್ಮಾಸ್ಟರ್ ಮುರುಗೇಂದ್ರಪ್ಪನವರು ಇದ್ದರು. ಹಳ್ಳಿಯ ಹುಡುಗರು ಪೇಟೆ ಸೇರಿ ಅಲ್ಲಿನ ಆಕರ್ಷಣೆಗಳಿಗೆ ಬಲಿಯಾಗಿ ಹಾಳಾಗಿ ಹೋಗಬಹುದು ಎಂಬ ದೂರದೃಷ್ಟಿಯನ್ನು ತಾಳಿದ್ದ ನಮ್ಮ ಹಿರಿಯರು ಹಾಸ್ಟಲಿನ ಒಂದು ಭಾಗದಲ್ಲಿ ಹೆಡ್ಮಾಸ್ಟರು ಇದ್ದರೆ ಶಿಸ್ತು ಪಾಲನೆಗೆ ಅನುಕೂಲ ಎಂದು ಭಾವಿಸಿ ಅವರಿಗೆ ಬಾಡಿಗೆಗೆ ನೀಡಿದ್ದರು. ಕುಟುಂಬ ಯೋಜನೆ ಆ ವೇಳೆಗೆ ಜಾರಿಗೆ ಬಂದಿದ್ದರೂ ಹೆಡ್ಮಾಸ್ಟರ್ ಅವರಿಗೆ ಅದಿನ್ನೂ ಪರಿಚಯಕ್ಕೆ ಬಂದಿರಲಿಲ್ಲ. ಐದು ಗಂಡು ಮತ್ತು ಮೂರು ಹೆಣ್ಣು ಮಕ್ಕಳ ತುಂಬು ಸಂಸಾರವನ್ನು ಅವರು ಆ ಮನೆಯಲ್ಲಿ ನಿರ್ವಹಿಸುತ್ತಿದ್ದರು. ಹಿರಿಯ ಮೂವರು ಗಂಡುಮಕ್ಕಳು ವಿದ್ಯಾಭ್ಯಾಸ ನಿಮಿತ್ತ ಹೊರಗಡೆ ಇದ್ದ ಕಾರಣ ಅವರಿಗೆ ಸೇರಿದ ಕೋಣೆಯೊಂದು ಖಾಲಿ ಇತ್ತು. ಅವರ ಮಗನೊಬ್ಬ ನಮ್ಮ ಸಹಪಾಠಿಯೇ ಆಗಿದ್ದರಿಂದ ಆ ಖಾಲಿ ಕೋಣೆಯನ್ನು ನನಗೂ ತಿಮ್ಮಪ್ಪನಿಗೂ ಬಿಟ್ಟುಕೊಟ್ಟರು. ಅವರ ಮಗನಿಗೂ ನಮ್ಮೊಂದಿಗೆ ಕಲೆತು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಅನುಕೂಲ ಎಂಬುದು ಹೆಡ್ಮಾಸ್ಟರ್ ಅವರ ಉದ್ದೇಶವಾಗಿತ್ತು. ನಾವು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಾಗಿ ಸೇರಿಕೊಂಡರೂ ಹೆಡ್ಮಾಸ್ಟರ್ ಗೆ ಸೇರಿದ ಭಾಗದಲ್ಲಿ ವಾಸ್ತವ್ಯ ಹೂಡಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದೆವು.

ನಾವು ಮೂವರೂ ವಿಜ್ಞಾನದ ವಿದ್ಯಾರ್ಥಿಗಳು. ಐಚ್ಛಿಕ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಕ್ಕೆ ಕೆ.ಗೋಪಾಲರಾವ್ ವಿಶೇಷ ಮುತುವರ್ಜಿ ನೀಡಿ ಅಭ್ಯಾಸ ಮಾಡಿಸುತ್ತಿದ್ದರು. ಉಳಿದಂತೆ ಇಂಗ್ಲಿಷಿಗೆ ಎಂ.ಆರ್.ಲಿಂಗರಾಜು, ಸಮಾಜ ವಿಜ್ಞಾನಕ್ಕೆ ಎಂ.ಈಶ್ವರಪ್ಪನವರು, ಹಿಂದಿಗೆ ಎಚ್.ಅನಂತಮೂರ್ತಿ, ಸಾಮಾನ್ಯ ವಿಜ್ಞಾನಕ್ಕೆ ಜಿ.ಎಂ.ಜಯದೇವಯ್ಯ, ಅಂಕಗಣಿತಕ್ಕೆ ಸ್ವತಃ ಹೆಡ್ಮಾಸ್ಟರ್ ಮುರುಗೇಂದ್ರಪ್ಪನವರು ಪಾಠ ತೆಗೆದುಕೊಳ್ಳುತ್ತಿದ್ದರು. ಕನ್ನಡಕ್ಕೆ ಅಧ್ಯಾಪಕರಿರಲಿಲ್ಲ. ಕೆಲವು ಕಾಲ ನಾಗೇಂದ್ರ ಭಟ್ಟರು ಬರುತ್ತಿದ್ದರು. ಮುರುಗೇಂದ್ರಪ್ಪನವರು ಕನ್ನಡಕ್ಕೆ ನಿಗದಿಯಾದ ಪೀರಿಯಡ್ ನಲ್ಲಿ ಬಂದು ಕೆಲವೊಮ್ಮೆ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಓದಿ ನಮ್ಮ ಕುತೂಹಲ ಹೆಚ್ಚಿಸುತ್ತಿದ್ದರು. ಎಂ.ಆರ್.ಶ್ರೀನಿವಾಸ ಮೂರ್ತಿ ಅವರ 'ನಾಗರಿಕ', ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರಂ' ನಾಟಕಗಳನ್ನು ತರಗತಿಯಲ್ಲಿ ಓದಿ ನಮಗೆ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿದ್ದರು. ಇಂಗ್ಲಿಷ್ ಮತ್ತು ನಮ್ಮ ವಿಶೇಷ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಗಣಿತದ ವಿಷಯಗಳು ನಮ್ಮ ನಿತ್ಯದ ಅಧ್ಯಯನ ವಿಷಯಗಳಾಗಿದ್ದು ಸದಾಕಾಲ ಅವುಗಳ ಗುಂಗಿನಲ್ಲಿಯೇ ನಾವಿಬ್ಬರೂ ಕಳೆಯುತ್ತಿದ್ದೆವು. ಗ್ರಾಮಾಂತರ ಭಾಗದಲ್ಲಿದ್ದ ನಮ್ಮ ಹೈಸ್ಕೂಲಿನ ಎಸ್ಸೆಸ್ಸೆಲ್ಸಿ

ಪರೀಕ್ಷಾ ಫಲಿತಾಂಶ ನಮ್ಮ ಹಿಂದಿನ ವರ್ಷ (1968) ತುಂಬಾ ಕೆಳಕ್ಕೆ ಇಳಿದಿತ್ತು. ಅದರ ಹಿಂದಿನ ವರ್ಷ ರಾಜ್ಯದಲ್ಲಿ ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆದಿತ್ತು. ಚುನಾವಣೆಗೆ ಸಿಬ್ಬಂದಿಯಾಗಿ ಹೋಗಿದ್ದ ನಮ್ಮ ಹೈಸ್ಕೂಲಿನ ಅನಂತಮೂರ್ತಿ ಅವರು ಪ್ರಜಾಸತ್ತಾತ್ಮಕ ನಡವಳಿಕೆಗಳ ಬಗ್ಗೆ ಉತ್ಸಾಹ ತಾಳಿ, ಚುನಾವಣೆ ಕರ್ತವ್ಯದಿಂದ ವಾಪಸು ಬಂದವರೇ ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸುವುದಕ್ಕೆ ಅಣಕು ಸಂಸತ್ತಿನ ಕಾರ್ಯಕ್ರಮವೊಂದನ್ನು ಶಾಲೆಯಲ್ಲಿ ನಡೆಸುವುದಕ್ಕೆ ಹೆಡ್ಮಾಸ್ಟರ್ ಮತ್ತು ಇತರ ಸಹೋದ್ಯೋಗಿಗಳ ಅನುಮತಿ ಪಡೆದುಕೊಂಡಿದ್ದರು. ಅದರಂತೆ ಎಲ್ಲ ವಿದ್ಯಾರ್ಥಿಗಳಲ್ಲೂ ಅಣಕು ಸಂಸತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ತರಬೇತಿ ನೀಡಿದರು. ಉಪಾಧ್ಯಾಯರಲ್ಲಿಯೇ ಕೆಲವರು ಸಚಿವರು, ಎಸ್ಸೆಸ್ಸೆಲ್ಸಿಯಲ್ಲಿದ್ದ ಕೆಲವರು ಧಡಿಯ ವಿದ್ಯಾರ್ಥಿಗಳು ಮತ್ತು ಚುರುಕಾಗಿದ್ದ ಕೆಲವು ವಿದ್ಯಾರ್ಥಿನಿಯರನ್ನು ಸಚಿವ ಸಂಪುಟದ ಸದಸ್ಯರೆಂದು ನಿಗದಿಪಡಿಸಿ ಅವರಿಗೆ ಖಾತೆಗಳನ್ನೂ ನೀಡಿದರು. ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ಸಿಗೆ, ವಿರೋಧ ಪಕ್ಷವಾಗಿದ್ದ ಸೋಷಲಿಸ್ಟ್ ಪಕ್ಷ, ಸಂಸ್ಥಾ ಕಾಂಗ್ರೆಸ್, ಜನಸಂಘ ಇತ್ಯಾದಿ ವಿವಿಧ ಪಕ್ಷಗಳಿಗೆ ಸೇರಿಕೊಳ್ಳಲು ವಿದ್ಯಾರ್ಥಿಗಳಿಗೆ ಆಹ್ವಾನಿಸಿದ್ದರು. ಇದರಿಂದ ಎಸ್ಸೆಸ್ಸೆಲ್ಸಿಯ ವಿದ್ಯಾರ್ಥಿಗಳೂ ಸೇರಿದಂತೆ ಎಂಟು ಮತ್ತು ಒಂಬತ್ತನೆಯ ತರಗತಿಯ ವಿದ್ಯಾರ್ಥಿಗಳಲ್ಲಿ ಒಂದೊಂದು ರಾಜಕೀಯ ಪಕ್ಷದ ಸದಸ್ಯತ್ವ ಹೊಂದಿದ ಭಾವ ತಲೆದೋರಿ ಎಲ್ಲರೂ ಸಾಮಾಜಿಕ ಕಾರ್ಯಕರ್ತರ ಲಹರಿಯಲ್ಲಿದ್ದರು.

ಅದೇ ಅನಂತಮೂರ್ತಿ ಅವರು ವಿದ್ಯಾರ್ಥಿಗಳಲ್ಲಿ ಹುರುಪನ್ನು ಮೂಡಿಸಲು ಆಯಾ ತರಗತಿಯಲ್ಲಿ ವಿದ್ಯಾರ್ಥಿಗಳ ಜನ್ಮದಿನವನ್ನು ಆಚರಿಸುವ ಪದ್ಧತಿಯನ್ನು ಜಾರಿಗೊಳಿಸಿದರು. ಒಂಬತ್ತನೆಯ ತರಗತಿಯಲ್ಲಿದ್ದ ನಾವು ಮೊಟ್ಟ ಮೊದಲಿಗೆ ಪರಶುರಾಮ ಎಂಬ ಮೊದ್ದು ಹುಡುಗನ ಜನ್ಮದಿನವನ್ನು ಇಡೀ ತರಗತಿಯಲ್ಲಿ ಆಚರಿಸಿದೆವು. ವೇದಿಕೆಯಲ್ಲಿ ಕೂರಿಸಿ ಪ್ರತಿ ವಿದ್ಯಾರ್ಥಿಯೂ ಕಾಣಿಕೆಯನ್ನು ನೀಡುವ ಪದ್ಧತಿಯನ್ನು ಹೊಸದಾಗಿ ಆರಂಭಿಸಲಾಯಿತು. ಮೊದಲ ಆಚರಣೆಗೆ ವಿಧಿ ವಿಧಾನವನ್ನು ಅನಂತಮೂರ್ತಿ ಅವರೇ ನಿರ್ದೇಶಿಸಿದರು. ಅವರಿಂದ ಪ್ರಾಸ್ತಾವಿಕ ಮಾತು. ಹುಟ್ಟುಹಬ್ಬಕ್ಕೆ ಸಹಪಾಠಿಗಳ ಕಾಣಿಕೆ. ಕೆಲವರು ಚಾಕಲೇಟ್ ತಂದಿದ್ದರು. ಹೆಚ್ಚಿನವರು 40 ಪುಟದ ಎಕ್ಸರ್ ಸೈಜ್ ಪುಸ್ತಕವನ್ನು ಕೊಟ್ಟಿದ್ದರು. ಎಲ್ಲ ವಿದ್ಯಾರ್ಥಿಗಳಿಗೂ ಅದೇ ಮೊದಲ ಸಲ ಸಂಭ್ರಮಪಡುವಂಥ ಆಚರಣೆ. ಕಾಣಿಕೆಗಳನ್ನು ಸ್ವೀಕರಿಸಿದ ಪರಶುರಾಮ ಎದ್ದು ನಿಂತು ಎಲ್ಲರಿಗೂ ಧನ್ಯವಾದ ಹೇಳಿದ. ಅದಕ್ಕೆ ಚಪ್ಪಾಳೆಯ ಅನುಮೋದನೆ. ಇಂಥ ಅನೇಕ ಜನ್ಮದಿನಾಚರಣೆಗಳು ನಮ್ಮ ಒಂಬತ್ತನೆಯ ತರಗತಿಯಲ್ಲಿ ನಡೆದಿದ್ದವು. ಅವು ಪಕ್ಕದ ಕೋಣೆಯ ಎಂಟನೇ ತರಗತಿಗೂ ವಿಸ್ತರಣೆಯಾಗುವವರೆಗೂ ಇತರ ಅಧ್ಯಾಪಕರ ಗಮನಕ್ಕೆ ಬರಲಿಲ್ಲವೆಂದು ತೋರುತ್ತದೆ. ಎಂ.ಈಶ್ವರಪ್ಪನವರು ನಮಗೆ ಸಮಾಜ ವಿಜ್ಞಾನದ ಪಾಠ ಆರಂಭಿಸಿದ್ದರು. ಅಷ್ಟರಲ್ಲಿ ಪಕ್ಕದ ಕೋಣೆಯಿಂದ ಹಠಾತ್ತನೆ ಚಪ್ಪಾಳೆಯ ತುಮುಲ ಸದ್ದಿನ ಕೋಲಾಹಲ. ಸ್ವಲ್ಪ ಹೊತ್ತು ಪಾಠ ನಿಲ್ಲಿಸಿದ ಅವರು ಅದೇನು ಚಪ್ಪಾಳೆ ಎಂದು ತರಗತಿಯಲ್ಲಿ ಪ್ರಶ್ನಿಸಿದರು. ಮುಂದೆ ಕುಳಿತಿದ್ದ ವಿದ್ಯಾರ್ಥಿಯೊಬ್ಬ 'ಬರ್ ಡೇ ಸಾ..' ಎಂದ. ಅದೇನು ಎಂದು ಬಿಡಿಸಿ ಬಿಡಿಸಿ ಕೇಳಿದಾಗ ಶಾಲೆಯಲ್ಲಿ ಹಬ್ಬಿದ ಜನ್ಮದಿನಾಚರಣೆಯ ಪದ್ಧತಿ ಅವರ ಗಮನಕ್ಕೆ ಬಂದಿತು. 'ಹೀಗೆ ದಿನಾ ಒಬ್ಬೊಬ್ಬರ ಬರ್ತ್ ಡೇ ಬರುತ್ತದಲ್ಲ.. ಒಂದು ಪೀರಿಯಡ್ ಅದಕ್ಕೆ ಹೋಗುತ್ತದೆ..' ಎಂದು ಅಸಮಾಧಾನ ವ್ಯಕ್ತಪಡಿಸಿ ಪಾಠ ಮುಂದುವರಿಸಿದರು. ಅವರು ಹೆಡ್ಮಾಸ್ಟರ ಗಮನಕ್ಕೆ ತಂದರೋ, ಸ್ಟಾಫ್ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದರೋ ಮುಂದೆ ಯಾವುದೇ ಹುಡುಗ ಹುಡುಗಿಯರ ಜನ್ಮದಿನದ ಆಚರಣೆ ತರಗತಿಗಳಲ್ಲಿ ನಡೆಯಲಿಲ್ಲ.

ಈ ಪಠ್ಯೇತರ ಚಟುವಟಿಕೆಗಳ ಪರಿಣಾಮ ಒಂಬತ್ತನೆಯ ತರಗತಿಯಲ್ಲಿದ್ದ ನಮ್ಮ ಮೇಲಾಗಲೀ, ಎಂಟನೇ ತರಗತಿಯ ವಿದ್ಯಾರ್ಥಿಗಳ ಮೇಲಾಗಲೀ ಆಗಲಿಲ್ಲ. ಪಬ್ಲಿಕ್ ಪರೀಕ್ಷೆ ಎದುರಿಸಿದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಮೇಲೆ ಆಯಿತು. ಅಣುಕು ಸಂಸತ್ತು, ತರಗತಿಗಳಲ್ಲಿ ಜನ್ಮದಿನದ ಆಚರಣೆ, ಸ್ನೇಹ ಸೌಹಾರ್ದದ ಕ್ರೀಡೆಯೆಂದು ಅಕ್ಕಪಕ್ಕದ ಹೈಸ್ಕೂಲುಗಳಿಗೆ ತೆರಳಿ ಕಬ್ಬಡ್ಡಿ, ವಾಲಿಬಾಲ್ ಪಂದ್ಯಗಳನ್ನು ಆಡುವುದು, ಅವರಿಗೆ ಉತ್ತೇಜನ ನೀಡಲು ಹಣ ಕೊಡಬಲ್ಲ ವಿದ್ಯಾರ್ಥಿಗಳನ್ನು ಕರೆದೊಯ್ಯುವುದು, ಶೈಕ್ಷಣಿಕ ಪ್ರವಾಸ ಇತ್ಯಾದಿ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ ಆ ವರ್ಷ ಕೇವಲ ಮೂವರು ಮಾತ್ರ ತೇರ್ಗಡೆಯಾದರು. ಪೇಟೆಯ ಪ್ರತಿಷ್ಠಿತರ ಮಕ್ಕಳೆಲ್ಲ ಡುಮ್ಕಿ ಹೊಡೆದಿದ್ದರು. ಪೇಟೆಯ ಗಣ್ಯ ವ್ಯಕ್ತಿಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಯ ಆಡಳಿತಗಾರರು ಹೆಡ್ಮಾಸ್ಟರ್ ಅವರನ್ನು ಕರೆಸಿ ತರಾಟೆಗೆ ತೆಗೆದುಕೊಂಡರೆಂದು ತೋರುತ್ತದೆ. ಅದರ ಒತ್ತಡ ಎಸ್ಸೆಸ್ಸೆಲ್ಸಿಗೆ ಬಂದ ನಮ್ಮ ಬ್ಯಾಚಿನ ಮೇಲೆ ಆಯಿತು. ಶೈಕ್ಷಣಿಕ ವರ್ಷದ ಮೊದಲಿಂದಲೇ ನಮಗೆ ಕಟ್ಟುನಿಟ್ಟಿನ ಪಾಠ ಪ್ರವಚನ. ಪ್ರತಿ ಹದಿನೈದು ದಿನಗಳಿಗೆ ಟೆಸ್ಟು. ಪರೀಕ್ಷೆಗೆ ಸಜ್ಜುಗೊಳಿಸಲು ಹೆಡ್ಮಾಸ್ಟರ್ ಸೇರಿದಂತೆ ಎಲ್ಲಾ ಮೇಷ್ಟರುಗಳ ಪ್ರಯತ್ನ. ಅಕ್ಟೋಬರ್ ತಿಂಗಳಿಂದಲೇ ಇಂಗ್ಲಿಷ್ ಮತ್ತು ಇತರೆ ಕಠಿಣ ವಿಷಯಗಳಿಗೆ ಮೇಷ್ಟರುಗಳು ಮನೆ ಪಾಠಗಳನ್ನೂ ಆರಂಭಿಸಿದ್ದರು. ನಮ್ಮ ಹಾಸ್ಟಲಿನ ಪಕ್ಕದ ಕಟ್ಟಡದಲ್ಲಿ ಬಾಡಿಗೆಗೆ ಇದ್ದ ಕೆ.ಗೋಪಾಲರಾವ್ ಅವರಲ್ಲಿ ನಾನೂ ತಿಮ್ಮಪ್ಪನೂ ಮನೆಪಾಠಕ್ಕೆ ಬರಬೇಕಾಗುತ್ತದೆಯೇ ಎಂದು ವಿಚಾರಿಸಲು ಹೋಗಿದ್ದೆವು. ಅವರು ನಗುತ್ತಾ 'ನಿಮಗೇಕೆ ಮನೆ ಪಾಠ? ಹೋಗಿ.. ಹೋಗಿ' ಎಂದು ಬೈದು ಕಳಿಸಿದರು. ತಡರಾತ್ರಿಯವರೆಗೂ ಬೀಜಗಣಿತದ ಸಮಸ್ಯೆಗಳನ್ನು ಬಿಡಿಸುತ್ತಾ ನಿದ್ದೆಗೆಡುತ್ತಿದ್ದ ನಮ್ಮನ್ನು ಅವರು ಹತ್ತಿರದಿಂದ ನೋಡಿದ್ದರು.

ಪರೀಕ್ಷಾ ಸಿದ್ಧತೆಗಳನ್ನು ನಾವಿಬ್ಬರೂ ಕಡೆಗಣಿಸಿರಲಿಲ್ಲ. ಹಾಗೆಂದು ನಮಗೆ ಇಷ್ಟೇ ಅಂಕ ಪಡೆಯಬೇಕು ಎಂಬ ಒತ್ತಡವೂ ಇರಲಿಲ್ಲ. ಒಂಬತ್ತನೇ ತರಗತಿಯಲ್ಲಿ ನಾವು ಗಳಿಸುತ್ತಿದ್ದ ಅಂಕಗಳನ್ನು ನೋಡಿದ್ದ ಮೇಷ್ಟರುಗಳು ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶವನ್ನು ನಿರೀಕ್ಷೆ ಮಾಡಿದ್ದರು. ನಾವು ಮೇಷ್ಟರುಗಳು ತಾಳಿದ್ದ ನಿರೀಕ್ಷೆಯನ್ನೂ ಇಟ್ಟುಕೊಂಡಿರಲಿಲ್ಲ. ಪಾಸಾಗುವ ಭರವಸೆ ಇಬ್ಬರಿಗೂ ಇತ್ತು. ಪೇಟೆಯಲ್ಲಿ ಹೈಸ್ಕೂಲು ಬಂದು ನಾಲ್ಕು ವರ್ಷಗಳಾಗಿದ್ದರೂ ಪಬ್ಲಿಕ ಪರೀಕ್ಷೆಗಾಗಿ ಹತ್ತಿರದ ಆನಂದಪುರಕ್ಕೆ ಹೋಗಬೇಕಾಯಿತು. ಅಲ್ಲಿ ನಮ್ಮ ವಾಸ್ತವ್ಯಕ್ಕೆ ಮಾಧ್ಯಮಿಕ ಶಾಲೆಯ ಕಟ್ಟಡವನ್ನು ಬಿಟ್ಟುಕೊಟ್ಟಿದ್ದರು. ಊರಿನ ಗಣ್ಯರು ನಮ್ಮ ಊಟ, ತಿಂಡಿಯ ವ್ಯವಸ್ಥೆ ಮಾಡಿದ್ದರು. ನಮಗೂ ಅದೊಂದು ಪ್ರವಾಸದಂತೆ ಇತ್ತು. ಪರೀಕ್ಷೆಗಳು ದಿನ ಬಿಟ್ಟು ದಿನ ನಡೆಯುವಂಥ ವೇಳಾಪಟ್ಟಿ. ಸತತ ಓದಿನಿಂದ ತಲೆ ಕೆಡಿಸಿಕೊಂಡಿದ್ದ ನಾವಿಬ್ಬರು ಮೇಷ್ಟರಿಗೆ ಗೊತ್ತಾಗದಂತೆ ಎರಡೋ ಮೂರೋ ಪೇಪರ್ ಮುಗಿದ ನಂತರ ಆ ಊರಲ್ಲಿದ್ದ ಟೂರಿಂಗ್ ಟಾಕೀಸಿನಲ್ಲಿ ಸೆಕೆಂಡ್ ಶೋ ನೋಡಿ ಬಂದಿದ್ದೆವು. 'ಬ್ರೋಕರ್ ಭೀಷ್ಮಾಚಾರಿ' ಎಂಬ ಚಿತ್ರವದು. ಎಲ್ಲ ಪರೀಕ್ಷೆಗಳೂ ಮುಗಿದ ಮೇಲೆ ಮೇಷ್ಟರ ಅನುಮತಿಯೊಂದಿಗೆ ಇತರೆ ವಿದ್ಯಾರ್ಥಿಗಳ ಜೊತೆಗೆ ಅದೇ ಚಿತ್ರವನ್ನು ಇನ್ನೊಮ್ಮೆ ಕೂಡ ನೋಡಿದ್ದೆವು.

**ಉತ್ತಮ ಫಲಿತಾಂಶ**

ಫಲಿತಾಂಶ ಬಂದಾಗ ತಿಮ್ಮಪ್ಪ ಎಲ್ಲ ವಿಷಯಗಳಲ್ಲು ಮೊದಲ ದರ್ಜೆಯಲ್ಲಿ ಪಾಸಾಗಿದ್ದ. ಹೈಸ್ಕೂಲಿನಲ್ಲಿ ಅದುವರೆಗೆ ಯಾರೂ ಗಳಿಸಿರದಷ್ಟು ಹೆಚ್ಚಿನ ಅಂಕಗಳನ್ನು ನಾನು ಗಳಿಸಿದ್ದರೂ ಇಂಗ್ಲಿಷ್‌ನಲ್ಲಿ

ಎರಡು ಅಂಕಗಳಿಂದ ಮೊದಲ ದರ್ಜೆ ತಪ್ಪಿ ಹೋಗಿತ್ತು. ಅದರಲ್ಲಿ ಎರಡು ಅಂಕಗಳು ಬಂದಿದ್ದರೆ ಆಗ ಘೋಷಣೆ ಮಾಡುತ್ತಿದ್ದ ಮೂವತ್ತು ರ್‍ಯಾಂಕುಗಳಲ್ಲಿ ನನ್ನ ಹೆಸರು ಸೇರುತ್ತಿತ್ತು. ಗಣಿತ, ಭೌತಶಾಸ್ತ್ರದ ಪತ್ರಿಕೆಗಳಲ್ಲಿ ನಮ್ಮಿಬ್ಬರ ಅಂಕಗಳು ತೊಂಬತ್ತರ ಮೇಲೆ ಇದ್ದವು. ತಿಮ್ಮಪ್ಪ ಎಲ್ಲಾ ವಿಷಯಗಳಲ್ಲಿ ಮೊದಲ ದರ್ಜೆಯಲ್ಲಿ ಪಾಸಾಗಿದ್ದರಿಂದ ಅಗ್ರಸ್ಥಾನದ ಗೌರವ ಪ್ರಾಪ್ತವಾಗಿತ್ತು. ಒಟ್ಟು ಅಂಕಗಳಲ್ಲಿ ನನ್ನ ಗಳಿಕೆ ಎಲ್ಲರಿಗಿಂತ ಹೆಚ್ಚು ಇದ್ದರೂ ಇಂಗ್ಲಿಷಿನಲ್ಲಿ ಮೊದಲ ದರ್ಜೆಗೆ ಎರಡು ಅಂಕ ಕಡಿಮೆಯಾಗಿದ್ದರಿಂದ ಹೈಸ್ಕೂಲಿಗೆ ಬರಬಹುದಾಗಿದ್ದ ರ್‍ಯಾಂಕ್ ತಪ್ಪಿಹೋಗಿತ್ತು. ಅಂಕಪತ್ರಗಳನ್ನು ತರಲು ಹೋಗಿದ್ದಾಗ ತಿಮ್ಮಪ್ಪನನ್ನು ಕರೆದು ಅಭಿನಂದಿಸಿದ್ದ ಎಂ.ಈಶ್ವರಪ್ಪನವರು 'ನಿನಗೆ ಮೊದಲ ದರ್ಜೆ ಬಂದಿರುವುದಕ್ಕೆ ಸಂತೋಷವಾಗಿದೆ. ಆದರೆ ಲಕ್ಷ್ಮಣನಿಗೆ ಇಂಗ್ಲಿಷಿನಲ್ಲಿ ಇನ್ನೂ ಎರಡು ಅಂಕಗಳು ಬರಬೇಕಿತ್ತು, ನಾವೆಲ್ಲ ನಿರೀಕ್ಷೆ ಮಾಡಿದ್ದೆವು..' ಎಂದು ಸಂಕಟದಿಂದ ಹೇಳಿದ್ದರಂತೆ. ನನಗೆ ಶಾಲೆಗೆ ಅತ್ಯಂತ ಹೆಚ್ಚು ಅಂಕ ಗಳಿಸಿದ್ದರ ಬಗ್ಗೆ ಖುಷಿ, ತಿಮ್ಮಪ್ಪನ ಸಾಧನೆಗೆ ಅಭಿಮಾನ ಇತ್ತು. ನನಗೆ ರ್‍ಯಾಂಕ್ ತಪ್ಪಿಹೋದ ಬಗ್ಗೆ ತಿಮ್ಮಪ್ಪನಿಗೂ ನಿರಾಸೆ ಆಗಿತ್ತು.

ಅತ್ಯುನ್ನತ ದರ್ಜೆಯಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿದರೂ ಮುಂದೇನು ಎನ್ನುವ ಪ್ರಶ್ನೆ ನಮ್ಮ ಮನೆಯಲ್ಲಿ ಎದ್ದಿತು. ಆಗ ಒಂದೇ ಪ್ರಯತ್ನದಲ್ಲಿ ತೇರ್ಗಡೆಯಾಗುವುದು ದೊಡ್ಡ ಸಾಧನೆ ಎಂದು ಪರಿಗಣಿತವಾಗುತ್ತಿದ್ದ ಕಾಲ. ಆ ದಿನಗಳಲ್ಲಿ ಪೇಟೆಗೆ ಹೋಗಿದ್ದ ಅಪ್ಪ ತನ್ನ ವಾರಿಗೆಯ ಕೆಲವು ಗೌಡರುಗಳಲ್ಲಿ ಸಲಹೆ ಕೇಳಿದಾಗ 'ಮುಂದೆ ಕಾಲೇಜು.. ಅದೂ ಇದೂ ಅಂತ ತಲೆ ಕೆಡಿಸ್ಕೋಬ್ಯಾಡ.. ಎಲ್ಲಾದರೂ ಮೇಷ್ಟರ ಕೆಲಸ ಹುಡುಕೋದಕ್ಕೆ ಹೇಳು' ಎಂದು ಹೇಳಿದ್ದರಂತೆ. ಅಪ್ಪ ಮನೆಯಲ್ಲಿ ಅದನ್ನೇ ಹೇಳಿದಾಗ ನನಗೆ ಅದೂ ಆಗಬಹುದೇನೋ ಅನ್ನಿಸಿತ್ತು. ಅಪ್ಪನೂ ಯೋಚನೆ ಮಾಡಿದ್ದಿರಬೇಕು. ಮೊದಲಿಂದಲೂ ಪಾಸಾಗುತ್ತಲೇ ಬಂದಿದ್ದ ನನ್ನ ವಿದ್ಯಾಭ್ಯಾಸ ಅಷ್ಟಕ್ಕೆ ಮೊಟಕು ಮಾಡಲು ಅವನು ಇಷ್ಟಪಡಲಿಲ್ಲ. ಅದು ಮತ್ತೆ ಮನೆಯಲ್ಲಿ ಚರ್ಚೆಗೆ ಬಂತು. ಎಲ್ಲಾದರೂ ಉಚಿತ ವಿದ್ಯಾರ್ಥಿ ನಿಲಯದ ಸೌಲಭ್ಯ ಸಿಕ್ಕಿದರೆ ಮೇಲು ಖರ್ಚಿಗೆ ಹಣ ಕೊಡಬಹುದು ಎಂಬ ಮಾತು ಮನೆಯ ಯಜಮಾನಿಕೆ ನಡೆಸುತ್ತಿದ್ದ ದೊಡ್ಡಣ್ಣನಿಂದ ಬಂದಿತು. ಎಸ್‌ಎಸ್‌ಎಲ್‌ಸಿ ಪಾಸಾದ ಮೇಲೆ ನಮ್ಮೂರು ಸಮೀಪದ ಕೋಣಂದೂರಿನಲ್ಲಿ ಆಗಷ್ಟೆ ಪಿಯು ಕಾಲೇಜು ಆರಂಭವಾಗಿದ್ದು ಅಲ್ಲಿಯೇ ಶಿಕ್ಷಣ ಮುಂದುವರಿಸಲು ಮನಸ್ಸು ಮಾಡುತ್ತಿದ್ದೆನೇನೋ. ಆದರೆ ಬೆಂಗಳೂರಿನಲ್ಲಿ ಉಚಿತ ವಿದ್ಯಾರ್ಥಿನಿಲಯದ ಅನುಕೂಲ ಇದೆ ಅಂತ ಗೊತ್ತಾಯಿತು. ನನ್ನ ಬೆಂಗಳೂರು ವಾಸ್ತವ್ಯಕ್ಕೆ ಬಿದರಹಳ್ಳಿ ಪುರುಷೋತ್ತಮ ಅವರು ನೆರವಾದರು. ಅವರ ನೆರವಿನಿಂದ ನಾನು ಇನ್ನೊಬ್ಬ ಗೆಳೆಯ ಉಮಾಕಾಂತನೊಂದಿಗೆ ಬೆಂಗಳೂರಿನ ರೇಣುಕಾಚಾರ್ಯ ಕಾಲೇಜಿನಲ್ಲಿ ಪಿಯುಸಿ ಕೋರ್ಸಿಗೆ ಪ್ರವೇಶ ಪಡೆದೆ. ಉಚಿತ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆಯುವುದಕ್ಕೂ ಪುರುಷೋತ್ತಮ ಅವರೇ ನೆರವಾಗಿದ್ದರು.

ತಿಮ್ಮಪ್ಪ, ಹೆಡ್ಮಾಸ್ಟರ್ ಮುರುಗೇಂದ್ರಪ್ಪ ಅವರ ಮಗ ವಿರೂಪಾಕ್ಷ ಮತ್ತು ನಮ್ಮ ಇನ್ನೊಬ್ಬ ಸಹಪಾಠಿ ನಾಗಪ್ಪ ಅವರೊಂದಿಗೆ ಕಾರ್ಕಳಕ್ಕೆ ಪಿಯುಸಿ ಸೇರಿಕೊಳ್ಳಲು ನಿರ್ಧರಿಸಿದ್ದ. ಅಲ್ಲಿ ಕಾಲೇಜಿಗೆ ಹೊಂದಿಕೊಂಡಂತೆ ಹಾಸ್ಟಲು ಇರುವುದು ಅವನಿಗೆ ಅನುಕೂಲ ಎಂಬುದು ಆ ತೀರ್ಮಾನದ ಹಿಂದಿನ ತರ್ಕ. ನಮ್ಮ ಮನೆಯ ಪರಿಸ್ಥಿತಿ ಹಾಸ್ಟಲಿಗೆ ಹಣ ಕೊಟ್ಟು ವಿದ್ಯಾಭ್ಯಾಸ ಮುಂದುವರಿಸುವುದಕ್ಕೆ ಅನುಕೂಲವಾಗಿಲ್ಲ ಎಂಬುದು ತಿಮ್ಮಪ್ಪನಿಗೂ ತಿಳಿದಿತ್ತು. ಆದ್ದರಿಂದ ಅವನು ಕಾರ್ಕಳಕ್ಕೆ ಹೋಗಿ ಕಾಲೇಜು ಸೇರಿಕೊಂಡ. ಆಗಿದ್ದ ಒಂದು ವರ್ಷದ ಪಿಯುಸಿಯಲ್ಲಿ ದಸರೆ ರಜೆಗೆ ಬಂದಾಗ ಒಮ್ಮೆ ಭೇಟಿ ಆಗಿದ್ದೆವು. ನನ್ನದು ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯಕ್ರಮ. ತಿಮ್ಮಪ್ಪನದು ಮೈಸೂರು ವಿಶ್ವವಿದ್ಯಾಲಯದ ಪಠ್ಯಕ್ರಮ. ಆಗಿನ್ನೂ ಪಿಯು

ಮಂಡಲಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ವಿಶ್ವವಿದ್ಯಾಲಯದಿಂದಲೇ ಪಿಯು ಪರೀಕ್ಷೆ ನಿರ್ವಹಣೆ ಆಗುತ್ತಿತ್ತು. ಅವನು ವಿಜ್ಞಾನದ ವಿಷಯಗಳನ್ನು ಪಿಯುಸಿಯಲ್ಲಿ ಮುಂದುವರಿಸಿದ. ನಾನು ನನ್ನದೇ ತರ್ಕದಿಂದ ಗಣಿತ ವಿಷಯ ಕೈಬಿಟ್ಟು ಜೀವಶಾಸ್ತ್ರಕ್ಕೆ ಸೇರಿಕೊಂಡೆ. ಭೌತಶಾಸ್ತ್ರ, ರಸಾಯನಶಾಸ್ತ್ರಗಳು ಎಂದಿನಂತೆ ಮುಂದುವರಿದಿದ್ದವು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗಣಿತದಲ್ಲಿ ನೂರಕ್ಕೆ ತೊಂಬತ್ತೇಳು ಅಂಕ ಗಳಿಸಿದ್ದ ನಾನು ಪಿಯುಸಿಯಲ್ಲಿ ಗಣಿತವನ್ನೇ ಕೈಬಿಟ್ಟು ಜೀವಶಾಸ್ತ್ರ ತೆಗೆದುಕೊಂಡಿದ್ದಕ್ಕೆ ಮನೆಯಲ್ಲಿ ಯಾರೂ ಆಕ್ಷೇಪಿಸಲಿಲ್ಲ. ಅಷ್ಟಕ್ಕೂ ನಾನು ಏನು ಆಯ್ಕೆ ಮಾಡಿಕೊಂಡರೆ ಅನುಕೂಲ ಎಂಬುದರ ಬಗ್ಗೆ ಸಲಹೆ ಕೊಡುವಷ್ಟು ಸಾಮಾನ್ಯ ಅರಿವು ಮನೆಯಲ್ಲಿ ಇರಲಿಲ್ಲ. ಅಪ್ಪನ ಸಿದ್ಧಾಂತ 'ಪಾಸಾಗುವವರೆಗೆ ಓದಬೇಕು, ಪಾಸಾಗದಿದ್ದರೆ ವಾಪಸಾಗಿ ಮೇಳಿ ಹಿಡಿಯಬೇಕು' ಎಂಬುದು ನನಗೆ ಖಚಿತವಾಗಿತ್ತು. ನನ್ನ ನಾಲ್ಕನೆಯ ಅಣ್ಣ ಆಗ ಧಾರವಾಡದ ಕೃಷಿ ಕಾಲೇಜಿನಲ್ಲಿ ಬಿಎಸ್ಸಿ(ಅಗ್ರಿ) ಪದವಿಯ ಮೂರನೇ ವರ್ಷದಲ್ಲಿದ್ದು ನನಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದ. ಜೀವಶಾಸ್ತ್ರ ತೆಗೆದುಕೊಂಡರೆ ಪಿಯು ಮುಗಿಯುತ್ತಲೂ ವೈದ್ಯಕೀಯ ಇಲ್ಲವೇ ಕೃಷಿ ಪದವಿಗೆ ಪ್ರಯತ್ನ ನಡೆಸಬಹುದು ಎಂದು ನನ್ನ ಗಣಿತ ತ್ಯಾಗಕ್ಕೆ ನಾವು ಕೊಟ್ಟುಕೊಂಡ ಸಮಜಾಯಿಶಿ ಆಗಿತ್ತು.

ಇಬ್ಬರೂ ಬೇರೆ ಬೇರೆ ಪರಿಸರದಲ್ಲಿ ಶಿಕ್ಷಣ ಮುಂದುವರಿಸಿದೆವು. ಪಠ್ಯಕ್ರಮದಲ್ಲಿ ಸಮಾನತೆ ಇರಲಿಲ್ಲ. ಅವನು ಕಾರ್ಕಳದಲ್ಲಿ, ನಾನು ಬೆಂಗಳೂರಿನಲ್ಲಿ ನೆಲೆ ನಿಂತ ನಂತರ ಪತ್ರವ್ಯವಹಾರ ಆರಂಭಿಸಿದೆವು. ಮೊದಲು ಕಾರ್ಡಿನಿಂದ ಆರಂಭವಾಯಿತು. ಅದು ಸಾಲದೆ ಇನ್ ಲ್ಯಾಂಡ್ ಲೆಟರ್ ಬಂತು. ಬರೆಯುತ್ತಾ ಹೋದ ಹಾಗೆ ಅದೂ ಸಾಲದಾಯಿತು. ಬಿಳಿ ಹಾಳೆಯಲ್ಲಿ ಬರೆಯುತ್ತಾ ಕವರ್ ಬಳಸತೊಡಗಿದೆವು. ವಾರಕ್ಕೆ ಕೆಲವು ಸಲ ಎರಡು ಮೂರು ಪತ್ರಗಳು. ದೀರ್ಘವಾದ ಪತ್ರಗಳು. ಅವುಗಳಲ್ಲಿ ಇಂಥದ್ದೇ ನಿರ್ದಿಷ್ಟ ವಿಷಯ ಎಂಬುದು ಇರುತ್ತಿರಲಿಲ್ಲ. ಏನೇನು ಬರೆಯುತ್ತಾ ಇದ್ದೆವು ಎಂಬುದು ಈಗ ನೆನಪಿಗೆ ಬರುತ್ತಿಲ್ಲ. ಆದರೆ ಪ್ರತಿ ಸಲ ಪತ್ರ ಬರೆದು ಅಂಚೆ ಡಬ್ಬಿಗೆ ಹಾಕಿದ ನಂತರ ಒಂದು ರೀತಿಯ ನಿರಾಳತೆ ಉಂಟಾಗುತ್ತಿತ್ತು. ನಮ್ಮ ಓದಿನ ವಿಷಯಕ್ಕೆ ಪತ್ರದಲ್ಲಿ ಪ್ರಾಧಾನ್ಯತೆ ಇರುತ್ತಿರಲಿಲ್ಲ. ಒಂದು ಸಲ ಮಾತ್ರ ತಿಮ್ಮಪ್ಪ 'ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿನ ಸ್ಟೇಶನರಿ ಅಂಗಡಿಯಲ್ಲಿ ಪಿಯುಸಿ ಫಿಸಿಕ್ಸ್, ಕೆಮಿಸ್ಟ್ರಿ ನೋಟ್ಸ್‌ಗಳು ಸಿಗುತ್ತವೆಯಂತೆ, ವಿಚಾರಿಸಿ ತಿಳಿಸು' ಎಂದು ಬರೆದಿದ್ದ. 'ಆಯಿತು' ಎಂದು ಉತ್ತರ ಬರೆದಿದ್ದೆ. ಅವನು ಹೇಳಿದ ಕೆಲಸ ಮಾಡಿರಲಿಲ್ಲ. ಇನ್ನೊಮ್ಮೆ ನೆನಪು ಮಾಡಿಕೊಂಡು ಬರೆದು ಲಘುವಾಗಿ ಬೈದಿದ್ದ. ಅದಕ್ಕೆ ಹುಡುಕಿಕೊಂಡು ಹೋದೆ. ಅವತ್ತು ರಜೆಯೋ ಏನೋ ಇತ್ತು. ನೋಟ್ಸ್ ಸಿಗಲಿಲ್ಲ. ಅವತ್ತಿನ ಅನುಭವವನ್ನು ವಿಸ್ತಾರವಾಗಿ ಇನ್ನೊಂದು ಪತ್ರದಲ್ಲಿ ಬರೆದೆ. ಅವನು ಮತ್ತೆ ನೋಟ್ಸ್ ಕುರಿತು ನೆನಪು ಮಾಡಲಿಲ್ಲ. ಹೀಗೆ ಸತತ ಪತ್ರವ್ಯವಹಾರ ಇಟ್ಟುಕೊಂಡಿದ್ದ ಕಾರಣ ದಸರಾ ರಜೆಯಲ್ಲಿ ಎಷ್ಟು ದಿನ ಊರಲ್ಲಿ ಇರುತ್ತೇವೆ ಎಂಬುದು ಇಬ್ಬರಿಗೂ ತಿಳಿದಿತ್ತು. ಅದರಂತೆ ಊರಿಗೆ ಬಂದವನು ಮರುದಿನವೇ ಸೈಕಲ್ ಹತ್ತಿ ಬರುವೆಗೆ ಹೋದೆ.

ನಮ್ಮ ಮನೆಯಿಂದ ಸರ್ಕಾರಿ ರಸ್ತೆಗೆ ಒಂದು ಕಿಲೋಮೀಟರ್‌ನಷ್ಟು ದೂರ ಮಣ್ಣಿನ ರಸ್ತೆ. ಹದಿಹರಯದಲ್ಲಿದ್ದ ನನಗೆ ಕಚ್ಚಾರಸ್ತೆಯಲ್ಲಿ ಕೊರಕಲು, ಉಬ್ಬು ತಗ್ಗುಗಳ ರಸ್ತೆಯಲ್ಲಿ ಸೈಕಲ್ ಹೊಡೆಯುವುದು ಕುಶಾಲಿನ ಸಂಗತಿಯೇ ಆಗಿತ್ತು. ಸರ್ಕಾರಿ ರಸ್ತೆ ಎಂದರೆ ತೀರ್ಥಹಳ್ಳಿ– ಸಾಗರದ ರಸ್ತೆ. ಅದರಲ್ಲಿ ಪೇಟೆಯಿಂದ ಒಂದೂವರೆ ಕಿಲೋಮೀಟರ್ ಮೊದಲಿಗೆ ಬಲಕ್ಕೆ ಮಣ್ಣಿನ ರಸ್ತೆ. ಅದರಲ್ಲಿ ತಿರುಗಿದರೆ ಅಲ್ಲಿಂದ ಬರುವೆ ತಿಮ್ಮಪ್ಪನ ಮನೆ ಬಾಗಿಲಿಗೆ ಹತ್ತು ಹನ್ನೆರಡು ನಿಮಿಷಗಳ ಹಾದಿ. ಅವನೂ ನನ್ನ ನಿರೀಕ್ಷೆಯಲ್ಲಿಯೇ ಅವರ ಮನೆಯ ಜಗುಲಿಯ ಮೇಲೆ ಕಾದು ಕುಳಿತಿರುತ್ತಿದ್ದ. ಮನೆ ನಾಯಿಗಳು ಒಮ್ಮೆ ಬೊಗುಳಿ

ಎಚ್ಚರಿಸುತ್ತಿದ್ದವು. ಮನೆಯವರು ಯಾರಾದರೂ ಹಚೀ ಎಂದು ಗದರಿಸುತ್ತಾ ಹೊರಗಡೆ ಬಂದರೆ ಸುಮ್ಮನಾಗುತ್ತಿದ್ದವು. ಒಮ್ಮೆ ಪರಿಚಯವಾದರೆ ಮತ್ತೆ ನಾಯಿಗಳಿಗೆ ಹೆದರಬೇಕಿರಲಿಲ್ಲ. ತಿಮ್ಮಪ್ಪನ ಮನೆಯಲ್ಲಿ ಬಡಿಯನಾಯ್ಕರಿಗೆ ಶಿಕಾರಿಗೆ ಜೊತೆಯಾಗುವ ಮೂರು ನಾಲ್ಕು ನಾಯಿಗಳಿದ್ದರೂ ಅವು ನನಗೆಂದೂ ಭಯೋತ್ಪಾದಕವಾಗಿ ವರ್ತಿಸಿದ್ದಿಲ್ಲ.

ತಿಮ್ಮಪ್ಪನ ಮನೆಯವರಿಗೆ ಬರುವೆಯಲ್ಲಿ ಸ್ವಲ್ಪ ತೋಟ, ಪೇಟೆಯ ಕಡೆಗೆ ಹೊಂದಿಕೊಂಡ ಕಡೆ ಸ್ವಲ್ಪ ಗದ್ದೆ ಇದ್ದವು. ಚಿಲುಮೆ ಗದ್ದೆ ಎಂದೇನೋ ಹೇಳುತ್ತಿದ್ದರು. ಬರುವೆಗೆ ಮೂರು ನಾಲ್ಕು ಕಿಲೋಮೀಟರ್ ಪೂರ್ವಕ್ಕೆ ಪುರುಮಠ ಎಂಬಲ್ಲಿ ಹೆಚ್ಚಿನ ಗದ್ದೆ ಇತ್ತು. ಬರುವೆ ಪುರುಮಠದ ಮಧ್ಯೆ ದಟ್ಟವಾದ ಕಾಡು. ಪುರುಮಠಕ್ಕೆ ಒಂದು, ಎರಡು, ಮೂರು ಕಿಲೋಮೀಟರ್ ದೂರದಲ್ಲಿ ಆಚೆ ಈಚೆಗೆ ತಮ್ಮಡಿಗೊಪ್ಪ, ಬೆನವಳ್ಳಿ, ಮಳವಳ್ಳಿ, ಚಿಬ್ಬಳ್ಳಿ ಮೊದಲಾದ ಮಜರೆ ಹಳ್ಳಿಗಳಿದ್ದವು. ತಿಮ್ಮಪ್ಪ ಆಗ ಇದ್ದುದು ಮನೆತನದ ಮೂಲ ಮನೆಯಾಗಿದ್ದು ಅದರಿಂದ ಬೇರೆಯಾಗಿದ್ದವರೆಲ್ಲ ತಮಗೆ ಬಂದ ಗದ್ದೆ, ಹಕ್ಕಲುಗಳಿಗೆ ಹೊಂದಿಕೊಂಡ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರು. ನಾನು ಅಲ್ಲಿಗೆ ಓಡಾಟ ನಡೆಸುತ್ತಿದ್ದ ದಿನಗಳಲ್ಲಿ ತಿಮ್ಮಪ್ಪನ ಅಪ್ಪ ಬಡಿಯನಾಯ್ಕರು, ಅವ್ವ, ಅಣ್ಣ ಅತ್ತಿಗೆಯರ ತುಂಬು ಕುಟುಂಬ. ತಿಮ್ಮಪ್ಪನ ಇಬ್ಬರು ತಂಗಿಯರಿದ್ದರು. ತಮ್ಮ ಗೋಪಾಲ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದ.

**'ಮಾವ, ಕಂಸಮಾವ'**

ತಿಮ್ಮಪ್ಪನ ತಾಯಿ ನಾನು ಮೊದಲ ಸಲ ಬರ್ಮನ ಪೂಜೆಯ ಸಂದರ್ಭದಲ್ಲಿ ಭೇಟಿ ನೀಡಿದ್ದಾಗ ತವರಿನ ಬಾಂಧವ್ಯವನ್ನು ತಿಳಿಸಿ ವಾತ್ಸಲ್ಯ ಪ್ರಕಟಿಸಿ ಆತಿಥ್ಯ ನೀಡಿದ್ದರೂ ಅದೇ ವರಸೆಯಲ್ಲಿ ಅವರನ್ನು ಅಕ್ಕ ಎಂದೋ, ಅಕ್ಕಯ್ಯ ಎಂದೋ ಕರೆಯುವುದು ನನಗೆ ಸಾಧ್ಯವಾಗಲಿಲ್ಲ. ಅವರು ನಮ್ಮೂರಿನ ನಮ್ಮದೇ ಮನೆತನದ ಕುಡಿಯಾಗಿದ್ದರು. ಅವರ ತಂದೆ ಯಲ್ಲನಾಯ್ಕರು ನಾನು ತುಂಬ ಚಿಕ್ಕವನಾಗಿದ್ದಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದ ನೆನಪು ಮಸುಕಾಗಿತ್ತು. ಅವರನ್ನು ಉದ್ದೇಶಿಸಿ ನಾವು ಮನೆಯಲ್ಲಿ 'ನಡುಗಿನ ಮನೆ ದೊಡಪ್ಪ' ಎಂದು ಕರೆಯುತ್ತಿದ್ದೆವು. ನಮ್ಮೂರಲ್ಲಿ ಅಪ್ಪನನ್ನು ಹೆಸರು ಹಿಡಿದು ಕರೆಯುತ್ತಿದ್ದ ಏಕೈಕ ವ್ಯಕ್ತಿ ಆ ದೊಡಪ್ಪ. ಅವರ ಹಿರಿಯ ಮಗಳೇ ತಿಮ್ಮಪ್ಪನ ಅವ್ವ. ತಿಮ್ಮಪ್ಪ ಆ ದಿನ ನನ್ನನ್ನು 'ಅವ್ವನಿಗೆ ತಮ್ಮನಾದರೆ ನೀನು ನನಗೆ ಮಾವ, ಕಂಸ ಮಾವ' ಎಂದು ಕುಶಾಲಿಗೆ ಹೇಳಿದ್ದನಲ್ಲ, ಆ ಬಾಂಧವ್ಯವನ್ನು ಅವನು ನಿತ್ಯದ ಒಡನಾಟದಲ್ಲಿ ಬಳಸಿದವನಲ್ಲ. ವಯಸ್ಸಿನಲ್ಲಿ ನನಗಿಂತಲೂ ಎರಡು ವರ್ಷ ಹಿರಿಯನಾಗಿದ್ದ ಅವನೊಂದಿಗೆ ನನಗೆ ಬಾಂಧವ್ಯಕ್ಕಿಂತಲೂ ಗೆಳೆತನವೇ ಸ್ಥಾಯಿಭಾವವಾಗಿತ್ತು. ಹತ್ತಿರದ ಸಂಬಂಧಿಕರಲ್ಲಿ ಹೆಸರು ಹಿಡಿದು ಕರೆಯುವ ರೂಢಿಯೇ ಕಡಿಮೆ. ನಮ್ಮ ಕಡೆ ಹೆಂಡತಿಯರನ್ನು ಹೆಸರು ಹಿಡಿದು, ಇಲ್ಲವೇ ಮುದ್ದಾಗಿ ಕರೆಯುವ ಕಲ್ಪನೆಯೂ ಇರಲಿಲ್ಲ. ಹುಳುಗದ್ದೆ ಸಂಬಂಧದಲ್ಲಿ ಚಿಕ್ಕಪ್ಪನಾಗಿದ್ದ ಜೇನಿ ಭೈರನಾಯ್ಕರು ಮಾತ್ರ ತಮ್ಮ ಹೆಂಡತಿಯನ್ನು 'ಗೋದಾವರಿ' ಎಂದು ಕರೆಯುತ್ತಿದ್ದರು. ಆಕೆ ನಮಗೆ 'ಪದ್ಮಚಿಕ್ಕಿ.' ತನ್ನ ಚಿಗಪ್ಪನ ಮಗಳಾಗಿದ್ದ ಅವಳನ್ನು 'ಪದ್ಮಿ' ಎಂದು ಮಾವ ಕರೆಯುತ್ತಿದ್ದ. ಉಳಿದಂತೆ ನಮ್ಮ ಕುಟುಂಬ ಪರಿಸರದ ಹಿರಿಯ ಗಂಡಸರು ಯಾರೂ ಹೆಂಡತಿಯನ್ನು ಹೆಸರಿನಿಂದ ಕರೆಯುತ್ತಿರಲಿಲ್ಲ. ಅಪ್ಪ 'ಏಯ್..' ಎಂದರೆ ಅದು ಅವ್ವನನ್ನು ಉದ್ದೇಶಿಸಿದಂತೆ ಎಂದು ಅರ್ಥವಾಗುತ್ತಿತ್ತು. ನನ್ನ ಅಣ್ಣಂದಿರು ಕೂಡ ತಮ್ಮ ಹೆಂಡತಿಯರನ್ನು, ಅವರ ಹೆಸರು ಆಧುನಿಕವಾಗಿದ್ದರೂ, ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ಅವಳನ್ನು ಕರಿ'

ಎಂದು ಎದುರಿಗಿದ್ದ ಮನೆಯ ಹುಡುಗರಿಗೆ ಹೇಳಿದರೆ ಅದು ಅವರ ಹೆಂಡತಿಯನ್ನು ಉದ್ದೇಶಿಸಿದ ಆದೇಶ ಎಂಬುದು ಅರ್ಥವಾಗುತ್ತಿತ್ತು. (ಅದೇ ಸಾಂಪ್ರದಾಯಿಕ ವರ್ತನೆ ನನ್ನಲ್ಲಿಯೂ ಉಳಿದಿದ್ದಕ್ಕೆ ಎಷ್ಟೋ ಸಲ ಕಳತ್ರ ಸಮಸ್ಯೆಯನ್ನು ನಾನು ಎದುರಿಸಿರುವುದು ಬೇರೆಯೇ ಸಂಗತಿ. ತಿಮ್ಮಪ್ಪನಿಗೆ ಅದು ಸಮಸ್ಯೆಯಾಗಿಲ್ಲ. ಏನಿದ್ದರೂ ಅವನು ನೇರವಾಗಿ 'ದಯಾ...' ಎಂದೇ ಮಾತಿಗೆ ಆರಂಭಿಸಿ ತನ್ನ ಕುಟುಂಬಸೌಖ್ಯವನ್ನು ರಕ್ಷಣೆ ಮಾಡಿಕೊಂಡಿದ್ದಾನೆ).

ತಿಮ್ಮಪ್ಪನ ಅತ್ತೆಯೊಬ್ಬರಿದ್ದರು. ಅವರೇ ಶೇಷತ್ತೆ. ಅವರು ಬಡಿಯನಾಯ್ಕರ ಅಕ್ಕ. ಆಕೆಯೊಂದಿಗೆ ತಿಮ್ಮಪ್ಪನಿಗೆ ಸಲಿಗೆ. ಮನೆಯಲ್ಲಿ ಹಿರಿಯ ಜೀವವಾಗಿ ಎಲ್ಲರಿಂದಲೂ ಗೌರವ ಪಡೆಯುತ್ತಿದ್ದ ಶೇಷತ್ತೆಗೆ ಊರಲ್ಲಿ ಯಾರಿಗೂ ಅಂಜದ ಬಡಿಯನಾಯ್ಕರು ತಗ್ಗಿ ಬಗ್ಗಿ ನಡೆಯುತ್ತಿದ್ದುದನ್ನು ತಿಮ್ಮಪ್ಪ ಮಾತಿನ ಮಧ್ಯೆ ಹೇಳುತ್ತಿದ್ದ. ನಮ್ಮ ಮನೆಯ ವ್ಯವಹಾರಗಳೂ ಮಾತಿನ ಮಧ್ಯೆ ಸುಳಿಯುತ್ತಿದ್ದವು. ನಾನು ಐದು ವರ್ಷ ಆಶ್ರಯ ಪಡೆದಿದ್ದ ಹುಳುಗದ್ದೆ ಮಾವನ ಸಾಹಸಗಳು, ಕೆಲಸ ಕಾರುಬಾರುಗಳು ಮಾತಿನ ಸರಕಾಗುತ್ತಿದ್ದವು. ಅವುಗಳಲ್ಲಿ ಟೀಕೆಗಳೂ, ಟಿಪ್ಪಣಿಗಳೂ ಇರುತ್ತಿದ್ದವು. ಮಾತಿನ ಮಧ್ಯೆ ನಾವು ಮುಳುಗಿದ್ದಾಗ ಕೆಲಸ ಮುಗಿಸಿ ಮನೆಗೆ ಊಟಕ್ಕೆ ಬರುತ್ತಿದ್ದ ಬಡಿಯನಾಯ್ಕರು ನನ್ನ ನೋಡಿ ನಕ್ಕು 'ಲಕ್ಷ್ಮಣ, ಎಲ್ಲಾ ಚೆನ್ನಾಗಿದಾರ, ಈಗ ಬಂದ್ಯ?' ಎಂದು ವಾಡಿಕೆಯ ಕುಶಲ ವಿಚಾರಿಸುತ್ತಿದ್ದರು. ಅವರು ಬಂದಾಗ ದನಿ ತಗ್ಗಿಸುತ್ತಿದ್ದ ನಾವು ಅವರು ಜಗುಲಿಯಿಂದ ಮರೆಯಾಗುತ್ತಲೂ ನಮ್ಮ ಪ್ರಪಂಚಕ್ಕೆ ಮರಳುತ್ತಿದ್ದೆವು. ನಮ್ಮ ಮಾತುಕತೆಯಲ್ಲಿ ಸಮಾನ ಆಸಕ್ತಿಯ ಸಂಗತಿಗಳೇ ಆದ್ಯತೆ ಪಡೆಯುತ್ತಿದ್ದವು. ಔಪಚಾರಿಕವಾಗಿ ಕಾಲೇಜಿನ, ಓದಿನ, ಹಾಸ್ಟಲು ಗೆಳೆಯರ ವಿಷಯಗಳು ಪ್ರಸ್ತಾಪವಾಗುತ್ತಿದ್ದವು. ಆದರೆ, ಅವೆಲ್ಲ ಕ್ಷಣ ಕಾಲ ಗೋಚರಿಸಿ ಮರೆಯಾಗಿ ಬಿಡುತ್ತಿದ್ದವು. ನಮ್ಮ ಸುತ್ತಲಿನ, ಸಾಮಾಜಿಕ ವಿದ್ಯಮಾನಗಳು ಯಾವುಯಾವುದೋ ರೂಪದಲ್ಲಿ ಪ್ರಾಮುಖ್ಯತೆ ಪಡೆಯುತ್ತಿದ್ದವು.

ಮನೆಯಲ್ಲಿ ಕುಳಿತು ಬೇಸರವಾಗಿ ಮೆಲ್ಲಗೆ ಹೊರಟು ಪೇಟೆಯ ಒಳಹಾದಿಯಲ್ಲಿ ಗದ್ದೆ ಹರದ ಬಳಿ ಬಂದು ಮಾತನ್ನು ಮುಂದುವರಿಸುತ್ತಿದ್ದೆವು. ಪೇಟೆಯ ವ್ಯಾಪ್ತಿಯನ್ನು ಮೀರಿ ಉತ್ತರ ದಿಕ್ಕಿನಲ್ಲಿ ದೂರ ದೂರಕ್ಕೆ ವಿಸ್ತರಿಸಿದ ಗದ್ದೆ ಹರವನ್ನು ನೋಡಿ ತಿಮ್ಮಪ್ಪ 'ಇದೆಲ್ಲ ಒಂದು ಕಾಲದಲ್ಲಿ ಬರುವೆ ಮನೆತನದ ಆಸ್ತಿಯೇ ಆಗಿತ್ತು..' ಎಂದು ಸೂಚಿಸಿದರೆ ಮಾತು ಆ ದಿಕ್ಕಿನಲ್ಲಿ ಹರಿಯುತ್ತಿತ್ತು. ನಾವಿದ್ದ ಕಡೆಯ ಮನೆದಳದಲ್ಲಿ ಅಲ್ಲಲ್ಲಿ ಹುಲ್ಲಿನ ಮನೆಗಳಿದ್ದು ಅವೆಲ್ಲವೂ ತಿಮ್ಮಪ್ಪನ ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳ ಮನೆಗಳಾಗಿದ್ದವು. ಗದ್ದೆ ಹರದ ಆಚೆ ಬದಿಯಲ್ಲೂ ಕೆಲವು ಮನೆಗಳು ಅಲ್ಲಲ್ಲಿ ಹರಡಿಕೊಂಡಿದ್ದುದನ್ನು ನೋಡಿ 'ಅವೆಲ್ಲ ನಿಮ್ಮವರ ಮನೆಗಳಾ?' ಎಂದು ಕೇಳಿದ್ದೆ. ಇಲ್ಲ, ನಮ್ಮವರ ಮನೆಗಳೆಲ್ಲ ಈಚೆ ಇದಾವೆ. ಆ ಕಡೆ ಇರೋವೆಲ್ಲ ಬಡಿಗೇರರು, ಕೊರಮರು, ಜಲಗಾರರವು' ಎಂದಿದ್ದ. ನಾನು ಕೇಳದೇ ಇದ್ದರೂ ತನ್ನದೇ ಮನೆತನದ ಒಂದಿಷ್ಟು ವಿವರಗಳನ್ನು ಅವನು ತಿಳಿಸಿದ.

'ಶೇಷತ್ತೆಯನ್ನು ಗಂದ್ರಳ್ಳಿ ಕಡೆ ಕೊಟ್ಟಿತ್ತು. ಅವಳ ಗಂಡ ಮೇಷ್ಟರು. ಬ್ರಿಟಿಷ್ ಕಾಲದ ಮೇಷ್ಟರು. ಇಲ್ಲಿ ಎಲ್ಲ ಸತ್ತು ಕೆಟ್ಟು ಹೋಗಿದ್ದಾಗ ಒಂದು ಬೆಳಿಗ್ಗೆ ಶೇಷತ್ತೆ ಗಂಡ ಬಂದು ನೋಡ್ತಾನೆ; ಮನೆ ಬಾಗಿಲು ಹಾರು ಹೊಡೆದು ಹೋಗಿದೆ. ಅಪ್ಪ ಸಣ್ಣ ಕೂಸಂತೆ. ದೊಡಪ್ಪ ಸ್ವಲ್ಪ ದೊಡ್ಡಗೆ ಇದ್ದವನು. ಸುತ್ತ ದೊಡ್ಡವರು ಅಂತ ಯಾರೂ ಕಾಣಲಿಲ್ಲ. ಥೇ ಅಂತ ಇಬ್ಬರು ಹುಡುಗರನ್ನೂ ಹೊತ್ತುಕೊಂಡು ಊರಿಗೆ ಒಯ್ದನಂತೆ. ಹಾಗೆ ಅಕ್ಕನ ಆರೈಕೆಯಲ್ಲಿ ಇಬ್ಬರೂ ಬೆಳೆದರು. ಅಲ್ಲಿ, ಗಂದ್ರಳ್ಳಿಯಲ್ಲಿ ಕೂಲಿಮಠಕ್ಕೆ ಅಕ್ಷರ ಕಲಿಯುವುದಕ್ಕೆ ಹಾಕಿದರೆ ಅಪ್ಪ ಕಳ್ಳಬಿದ್ದು ಜೇನಿಗೆ ಮರ ಹತ್ತಿ ತುದಿಯಲ್ಲಿ ಕುಳಿತುಕೊಳ್ಳುತ್ತಿದ್ದನಂತೆ. ದೊಡಪ್ಪ ಚೆನ್ನಾಗಿ ಕಲಿತ. ಅಪ್ಪ

ಹುಡುಗನಾಗಿದ್ದಾಗಲೇ ಬೇಸಾಯದ ಕೆಲಸಗಳಲ್ಲಿ ತೊಡಗಿಕೊಂಡ. ಶೇಷತ್ತೆ ಗಂಡ ಇಲ್ಲಿನ ಪರಿಸ್ಥಿತಿಯನ್ನು ವಿಚಾರಿಸಿ ನೋಡಿದರೆ ಬೈಂದೂರು ಗೌಡರಿಗೆ ಇವರಿಗೆ ಬಂದಿದ್ದ ಗದ್ದೆ ತೋಟವೆಲ್ಲ ದೀಡಾಗಿತ್ತಂತೆ. ಅಪ್ಪನಿಗೂ ದೊಡಪ್ಪನಿಗೂ ಹದಿನೆಂಟು ವರ್ಷ ಆಗುತ್ತಲೂ ಸಾಗರ ಕೋರ್ಟಿನಲ್ಲಿ ಮೈನರ್ ವ್ಯಾಜ್ಯ ಹಾಕಿಸಿದನಂತೆ. ಬ್ರಿಟಿಷರ ಕಾಲ. ಬೇಗ ಬೇಗ ವಿಚಾರಣೆ ನಡೆದು ಎಲ್ಲ ಆಸ್ತಿಯೂ ವಾಪಸು ಬಂತು. ಆಗ ಶೇಷತ್ತೆ ಎಚ್ಚರ ವಹಿಸಿ 'ದೊಡ್ಡವನು ಅಕ್ಷರ ಕಲಿತಿದ್ದಾನೆ, ನಾಳೆ ಮೋಸ ಮಾಡಬಹುದು' ಅಂತ ಯೋಚನೆ ಮಾಡಿ ಎಲ್ಲಾ ಜಮೀನನ್ನೂ ಅಪ್ಪನ ಹೆಸರಿಗೇ ಖಾತೆ ಮಾಡಿಸಿದಳಂತೆ...'

'ನಮ್ಮ ಮನೆತನದವರೇ ಬೈಂದೂರು ಗೌಡರಿಂದ ನೂರೋ ಇನ್ನೂರೋ ರೂಪಾಯಿ ಸಾಲ ಪಡೆದು ಹದಿನೈದು ಇಪ್ಪತ್ತು ಎಕರೆ ತರಿ ಜಮೀನು, ಎರಡು ಎಕರೆ ಬಾಗಾಯ್ತು ಜಾಗವನ್ನು ದೀಡು ಮಾಡಿ ಕೊಟ್ಟಿರಬೇಕು. ಗೌಡರು ಅವನ್ನು ಇವರಿಗೇ ಸಾಗು ಮಾಡಲು ಬಿಟ್ಟು ಪ್ರತಿ ವರ್ಷ ಗೇಣಿ ಬತ್ತ, ಅಡಿಕೆ ಅಳೆಸಿಕೊಂಡು ಹೋಗುತ್ತಿದ್ದರು. ಶೇಷತ್ತೆ ಗಂಡ ಯಾವಾಗ ಮೈನರ್ ವ್ಯಾಜ್ಯ ಹಾಕಿಸಿದರೋ ಕೋರ್ಟು ಹಿಂದೆ ಮಾಡಿದ್ದ ದೀಡನ್ನು ರದ್ದು ಮಾಡಿ ಮೂಲ ವಾರಸುದಾರರಿಗೆ ಆಸ್ತಿಯನ್ನು ಹಸ್ತಾಂತರ ಮಾಡುವುದಕ್ಕೆ ಆದೇಶ ಕೊಟ್ಟಿತು. ಅದರಂತೆ ನಮ್ಮ ಮನೆತನದ ಆಸ್ತಿ ಉಳಿಯಿತು... ಆಮೇಲೆ ಅಪ್ಪ, ದೊಡಪ್ಪ ಬರುವೆಗೆ ಬಂದು ನಿಂತರು. ವಿದ್ಯೆ ಕಲಿತಿದ್ದ ದೊಡಪ್ಪ ಮನೆ ಯಜಮಾನಿಕೆಗೆ ನಿಂತ. ಮೊದಲಿಂದ ದುಡಿಮೆಯಲ್ಲಿ ಇದ್ದ ಅಪ್ಪ ಅಣ್ಣನಿಗೆ ಬೆಂಬಲವಾಗಿ ಗದ್ದೆ ತೋಟದಲ್ಲಿ ದುಡಿಯತೊಡಗಿದ...'

**ದೊಡ್ಡಣ್ಣನ ಯಜಮಾನಿಕೆ**

ತಿಮ್ಮಪ್ಪ ನೀಡಿದ್ದ ವಿವರಗಳು ನಮ್ಮ ಮನೆತನದ ನಡವಳಿಕೆಗಳಿಗಿಂತ ಭಿನ್ನವಾಗಿರಲಿಲ್ಲ. ಅಪ್ಪನ ಯಜಮಾನಿಕೆಯಲ್ಲಿ ಕೊಡಸೆಯ ದೊಡ್ಡ ಮನೆ ಇದ್ದುದು, ನಾನು ಹುಟ್ಟಿದ ಮರುವರ್ಷವೇ ಎಲ್ಲ ಪಾಲು ಮಾಡಿಕೊಂಡು ತಮಗೆ ಸಿಕ್ಕಿದ ಗದ್ದೆ ತೋಟಗಳಿಗೆ ಹತ್ತಿರದಲ್ಲಿ ಮನೆಗಳನ್ನು ಕಟ್ಟಿಕೊಂಡದ್ದು ನನಗೆ ಸ್ವಲ್ಪ ಸ್ವಲ್ಪ ಗೊತ್ತಿತ್ತು. ಅವನು ತನ್ನ ಕುಟುಂಬದ ವಿವರ ಹೇಳಿದ ಮೇಲೆ ನಾನೂ ನಮ್ಮ ಮನೆಯ ತೋಟಗದ್ದೆಗಳನ್ನು ಯಜಮಾನಿಕೆ ನಡೆಸುತ್ತಿದ್ದ ದೊಡಪ್ಪ ಜಂಬಳ್ಳಿ ಗೌಡರಿಗೆ ದೀಡು ಮಾಡಿ ಸತ್ತಾಗ, ಅನಿರೀಕ್ಷಿತವಾಗಿ ಯಜಮಾನಿಕೆಯ ಹೊಣೆ ಹೊತ್ತ ಅಪ್ಪ ಅದನ್ನು ಕಂತುಗಳಾಗಿ ಪರಿವರ್ತಿಸಿ ಈಗಲೂ ಪ್ರತಿ ವರ್ಷ ಇನ್ನೂರೈವತ್ತು ರೂಪಾಯಿಗಳಂತೆ ಮರುಪಾವತಿ ಮಾಡುತ್ತಿರುವುದನ್ನೂ ಹೇಳಿದೆ. 'ನಿನ್ನ ದೊಡಪ್ಪನಿಗೆ ಕೊಟ್ಟದ್ದು ನಮ್ಮ ಮನೆಯ ಹೆಣ್ಣು, ಬಿಳಗತ್ತೆ. ಇಲ್ಲೇ ಇದಾನಲ್ಲ, ಟೀಕಣ್ಣ ಅವನ ಅತ್ತೆ ಅವಳು. ಕಮಲಬಾವ ಅವಾಗವಾಗ ನಮ್ಮ ಮನೆಗೆ ಬಂದು ಹೋಗುತ್ತಾನೆ' ಎಂದು ನಮ್ಮೂರಿನ ಇತರ ಬಂಧುಗಳು ಇಟ್ಟುಕೊಂಡ ಒಡನಾಟದ ಬಗ್ಗೆ ಹೇಳಿದ.

ಮಾತಿನ ಮಧ್ಯೆ ಹೊತ್ತು ಮುಳುಗುವ ಹಂತಕ್ಕೆ ಬಂದದ್ದು ಅರಿವಿಗೆ ಬಂದು ನಾನು ಹೊರಡುತ್ತಿದ್ದೆ. ನನ್ನನ್ನು ಕಳಿಸಲು ಅವನು ಕೆರೆ ದಂಡೆಯವರೆಗೂ ಬರುತ್ತಿದ್ದ. ಕೆಲವೊಮ್ಮೆ ಬರ್ಮನ ಗುಡಿ ಪಕ್ಕದಲ್ಲಿರುವ ಈಶ್ವರ ದೇವಸ್ಥಾನದವರೆಗೂ ಬರುತ್ತಿದ್ದ. ಅಲ್ಲಿಂದ ಸೈಕಲ್ ಹತ್ತಿ ಸರ್ಕಾರಿ ರಸ್ತೆಗೆ ಬಂದು ಊರು ಕಡೆ ಸಾಗುತ್ತಿದ್ದೆ. ಅರ್ಧ ಮುಕ್ಕಾಲು ಗಂಟೆಯಲ್ಲಿ, ಮನೆ ಹಿಂದಿನ ಕಾಡಿನಲ್ಲಿ ಜೀರುಂಡೆಗಳ ಕರ್ಕಶ ಧ್ವನಿ ತಾರಕಸ್ಥಾನಕ್ಕೆ ಏರುತ್ತಿದ್ದ ಹಿನ್ನೆಲೆಯಲ್ಲಿ ಬ್ಯಾಣದ ಬೇಲಿಗೆ ಹಾಕಿದ್ದ ಉಣುಗೋಲು ಬಳಿ ಸೈಕಲ್ಲು ನಿಲ್ಲಿಸುತ್ತಿದ್ದೆ. ಉಣುಗೋಲು ತೆಗೆದು ಸೈಕಲ್ ದಾಟಿಸಿದವನು ಮತ್ತೆ ಉಣುಗೋಲು ಹಾಕಿ ಮನೆ ಸೇರುತ್ತಿದ್ದೆ.

ಬೆಂಗಳೂರಿನಲ್ಲಿ ಓದುತ್ತಿದ್ದ ಕಾಲೇಜು ವಿದ್ಯಾರ್ಥಿ ಎಂಬ ವಿನಾಯಿತಿ ಮನೆಯಲ್ಲಿ ಇದ್ದುದರಿಂದ ನಾನು ರಜೆ ಅವಧಿಯಲ್ಲಿ ಮನೆಕೆಲಸದಲ್ಲಿ ಕೈ ಹಾಕಬೇಕು ಎಂಬ ನಿರೀಕ್ಷೆಯನ್ನು ಅಪ್ಪನಾಗಲೀ, ಅಣ್ಣಂದಿರಾಗಲೀ ಇಟ್ಟುಕೊಂಡಿರಲಿಲ್ಲ. ಮನೆ ಸೇರಿದವನು ಮೆತ್ತು ಹತ್ತಿ ನನ್ನದೇ ಪ್ರಪಂಚದಲ್ಲಿ ಮುಳುಗುತ್ತಿದ್ದೆ. ಮೆತ್ತಿನ ನಮ್ಮ ವಿಶ್ರಾಂತಿ ಕೋಣೆಯಲ್ಲಿ ನನ್ನ ತಮ್ಮನೂ ಜೊತೆಯಾಗುತ್ತಿದ್ದ. ಅವನು ಪೇಟೆಯ ಹೈಸ್ಕೂಲಿಗೆ ಮನೆಯಿಂದ ಹೋಗಿ ಬರುತ್ತಿದ್ದ. ದಸರಾ ರಜೆಯಲ್ಲಿ ಅವನೂ ಮನೆಯಲ್ಲಿ ಇರುತ್ತಿದ್ದ. ನಾನು ತಿಮ್ಮಪ್ಪನನ್ನು ಹುಡುಕಿಕೊಂಡು ಬರುವೆಗೆ ಹೋಗುತ್ತಿದ್ದರೆ ಅವನು ಮನೆಯ ಬದಿಯಲ್ಲಿ ಸುತ್ತಾಡಿಕೊಂಡು ಇರುತ್ತಿದ್ದ.

ಆಗ ನಮ್ಮ ಮನೆಯಲ್ಲಿ ದೊಡ್ಡಣ್ಣನ ಯಜಮಾನಿಕೆ ಮುಂದುವರಿದಿತ್ತು. ಎರಡನೇ ಅಣ್ಣ ಮತ್ತು ಮೂರನೇ ಅಣ್ಣ ಬೇಸಾಯದ ಕೆಲಸಕ್ಕೆ ಇದ್ದರು. ದೊಡ್ಡ ಮನೆಯ ಯಜಮಾನಿಕೆ ನಡೆಸಿದ್ದ ಅಪ್ಪ ಅವ್ವನೊಂದಿಗೆ ಮನೆಯ ಅಗ್ರಭಾಗದ ಕೋಣೆಯಲ್ಲಿ ನಿವೃತ್ತನಂತೆ ಮನೆಯ ಯಾವತ್ತೂ ವ್ಯವಹಾರಗಳಲ್ಲಿ ಕೈ ಹಾಕದೆ ಇರುತ್ತಿದ್ದ. ಅವ್ವನಿಗೆ ಅಡುಗೆ ಮನೆಯ ಉಸ್ತುವಾರಿ ಮುಂದುವರಿದಿತ್ತು. ಹಿರಿಯ ಮೂವರು ಸೊಸೆಯಂದಿರು ಪಾಳಿಯ ಮೇಲೆ ಒಟ್ಟು ಸಂಸಾರದ ಅಡುಗೆ ಕೆಲಸ ನಿರ್ವಹಿಸುತ್ತಿದ್ದರು. ಅಪ್ಪನ ಲೆಕ್ಕಾಚಾರ ಸ್ಪಷ್ಟವಾಗಿತ್ತು: 'ಪಾಲಿಗೆ ಬಂದದ್ದು ಹಿಂದಿನ ದೊಡ್ಡ ಮನೆಯಲ್ಲಿ ನಾಲ್ಕಾಣೆ ಪಾಲು. ಅದರಲ್ಲಿ ಆರು ಜನ ಗಂಡುಮಕ್ಕಳು ಗೆಯ್ದು ಜೀವನ ಮಾಡುವುದು ಕಷ್ಟ. ಆದ್ದರಿಂದ ಕೊನೆಯ ಮೂವರು ಓದಿ ಏನಾದರೂ ನೌಕರಿ ಹಿಡಿದುಕೊಳ್ಳಲಿ.' ಆದ್ದರಿಂದಲೇ ನನಗೆ ಹೈಸ್ಕೂಲು ಓದಿಸಲು ತನ್ನ ಅಪರ ವಯಸ್ಸಿನಲ್ಲಿಯೂ ತೆಂಗಿನ ಮರ ಹತ್ತಿ ಇಳಿಯುವ ಕಠಿಣ ಪರಿಶ್ರಮಕ್ಕೆ ಒಡ್ಡಿಕೊಂಡಿದ್ದ. ಅಪ್ಪನನ್ನು ಮೊದಲಿನಿಂದಲೂ ಅನುಸರಿಸುತ್ತಿದ್ದ ಅವ್ವ ಮಕ್ಕಳ ವಿದ್ಯೆ, ಉದ್ಯೋಗ ಇತ್ಯಾದಿ ವಿಷಯಗಳಲ್ಲಿ ಅವನು ಹೇಳಿದ್ದನ್ನು ಪಾಲಿಸುತ್ತಿದ್ದರು. ನಾಲ್ಕನೆಯ ಅಣ್ಣ ಧಾರವಾಡದಲ್ಲಿ ಕೃಷಿ ಪದವಿ ಓದುತ್ತಿದ್ದ. ಅವನಿಗೆ ಟ್ರೈಮಿಸ್ಟರ್ ಪದ್ಧತಿ ಇದ್ದ ಕಾರಣ ನಮ್ಮ ದಸರಾ ರಜೆ ಇದ್ದಾಗ ಬರಲಾಗುತ್ತಿರಲಿಲ್ಲ. ಅವನಿಗೆ ರಜೆ ಇದ್ದಾಗ ನಮಗೆ ಕಾಲೇಜು ಇರುತ್ತಿತ್ತು. ಆದರೂ ವರ್ಷದಲ್ಲಿ ಒಟ್ಟಾಗಿ ಸೇರುವ ಅವಕಾಶ ಸಿಗುತ್ತಿತ್ತು. ಆಗಂತೂ ಅವ್ವನಿಗೆ ಸಂಭ್ರಮ. ಮಕ್ಕಳೆಲ್ಲ ಮನೆಯಲ್ಲಿ ಇದ್ದಾರೆ ಎಂಬ ಸಮಾಧಾನದ ಸಡಗರ.

ಬರುವೆಯಲ್ಲಿ ತಿಮ್ಮಪ್ಪ ಹೇಳಿದ ಬಡಿಯನಾಯ್ಕರ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ನನಗೆ ಮನೆಯಲ್ಲಿ ಅಪ್ಪನ ಬಾಲ್ಯದ ದಿನಗಳನ್ನು ಕಲೆ ಹಾಕುವ ಮನಸ್ಸು. ಅದಕ್ಕೆ ಕೈಯಲ್ಲಿ ಬರೆಯುವ ಪುಸ್ತಕ ಹಿಡಿದು ಸಿದ್ಧ ಪ್ರಶ್ನೆಗಳನ್ನು ಇಟ್ಟುಕೊಂಡು ಅಪ್ಪನಲ್ಲೋ, ಅವ್ವನಲ್ಲೋ ಪ್ರಶ್ನೆ ಕೇಳಿ ಉತ್ತರ ಪಡೆಯುವ ಕ್ಷೇತ್ರಕಾರ್ಯದ ಮಾದರಿಯನ್ನು ಅನುಸರಿಸುವ ಸ್ಥಿತಿ ಇರಲಿಲ್ಲ. ಮೊದಲಿಂದಲೂ ಅಪ್ಪನಲ್ಲಿ ಸಲಿಗೆ ಇರಲಿಲ್ಲ. ಹಾಗೇನಾದರೂ ಮಾಡಿದ್ದರೆ 'ಅದೆಲ್ಲ ನಿಂಗ್ಯಾಕೋ ಮಾರಾಯ..?' ಎಂದು ಅಪ್ಪನೇ ಲಘುವಾಗಿ ಹೇಳಿ ಬಿಡುತ್ತಿದ್ದ. ಅವನಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳುವ ಧೈರ್ಯವೂ ನನಗೆ ಇರಲಿಲ್ಲ. ವಾಡಿಕೆಯ ಸಂಭಾಷಣೆಯಲ್ಲಿ, ಮಾತಿನ ಲಹರಿಯಲ್ಲಿ ಮಾಹಿತಿ ಕಲೆ ಹಾಕುವುದೇ ಪ್ರಶಸ್ತ ಮಾರ್ಗ ಎನ್ನಿಸಿತ್ತು. ಅವ್ವನ ಬಳಿ ಮಾತಿನ ಮಧ್ಯೆ ಹಿಂದಿನ ದಿನಗಳ ನೆನಪುಗಳನ್ನು ಕೆದಕಬಹುದಿತ್ತು. ನಾವೆಲ್ಲ ಒಟ್ಟಿಗೆ ಕಲೆತಾಗ ರಾತ್ರಿ ಊಟದ ನಂತರ ಅಡುಗೆ ಮನೆಯಲ್ಲಿಯೇ ಚಿಮಿಣಿ ದೀಪದ ಸುತ್ತ ಕುಳಿತು ಎಲೆ ಅಡಿಕೆ ಹಾಕುವ ವಾಡಿಕೆ ಇತ್ತು. ಆಗ ಏನೆಲ್ಲ ಸಂಗತಿಗಳೂ ಮಾತಿನಲ್ಲಿ ಬರುತ್ತಿದ್ದವು. ನಾನು ಅದೇ ಸಂದರ್ಭವನ್ನು ಬಳಸಿಕೊಂಡೆ. ನಮ್ಮ ರಾತ್ರಿಯ ಬೈಠಕ್‌ಗೆ ಅನೇಕ ಸಲ ದೊಡ್ಡಣ್ಣನೂ(ರಾಮಣ್ಣ), ಎರಡನೇ ಅಣ್ಣ ಟೋಪಣ್ಣನೂ ಸೇರುತ್ತಿದ್ದರು. ಸಣ್ಣಣ್ಣ ಮೂರನೇ ಅಣ್ಣ. ಅವನಲ್ಲಿ ನಾವು ಕಿರಿಯರೆಲ್ಲರಿಗೂ ಹೆಚ್ಚು ಸಲಿಗೆ ಇದ್ದ ಕಾರಣ

ಅವನೂ ಇರುತ್ತಿದ್ದ. ಟೋಪಣ್ಣ ಯಕ್ಷಗಾನದಲ್ಲಿ ಪರಿಶ್ರಮ ಇದ್ದವನು. ಭಾಗವತನಾಗಿ ಅವನು ಊರಿನಲ್ಲಿ ಗೌರವ ಪಡೆದಿದ್ದವನು. ಅಪ್ಪನ ದೃಷ್ಟಿಯಲ್ಲಿ ಅದು ಅಷ್ಟೇನೂ ಮಹತ್ವದ ಸಂಗತಿ ಆಗಿರಲಿಲ್ಲ. 'ಮೊದಲು ನಿಮ್ಮ ನಿಮ್ಮ ಹಾರ್‍ಯ ಮಾಡಿ, ಆಮೇಲೆ ಏನು ಬೇಕಾದರೂ ಮಾಡಿ' ಎಂದು ಹೇಳುತ್ತಿದ್ದ ಅವನದು ಸಂಪೂರ್ಣ ವಾಸ್ತವಿಕ ದೃಷ್ಟಿಯೇ ಆಗಿತ್ತು. ಅಡುಗೆ ಮನೆಯಲ್ಲಿ ಕುಳಿತು ಊಟ ಮುಗಿಸಿದವನು ನೇರವಾಗಿ ಜಗುಲಿಗೆ ಬರುತ್ತಿದ್ದ. ಅಲ್ಲಿ ಎಲೆ ಅಡಿಕೆ ಹಾಕಿ ಅದನ್ನು ಸವಿದು, ಉಗುಳಿ ಬಾಯಿ ಮುಕ್ಕಳಿಸಿದ ಮೇಲೆ ಹಾಸಿಗೆ ಸೇರುತ್ತಿದ್ದ. 'ಯಾವುದೇ ಕೆಲಸ ಇಲ್ಲದೆ ತಡರಾತ್ರಿಯವರೆಗೆ ದೀಪ ಉರಿಸಿದರೆ ಚಿಮಿಣಿ ಎಣ್ಣೆ ಹಾಳು' ಎಂಬ ಸಕಾರಣ ಆಕ್ಷೇಪವನ್ನೂ ಮಾಡುತ್ತಿದ್ದ. ಆದ್ದರಿಂದ ನಾವೆಲ್ಲ ಮಕ್ಕಳು ಅಡುಗೆ ಮನೆಯಲ್ಲಿಯೇ ರಾತ್ರಿಯ ಬೈಠಕ್ ಮುಂದುವರಿಸುತ್ತಿದ್ದೆವು.

**ಅಪ್ಪನ ನೆನಪು**

ಅಪ್ಪ 1905ರ ಮೇ 5 ರಂದು ಹುಟ್ಟಿದ್ದಂತೆ. ಕುವೆಂಪು 1904ರ ಡಿಸೆಂಬರ್ 29 ರಂದು ಹುಟ್ಟಿದವರು. ನಮ್ಮಲ್ಲಿಗೂ, ಕುಪ್ಪಳಿಗೂ ಮೂವತ್ತೈದು ನಲವತ್ತು ಮೈಲು ದೂರವಷ್ಟೆ. ಅಪ್ಪನನ್ನು ಓದಿಸಿದ್ದರೆ ಏನಾಗುತ್ತಿದ್ದನೋ... ಎಂಬ ಮಾತು ಆಗ ಬಂತು. ಓದಕ್ಕೆ ಬಿಟ್ಟಿದ್ದರಂತೆ. ಬಹಳ ಚುರುಕು ಇದ್ದನಂತೆ. ಅದನ್ನೇ ಅಪ್ಪನೂ ಹೇಳಿದ್ದ. ಮರಳಿನ ಮೇಲೆ ಅಕ್ಷರ ಹಾಕಿ ಕಲಿಸಿದ್ದಂತೆ. ಇಪ್ಪತ್ತರವರೆಗೆ ಮಗ್ಗಿ ಎಲ್ಲಾ ಕಲಿತಿದ್ದನಂತೆ. 'ಅಪ್ಪನ ಮುಖ ಕಂಡವನಲ್ಲ. ಹುಟ್ಟಿದ ಆರು ತಿಂಗಳಲ್ಲೆ ಅವನು ಬೈನೆ ಮರದಿಂದ ಬಿದ್ದು ಅದೇ ಹೆಳೆಯಲ್ಲಿ ಹೋದನಂತೆ. ತಂದೆ ಇಲ್ಲದ ಪರದೇಸಿ. ಚೆನ್ನಾಗಿ ಓದ್ತಾ ಇದ್ರು ಬಿಡಿಸಿ ಎತ್ತು ದನ ಕಾಯಾಕೆ ಹಾಕಿದ್ರು' ಅಂತ ಅಪ್ಪ ಯಾರ ಹತ್ರನೋ ಹೇಳಿದ್ದನಂತೆ. ಏಳೆಂಟು ವರ್ಷಕ್ಕೆಲ್ಲ ಬೇಸಾಯದ ಕೆಲಸಕ್ಕೆ ಬಂದ ಅಪ್ಪನಿಗೆ ಕೃಷಿಗೆ ಸಂಬಂಧಿಸಿದ ಕೆಲಸಗಳಲ್ಲಿ ತುಂಬ ಪರಿಣತಿ. ಮನೆತನದ ಮೂಲಪುರುಷ ಹುಚ್ಚನಾಯ್ಕ. ಅವನಿಗೆ ಮಕ್ಕಳಾಗಲಿಲ್ಲ. ಅವನಿಗೆ ಎಷ್ಟು ತಮ್ಮಂದಿರಿದ್ದರೋ ನೆನಪು ಮಾಡಿ ಈಗ ಹೇಳುವವರಿಲ್ಲ. ನಡುಗಿನಮನೆ ದೊಡ್ಡಪ್ಪ ಬಹಳ ಮೊದಲೇ ಮನೆಯಿಂದ ಬೇರೆಯಾಗಿದ್ದವನು. ಉಳಿದವರೆಲ್ಲ ಒಟ್ಟಿಗೆ ಇದ್ದರಂತೆ. 'ಅಪ್ಪ ಚಿಕ್ಕವನಿದ್ದಾಗ ಒಂದು ಸೋ ಬೇಟೆಯಲ್ಲಿ ಕನ್ನಡ ಜಿಲ್ಲೆಯಿಂದ ಬಂದಿದ್ದ ಒಬ್ಬ ಆಳಿಗೆ ಕಾಲಿಗೆ ಗುಂಡೇಟು ಬಿದ್ದು ಶಿವಮೊಗ್ಗಕ್ಕೆ ಗಾಡಿ ಕಟ್ಟಿಕೊಂಡು ಹೋಗಿದ್ದರಂತೆ. ಅಲ್ಲಿ ದೊಡ್ಡಾಸ್ಪತ್ರೆಗೆ ಸೇರಿಸಿ ಅಂತೂ ಬದುಕಿಸಿಕೊಂಡರಂತೆ. ಗಾಡಿ ಹೊಡೆಯುವವರ ಜೊತೆ ಹೋಗಿದ್ದ ಅಪ್ಪ ಅಲ್ಲಿ ದೊಡ್ಡಾಸ್ಪತ್ರೆಯಲ್ಲಿ ಪಲ್ಲಪ್ಪ ಅಂತ ಡಾಕ್ಟರು ಇದ್ದಿದ್ದರಿಂದ ಹೆಚ್ಚು ತೊಂದರೆ ಆಗಲಿಲ್ಲ ಅಂತ ಹೇಳತಿದ್ದ' ಎಂದು ಟೋಪಣ್ಣ ಹಿಂದಿನ ಘಟನೆಯೊಂದನ್ನು ನೆನಪು ಮಾಡಿದ.

ಪಲ್ಲಪ್ಪ ಅಂತ ಯಾರಾದ್ರೂ ಹೆಸರು ಇಟ್ಟುಕೊಳ್ತಾರ ಎಂಬ ಪ್ರಶ್ನೆ ಎದ್ದಿತು. ಬತ್ತದ ಅಳತೆಗೆ ಖಂಡುಗ, ಪಲ್ಲ ಎಂಬ ಮಾನಕ ಇದ್ದುದು ಗೊತ್ತಿತ್ತು. ಚಟಾಕು, ಪಾವು, ಅಚ್ಚೇರು, ಸೇರು, ಧಡಿಯ ಎಂಬ ಅಳತೆಯ ಮಾನಕಗಳು ಅಣ್ಣಂದಿರಿಗೆ ಪರಿಚಿತವಿತ್ತು. ಇಪ್ಪತ್ತು ಕೊಳಗಕ್ಕೆ ಒಂದು ಖಂಡುಗ, ಎರಡು ಖಂಡುಗಕ್ಕೆ ಒಂದು ಪಲ್ಲ ಎಂದು ಬತ್ತ ಅಳೆಯುವಾಗ ಅಣ್ಣಂದಿರು ಹೇಳುತ್ತಿದ್ದರು. 'ಪಲ್ಲಪ್ಪ ಅಂದರೆ ಪ್ರಾಯಶಃ ಎರಡು ಖಂಡುಗ ತೂಗುತ್ತಾ ಇದ್ದ ದಢೂತಿ ಆಳು ಇರಬೇಕು ಆ ಡಾಕ್ಟರು' ಎಂದು ನಾನು ಮೆಲ್ಲಗೆ ಹೇಳಿದ್ದನ್ನು ಕೇಳಿಸಿಕೊಂಡ ನನ್ನ ತಮ್ಮ 'ಹಂಗಾರೆ ಖಂಡುಗ ತೂಗ್ತಾ ಇದ್ದವನಿಗೆ ಖಂಡುಗಪ್ಪ ಅಂತ ಕರೀತಿದ್ದರೇನೋ..' ಎಂದು ಚಟಾಕಿ ಹಾರಿಸಿದ. ಟೋಪಣ್ಣ ಅದನ್ನು ಕಡೆಗಣಿಸಿ 'ಆಮೇಲೆ ಬಂದ ಗುದ್ದಮ್ಮನ

ಕಾಯಿಲೆಯಲ್ಲಿ ಮನೆಯಲ್ಲಿ ಹಿರಿಯರೆಲ್ಲ ಒಂದೇ ವರ್ಷದಲ್ಲಿ ಹೋಗಿ ಬರೀ ಹುಡುಗರೇ ಉಳಿದುಕೊಂಡರಂತೆ. ಆಗಲೇ ಅಪ್ಪ ಯಜಮಾನಿಕೆಗೆ ಬಂದಿದ್ದ ಪುಟ್ಟನಾಯ್ಕರಿಗೆ ಬಗಲಿಯಾಗಿ ಎಲ್ಲಾ ಕೆಲಸದಲ್ಲೂ ಮುಂದಾಗಿದ್ದ ಅಂತ ಹೇಳತಿದ್ದರು..' ಎಂದ. ಗುದ್ದಮ್ಮನ ಕಾಯಿಲೆ ಅಂತ ಹೇಳುತ್ತಾ ಇದ್ದುದನ್ನು ನಾನು ಹುಳುಗದ್ದೆ ಮಾವನಿಂದಲೂ ಕೇಳಿದ್ದೆ. ಅದು ಪ್ರಾಯಶಃ 1918ರಲ್ಲಿ ಬಂದಿದ್ದ ಇನ್‌ಫ್ಲೂಯೆನ್‌ಜಾ ಎಂಬ ಸಾಮೂಹಿಕ ಸಾವುಗಳ ಸಾಂಕ್ರಾಮಿಕ ರೋಗ ಇದ್ದಿರಬೇಕು. ಹುಳುಗದ್ದೆಯಲ್ಲಿ ಮಾವನ ಮನೆಯ ಅನೇಕ ಹಿರಿಯರೂ, ಹೆಂಗಸರೂ ಆಗ ಕೆಲವೇ ತಿಂಗಳಲ್ಲಿ ಸತ್ತಿದ್ದರಂತೆ. 'ಮಳೆಗಾಲದಲ್ಲಿ ಒಂದು ಜ್ವರ ಬಂತು ಅಂದ್ರೆ ಆಯಿತು, ಹೆಣ ಹೂಳಾಕೆ ಗುದ್ದು ತೆಗೆಯಾದೆ. ಆಗ ಜನ ಹೆಂಗೆ ಸಾಯ್ತಿದ್ರು ಅಂದ್ರೆ ಒಂದು ಗುದ್ದಿಗೆ ಎರಡು ಮೂರು ಹೆಣ ಹಾಕಿ ಮುಚ್ಚುತ್ತಿದ್ದರಂತೆ' ಎಂದು ನಾನು ಹುಳುಗದ್ದೆಯಲ್ಲಿದ್ದಾಗ ಮಾವ ಒಂದು ಸಂದರ್ಭದಲ್ಲಿ ನೆನಪು ಮಾಡಿಕೊಂಡಿದ್ದ.

ಮರುದಿನ ಬರುವೆಗೆ ಹೋದಾಗ ಮೊದಲು ಎತ್ತಿದ್ದೇ ಗುದ್ದಮ್ಮನ ಕಾಯಿಲೆಯ ವಿಷಯ. 'ಶೇಷತ್ತೆ ಅದೇ ವಿಷಯ ಎಷ್ಟೋ ಸಲ ಹೇಳಿದ್ದಾಳೆ. ನಮ್ಮ ಮನೆಯಲ್ಲೂ ಆಗ ಹತ್ತಾರು ಜನ ಕಲ್ಲಾಸ್ ಆದರಂತೆ. ಪ್ಲೇಗ್ ಬಂದಿತ್ತೋ ಏನೋ.. ಊರು ಹೊರಗಡೆ ಬಿಡಾರ ಹಾಕಿದ್ದರಂತೆ' ಅಂತ ತಿಮ್ಮಪ್ಪನೂ ಸೇರಿಸಿದ. ನಮ್ಮ ಮಾತಿನಲ್ಲಿ ಮೊದಲ ಮಹಾಯುದ್ಧದ ಕಾಲ, ಅದೇ ಹೊತ್ತಿನಲ್ಲಿ ಸಂಭವಿಸಿದ ಇನ್‌ಫ್ಲೂಯೆನ್‌ಜಾ ಕಾಯಿಲೆಯ ಅನಾಹುತಗಳು ಸುಳಿದು ಹೋದವು. ಮಧ್ಯಾಹ್ನದ ಊಟದ ನಂತರ ಪೇಟೆಯ ಕಡೆಗೆ ಹೋಗಿ ಅಲ್ಲಿಂದಲೇ ನಮ್ಮೂರಿಗೆ ಹೋದೆವು. ನನಗಿಂತಲೂ ಎರಡು ವರ್ಷ ಹಿರಿಯನಷ್ಟೇ ಅಲ್ಲದೆ ಸಾಕಷ್ಟು ತೂಕವೂ ಇದ್ದ ಅವನನ್ನು ಸೈಕಲ್ಲಿನಲ್ಲಿ ಡಬ್ಬಲ್ ರೈಡ್ ಮಾಡುವುದು, ಅದರಲ್ಲಿಯೂ ಬರುವೆ ಮೂಗುಡತಿ ಮಧ್ಯದಲ್ಲಿ ಬರುವ ವರಾನಹೊಂಡದ ಎರಡು ಏರುಗಳನ್ನು ಹತ್ತುವುದು ಆ ದಿನಗಳಲ್ಲಿ ಕಷ್ಟ ಎನಿಸುತ್ತಿರಲಿಲ್ಲ. ವರಾನಹೊಂಡದ ಭೂತನ ಬನದ ಏರನ್ನು ದಾಟಿದರೆ ಮತ್ತೆ ಸಪಾಟು ರಸ್ತೆ. ಮೂಗುಡತಿ– ಹೆದ್ದಾರಿಪುರ ಕೆಲವೇ ನಿಮಿಷಗಳ ದಾರಿ. ಅಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಸಹಪಾಠಿ ಆಗಿದ್ದ ಶಿವಣ್ಣನ ದಿನಸಿ ಅಂಗಡಿಗೆ ಒಂದು ಭೇಟಿ ಕೊಟ್ಟು ಅವನನ್ನು ಮಾತಾಡಿಸಿ ಮತ್ತೆ ಸೈಕಲ್ ಹತ್ತಿದರೆ ಮನೆಯ ಹತ್ತಿರವೇ ಇಳಿಯುವುದು. ಸಂಜೆಯ ಹೊತ್ತಿಗೆ ನಮ್ಮ ಮನೆ ಸೇರುತ್ತಿದ್ದೆವು. ಮನೆಯ ಪದ್ಧತಿಯಂತೆ ಅಡಿಗೆ ಪಾಳಿಯಲ್ಲಿದ್ದ ಅತ್ತಿಗೆ ತಿಮ್ಮಪ್ಪನಿಗೆ ಕಾಲು ತೊಳೆಯಲು ನೀರು ತಂದು ಇಡುತ್ತಿದ್ದರು. 'ಎಲ್ಲ ಚೆನ್ನಾಗಿದ್ದಾರ?' ಎಂಬ ಔಪಚಾರಿಕ ಕುಶಲ ವಿಚಾರಿಸಿ ನಿರ್ಗಮಿಸುತ್ತಿದ್ದರು. ತಿಮ್ಮಪ್ಪ ಮನೆಯ ಜಗುಲಿಗೆ ಬಂದು ಕುರ್ಚಿಯಲ್ಲಿ ಕುಳಿತ ಸುದ್ದಿ ತಿಳಿಯುತ್ತಲೇ ಒಳಗೋ, ತಮ್ಮ ಕೋಣೆಯಲ್ಲೋ ಇದ್ದ ಅವ್ವ ಬಂದು 'ತಿಮ್ಮಪ್ಪ, ಎಲ್ಲಾ ಚೆನ್ನಾಗಿದ್ದಾರ..' ಎಂದು ವಿಚಾರಿಸುತ್ತಿದ್ದರು. ಅವ್ವ ಅವನ ಎದುರಿನಲ್ಲಿಯೇ 'ಬರುವೆ ತಿಮ್ಮಪ್ಪ' ಎಂದು ಕರೆಯುತ್ತಿದ್ದರು. ಆಮೇಲೆ ಮನೆಗೆ ಒಬ್ಬೊಬ್ಬರಾಗಿ ಬರುತ್ತಿದ್ದ ಅಣ್ಣಂದಿರು ಪರಿಚಯದ ನಗು ಹರಿಸಿ ಔಪಚಾರಿಕ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು. ಸಣ್ಣಣ್ಣ ಕೊಟ್ಟಿಗೆಯಲ್ಲಿ ದನ ಕಟ್ಟುವುದೋ, ಎತ್ತುಗಳಿಗೆ ಹುಲ್ಲು ತರುವುದೋ, ಗಾಡಿ ಎತ್ತುಗಳಿಗೆ ಹುರುಳಿ ಹಾಕುವುದೋ ಮಾಡುತ್ತಿದ್ದಾಗ ಎರಡನೇ ಅಣ್ಣ ಟೋಪಣ್ಣ ತಿಮ್ಮಪ್ಪನ ಹತ್ತಿರ ಕುಳಿತು ಆಪ್ತವಾಗಿ ಮಾತಿನಲ್ಲಿ ತೊಡಗುತ್ತಿದ್ದ. ಅವನ ಜೊತೆಗೆ ತಮ್ಮ ಷಣ್ಮುಖನೂ ಸೇರುತ್ತಿದ್ದ.

ರಾತ್ರಿ ಎಲ್ಲರೊಂದಿಗೆ ಊಟ ಮುಗಿಸಿ ನಾವು ಮೆತ್ತಿಗೆ ಏರುತ್ತಿದ್ದೆವು. ಅಲ್ಲಿ ನಿದ್ದೆ ಬರುವವರೆಗೂ ಮಾತನಾಡುವುದು. ಬೆಳಗ್ಗೆ ಎದ್ದು ಮನೆಯ ಹಿಂದಿನ ಕೆರೆಯ ಕಡೆ ಸುತ್ತಾಡಿ ತೋಟದ ಮೇಲಾಸಿ ವಾಪಸು ಬಂದು ಬೆಳಗಿನ ತಿಂಡಿ ತಿಂದು ಸೈಕಲ್‌ನಲ್ಲಿ ಹೊರಡುತ್ತಿದ್ದೆವು. ನಮ್ಮ ಮನೆಯಲ್ಲಿ ಅಣ್ಣಂದಿರು ಸ್ವತಂತ್ರ

ವಹಿವಾಟಿಗೆ ಆಸಕ್ತಿ ವಹಿಸಿದ್ದು ಅಪ್ಪನ ಗಮನಕ್ಕೆ ಬಂದು ಅದನ್ನು ಉಪಶಮನ ಮಾಡುವ ಪ್ರಯತ್ನಗಳು ನಡೆಯುತ್ತಿದ್ದ ಆ ದಿನಗಳಲ್ಲಿ ಹೀಗೆ ತಿಮ್ಮಪ್ಪನಂಥ ಅತಿಥಿಗಳ ಆಗಮನ ಒಳಗುದಿಯನ್ನು ಸ್ವಲ್ಪ ಕಾಲ ನೇಪಥ್ಯಕ್ಕೆ ಸರಿಸುತ್ತಿತ್ತು. ಅದು ನನಗೆ ನೇರವಾಗಿ ತಟ್ಟುತ್ತಿದ್ದರೂ ಅದನ್ನು ಮರೆತು ಬಿಡುವುದಕ್ಕಾಗಿ ರಜೆಗೆ ಬಂದಾಗಲೂ ಮನೆಯಿಂದ ಹೊರಗಡೆ ಇರುವುದನ್ನು ಬಯಸುತ್ತಿದ್ದೆನೆಂದು ತೋರುತ್ತದೆ. ಆಗ ಪಿಯುಸಿಯಲ್ಲಿದ್ದ ನಾನು ಮನೆಯ ಹಿರಿಯರ ವೈಮನಸ್ಸು, ಭಿನ್ನಾಭಿಪ್ರಾಯಗಳ ಮಧ್ಯೆ ಪಾತ್ರಧಾರಿಗಳಾಗುವ ಮನಃಸ್ಥಿತಿಯಲ್ಲಿರಲಿಲ್ಲ. ಆದರೆ ಅಪ್ಪನಿಗೆ ನಮ್ಮ ಹಕ್ಕುದಾರಿಕೆಯನ್ನು ಸಂರಕ್ಷಣೆ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಾನು ಮತ್ತು ನಾಲ್ಕನೇ ಅಣ್ಣನ ಅನುಪಸ್ಥಿತಿಯಲ್ಲಿ ಅಂಥ ಪ್ರಯತ್ನಗಳಲ್ಲಿ ಅಪ್ಪ ನಿರತನಾಗಿರುವುದು ತಮ್ಮ ಆಗಾಗ ಬರೆಯುತ್ತಿದ್ದ ಕಾಗದಗಳಲ್ಲಿ ಗೊತ್ತಾಗುತ್ತಿತ್ತು. ಮನೆಯಲ್ಲಿನ ಒಳತೋಟಿಯನ್ನು ಮರೆಯುವುದಕ್ಕಾಗಿ ನಾನು ತಿಮ್ಮಪ್ಪನ ಆಸರೆಯನ್ನು ಬಯಸುತ್ತಿದ್ದೇನೋ.

**'ಗುತ್ತಿನಾಯಿ– ನಾಯಿಗುತ್ತಿ'**

ಪಿಯುಸಿಯ ದಸರೆ ರಜೆಯಲ್ಲಿ ಒಂದು ದಿನ ನಾನು ತಿಮ್ಮಪ್ಪನ ಮನೆಗೆ ಹೋದರೆ, ಮರುದಿನ ಅವನು ನಮ್ಮ ಮನೆಯ ಕಡೆ ಬರುತ್ತಿದ್ದ. ನಮಗೆ ಗುರುತಿದ್ದ ಗೆಳೆಯರು, ಬಂಧುಗಳು ನಮ್ಮ ಗೊತ್ತು ಎಲ್ಲೆಂದು ಕೇಳಿದರೆ ಬರುವೆಯಲ್ಲೋ ಕೊಡಸೆಯಲ್ಲೋ ಇರಬಹುದು ಎಂದು ನಮ್ಮ ನಮ್ಮ ಮನೆಯಲ್ಲಿ ಹೇಳುತ್ತಿದ್ದರು. ತಿಮ್ಮಪ್ಪ ಒಬ್ಬನೇ ಪೇಟೆಯಲ್ಲಿ ಕಂಡರೆ 'ಎಲ್ಲಿ ಲಕ್ಷ್ಮಣ?' ಎಂದು ಕೇಳುವುದೂ, ನಾನು ಒಬ್ಬನೇ ಸಿಕ್ಕಿದಾಗ 'ತಿಮ್ಮಪ್ಪ ಎಲ್ಲಿ?' ಎಂದು ಕೇಳುವುದು ಅಂದಿನ ನಮ್ಮ ಒಡನಾಟದ ಕುರಿತಾಗಿ ನಮ್ಮ ಪರಿಚಿತರಲ್ಲಿ ಇದ್ದ ಪರಿಪಾಟವಾಗಿತ್ತು. ಅದನ್ನು ಇಬ್ಬರೂ ನೆನೆಸಿಕೊಂಡು 'ಇದೊಳ್ಳೆ ನಾಯಿ ಗುತ್ತಿ, ಗುತ್ತಿ ನಾಯಿ ಕತೆಯಾಯ್ತಲ್ಲ ನಮ್ಮದು' ಎಂತ ತಮಾಷೆ ಮಾಡಿಕೊಳ್ಳುತ್ತಿದ್ದೆವು. ತಿಮ್ಮಪ್ಪನ ಸೋದರ ಮಾವನ ಮನೆಯೂ ನಮ್ಮೂರಲ್ಲಿ ಇತ್ತು. 'ತಮ್ಮ ನಮ್ಮೂರಿಗೆ ಬರ್‍ತಾನೆ, ನಮ್ಮ ಮನೆ ಕಡೆ ತಿರುಗಿ ನೋಡಾದಿಲ್ಲ' ಎಂದು ಅವನ ಸೋದರ ಮಾವನೊಬ್ಬ ಬರುವೆಗೆ ಹೋಗಿದ್ದಾಗ ತನ್ನ ಅಕ್ಕನಲ್ಲಿ (ತಿಮ್ಮಪ್ಪನ ತಾಯಿಯಲ್ಲಿ) ಅಸಮಾಧಾನ ವ್ಯಕ್ತಪಡಿಸಿದ್ದನಂತೆ. 'ಅಷ್ಟು ದೂರ ಹೋದಾಂವ, ಅಲ್ಲಿಗೂ ಒಂದು ಹೆಜ್ಜೆ ಹೋಗಿ ಬಾ' ಎಂದು ತಿಮ್ಮಪ್ಪನಿಗೂ ಆಣತಿಯಾಗಿತ್ತು. ಆದ್ದರಿಂದ ಒಮ್ಮೆ ಕೊಡಸೆಯಲ್ಲಿದ್ದಾಗ ನಮ್ಮ ಮಾತುಗಳನ್ನು ಮುಂದುವರಿಸುತ್ತಲೇ ಅವರ ಮನೆಗೆ ಹೋಗಿ ಕಾಫಿ ಕುಡಿದು ಬಂದಿದ್ದೆವು.

ದಸರೆ ರಜೆ ಮುಗಿಯುತ್ತಲೂ ತಿಮ್ಮಪ್ಪ ಕಾರ್ಕಳಕ್ಕೆ ಹೋದ. ನಾನು ಬೆಂಗಳೂರಿಗೆ ಹಿಂದಿರುಗಿದೆ. ಮತ್ತೆ ಶುರುವಾದವು ಪತ್ರ ವ್ಯವಹಾರ. ಅವೆಲ್ಲ ನಮ್ಮ ಚಿಂತನೆಗಳನ್ನು ಹಂಚಿಕೊಂಡ ಬರಹಗಳು. ಬೆಂಗಳೂರಿನ ಅಂದಿನ ನಗರ ಜೀವನದ ಪರಿಸ್ಥಿತಿಯನ್ನು ನನ್ನ ಪತ್ರಗಳಲ್ಲಿ ಬರೆಯುತ್ತಿದ್ದ ನೆನಪು. ಅದಕ್ಕೆ ಕಾರ್ಕಳದ ಪರಿಸರದ ಸಂಗತಿಗಳನ್ನು ಅವನು ಉತ್ತರ ರೂಪದಲ್ಲಿ ಬರೆಯುತ್ತಿದ್ದ. ದಸರಾ ರಜೆಯ ನಂತರ ಕ್ರಿಸ್ಮಸ್ ರಜೆ ಸಿಕ್ಕ ಸಂದರ್ಭದಲ್ಲೂ ನಮ್ಮ ಭೇಟಿ ವಾರದ ಮಟ್ಟಿನ ವಾಸ್ತವ್ಯದಲ್ಲೂ ಮುಂದುವರಿದಿತ್ತು. ರಜೆ ಮುಗಿಸಿ ನಮ್ಮ ನಮ್ಮ ಕಾಲೇಜುಗಳಿಗೆ ವಾಪಸಾದರೂ ಎಂದಿನಂತೆ ಮುಂದುವರಿದ ಪತ್ರ ವ್ಯವಹಾರ. ಮುಂದಿನ ಮೂರು ತಿಂಗಳು ಪಿಯುಸಿ ಪರೀಕ್ಷೆಯ ಗಂಭೀರ ಓದು. ಕನ್ನಡ ಮಾಧ್ಯಮದಲ್ಲಿ ಓದಿದ ಕಾರಣ ಎಸ್ಸೆಸ್ಸೆಲ್ಸಿಯಲ್ಲಿ ವಿಜ್ಞಾನ ಗಣಿತದ ವಿಷಯಗಳಲ್ಲಿ ಶೇಕಡಾ ತೊಂಬತ್ತಕ್ಕೂ ಹೆಚ್ಚಿನ ಅಂಕ ಗಳಿಸಿದ್ದ ನಾವಿಬ್ಬರೂ ಪಿಯುಸಿ ಸೇರುತ್ತಲೂ ಎದುರಾದ ಇಂಗ್ಲಿಷ್ ಮಾಧ್ಯಮದ ಕಾರಣ ಅಂತೂ ಒಂದೇ ಪ್ರಯತ್ನದಲ್ಲಿ ಪಾಸು

ಮಾಡಿಕೊಂಡೆವು. ತಿಮ್ಮಪ್ಪ ವಿಜ್ಞಾನದ ವಿದ್ಯಾರ್ಥಿಯಾಗಿ ಉಡುಪಿಯ ಎಂಜಿಎಂ ಕಾಲೇಜಿಗೆ ಸೇರಿಕೊಂಡ. ಅವನನ್ನು ಅಲ್ಲಿ ಕಾಲೇಜಿಗೆ ಸೇರಿಸಿ ಬರಲು ನಾನೂ ತಿಮ್ಮಪ್ಪನ ಅಣ್ಣ ಚುಂಗಣ್ಣನವರೊಂದಿಗೆ ಹೋಗಿದ್ದೆ. ಅವನನ್ನು ಉಡುಪಿಯಲ್ಲಿ ಬಿಟ್ಟು ವಾಪಸಾದ ಕೆಲವು ದಿನಗಳಲ್ಲಿ ನಾನು ಬೆಂಗಳೂರಿಗೆ ಬಂದು ಮೊದಲಿನಿಂದಲೂ ಇದ್ದ ಸಾಹಿತ್ಯದ ಅಭಿರುಚಿಯನ್ನು ಶಾಸ್ತ್ರೀಯ ಕಲಿಕೆಯೊಂದಿಗೆ ಉತ್ತಮಪಡಿಸಿಕೊಳ್ಳಲು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ(ಆನರ್ಸ್) ಕೋರ್ಸ್ ಸೇರಿಕೊಂಡೆ. ಆಗ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜು, ಮಹಾರಾಣಿ ಕಾಲೇಜು, ವಿಜಯಾ ಕಾಲೇಜುಗಳಲ್ಲಿ ಕೂಡ ಕನ್ನಡ ಆನರ್ಸ್ ಅಧ್ಯಯನಕ್ಕೆ ಅವಕಾಶ ಇತ್ತು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವೂ ಸೆಂಟ್ರಲ್ ಕಾಲೇಜು ಆಗಿದ್ದರಿಂದ ನನ್ನ ಆಯ್ಕೆಯ ಬಗ್ಗೆ ಅಭಿಮಾನ ಮೂಡಿತ್ತು. ಜಿ.ಎಸ್.ಶಿವರುದ್ರಪ್ಪ, ಕೆ.ಎಂ.ಕೃಷ್ಣರಾವ್, ರಂ.ಶ್ರೀ.ಮುಗಳಿ, ಎಂ.ಚಿದಾನಂದಮೂರ್ತಿ, ಹಂಪ ನಾಗರಾಜಯ್ಯ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ಕೆ.ವಿ.ನಾರಾಯಣ, ಸಿ.ವೀರಣ್ಣ, ಕೃಷ್ಣ ಪರಮೇಶ್ವರ ಭಟ್ಟ, ಹು.ಕಾ.ಜಯದೇವ್, ಎಸ್.ವಿದ್ಯಾಶಂಕರ್ ಮೊದಲಾದ ಸುವಿಖ್ಯಾತ ಸಾಹಿತ್ಯಕರು ನಮ್ಮ ಮೇಷ್ಟರುಗಳಾಗಿದ್ದರು. ಬಿ.ಎ(ಆನರ್ಸ್) ಮೊದಲ ವರ್ಷಕ್ಕೆ ಒಂದು ಇಂಗ್ಲಿಷ್ ಪಠ್ಯವೂ ಇತ್ತು. ಅದನ್ನು ಪಿ.ಲಂಕೇಶ್ ಬೋಧಿಸುತ್ತಿದ್ದರು. ಆನರ್ಸ್ ಪದವಿಯಲ್ಲಿ ಒಂದು ಸಂಸ್ಕೃತ ಪತ್ರಿಕೆಯೂ ಇತ್ತು. ಹಿರಿಯ ವಿದ್ವಾಂಸ ಲಕ್ಷ್ಮೀತಾತಾಚಾರ್ ಅವರು ತೆಗೆದುಕೊಳ್ಳುತ್ತಿದ್ದರು. ರಘುವಂಶದ ಮೊದಲ ಸರ್ಗವೋ ಎರಡನೇ ಸರ್ಗವೋ ನಮಗೆ ಪಠ್ಯವಾಗಿತ್ತು. ಹಿಂದಿಯೂ ಒಂದು ಐಚ್ಛಿಕ ವಿಷಯವಾಗಿತ್ತು. ಹಿರಿಯ ಪಂಡಿತರಾದ ಎಂ.ಕೆ.ಭಾರತೀರಮಣಾಚಾರ್ಯರು ಅದನ್ನು ಬೋಧಿಸುತ್ತಿದ್ದರು. ಪ್ರಭಾಶಂಕರ 'ಪ್ರೇಮಿ', ಜೆ.ಜೆ.ಹರಿಜಿತ್ ಎಂಬ ಹಿಂದಿ ವಿದ್ವಾಂಸರೂ ನಮಗೆ ಕೆಲವು ತರಗತಿಗಳನ್ನು ತೆಗೆದುಕೊಂಡಿದ್ದರು.

ನನ್ನ ಆನರ್ಸ್ ಪದವಿಯ ಓದು ನಮ್ಮ ರಜಾ ದಿನಗಳಿಗೆ ಮುಖ್ಯ ಗ್ರಾಸ ಒದಗಿಸಿತೆನ್ನಬೇಕು. ಬಿಎಸ್ ಸಿ ಓದಲು ಉಡುಪಿಯ ಎಂಜಿಎಂ ಕಾಲೇಜು ಸೇರಿಕೊಂಡಿದ್ದ ತಿಮ್ಮಪ್ಪ ಅಲ್ಲಿದ್ದ ಹಾಸ್ಟಲು ಕಟ್ಟಡ ಕಾಲೇಜಿನಿಂದ ಕೊಂಚ ದೂರ, ಮಳೆಗಾಲದಲ್ಲಿ ಓಡಾಡುವುದಕ್ಕೆ ತುಂಬ ಕಷ್ಟ ಎಂದು ಮನಗಂಡು ನಮ್ಮ ಹೈಸ್ಕೂಲು ಮೇಷ್ಟರು ಎಂ.ಆರ್.ಲಿಂಗರಾಜು ಅವರ ನೆರವಿನಿಂದ ಮೈಸೂರಿಗೆ ತೆರಳಿ ಸೇಂಟ್ ಫಿಲೊಮಿನಾ ಕಾಲೇಜು ಸೇರಿದ್ದ. ಅಲ್ಲಿ ಕಾಲೇಜು ಪಕ್ಕದಲ್ಲಿಯೇ ಹಾಸ್ಟಲು ಇದ್ದುದು ಅವನಿಗೆ ಅನುಕೂಲವಾಗಿತ್ತು. ಪದವಿ ಓದಿನ ಮೂರು ವರ್ಷಗಳಲ್ಲಿ ದಸರಾ, ಕ್ರಿಸ್ಮಸ್ ಮತ್ತು ಬೇಸಗೆ ರಜೆಗಳಲ್ಲಿ ನಾವು ಎಂದಿನಂತೆ ಸೇರುತ್ತಿದ್ದಾಗ ನಮ್ಮ ಮಾತುಕತೆಯೆಲ್ಲ ಸಾಹಿತ್ಯ ಕ್ಷೇತ್ರದ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ನಾನು ಆನರ್ಸ್ ಪದವಿಯಲ್ಲಿದ್ದಾಗ ಬರೆಯಲು ಆರಂಭಿಸಿದ್ದ ಸಣ್ಣ ಕಥೆಗಳು ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾಗಿ ಚರ್ಚೆಗೆ ವಸ್ತುವಾಗುತ್ತಿದ್ದವು. ಪಿ.ಲಂಕೇಶ್ ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ'ದ ಕವನಗಳು ನಮ್ಮ ವಿಶ್ಲೇಷಣೆಗೆ ಒಳಗಾಗುತ್ತಿದ್ದವು. ನವ್ಯ ಪ್ರಕಾರದ ಕಥೆ, ಕವನ, ಕಾದಂಬರಿ, ಪ್ರಾಯೋಗಿಕ ವಿಮರ್ಶೆಯ ಮಾದರಿಗಳ ಜೊತೆಗೆ ಮುದ್ದಣನ 'ರಾಮಾಶ್ವಮೇಧ', ಎರಡನೇ ನಾಗವರ್ಮನ 'ಕರ್ನಾಟಕ ಕಾದಂಬರಿ', ವಡ್ಡಾರಾಧನೆಯ ಕಥೆಗಳು ಮಾತಿಗೆ ಸರಕು ಒದಗಿಸುತ್ತಿದ್ದವು. ಸಮಕಾಲೀನ ಸಾಹಿತ್ಯದಲ್ಲಿ ಪ್ರಮುಖರಾದವರ ಕೃತಿಗಳೂ ನಮ್ಮಲ್ಲಿ ಸುಳಿದಾಡುತ್ತಿದ್ದವು. ಶಿವರಾಮ ಕಾರಂತ, ಎಸ್.ಎಲ್.ಭೈರಪ್ಪ ಅವರ ಕಾದಂಬರಿಗಳಂತೂ ಸರಿಯೇ. ಹೈಸ್ಕೂಲಿನಲ್ಲಿ ಇದ್ದಾಗಲೇ ಎನ್.ನರಸಿಂಹಯ್ಯ, ನಾಡಿಗೇರ ಕೃಷ್ಣರಾಯ, ತ್ರಿವೇಣಿ, ಅ.ನ.ಕೃ, ತರಾಸು ಮೊದಲಾದವರು ನಮಗೆ ತಮ್ಮ ಕೃತಿಗಳಿಂದ ಪರಿಚಿತರಾಗಿದ್ದರು. ಸಾಹಿತ್ಯದ ವಿದ್ಯಾರ್ಥಿಯಾಗಿದ್ದ

ನನಗೆ ಸಾಹಿತ್ಯ ಕೃತಿಗಳ ಬಗ್ಗೆ ಚರ್ಚೆ ನಡೆಸುವುದು ಅಧ್ಯಯನದ ಅಂಗವೇ ಆಗಿತ್ತು. ಆದರೆ, ಬಿ.ಎಸ್ಸಿ ಪದವಿಯಲ್ಲಿ ಗಣಿತ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಅಧ್ಯಯನ ನಡೆಸುತ್ತಿದ್ದ ತಿಮ್ಮಪ್ಪ ನನಗೆ ಅಚ್ಚರಿಯಾಗುವಂತೆ ಸಾಹಿತ್ಯ ಕೃತಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದ. ನಮ್ಮ ಭೇಟಿಯ ಅವಧಿಯಲ್ಲೆಲ್ಲ ಸಮಾಜ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಮಾತುಗಳೇ ಆವರಿಸುತ್ತಿದ್ದವು. ಅವುಗಳ ಜೊತೆಗೆ ದೇಶದ ರಾಜಕೀಯ ವಿದ್ಯಮಾನಗಳು, ನಮಗೆ ಪರಿಚಿತರಾಗಿದ್ದ ರಾಜಕೀಯ ಮುಖಂಡರ ನಡವಳಿಕೆಗಳು ಚರ್ಚೆಗೆ ಒಳಗಾಗುತ್ತಿದ್ದವು. ಜೊತೆಗೆ ನಮ್ಮ ನಮ್ಮ ಕುಟುಂಬಗಳ ಹಿರಿಯರು ಸಾಗಿ ಬಂದ ದಾರಿಯ ಪುನರವಲೋಕನವೂ ನಡೆಯುತ್ತಿತ್ತು.

* * *

**ಪೂರ್ವೇತಿಹಾಸ**

ಗುದ್ದಮ್ಮನ ಕಾಯಿಲೆಯ ನಂತರ ಕೊಡಸೆ ಮನೆಯಲ್ಲಿ ಅಪ್ಪ ಹಾಗೂ ಅವನ ವಾರಿಗೆಯವರೇ ಮನೆತನ ಮುಂದುವರಿಸುವುದಕ್ಕೆ ಉಳಿದರು. ಅಪ್ಪನಿಗೆ ಹದಿಮೂರು– ಹದಿನಾಲ್ಕು ವರ್ಷ. ಯಜಮಾನಿಕೆಯ ವಾರಸುದಾರ ಪುಟ್ಟನಾಯ್ಕರು ಎರಡೋ ಮೂರೋ ವರ್ಷ ಹಿರಿಯರು. ಅವರೊಂದಿಗೆ ಹೊಂದಿಕೊಂಡು, ಎಲ್ಲಾ ವಿಷಯಗಳಲ್ಲೂ ಬಲಗೈಯಂತೆ ದುಡಿಮೆಗೆ ನಿಂತಿದ್ದವನು ಅಪ್ಪ. ಆಗ ಬಣ್ಣ ನೋಡಿ ಹೆಸರು ಇಡುತ್ತಿದ್ದರೋ ಏನೋ. ಅಪ್ಪನಿಗಿಂತ ಎರಡು ವರ್ಷ ಚಿಕ್ಕವನಾಗಿದ್ದ ಚಿಕ್ಕಪ್ಪನ ಒಬ್ಬ ಮಗನಿಗೆ ಬಿಳಿಯ ಎಂದು ಕರೆಯುತ್ತಿದ್ದರಂತೆ. ಯಜಮಾನ ಪುಟ್ಟನಾಯ್ಕರಂತೂ ಎಲ್ಲಿಗೆ ಹೋಗುವುದಾದರೂ 'ಕರಿಯಾ..' ಎಂದೇ ಜೊತೆಗೆ ಕರೆದುಕೊಳ್ಳಬೇಕು. ಚಿಕ್ಕಪ್ಪಂದಿರೆಲ್ಲ ಗುದ್ದಮ್ಮನ ಕಾಯಿಲೆಗೆ ಬಲಿಯಾಗಿದ್ದರಿಂದ ಅವರ ಗಂಡು ಮಕ್ಕಳೆಲ್ಲ ಬೇಸಾಯದ ಕೆಲಸಕ್ಕೆ ನಿಂತಿದ್ದರು. ಚಿಕ್ಕಪ್ಪಂದಿರ ಮಕ್ಕಳೆಲ್ಲ ಮನೆತನದ ಎರಡನೇ ಪೀಳಿಗೆಯ ಹುಡುಗರು. ಕೆಲವೇ ವರ್ಷಗಳಲ್ಲಿ ಗದ್ದೆಗಳ ಪಾತ್ರ ಹೆಚ್ಚಾಗಿತ್ತು. ಹಿಂದಿನವರು ಮಾಡಿದ್ದ ಅಡಿಕೆ ತೋಟವನ್ನೂ ಸ್ವಲ್ಪ ವಿಸ್ತರಿಸಿದ್ದರು. ಪುಟ್ಟನಾಯ್ಕರು ಮೊದಲು ಮದುವೆಯಾಗಿ ನಂತರ ತಮಗೆ ಬಗಲಿಯಾಗಿ ದುಡಿಯುತ್ತಿದ್ದ ಕರಿಯನಾಯ್ಕರಿಗೆ ಹುಳುಗದ್ದೆಯಿಂದ ಹೆಣ್ಣು ತಂದರು. ದುಡಿಯಲು ಜನ ಇದ್ದರು. ಯಜಮಾನರಿಗೆ ಶಿಕಾರಿಯ ಹುಚ್ಚು. ಪೇಟೆಗೂ, ಸಂತೆ ಸೇರುತ್ತಿದ್ದ ಆಯನೂರಿಗೂ, ಅಡಿಕೆ ವ್ಯಾಪಾರಕ್ಕೆ ಶಿವಮೊಗ್ಗಕ್ಕೂ ಪ್ರಯಾಣ ಮಾಡಲು ಆಗ ಪ್ರಸಿದ್ಧವಾಗಿದ್ದ ಡಾಬಿನ ಹೋರಿಗಳೇ ಬೇಕು. ಒಮ್ಮೆಯಂತೂ ಕರಿಗರಸು ಎಂಬಲ್ಲಿನ ಸಂಬಂಧಿಕರ ಮದುವೆಗೆ ಅತಿಥಿಯಾಗಿ ಹೊರಟ ಯಜಮಾನರು ತಮ್ಮ ಗತ್ತನ್ನು ಪ್ರದರ್ಶಿಸಲು ವಾಲಗದವರನ್ನು ಕರೆಸಿ ವಾದ್ಯ ಮಾಡಿಸುತ್ತಾ ಮದುವೆ ಮನೆ ಪ್ರವೇಶಿಸಿದರು. ಕರಿಯ, ಪದುಮ, ಲೋಕ, ಕೃಷ್ಣ ಮೊದಲಾದ ಕಿರಿಯರು ಮನೆಗೆ ಗೆಯ್ಯಲು ಇದ್ದರೂ ಬರುಬರುತ್ತಾ ಖರ್ಚು ಜಾಸ್ತಿಯಾಗಿ ನೆರೆಯ ಊರಿನ ಲಿಂಗಾಯತ ಗೌಡರಲ್ಲಿ ಆಗಾಗ ಕೈಗಡವನ್ನು ತರಬೇಕಾಯಿತು. ಗೌಡರು ಗಂಟಿಗೆ ಭದ್ರತೆಗಾಗಿ ಕೈಗಡದ ಮೊತ್ತ ಹೆಚ್ಚಾಗುತ್ತಾ ಇದ್ದಂತೆ ಕೊಡಸೆಯ ಒಂದೊಂದೇ ಸರ್ವೆ ನಂಬರಿನ ಗದ್ದೆ, ಹಕ್ಕಲು, ತೋಟಗಳನ್ನು ಅಡ ಇಟ್ಟುಕೊಳ್ಳತೊಡಗಿದರಂತೆ.

ಅದೊಂದು ದಿನ ಹಠಾತ್ತಾಗಿ ಯಜಮಾನರು ಮನೆಯ ಜಗುಲಿಯ ಮೇಲೆ ಕುರ್ಚಿಯಲ್ಲಿ ಕುಳಿತಿದ್ದವರು ಹಾಗೆಯೇ ತಲೆ ಪಕ್ಕಕ್ಕೆ ವಾಲಿ ಉಸಿರು ತೆಗೆದರು. ಹೃದಯಸ್ಥಂಭನ ಆಗಿರಬೇಕು. ಆಗ ಅಂಥ ಯೋಚನೆಯೇ ಯಾರಿಗೂ ಬರುತ್ತಿರಲಿಲ್ಲ. ದೊಡ್ಡ ಕುಟುಂಬದ ಯಜಮಾನರ ನಿರ್ಗಮನ ದೊಡ್ಡ ಸುದ್ದಿ. ಯಜಮಾನರ ಒಬ್ಬನೇ ಮಗ ಕರಿಯನಾಯ್ಕರ ದೊಡ್ಡ ಮಗನಿಗಿಂತ ಎರಡೇ ವರ್ಷ ದೊಡ್ಡವನು. ಎಲ್ಲ

ಸೇರಿ ಕ್ರಿಯಾಕರ್ಮ ಪೂರೈಸಿದರು. ಮನೆಯಲ್ಲಿ ಹಿರಿಯರಾಗಿ ಎಲ್ಲ ಕೆಲಸಗಳಲ್ಲಿ ಮುಂಚೂಣಿಯಲ್ಲಿದ್ದ ಕರಿಯನಾಯ್ಕರು ಕುಟುಂಬದ ಯಜಮಾನಿಕೆಯನ್ನು ವಹಿಸಿಕೊಂಡರು. ಹಿಂದಿನ ಯಜಮಾನರ ಪತ್ನಿಯೇ ಒಳ ಮನೆಯ ಯಜಮಾನಿಕೆಯನ್ನು ನಿರ್ವಹಿಸುತ್ತಿದ್ದರು. ಮನೆಯ ವಹಿವಾಟು ವಹಿಸಿಕೊಳ್ಳುತ್ತಲೇ ಎದುರಾದದ್ದು ಅದುವರೆಗಿನ ವ್ಯವಹಾರದಲ್ಲಿ ಆಗಿದ್ದ ಸಾಲದ ಗಾತ್ರ. ಕೊಡಸೆಯ ಎಲ್ಲ ಜಮೀನು ತೋಟ ಎರಡೂವರೆ ಸಾವಿರ ರೂಪಾಯಿ ಸಾಲದ ಹಣಕ್ಕೆ ಗೌಡರ ಕುಟುಂಬಕ್ಕೆ ದೀಡು ಆಗಿತ್ತು. ಕರೇನಾಯ್ಕರು ಮನೆಯ ಗಂಡಸರನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡರು. ಸಾಲವನ್ನು ದುಡಿದು ತೀರಿಸಿ ಆಸ್ತಿಯನ್ನು ಉಳಿಸಿಕೊಳ್ಳಲೇಬೇಕು. ಇಲ್ಲದಿದ್ದರೆ ಗೌಡರ ಮನೆಯ ಜೀತಕ್ಕೆ ಮನೆಯವರೆಲ್ಲ ಹೋಗಬೇಕಾಗುತ್ತದೆ ಎಂದು ಮನವರಿಕೆ ಮಾಡಿದರು. ಗೌಡರಿಗೆ ವಿಶ್ವಾಸಿಕರಾಗಿದ್ದ ಶ್ಯಾನಭೋಗರು, ಪಟೇಲರನ್ನೆಲ್ಲ ಕಂಡು ದೊಡ್ಡಮನೆಯ ಆಸ್ತಿಯನ್ನು ಉಳಿಸಿಕೊಳ್ಳಲು ಪಂಚಾಯ್ತಿಗಳ ಮೇಲೆ ಪಂಚಾಯ್ತಿ ನಡೆಸಿ ಪ್ರತಿ ವರ್ಷ ಇಪ್ಪತ್ತು ಮಣ ಅಡಿಕೆಯಂತೆ ಎಷ್ಟೋ ವರ್ಷ ಸಲ್ಲಿಸುತ್ತಾ ಸಾಲವನ್ನು ಬಡ್ಡಿ ಚಕ್ರಬಡ್ಡಿ ಸಹಿತ ತೀರಿಸುವುದೆಂದು ಒಪ್ಪಂದ ಮಾಡಿಕೊಂಡರು. ಅದರಂತೆ ಮೊದಲ ವರ್ಷ ಅಡಿಕೆ ಕೊಯ್ಲಾದ ನಂತರ ಇಪ್ಪತ್ತು ಮಣ ಅಡಿಕೆಯನ್ನೂ ಅಳೆದುಕೊಟ್ಟರು. ಮಣಕ್ಕೆ ಎರಡೋ ಮೂರೋ ರೂಪಾಯಿ ಧಾರಣೆ ಇದ್ದ ಕಾಲದಲ್ಲಿ ಎರಡೂವರೆ ಸಾವಿರದಷ್ಟು ದೊಡ್ಡ ಮೊತ್ತದ ಸಾಲ ಎಷ್ಟು ವರ್ಷಕ್ಕೆ ತೀರಬಹುದು ಎಂಬುದನ್ನು ಲೆಕ್ಕ ಹಾಕಿ ಹಾಕಿ ಅನೇಕ ತಿಂಗಳು ನಿದ್ದೆ ಕಳೆದುಕೊಂಡರು. ಅಡಿಕೆ ಧಾರಣೆ ಜಾಸ್ತಿಯಾದರೆ ಎಂಬ ಪ್ರಶ್ನೆ ಅವರಿಗೆ ಎದ್ದು ಮರುವರ್ಷವೇ ಮತ್ತೆ ಎಲ್ಲ ಪಂಚಾಯ್ತಿದಾರರನ್ನೆಲ್ಲ ಸೇರಿಸಿದರು. ಗೌಡರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಂಡು ಎರಡೂವರೆ ಸಾವಿರದಷ್ಟಿದ್ದ ಸಾಲದ ಮೊತ್ತವನ್ನು ಐದು ಸಾವಿರಕ್ಕೆ ಏರಿಸಿ ಪ್ರತಿವರ್ಷ ಇನ್ನೂರ ಐವತ್ತು ರೂಪಾಯಿಯಂತೆ ಕಂತು ತೀರಿಸುವ ಒಪ್ಪಂದ ಮಾಡಿಕೊಂಡರಂತೆ. ಪ್ರತಿ ವರ್ಷದ ಮಾಘ ಬಹುಳ ಅಮಾವಾಸ್ಯೆಗೆ ಮೊದಲು ಸಾಲದ ಕಂತಿನ ಹಣ ಗೌಡರಿಗೆ ಸಂದಾಯವಾಗತಕ್ಕದ್ದು ಎಂದು ಕರಾರು ಪತ್ರ ಮಾಡಿಸಿದರಂತೆ.

ಯಜಮಾನರೊಂದಿಗೆ ಒಡನಾಡುತ್ತಿದ್ದ ದಿನಗಳಲ್ಲಿ ಕರಿಯನಾಯ್ಕರಿಗೆ ಪೇಟೆಯಲ್ಲಿ, ತಾಲ್ಲೂಕು ಕಚೇರಿ ಇರುವ ಹೊಸನಗರದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ ಅರಿವು ಮೂಡಿತ್ತು. ವಿದ್ಯೆಯ ಮಹತ್ವ ಗೊತ್ತಾಗಿತ್ತು. ಮನೆಯ ಹುಡುಗರನ್ನೆಲ್ಲ ಆಗ ಆರಂಭವಾಗಿದ್ದ ಕೋಡಿಕೊಪ್ಪದ ಸರ್ಕಾರಿ ಶಾಲೆಗೆ ಸೇರಿಸಿದರು. ಗದ್ದೆ ಹರದಲ್ಲಿ ಮೂರು ಸಣ್ಣ ಹಳ್ಳಗಳನ್ನು ದಾಟಿ ಸಾಗಬೇಕಿದ್ದ ಶಾಲೆಯ ದಾರಿ. ಒಂದು, ಎರಡನೆಯ ತರಗತಿಯವರೆಗೆ ಸರಾಗವಾಗಿ ದಾಟಿದ ಹುಡುಗರಲ್ಲಿ ಕೆಲವರು ಮೂರನೆಯ ತರಗತಿಯಲ್ಲಿ ಬಂದ ಅಂಕಗಣಿತ, ಮಿಶ್ರ ಭಿನ್ನರಾಶಿಗಳ ಸವಾಲಿಗೆ ಎದುರಾದರು. ಇಪ್ಪತ್ತರವರೆಗೆ ಮಗ್ಗಿ ಕಲಿಯುವುದು ಎರಡನೆಯ ತರಗತಿಯಿಂದ ಪ್ರಾರಂಭವಾಗಿ ಮೂರರವರೆಗೂ ಸಾಗಿದ್ದರೂ ಅದನ್ನು ಅನ್ವಯಿಸಿ ಸಮಸ್ಯೆಗಳನ್ನು ಬಿಡಿಸಬೇಕಾದ ಲೆಕ್ಕಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗದೆ ಹೋದರು. ಮೇಷ್ಟರು ಚುಳುಕಿನ ಬೆತ್ತದಲ್ಲಿ ಕೈ ಬಿಸಿ ಮಾಡದೆ ವಿದ್ಯೆ ಹತ್ತುವುದಿಲ್ಲ ಎಂಬುದರಲ್ಲಿ ಮೇಷ್ಟರಂತೆಯೇ ಮನೆಯ ಯಜಮಾನರೂ ವಿಶ್ವಾಸ ಇರಿಸಿದ್ದರಿಂದ ಕೊಡಸೆ ಮನೆಯ ಹುಡುಗರಲ್ಲಿ ಕರಿಯನಾಯ್ಕರ ಮೂವರು ಮಕ್ಕಳು, ಹಿಂದಿನ ಯಜಮಾನರ ಮಗ, ಅವರ ಅಣ್ಣನ ಮಗನನ್ನು ಬಿಟ್ಟು ಉಳಿದ ಹುಡುಗರು ಶಾಲೆ ತಪ್ಪಿಸಿಕೊಳ್ಳತೊಡಗಿದರು. ಅದಕ್ಕೆ ಸರಿಯಾಗಿ ಕೋಡಿಕೊಪ್ಪದ ಶಾಲೆಯ ಮೇಷ್ಟರು ಹುಶಾರು ತಪ್ಪಿ ರಜೆ ಹೋದರು. ಅವರು ಯಾವಾಗ ಬಂದು ಶಾಲೆ ಆರಂಭಿಸುತ್ತಾರೆ ಎಂಬುದು ಗೊತ್ತಾಗುವಂತಿರಲಿಲ್ಲ. ಕರಿಯನಾಯ್ಕರು ಹುಡುಗರ

ವಿದ್ಯಾಭ್ಯಾಸಕ್ಕೆ ಅಡ್ಡಿ ಆಗಬಾರದು ಎಂದು ಹುಂಚದಕಟ್ಟೆಯಲ್ಲಿ ಒಬ್ಬ ಮೇಷ್ಟರನ್ನು ಹಿಡಿದು ಅಲ್ಲಿಗೆ ಮಕ್ಕಳನ್ನು ಕರೆದೊಯ್ದರು. ಅಲ್ಲಿ ಒಂದು ಮನೆಯನ್ನು ಗೊತ್ತು ಮಾಡಿ ಅಡುಗೆಗೆ ಮನೆಯಿಂದ ಒಬ್ಬ ಹೆಣ್ಣಾಳನ್ನು ನಿಯೋಜಿಸಿದರು.

**ರಿಪ್ಪನ್ ಹುಲಿ ಶಿಕಾರಿ**

ಹುಂಚದಕಟ್ಟೆಗೂ ಕೊಡಸೆಗೂ ಐದು ಮೈಲು ದೂರ. ದಟ್ಟವಾಗಿದ್ದ ಕಾಡಿನ ಮಧ್ಯೆ ಜಲ್ಲಿ ಕಲ್ಲು ಹಾಕದ ಕಚ್ಚಾರಸ್ತೆಯಲ್ಲಿ ಎತ್ತಿನ ಬಂಡಿಯಲ್ಲಿ ಸರಕು ಸಾಮಗ್ರಿ ಸಾಗಿಸುತ್ತಿದ್ದ ದಿನಗಳಲ್ಲಿ ಅಷ್ಟು ದೂರವೂ ದುರ್ಗಮವಾಗಿತ್ತು. ದೇಶಾಂತರ ಎನಿಸುವಷ್ಟು ಅಪರಿಚಿತವಾಗಿತ್ತು. ಅಲ್ಲಿ ವ್ಯಾಸಂಗ ಮುಂದುವರಿಸಿ ನಾಲ್ಕನೆಯ ತರಗತಿಯನ್ನು ಮುಗಿಸಿದ ಮಕ್ಕಳು ಮುಂದಿನ ಓದಿಗೆ ಪೇಟೆಯ ಕಡೆ ತಿರುಗಬೇಕಾಯಿತು. ಪೇಟೆ ಎಂದು ಹೆಸರಾಗಿದ್ದರೂ ಆಗ ಅದು ಒಂದು ಕುಗ್ರಾಮವೇ ಆಗಿತ್ತು. ಅದಕ್ಕೆ ಪೂರ್ವದಲ್ಲಿ ದೊಡ್ಡಿನಕೊಪ್ಪ ಎಂದೇ ಕರೆಯುತ್ತಿದ್ದರಂತೆ. ಇಂಗ್ಲಿಷಿನ ಅಧಿಕಾರಿ ರಿಪ್ಪನ್ ಎಂಬುವನೊಬ್ಬ ಅಲ್ಲೆಲ್ಲೊ ಹುಲಿ ಶಿಕಾರಿ ಮಾಡಿದ್ದರ ನೆನಪಿಗೆ ಅದಕ್ಕೆ ರಿಪ್ಪನ್ ಪೇಟೆ ಎಂದು ಹೆಸರಾಯಿತಂತೆ. (ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ರಿಪ್ಪನ್ 1880–84ರಲ್ಲಿ ಅಧಿಕಾರದಲ್ಲಿದ್ದ. ಆ ಕಾಲದಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನದ ಆಡಳಿತ ಅರಸುಗಳ ಆಳ್ವಿಕೆಗೆ (1881ರಲ್ಲಿ) ಹಸ್ತಾಂತರವಾಗಿತ್ತು. ಇಂಥ ಸಂದರ್ಭದಲ್ಲಿ ವೈಸ್‌ರಾಯ್ ಸಾಹೇಬ ದಿಲ್ಲಿಯಿಂದ ಬೆಂಗಳೂರಿಗೆ ಬಂದು ಶಿವಮೊಗ್ಗ ಜಿಲ್ಲೆಯ ದೊಡ್ಡಿನಕೊಪ್ಪದಲ್ಲಿ ಹುಲಿಯನ್ನು ಹೊಡೆಯಲು ಬಂದಿದ್ದನೇ ಎಂಬುದನ್ನು ಇತಿಹಾಸಕಾರರು ಪತ್ತೆ ಮಾಡಿ ಹೇಳಬೇಕು. ದೊಡ್ಡಿನಕೊಪ್ಪ ಈಗಲೂ ಪೇಟೆಯ ಪೂರ್ವದಲ್ಲಿ ಕೆಲವೇ ಮನೆಗಳಿಗೆ ಸಂಬಂಧಿಸಿ ಉಳಿದುಕೊಂಡಿರುವುದನ್ನು ನೋಡಬಹುದು). ಶಿವಮೊಗ್ಗ– ಹೊಸನಗರ ಮಧ್ಯೆ ಇದ್ದ ಕಚ್ಚಾರಸ್ತೆ, ತೀರ್ಥಹಳ್ಳಿ– ಸಾಗರ ಮಧ್ಯೆ ಇದ್ದ ಕಚ್ಚಾರಸ್ತೆ ಕೂಡುತ್ತಾ ಇದ್ದುದೇ ಆ ಊರಿಗೆ ಪೇಟೆಯ ಸ್ವರೂಪ ಬರುವುದಕ್ಕೆ ಕಾರಣವಾಗಿತ್ತು. ಆಯನೂರು ಎಂಬುದು ಪೇಟೆಯಿಂದ ಇಪ್ಪತ್ತು ಮೈಲು ದೂರದಲ್ಲಿದ್ದು ಅಲ್ಲಿಗೆ ವರ್ಷಕ್ಕೆ ಒಂದು ಸಲ ಗಾಡಿ ಕಟ್ಟಿಸಿಕೊಂಡು ಗುಂಪು ಗುಂಪಾಗಿ ಹೋಗುವುದಿತ್ತು. ಎಲ್ಲೆಡೆ ನಿಬಿಡವಾದ ಕಾಡು. ಅಂಥ ಪರಿಸ್ಥಿತಿಯಲ್ಲೂ ಕರಿಯನಾಯ್ಕರು ಮನೆಯ ಮಕ್ಕಳನ್ನು ಪೇಟೆಯ ಶಾಲೆಗೆ ಸೇರಿಸಿ ಶಿಕ್ಷಣ ಮುಂದುವರಿಸಲು ವ್ಯವಸ್ಥೆ ಮಾಡಿದ್ದರು. ಕೊಡಸೆಯಿಂದ ಒಳ ಹಾದಿಯಲ್ಲಿ (ಅದೂ ಕೂಡ ದುರ್ಗಮವಾದ ಕಾಡಿನಲ್ಲಿದ್ದ ಕಾಲು ಹಾದಿ) ಐದಾರು ಮೈಲು ದೂರದ ಪೇಟೆಗೆ ಕೊಡಸೆ ಮನೆಯ ಮಕ್ಕಳು ನಡೆದುಕೊಂಡು ಹೋಗಿ ಸಂಜೆಯಾಗುತ್ತಲೂ ವಾಪಸು ಬರುತ್ತಿದ್ದರು. ಕರಿಯನಾಯ್ಕರ ಹಿರಿಯ ಮಗಳು, ಅವರ ತಮ್ಮ ಪದ್ಮನಾಯ್ಕರ ಒಬ್ಬ ಮಗಳೂ ಈ ತಂಡದಲ್ಲಿದ್ದರಂತೆ. ಮಳೆಗಾಲದಲ್ಲಿ ಪೇಟೆಯ ಹುಡುಗರು ಕೊಡೆ ಹಿಡಿದು ಶಾಲೆಗೆ ಬರುತ್ತಿದ್ದರೆ ಕೊಡಸೆ ಮನೆಯ ಹುಡುಗ ಹುಡುಗಿಯರು ಕಂಬಳಿಕೊಪ್ಪೆ ಹಾಕಿಕೊಂಡು ಶಾಲೆಗೆ ಬರುತ್ತಿದ್ದರಂತೆ. ('ಸಿ.ಆರ್.ಕಮಲಮ್ಮ ಎಂಬ ಚುರುಕಿನ ಹುಡುಗಿ ನಾವು ಪೇಟೆಯಲ್ಲಿ ಓದುತ್ತಿದ್ದಾಗ ಸಬ್ ಓವರ್‌ಸೀರ್ ಮನೆಯಿಂದ ಬರುತ್ತಿದ್ದಳು' ಎಂದು ನನ್ನ ದೊಡ್ಡ ಅಕ್ಕ, ಗುಂಡಕ್ಕ, ನೆನಪು ಮಾಡಿಕೊಂಡಿದ್ದಳು. ರಿಪ್ಪನ್ ಪೇಟೆಯ ಹೆಸರನ್ನು ನಾನು ಹೇಳಿದ್ದಾಗ ಮೇಷ್ಟರು ಹಂಪನಾ 'ನಮ್ಮ ಮನೆಯವರು ಅಲ್ಲಿ ಓದಿದ್ದರು' ಎಂದು ತಿಳಿಸಿದರು. ಪ್ರೊ.ಕಮಲಾ ಹಂಪನಾ ನನ್ನ ದೊಡ್ಡ ಅಕ್ಕ ಪೇಟೆಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿ ವಿದ್ಯಾರ್ಥಿನಿ ಆಗಿದ್ದರು ಎಂಬುದೇ ಸ್ವಾರಸ್ಯಕರ ಘಟನೆ. ನನ್ನ ಎರಡನೆಯ ಅಕ್ಕ

ಜಾನಕಮ್ಮ ನನ್ನೊಂದಿಗೆ ಪ್ರಾಥಮಿಕ ಶಾಲೆಯಲ್ಲಿ ಓದಿ ಮುಂದೆ ಹೋಗಲು ಅನುಕೂಲ ಇಲ್ಲದ ಕಾರಣ ಕೆಲವು ವರ್ಷಗಳ ನಂತರ ತನ್ನದೇ ಸಂಸಾರಕ್ಕೆ ಹೆಗಲು ಒಡ್ಡಿದ್ದಳು. ಅವಳಿದ್ದ ಹಿರೇಮೈತೆ ಎಂಬಲ್ಲಿಗೆ ನಾನು, ತಿಮ್ಮಪ್ಪ ಹೋಗಿ ಒಂದು ದಿನ ಉಳಿದು ಬಂದಿದ್ದೆವು).

'ಕರೇನಾಯ್ಕ, ಮನೆತನದ ಹುಡುಗರನ್ನೆಲ್ಲ ಇಸ್ಕೂಲು ಅಂತ ಕಳಿಸಿ ಮನೆ ಹಾಳು ಮಾಡ್ಕಾಬ್ಯಾಡ. ಪೇಟೆ ಸಗಣಿ ತುಳಿದೋರು ಮುಂದೆ ನಿಂಗೆ ಅನ್ನ ಹಾಕ್ತಾರೇನೋ' ಎಂದು ನೆರೆಯ ಊರಿನ ಒಡೆಯರಂತಿದ್ದ ಗೌಡರು ಆಗಾಗ ಎಚ್ಚರಿಕೆ ನೀಡುತ್ತಿದ್ದರಂತೆ. ಅದಕ್ಕೆ ಅವರು 'ಪಾಸಾಗ್ತಾ ಹೋಗೋವರೆಗೂ ಓದಲಿ. ಫೇಲಾದ್ರೆ ಅವರಿಗೆ ವಿದ್ಯೆ ಹತ್ತಲ್ಲ, ಅವರು ಬಂದ ದನಾ ಎತ್ತು ಕಾಯಲಿ ಗೌಡರೇ' ಎಂದು ತಣ್ಣಗೆ ಸಮಜಾಯಿಶಿ ಕೊಡುತ್ತಿದ್ದರಂತೆ. ಅದರಂತೆ ಪೇಟೆಯ ಶಾಲೆಯಲ್ಲಿ ಪಾಸಾಗುತ್ತಾ ಹೋಗಿದ್ದ ಅವರ ಹಿರಿಯ ಮಗ, ಮನೆಯ ಯಜಮಾನಿಕೆಯ ವಾರಸುದಾರನಾಗಿದ್ದ ಹಿಂದಿನ ಯಜಮಾನರ ಮಗ ಇಬ್ಬರೂ ಮುಂದಿನ ಓದಿಗೆ ಶಿವಮೊಗ್ಗಕ್ಕೆ ಹೋದರು. ಅದಕ್ಕೆ ಅಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದು ಊಟಕ್ಕೂ ವ್ಯವಸ್ಥೆ ಮಾಡಿದರು. ಪೇಟೆಯ ಶಾಲೆಯಲ್ಲಿ ನಾಲ್ಕು ವರ್ಷಗಳನ್ನು ಸುಧಾರಿಸಲಾಗದ ಉಳಿದ ಹುಡುಗರು ಮನೆಗೆ ವಾಪಸಾಗಿ ಬೇಸಾಯದ ಕೆಲಸಕ್ಕೆ ನಿಂತರು. ಮನೆತನವೆಲ್ಲ ಗೌಡರ ಸಾಲಕ್ಕೆ ಗುರಿಯಾಗಿ ಅತಂತ್ರ ಸ್ಥಿತಿಯಲ್ಲಿದ್ದರೂ ಹಠ ಬಿಡದೆ ಮಕ್ಕಳನ್ನು ಎಲ್ಲೆಲ್ಲೋ ಇರಿಸಿ ಓದಿಸುತ್ತಿದ್ದ ಕರಿಯನಾಯ್ಕರ ವರ್ಚಸ್ಸು ಸಂಬಂಧಿಕರಲ್ಲಿ ವಿಶೇಷವಾಗಿ ಹಬ್ಬಿತ್ತು. ಮದುವೆ ಮನೆಗಳಲ್ಲಿ, ಕಣಬ್ಬದ ಮನೆಗಳಲ್ಲಿ, ಅಮ್ಮನ ಹಬ್ಬದ ಸಂದರ್ಭಗಳಲ್ಲಿ ಸೇರುತ್ತಿದ್ದ ದೊಡ್ಡ ದೊಡ್ಡ ಸೀಮೆ ಯಜಮಾನರುಗಳ ಮಧ್ಯೆ ಮನೆತನ ಸಾಲದಲ್ಲಿ ಮುಳುಗಿದ್ದರೂ ವಿದ್ಯೆಗೆ ಆದ್ಯತೆ ನೀಡುತ್ತಿದ್ದ ಕಾರಣ ಕರಿಯನಾಯ್ಕರಿಗೆ ಪ್ರತ್ಯೇಕ ಗೌರವವೂ ಸಿಗುತ್ತಿತ್ತು...

* * *

**'ಬಿಟ್ಟಿ' ಚಾಕರಿ**

ಕರಿಯನಾಯ್ಕರು ಕೊಡಸೆ ಮನೆಯ ಯಜಮಾನಿಕೆ ವಹಿಸಿಕೊಳ್ಳುತ್ತಿದ್ದ ಕಾಲದಲ್ಲಿ ಗಂದ್ರಳ್ಳಿಯಿಂದ ಬರುವೆಗೆ ಬಂದು ಸ್ವಂತ ಆಸ್ತಿಯನ್ನು ಕೋರ್ಟ್ ವ್ಯಾಜ್ಯದ ಮೂಲಕ ಪಡೆದ ಬಡಿಯನಾಯ್ಕರು ಮತ್ತು ಅವರ ಅಣ್ಣ ಕುಂದನಾಯ್ಕರು ತಮ್ಮದೇ ಸಂಸಾರವನ್ನು ನೆಲೆಗೊಳಿಸಲು ಪ್ರಾರಂಭ ಮಾಡಿದರು. ಕುಂದನಾಯ್ಕರು ಕೂಲಿಮಠದಲ್ಲಿ ಕಲಿತಿದ್ದು ಪೇಟೆ ಪಟ್ಟಣ ತಿರುಗಾಡಬಲ್ಲ ಚತುರರಾಗಿದ್ದರು. ಚಿಕ್ಕಂದಿನಿಂದ ಬೇಸಾಯದ ಕೆಲಸದಲ್ಲಿ ಪರಿಣತಿ ಮತ್ತು ಬೇಟೆಯ ಹವ್ಯಾಸದಲ್ಲಿ ನಿಷ್ಣಾತರಾಗಿದ್ದ ಬಡಿಯನಾಯ್ಕರಿಗೆ ಊರಿನ ವ್ಯವಹಾರಗಳನ್ನು ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಿತ್ತು. ತಮಗೆ ಬಂದಿದ್ದ ಗದ್ದೆ ತೋಟಗಳ ಗಡಿಗಳನ್ನು ಪರಿಚಯ ಮಾಡಿಕೊಂಡರು. ವಾಡಿಕೆಯಂತೆ ಗದ್ದೆಯ ಸ್ವರೂಪ ನೋಡಿ ಬಿತ್ತುವುದೋ, ನಟ್ಟಿಗೆ ಬಿಡುವುದೋ ನಿರ್ಧರಿಸಿದರು. ಬೇಸಾಯದ ಕೆಲಸ ಮುಗಿಸಿ ತಮ್ಮ ಹವ್ಯಾಸವಾದ ಶಿಕಾರಿಯನ್ನು ನಡೆಸಿ ಹಂದಿ ಹೊಡೆದಾಗ ದಾಯಾದಿಗಳಿಗೆ, ಊರಿನ ಇತರರಿಗೆ ಹಂಚಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಬಡಿಯನಾಯ್ಕರು ಊರಲ್ಲಿ ದಾಖಲಿಸಿದರು.

ಆ ದಿನಗಳಲ್ಲಿ ಬರುವೆಯ ದಕ್ಷಿಣದ ತುದಿಗೆ ಬ್ರಾಹ್ಮಣರ ಮನೆಗಳು. ನಡುಭಾಗದಲ್ಲಿ ಬರುವೆ ಮನೆತನದವರ ಗುಂಪು ಮನೆಗಳು. ಗದ್ದೆ ಹರದ ಪಶ್ಚಿಮಕ್ಕೆ ಪೇಟೆಯ ಕಡೆಗೆ ಜಲಗಾರರು, ಬೋವಿಗಳು, ಕೊರಮರ ಕೆಲವು ಮನೆಗಳು. ಉತ್ತರ ದಿಕ್ಕಿನಲ್ಲಿ ವ್ಯಾಪಿಸಿದ ಗದ್ದೆ ಹರದಲ್ಲಿ ದೂರಕ್ಕೆ ಕಾಣುವಂತೆ ದೊಡ್ಡನಕೊಪ್ಪದ ಮನೆಗಳು. ಅಲ್ಲಿ ಒಬ್ಬ ಗೌಡರ ಮನೆ ಅದಕ್ಕೆ ಹೊಂದಿಕೊಂಡ ಅವರ ಜೀತದಾಳುಗಳ

ಗುಡಿಸಲುಗಳು. ಗೌಡರಿಗೆ ಊರಿನ ಜನರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ದರ್ಪವೂ ಇತ್ತು. ಅವರ ದರ್ಪಕ್ಕೆ ಬಲ ತಂದುಕೊಡುತ್ತಿದ್ದವರು ಜೀತದಾಳುಗಳು. ಆ ದಿನಗಳಲ್ಲಿ ಸಾಕಷ್ಟು ಜಮೀನು, ತೋಟ ಮತ್ತು ಸಣ್ಣ ಅಧಿಕಾರ ಸ್ಥಾನ ಇದ್ದ ಗೌಡರ ಮನೆಗಳಿಗೆ ಮೂಲದ ಆಳುಗಳು ಪ್ರತ್ಯೇಕ ಕೇರಿಗಳನ್ನು ಮಾಡಿಕೊಳ್ಳುವುದು ವಾಡಿಕೆಯಾಗಿತ್ತು. ಗೌಡರ ಮನೆಯ ಎಲ್ಲ ಬೇಸಾಯದ ಕೆಲಸಕ್ಕೆ ಗಂಡಾಳುಗಳು ಅಂಕಿತವಾಗಿದ್ದರು. ಹೆಣ್ಣಾಳುಗಳಿಗೆ ಮನೆಯ ಹೊರಗಿನ ಕೆಲಸ, ತೋಟದ ಕೆಲಸ, ಗದ್ದೆಯ ಕೆಲಸ ಇರುತ್ತಿತ್ತು. ಗಂಡಾಳುಗಳನ್ನು ಗೌಡರು ತಮ್ಮೆಲ್ಲ ಇತರ ಕೆಲಸಗಳಿಗೂ ಬಳಸುತ್ತಿದ್ದರು. ಇತರ ಕೆಲಸವೆಂದರೆ ಅವರಲ್ಲಿಯೇ ಮೈಗಳ್ಳರಾಗಿರುವವರಿಗೆ ತದುಕಿಸುವುದು, ಕೆಲಸಕ್ಕೆ ಕಳ್ಳಬಿದ್ದವರನ್ನು ಹೊರೆಸಿಕೊಂಡು ಬಂದು ಕೆಲಸದಲ್ಲಿ ತೊಡಗಿಸುವುದು ಇತ್ಯಾದಿ. ಹೆಣ್ಣಾಳುಗಳಲ್ಲಿ ಚಂದ ಇದ್ದವರನ್ನು ಚೆನ್ನಾಗಿ ನೋಡಿಕೊಳ್ಳುವ ಚಪಲವೂ ಗೌಡರ ಮನೆಯ ಗಂಡಸರಿಗೆ ಇದ್ದುದು ಒಪ್ಪಿಕೊಂಡ ಪದ್ಧತಿಯಾಗಿತ್ತು. (ಮಲೆನಾಡಿನ ಜಮೀನ್ದಾರ ಗೌಡರಿಗೆ ಸಂಬಂಧಿಸಿದ ಇಂಥ ವಿವರಗಳೆಲ್ಲ ಕುವೆಂಪು ಅವರ ಎರಡು ಮಹತ್ವದ ಕಾದಂಬರಿಗಳಲ್ಲಿ ನಿಚ್ಚಳವಾಗಿ ದಾಖಲಾಗಿವೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಪ್ರಸ್ತಾಪದ ಮಟ್ಟದಲ್ಲಿದ್ದ ವಿವರಗಳು 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ವಿಸ್ತೃತವಾಗಿ ನಿರೂಪಿತವಾಗಿವೆ).

ಬಡಿಯನಾಯ್ಕರು ಊರಿಗೆ ಬಂದು ನೆಲೆಗೊಂಡ ವರ್ಷವೇ ಗೌಡರ ಮನೆಯಿಂದ ಕರೆ ಬಂದಿತು. ಗೌಡರ ಮನೆಯ ಬೇಸಾಯದ ಕೆಲಸಕ್ಕೆ ಬಿಟ್ಟಿ ಆಳು ಅಂತ ಬರಬೇಕು ಎಂಬ ಕರೆ ಅದು. ಆಗಷ್ಟೇ ಹದಿ ಹರೆಯದಲ್ಲಿದ್ದ ಬಡಿಯನಾಯ್ಕರಿಗೆ ಅದು ಹೊಸತು. ಬಿಟ್ಟಿ ಆಳು ಅಂದರೆ ಏನು ಎಂದು ಕರೆಯಲು ಬಂದಿದ್ದ ವ್ಯಕ್ತಿಯನ್ನು ಕೇಳಿದರು. ಆತ ಯಾವತ್ತೂ ಅಂತ ಪ್ರಶ್ನೆ ಎದುರಿಸಿದವನಲ್ಲ. ಬಿಟ್ಟಿ ಆಳು ಅಂದರೆ ಗೌಡರ ಮನೆಯ ಕೆಲಸ ಮಾಡಿಕೊಡುವುದು. ಅದಕ್ಕೆ ಕೂಲಿ ಇಲ್ಲ. ವರ್ಷಕ್ಕೆ ಹಂಗಾಮಿನ ಹೊತ್ತಲ್ಲಿ ಊರಿನ ಎಲ್ಲರೂ ಮನೆಗೆ ಒಬ್ಬರು, ಇಬ್ಬರಂತೆ ಹೋಗಿ ಕೆಲಸ ಮುಗಿಸಿಕೊಟ್ಟು ಬರುವುದು ಎಂದು ವಿವರಿಸಿದ. ಜೊತೆಗೆ ಗೌಡರು ಕರೆದಾಗ ಹೋಗಿ ಬರುವುದು ಕಟ್ಟು ಅಂತಲೂ ಹೇಳಿದ. ಊರಲ್ಲಿ ನಮ್ಮದೇ ಜಮೀನು. ನಮ್ಮದೇ ಮನೆ. ಇದರಲ್ಲಿ ಅವರದೇನು ಹಂಗು ಎಂದು ಪ್ರಶ್ನಿಸಿದ ಬಡಿಯನಾಯ್ಕರು, 'ಹಂಗಾಮಿನ ಕಾಲದಲ್ಲಿ ಕೆಲಸಕ್ಕೆ ಬರೋದೇನೋ ಸರಿ, ಅದಕ್ಕೆ ಗೌಡರ ಮನೆಯವರೂ ನಮ್ಮ ಹಂಗಾಮಿನ ಕೆಲಸಕ್ಕೆ ಬರುತ್ತಾರಾ? ಆಳಿಗೆ ಆಳು ಅಂತ ಮುಯ್ಯಾಳಿನ ಲೆಕ್ಕವಾದರೆ ಸರಿ. ಬಿಟ್ಟಿಯಾಗಿ ಬರಲ್ಲ. ಗೌಡರು ನಮ್ಮ ಮನೆಗೆ ಬರುವುದಾದರೆ ನಾವೂ ಅವರ ಮನೆಗೆ ಕೆಲಸಕ್ಕೆ ಹೋಗಬಹುದು' ಎಂದು ಉತ್ತರಿಸಿದರು. ಗೌಡರಿಗೆ ಅಂಥ ಪ್ರತಿಕ್ರಿಯೆ ಯಾರಿಂದಲೂ ಬಂದಿರಲಿಲ್ಲ ಎನಿಸುತ್ತದೆ. ಸರಿಯಾದ ಪಾಠ ಕಲಿಸಬೇಕು ಎಂದು ತೀರ್ಮಾನಿಸಿರಬೇಕು. ಗೌಡರ ವರಸೆಯನ್ನು ಊಹಿಸಿದ್ದ ಬಡಿಯನಾಯ್ಕರು ತಮ್ಮ ಎಚ್ಚರದಲ್ಲಿ ಇದ್ದರು. ಬರುವೆಯ ತೋಟದಲ್ಲಿ ಮೂರು ಎಕರೆ ಗೌಡರದೂ ಇತ್ತು. ಅಲ್ಲಿನ ಕೆಲಸಕ್ಕೆ ಗೌಡರೂ, ಅವರ ಆಳುಗಳೂ ಬಂದು ಹೋಗುವುದಿತ್ತು. ತೋಟದ ಒಂದು ಬದಿ ಕೆರೆಯ ದಂಡೆ. ಅದು ಪೇಟೆಗೆ ಹೋಗುವ ಬಂಡಿ ದಾರಿ. ಬರುವೆಯಿಂದ ಗಾಡಿಯಲ್ಲಿ ಬತ್ತ ಒಯ್ಯುವವರು ಕೆರೆ ದಂಡೆಯ ಮೇಲೆಯೇ ಸಾಗಬೇಕು. ಬಲಕ್ಕೆ ಈಶ್ವರ ದೇವಸ್ಥಾನ. ಎಡಕ್ಕೆ ಬರ್ಮನ ಗುಡಿಯ ಜಾಗ. ಅಲ್ಲಿಂದ ಸ್ವಲ್ಪ ಏರಿನ ದಾರಿ. ಎತ್ತಿನ ಗಾಡಿಗಳು ನಿಧಾನವಾಗಿ ಸಾಗುವುದು ಅನಿವಾರ್ಯ.

ಪೇಟೆಯ ಜಯ ಭಾರತ ಎಂದೇನೋ ಹೆಸರಿನ ಅಕ್ಕಿ ಗಿರಣಿಗೆ ಒಯ್ದು ಅಕ್ಕಿ ಮಾಡಿಸಲು ಬಡಿಯನಾಯ್ಕರು, ಕುಂದನಾಯ್ಕರು ಬತ್ತ ತುಂಬಿಕೊಂಡರು. ಎತ್ತಿನ ಗಾಡಿ ಹೊಡೆಯಲು ಕುಂದನಾಯ್ಕರು

ಮೂಕಿನ ಮೇಲೆ ಕುಳಿತರು. ಬಲವಾದ ಎರಡು ದೊಣ್ಣೆಗಳನ್ನು ಹಿಡಿದುಕೊಂಡು ಬಡಿಯನಾಯ್ಕರು ಗಾಡಿಯ ಹಿಂದೆ ಸದ್ದಿಲ್ಲದೆ ಸಾಗಿದರು. ಪೇಟೆಗೆ ಗಾಡಿ ಬರುತ್ತಿರುವ ಸುಳಿವನ್ನು ತಿಳಿದಿದ್ದ ಗೌಡರು ಅದನ್ನು ದೇವಸ್ಥಾನದ ಏರಿನಲ್ಲಿ ತಡೆಯಲು ಸಿದ್ಧತೆ ಮಾಡಿಕೊಂಡಿದ್ದರು. ಅದಕ್ಕಾಗಿ ತಮ್ಮ ಪಡೆಯನ್ನು ಸಜ್ಜುಗೊಳಿಸಿದ್ದರು. ಗಾಡಿ ಏರಿನಲ್ಲಿ ನಿಧಾನವಾಗುತ್ತಲೇ ಗೌಡರ ಕಡೆಯ ಆಳೊಬ್ಬ ಎದುರು ಬಂದು ಅಡ್ಡ ನಿಂತ. ಕುಂದನಾಯ್ಕರು ವಿಚಾರಿಸುತ್ತಿರುವಾಗ ಪೊದೆಯಲ್ಲಿ ಅಡಗಿ ಕಾದಿದ್ದ ಗೌಡರು ಎದುರಾದರು. ಅವರಿಬ್ಬರನ್ನು ಗಮನಿಸುತ್ತಲೇ ಇದ್ದ ಬಡಿಯನಾಯ್ಕರು ಹಿಂದಿನಿಂದ ಹಠಾತ್ತಾಗಿ ಎರಗಿ ಬೆನ್ನಿಗೆ ಸಮಾ ಇಕ್ಕಿದರು. ಅಂಥದ್ದೇ ಇನ್ನೊಂದು ಏಟು ಎದುರು ಬಂದಿದ್ದ ಜೀತದಾಳಿಗೂ ಬಿತ್ತು. ಅನಿರೀಕ್ಷಿತವಾಗಿ ಬಿದ್ದ ದೊಣ್ಣೆಯ ಏಟಿನಿಂದ ತತ್ತರಿಸಿದ ಅವನು 'ಬಡಿಯಣ್ಣಾ ಬ್ಯಾಡ' ಎಂದು ನರಳುತ್ತಾ ಅರುಗಾದ. ಎದುರು ಬಿದ್ದವರು ಜೀವ ಉಳಿದರೆ ಸಾಕೆಂದು ಬೆನ್ನು ಬಾಗಿಸಿಕೊಂಡು ಪೊದೆಯಲ್ಲಿ ಮರೆಯಾದರು. ಸರಿಯಾಗಿ ಏಟು ಬಿದ್ದು ನರಳುತ್ತಾ ಸಾಗಿದ್ದನ್ನು ನೋಡಿ ಅಲ್ಲಲ್ಲಿ ಅಡಗಿದ್ದ ತಂಡದ ಇತರ ಆಳುಗಳು ಸದ್ದಿಲ್ಲದೆ ಮರೆಯಾದರು.

ಗೌಡರ ತಂಡ ಪರಾರಿಯಾಗಿದ್ದನ್ನು ಕಂಡ ಮೇಲೆ ಕುಂದನಾಯ್ಕರು ಗಾಡಿಯನ್ನು ಮುಂದೆ ಸಾಗಿಸಿದರು. ಬಡಿಯನಾಯ್ಕರು ಗೌಡರು ಪೇಟೆಗೆ ಹೋಗಿ ಪೊಲೀಸ್ ಕಂಪ್ಲೇಂಟ್ ಕೊಡಬಹುದೆಂದು ಶಂಕಿಸಿ ಮನೆಯಿಂದ ಹೊರಟು ಬರುವೆ ಕಾನಿನಲ್ಲಿ ಆಶ್ರಯ ಪಡೆದರು. ಅವರಿಗೆ ಹೊತ್ತಿಹೊತ್ತಿಗೆ ಊಟ ಕೊಡುವ ಹೊಣೆಯನ್ನು ಜಲಗಾರರ ವ್ಯಕ್ತಿಯೊಬ್ಬ ಹೊತ್ತುಕೊಂಡ. ಕೋವಿ ಹಿಡಿದು ಏಕಾಂಗಿಯಾಗಿ ಕಾನೆಲ್ಲ ತಿರುಗಾಡುವ ಅಭ್ಯಾಸ ಇದ್ದ ಬಡಿಯನಾಯ್ಕರಿಗೆ ಕಾನಲ್ಲಿ ಕೆಲವು ದಿನ ಅಡಗಿರುವುದು ಸಮಸ್ಯೆ ಆಗಿರಲಿಲ್ಲ.

ಬಡಿಯನಾಯ್ಕರಿಂದ ಬಿದ್ದ ದೊಣ್ಣೆಯ ಏಟಿನಿಂದ ಸುಸ್ತಾಗಿದ್ದ ಗೌಡರು ಪೊಲೀಸರಿಗೆ ಕಂಪ್ಲೇಂಟ್ ಕೊಡುತ್ತಿದ್ದರೇನೋ, ಅಷ್ಟರಲ್ಲಿ ಅವರ ಕಡೆಯವನೊಬ್ಬನಿಗೆ ಬಡಿಯನಾಯ್ಕರು 'ಏನಾದರೂ ಪೊಲೀಸ್ ಕಂಪ್ಲೇಂಟ್ ಕೊಟ್ಟರೆ, ಗೌಡ ಬೆಳಗ್ಗೆ ಹೊರಕಡೆ ಕೂತಾಗ ಹೊಡೆದು ಹಾಕುತ್ತೇನೆ..' ಎಂದು ಎಚ್ಚರಿಕೆ ಮಾತನ್ನು ಹೇಳಿ ಕಳಿಸಿದರು. ಮೊದಲೇ ಅಪಮಾನದಿಂದ ಕಂಗೆಟ್ಟಿದ್ದ ಗೌಡರು ದರ್ಪವನ್ನು ಅಡಗಿಸಿಕೊಂಡು ಕಂಪ್ಲೇಂಟು ಕೊಡಲು ಹೋಗಲಿಲ್ಲ. ಅಲ್ಲಿಂದ ಗೌಡರ ಮನೆಗೆ ಬರುವೆ ಊರಿನವರ ಬಿಟ್ಟಿ ಸೇವೆಯೂ ನಿಂತಿತು.

* * *

**ಮನೆಯಲ್ಲಿ ಹಿಸ್ಸೆ**

ನಮ್ಮ ಮನೆಯಲ್ಲಿ ಹಿರಿಯ ಅಣ್ಣಂದಿರು ವಿಸ್ತಾರವಾಗುತ್ತಿದ್ದ ತಮ್ಮ ಸ್ವಂತ ಸಂಸಾರಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಸ್ವತಂತ್ರರಾಗುವ ಉದ್ದೇಶವನ್ನು ತಮಗೆ ತೋರಿದ ರೀತಿಯಲ್ಲಿ ತೋರ್ಪಡಿಸತೊಡಗಿದ್ದರು. ಅದು ನಾನು ಹೈಸ್ಕೂಲು ಸೇರಿದ ದಿನಗಳಿಂದ ಬೀಜರೂಪದಲ್ಲಿ ಪ್ರಾರಂಭವಾಗಿದ್ದು, ಬಿ.ಎ (ಆನರ್ಸ್) ಎರಡನೇ ವರ್ಷದಲ್ಲಿದ್ದಾಗ ಬೆಳೆದು ಹೆಮ್ಮರವಾಗಿತ್ತು. ನಾಲ್ಕನೆಯ ಅಣ್ಣ ಕೃಷಿ ಪದವಿ ಮುಗಿಸಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಕೆಲಸ ಹಿಡಿದಿದ್ದ. ಅಧಿಕಾರಿ ದರ್ಜೆಯ ಹುದ್ದೆ ಅಲ್ಲದಿದ್ದರೂ ಮನೆತನದ ಮೊಟ್ಟಮೊದಲ ಬ್ಯಾಂಕ್ ನೌಕರನಾಗಿ ಬಂಧುಗಳ ವಲಯದಲ್ಲಿ ಗೌರವ ಭಾಜನನಾಗಿದ್ದ. ನನ್ನ ಹಾಗೂ ತಮ್ಮನ ಶಿಕ್ಷಣ ಅರ್ಧ ದಾರಿಯಲ್ಲಿತ್ತು. ಓದುವವರ ವಿಷಯ ಮುಂದೆ ನೋಡಿಕೊಂಡರಾಯಿತು ಎಂದುಕೊಂಡ ಅಪ್ಪ ಮತ್ತು ಅಣ್ಣಂದಿರೆಲ್ಲ ನಮ್ಮನ್ನು ಕರೆಸಿಕೊಂಡು ನಮಗೆ ದೊಡ್ಡ ಮನೆಯಿಂದ ಬಂದಿದ್ದ

ತರಿ, ಖುಷ್ಕಿ ಮತ್ತು ಭಾಗಾಯ್ತನ್ನು ಹಿಸ್ಸೆ ಮಾಡಿದರು. ನಾವು ಆರು ಜನ ಗಂಡುಮಕ್ಕಳು ಮತ್ತು ಅಪ್ಪನಿಗೆ ಸೇರಿದಂತೆ ಏಳು ಸಮಪಾಲನ್ನು ಗುರುತು ಹಾಕಿ ಪ್ರತಿಯೊಬ್ಬರ ಆಸ್ತಿ ಭಾಗದ ಚೆಕ್ಕುಬಂದಿಯನ್ನು ನಮೂದಿಸಿ ಹಿಸ್ಸೆ ಪತ್ರವನ್ನು ಮರುದಿನವೇ ರಿಜಿಸ್ಟರ್ ಮಾಡಿಸಲಾಯಿತು. ಅಪ್ಪನ ಮುಂಜಾಗ್ರತೆಯಿಂದ ನಡೆದ ಪಿತ್ರಾರ್ಜಿತ ಆಸ್ತಿಯ ಹಂಚಿಕೆ. ಅವನ ಉಸ್ತುವಾರಿಯಲ್ಲಿ ನಡೆದ ಕಾರಣ ಎರಡನೇ ಆನರ್ಸ್ ವಿದ್ಯಾರ್ಥಿ ಆಗಿದ್ದ ದಿನಗಳಲ್ಲಿಯೇ ನಾನು ಎರಡು ಎಕರೆ ತರಿ, ಎರಡು ಎಕರೆ ಖುಷ್ಕಿ ಮತ್ತು ಎಂಟು ಗುಂಟೆ ಭಾಗಾಯ್ತಿನ ಖಾತೆದಾರನಾಗಿ ರಾಜ್ಯದ ಕಂದಾಯ ಇಲಾಖೆಯಲ್ಲಿ ನೊಂದಾವಣೆಯಾಗಿದ್ದೆ. ಇನ್ನೂ ಓದುತ್ತಿದ್ದ ನಾನು ಹಾಗೂ ನನ್ನ ತಮ್ಮನ ವೆಚ್ಚಗಳನ್ನು ಮೂವರೂ ಅಣ್ಣಂದಿರು ವಹಿಸಿಕೊಳ್ಳುವ ಮಾತು ಹಿಸ್ಸೆ ಪಂಚಾಯ್ತಿಯ ಸಂದರ್ಭದಲ್ಲಿ ಬಂದಿತ್ತು. ಅಣ್ಣಂದಿರು ಅದನ್ನು ಒಪ್ಪಿಕೊಂಡಿದ್ದರು. ನಾಲ್ಕನೆಯ ಅಣ್ಣನಿಗೆ ಬಂದ ಆಸ್ತಿಯ ಪಾಲನ್ನು ದೊಡ್ಡಣ್ಣನ ಉಸ್ತುವಾರಿಗೆ ಬಿಡಲಾಯಿತು. ನನ್ನ ಆಸ್ತಿಯ ಉಸ್ತುವಾರಿಯನ್ನು ಎರಡನೆಯ ಅಣ್ಣ ಟೋಪಣ್ಣನ ವಶಕ್ಕೆ ಬಿಡಲಾಯಿತು. ನನ್ನ ತಮ್ಮನ ಆಸ್ತಿಯ ಉಸ್ತುವಾರಿಯನ್ನು ಮೂರನೆಯ ಅಣ್ಣ ಸಣ್ಣಣ್ಣನ ಸ್ವಾಧೀನಕ್ಕೆ ಒಪ್ಪಿಸಲಾಯಿತು. ಅಪ್ಪನಿಗೂ ಬಂದಿದ್ದ ಗದ್ದೆ ತೋಟಗಳ ಉಸ್ತುವಾರಿಯನ್ನು ಅವನು ಊರಲ್ಲಿದ್ದ ಮೂವರು ಹಿರಿಯ ಮಕ್ಕಳಲ್ಲಿ ಯಾರಿಗಾದರೂ ಒಪ್ಪಿಸಬಹುದು, ಇಲ್ಲವೇ ತಾನೇ ಸ್ವಂತವಾಗಿ ನಿರ್ವಹಿಸಬಹುದು ಎಂದು ಪಂಚಾಯ್ತಿಯಲ್ಲಿ ಪ್ರಸ್ತಾಪವಾಗಿತ್ತು. ಅಪ್ಪ, ಅವ್ವ ವಯಸ್ಸಾದ ತಮ್ಮಿಬ್ಬರನ್ನು ನೋಡಿಕೊಳ್ಳಬಲ್ಲವಳು ಮೂರನೆಯ ಸೊಸೆ (ಸಣ್ಣಣ್ಣನ ಪತ್ನಿ) ಎಂದು ತೀರ್ಮಾನಿಸಿದರು. ಇನ್ನೂ ಹುಡುಗರಾಗಿದ್ದ ನಾವು ಮೂರೂ ಜನ ಅಪ್ಪ ಅವ್ವ ಇದ್ದ ಮನೆಗೆ ಬರುವುದು ಸಹಜವಾಗಿದ್ದರಿಂದ ರಜೆಯ ದಿನಗಳಲ್ಲಿ ಸಣ್ಣಣ್ಣನ ಮನೆಗೆ ಬರುತ್ತಿದ್ದೆವು. ಉಳಿದ ಇಬ್ಬರೂ ಅಣ್ಣಂದಿರು ನಮ್ಮಲ್ಲಿ ವಿಶ್ವಾಸವನ್ನು ಕಡಿಮೆ ಮಾಡಲಿಲ್ಲ. ಅವುಂತ್ಲ ಮಾಡಿದಾಗಲೆಲ್ಲ ಅವರ ಮನೆಗಳಿಗೆ ನಮಗೆ ಆಹ್ವಾನ ಇರುತ್ತಿತ್ತು. ಆಸ್ತಿಯನ್ನು ನೋಡಿಕೊಳ್ಳುತ್ತಿರುವ ಕಾರಣಕ್ಕೆ ನಾಲ್ಕನೆಯ ಅಣ್ಣ ದೊಡ್ಡಣ್ಣನ ಮನೆಗೆ ಅಂತ ಹೋಗುತ್ತಿರಲಿಲ್ಲ. ನಾನೂ ಎರಡನೇ ಅಣ್ಣನ ಮನೆಗೆ ಅದೇ ಕಾರಣಕ್ಕೆ ಹೋಗುತ್ತಿರಲಿಲ್ಲ.

ಹತ್ತು ವರ್ಷಗಳ ಹಿಂದೆಯಷ್ಟೇ (1963) ಕಟ್ಟಿಸಿದ್ದ ಐದು ಅಂಕಣದ ಮೆತ್ತು, ಸುತ್ತ ಕಡಿಮಾಡು ವಿಸ್ತರಿಸಿದ್ದ, ಮುಂದೆ ಭಾವಂತಿ ಅಂಗಳದ ವಿಸ್ತಾರವಿದ್ದ ಚೌಕಿಮನೆ, ಗದ್ದೆ ತೋಟಗಳಂತೆಯೇ ಹಿಸ್ಸೆಯಲ್ಲಿ ಭಾಗವಾಗಿತ್ತು. ಹಿರಿಯ ಇಬ್ಬರು ಅಣ್ಣಂದಿರು ಹಂಚಿಕೆಯಾಗಿದ್ದ ಮನೆಯ ಭಾಗದಲ್ಲಿ ತಮಗೆ ಅನುಕೂಲವಾದ ಪರಿವರ್ತನೆಗಳನ್ನು ಮಾಡಿಕೊಂಡರು. ಒಂದು ಕಡೆ ಇದ್ದ ಅಡುಗೆ ಮನೆ ಇನ್ನೂ ಎರಡು ಕಡೆ ಪ್ರತ್ಯೇಕವಾಯಿತು. ಹಿಸ್ಸೆಯಾದ ಎಲ್ಲ ದೊಡ್ಡ ಮನೆಗಳಲ್ಲಿಯೂ ಇಂಥ ಪರಿಸ್ಥಿತಿ ಇರುವುದು ಸಹಜವಾಗಿದ್ದರಿಂದ ನಮ್ಮ ಮನೆಗೆ ಬರುತ್ತಿದ್ದ ಹತ್ತಿರದ ನೆಂಟರು ಅರ್ಥ ಮಾಡಿಕೊಂಡು ಎಲ್ಲರೊಂದಿಗೆ ಮೊದಲಿನ ವಿಶ್ವಾಸದಿಂದಲೇ ನಡೆದುಕೊಳ್ಳುತ್ತಿದ್ದರು. ನಮ್ಮ ಮನೆಯಲ್ಲಿ ಹಿಸ್ಸೆಯಾಗಿದ್ದ ವಿಷಯ ತಿಮ್ಮಪ್ಪನಿಗೆ ತಿಳಿದಿತ್ತು. ಆದರೆ ಅದು ಕ್ರಾಂತಿಕಾರಕವಾದ ಬದಲಾವಣೆ ಎಂದೇನೂ ನಮ್ಮಿಬ್ಬರಲ್ಲಿ ಚರ್ಚೆಯಾಗಿರಲಿಲ್ಲ. ಬೇರೆಯಾದ ನಂತರ ತಿಮ್ಮಪ್ಪ ನಮ್ಮ ಮನೆಗೆ ಬಂದಾಗ ಅವನಿಗೆ ಯಾವ ಮನೆಯಿಂದಲಾದರೂ ಉಪಚಾರ ಸಿಗುತ್ತಿತ್ತು. ಕೊಡಸೆ ಮನೆಯವರು ಬೇರೆಯಾಗಿದ್ದಾರೆ ಎಂಬ ಕಿನಿಸಿಗೆಗೆ ನಮ್ಮಿಬ್ಬರಲ್ಲಿ ಆಸ್ಪದವಾಗುತ್ತಿರಲಿಲ್ಲ. ಆನರ್ಸ್ ಎರಡನೆಯ ವರ್ಷದಲ್ಲಿ ಆದ ನಮ್ಮ ಮನೆಯ ಹಿಸ್ಸೆಯ ಬಗ್ಗೆ ನಾವಿಬ್ಬರೂ ಗಂಭೀರವಾಗಿ ಚರ್ಚೆ ನಡೆಸಿದ ನೆನಪು ಬರುತ್ತಿಲ್ಲ. ನಾವೇ ಸೃಷ್ಟಿಸಿಕೊಂಡಿದ್ದ ಸಾಮಾಜಿಕ– ಸಾಂಸ್ಕೃತಿಕ ಪ್ರಪಂಚದಲ್ಲಿ ಮನೆಯ ವಿದ್ಯಮಾನಗಳು ಪ್ರವೇಶ ಪಡೆದಿರಲಿಲ್ಲ ಎಂಬಂತೆ ಈಗ ತೋರುತ್ತದೆ.

ಪದವಿಯ ಮೂರು ವರ್ಷ ರಜೆ ದಿನಗಳಲ್ಲಿ ಸೇರುತ್ತಿದ್ದ ನಾವು ಫಲಿತಾಂಶಗಳು ಬಂದ ನಂತರ ಅವುಗಳ ವಿವರ ತಿಳಿದುಕೊಂಡೆವು. ಇಬ್ಬರಿಗೂ ಪದವಿ ಸಿಕ್ಕಿದ್ದು ಒಂದು ಹಂತಕ್ಕೆ ಬಂದ ಸಮಾಧಾನವಾಗಿತ್ತು. ಕೆಲಸ ಪಡೆಯುವ ಅನಿವಾರ್ಯತೆ ನನಗೆ ಇದ್ದರೂ ಬೆಂಗಳೂರಿನಲ್ಲಿ ಉಚಿತ ವಿದ್ಯಾರ್ಥಿನಿಲಯದ ಆಸರೆ ಇರುವ ಕಾರಣ ಮುಂದಿನ ಹಂತವಾಗಿ ಸ್ನಾತಕೋತ್ತರ ಪದವಿ ಗಳಿಸುವ ಮನಸ್ಸು ಮಾಡಿದೆ. ತಿಮ್ಮಪ್ಪ ಮುಂದೆ ಓದುವುದಕ್ಕೆ ಮನಸ್ಸು ಮಾಡಲಿಲ್ಲ. ಕೆಲಸಕ್ಕೆ ಪ್ರಯತ್ನ ನಡೆಸುತ್ತಾ ಇರುವುದನ್ನು ತಿಳಿದು ನಾನು ಬೆಂಗಳೂರಿಗೆ ಹೊರಟು ಸೆಂಟ್ರಲ್ ಕಾಲೇಜಿನಲ್ಲಿ ಎಂ ಎ ಪ್ರವೇಶ ಪಡೆದುಕೊಂಡೆ. ಪತ್ರ ವ್ಯವಹಾರಗಳು ಎಂದಿನಂತೆ ಮುಂದುವರಿದಿದ್ದವು.

ಚಿಕ್ಕಂದಿನಿಂದ ನಾನು ಬೀಕಲು. ಸಣ್ಣಗೆ ನರಪೇತಲನಾಗಿದ್ದವನು ಬೇಸಾಯದ ಕೆಲಸಕ್ಕೆ ಯೋಗ್ಯನಾಗಲಾರ ಎಂಬುದು ಅಪ್ಪನ ಅನಿಸಿಕೆಯಾಗಿತ್ತು. 'ಚುರುಕಾಗಿ ಓದ್ತಾ ಇದ್ದಾನಂತೆ. ಎಲ್ಲಾದರೂ ನೌಕರಿ ಹಿಡಿದರೆ ಒಳ್ಳೆಯದು' ಎಂದು ಆಗಾಗ ಹೇಳುತ್ತಾ ಇದ್ದ. 'ಹೋಗಲಿ ಒಂದು ಮೇಷ್ಟರ ಕೆಲಸ ಸಿಗಾದಿಲ್ಲನ?' ಎಂದು ನಾನು ಪದವಿ ಓದಲು ಹೋಗುವ ಮೊದಲು ಕೇಳಿದ್ದ. ಆರು ಜನ ಗಂಡು ಮಕ್ಕಳಲ್ಲಿ ನಾನು ಐದನೆಯವನು. ಒಟ್ಟು ಕುಟುಂಬದಲ್ಲಿ ಅಷ್ಟೇನೂ ದೊಡ್ಡದಾದ ನಿರೀಕ್ಷೆ ಮೂಡಿಸಿದವನಲ್ಲ. ಮಾಧ್ಯಮಿಕ ಶಾಲೆಯಲ್ಲಿ ಇದ್ದಾಗ ಹಿಂದಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಆರನೆಯ ರ್‍ಯಾಂಕ್ ಗಳಿಸಿದ ಸುದ್ದಿ ಮನೆಯಲ್ಲಿ ಅಷ್ಟೇನೂ ಮಹತ್ವದ ಸುದ್ದಿಯೂ ಆಗಿರಲಿಲ್ಲ. ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಗಳಿಸಿದ್ದರಿಂದ ನಾನು, ಪ್ರಥಮದರ್ಜೆಯಲ್ಲಿ ಉತ್ತೀರ್ಣನಾಗಿ ಹೆಸರು ತಂದಿದ್ದರಿಂದ ತಿಮ್ಮಪ್ಪ ನಮ್ಮ ಹಿರಿಯರಲ್ಲಿ 'ಪರವಾಗಿಲ್ಲ, ಹುಡುಗರು' ಎಂಬ ವಿಶ್ವಾಸ ಮೂಡಿಸಿದ್ದಿರಬೇಕು. ಹುಟ್ಟಿದಾಗ ಸಹಜವಾಗಿ ಚೆನ್ನಾಗಿಯೇ ಇದ್ದ ತಿಮ್ಮಪ್ಪ ಎರಡು ಮೂರು ವರ್ಷದವನಿದ್ದಾಗ ಪೋಲಿಯೋಗೆ ತುತ್ತಾದಾಗ ಅವನನ್ನು ಹೊತ್ತುಕೊಂಡು ಅರಸಾಳಿನವರೆಗೂ ನಡೆದು ಹೋಗಿ ಅಲ್ಲಿಂದ ರೈಲಿನಲ್ಲಿ ಶಿವಮೊಗ್ಗದ ದೊಡ್ಡಾಸ್ಪತ್ರೆಗೆ ಒಯ್ದಿದ್ದ ಬಡಿಯನಾಯ್ಕರು ತಮ್ಮ ವ್ಯಾಪ್ತಿಗೆ ಬಂದ ಎಲ್ಲ ಬಗೆಯ ಚಿಕಿತ್ಸೆಯನ್ನೂ ಕೊಡಿಸಿದ್ದರು. ಆದರೂ ದೊಣ್ಣೆಯ ನೆರವಿನಿಂದ ನಡೆಯುವಷ್ಟು ಸುಧಾರಿಸಿಕೊಂಡ ತಿಮ್ಮಪ್ಪನನ್ನು ಕನಿಷ್ಠ ಎಲ್ ಎಸ್ ವರೆಗಾದರೂ ಓದಿಸಲೇಬೇಕೆಂದು ಅವರು ಸಂಕಲ್ಪಿಸಿದರಂತೆ. ಆಗ ಎಲ್‌ಎಸ್ (ಲೋವರ್ ಸೆಕೆಂಡರಿ) ಮಾಡಿದವರನ್ನು ಗುಮಾಸ್ತರನ್ನಾಗಿ ನೇಮಕ ಮಾಡಿಕೊಳ್ಳುತ್ತಾರೆ ಎಂಬುದು ಬಡಿಯನಾಯ್ಕರಿಗೆ ಗೊತ್ತಾಗಿತ್ತು. 'ಇವನು ಎಲ್‌ಎಸ್ ಮಾಡಿಕೊಂಡರೆ ಶಿವಮೊಗ್ಗದ ಮಂಡಿಯಲ್ಲಿ ಗುಮಾಸ್ತನನ್ನಾಗಿ ಸೇರಿಸಬಹುದು. ಅಲ್ಲಿ ಹೇಗೂ ವಾಸ್ತವ್ಯಕ್ಕೆ ಅನುಕೂಲ ಇದೆ. ಎದುರುಗಡೆಯೇ ಹೋಟಲು ಇರುವುದರಿಂದ ಬೆಳಗ್ಗೆ, ಮಧ್ಯಾಹ್ನಕ್ಕೆ ತೊಂದರೆ ಇಲ್ಲ. ಮಂಡಿಯ ಸನಿಹದಲ್ಲಿ ಇರುವ ಗಣಪತಿ ದೇವಸ್ಥಾನದಲ್ಲಿ ಸಂಜೆಯ ಪೂಜೆಯ ನಂತರ ಪನಿವಾರ (ಪ್ರಸಾದ) ಕೊಡುತ್ತಾರೆ. ಅದನ್ನು ತಿಂದುಕೊಂಡು ರಾತ್ರಿ ಕಳೆಯುತ್ತಾನೆ...' ಎಂದು ತಿಮ್ಮಪ್ಪನ ಭವಿಷ್ಯದ ಬಗ್ಗೆ ಅವರು ಹೇಳುತ್ತಿದ್ದರಂತೆ. 'ಕೈಲಾಗದ, ಬೇಸಾಯದ ಕೆಲಸ ಮಾಡಲಾಗದ ಇವನು ಮನೆಯಲ್ಲಿ ಉಳಿದುಕೊಂಡರೆ ಅಣ್ಣ, ತಮ್ಮ ದಾಕ್ಷಿಣ್ಯಕ್ಕೆ ಏನನ್ನೂ ಹೇಳದಿರಬಹುದು, ಆದರೆ ಅವರ ಹೆಂಡತಿಯರು ರಟ್ಟೆ ಹಿಡಿದುಕೊಂಡು ಬಾಗಿಲಿಂದ ಹೊರ ಹಾಕಬಹುದು' ಎಂಬ ಅಳುಕನ್ನೂ ಅವರು ವ್ಯಕ್ತಪಡಿಸುತ್ತಿದ್ದರಂತೆ. ಪ್ರಾಥಮಿಕ ಶಾಲೆಯಲ್ಲಿದ್ದಾಗ ಅಕ್ಷರ, ಮಗ್ಗಿ ಕಲಿಯುತ್ತಿದ್ದಾಗ ಸೋಮಾರಿತನ ತೋರಿಸಿದರೆ 'ಓದಿದರೆ ಅನ್ನ ತಿಂತಾನೆ, ಇಲ್ಲದಿದ್ದರೆ ಮಣ್ಣು ತಿಂತಾನೆ' ಎಂದು ಅವರು ಮನೆಯಲ್ಲಿ ಆಗಾಗ ಹೇಳುತ್ತಿದ್ದುದನ್ನು ತಿಮ್ಮಪ್ಪ ನನ್ನೊಂದಿಗೆ ನೆನಪು ಮಾಡಿಕೊಂಡಿದ್ದ. ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚಿನ ಅಂಕ ಗಳಿಸಿದ್ದರಿಂದ ಅಂಚೆ ಇಲಾಖೆಯಲ್ಲಿ

ಸಂದರ್ಶನವೇ ಇಲ್ಲದೆ ಕೆಲಸ ಸಿಗುವುದು ನಮಗೆ ಖಾತರಿ ಆಗಿತ್ತು. ನಮಗಿಂತ ಮೂರು ವರ್ಷ ಹಿಂದಿನ ತಂಡದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಗಳಿಸಿದ್ದ ನಮ್ಮ ಹೈಸ್ಕೂಲಿನ ಒಂದಿಬ್ಬರು ಹಿರಿಯರು ಪದವಿ, ಸ್ನಾತಕೋತ್ತರ ಪದವಿ ಗಳಿಸಿದ ನಂತರ ಬೇರೆಲ್ಲೂ ಕೆಲಸ ಸಿಗದೆ ಎಸ್ಸೆಸ್ಸೆಲ್ಸಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆಯೇ ಅಂಚೆ ಇಲಾಖೆಯಲ್ಲಿ ಕೆಲಸ ಪಡೆದಿದ್ದ ನಿದರ್ಶನ ನಮ್ಮ ಎದುರು ಇತ್ತು. ಎಲ್ಲಾದರೂ ಕೆಲಸ ಪಡೆಯಬಹುದು ಎಂಬ ವಿಶ್ವಾಸ ಇದ್ದರೂ ಓದಿಗೆ ತಕ್ಕ ಕೆಲಸ ಪಡೆಯುವುದು ಆದ್ಯತೆ ಆಗಿತ್ತು.

ನಾನು ಎಂ ಎ ಓದಿಗೆ ಸೇರಿಕೊಂಡ ಮೇಲೆ ತಿಮ್ಮಪ್ಪನ ಮನೆಗೆ ಹೋಗುವುದು ಮೊದಲಿನಂತೆ ಸಾಧ್ಯವಾಗುತ್ತಿರಲಿಲ್ಲ. ಅವನಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಕೆಲಸವಾಗಿ, ಪ್ರಾರಂಭಿಕ ತರಬೇತಿಯ ನಂತರ ಮಂಡ್ಯಕ್ಕೆ ನಿಯೋಜಿಸಿದ ವಿಷಯವನ್ನು ಅವನೇ ಪತ್ರ ಬರೆದು ತಿಳಿಸಿದ್ದ. ಅವನು ಮಂಡ್ಯಕ್ಕೆ ಬಂದ ಸುದ್ದಿ ತಿಳಿಯುತ್ತಲೇ ಕಾಲೇಜಿಗೆ ಚಕ್ಕರ್ ಹಾಕಿ ನಾನು ಮಂಡ್ಯಕ್ಕೆ ಹೋದೆ. ಬೆಳಗ್ಗೆ ಎಂಟಕ್ಕೆಲ್ಲ ಬೆಂಗಳೂರು ಬಿಟ್ಟವನು ಹತ್ತೂವರೆ ಸುಮಾರಿಗೆ ಮಂಡ್ಯ ತಲುಪಿ ಬ್ಯಾಂಕ್ ಹುಡುಕಿಕೊಂಡು ಹೋದೆ. ಅವನಿಗೂ ಆಗಷ್ಟೆ ಬ್ಯಾಂಕಿಗೆ ಸೇರಿದ ಹೊಸದು. ಔಪಚಾರಿಕ ಮಾತುಕತೆ ಆದ ನಂತರ ಅವನ ಮಧ್ಯಾಹ್ನದ ಭೋಜನದ ಬಿಡುವಿನಲ್ಲಿ ಸೇರಲು ಮಾತಾಡಿಕೊಂಡು ಹೊರಗಡೆ ಬಂದೆ. ಇನ್ನೂ ಎರಡು ಮೂರು ಗಂಟೆ ಸಮಯ ಕಳೆಯಬೇಕು. ಹಾಗೆಯೇ ಸುತ್ತಾಡುತ್ತ ನಂದಾ ಟಾಕೀಸಿನ ಬಳಿ ಬಂದೆ. ಯಾವುದೋ ಬೆಳಗಿನ ಪ್ರದರ್ಶನ ಆಗಷ್ಟೆ ಪ್ರಾರಂಭವಾಗಿತ್ತು. ಟಿಕೆಟ್ ಪಡೆದು ಒಳಕ್ಕೆ ಹೋದೆ. ಸಮಯ ಕಳೆಯಲು ಸಿನಿಮಾ ನೋಡಿದ್ದಾಯಿತು. ಎರಡೂ ಕಾಲು ಗಂಟೆಯ ಸುಮಾರಿಗೆ ಬ್ಯಾಂಕ್ ಬಳಿ ಹೋದೆ. ಅಲ್ಲಿ ಸ್ವಲ್ಪ ಹೊತ್ತು ಕಾದ ನಂತರ ತಿಮ್ಮಪ್ಪ ಹೊರಗಡೆ ಬಂದ. ಬೆಂಗಳೂರು–ಮೈಸೂರು ರಸ್ತೆಯ ಯಾವುದೋ ಮಿಲಿಟರಿ ಹೋಟಲಿಗೆ ಕರೆದೊಯ್ದು ಮುದ್ದೆ ತಲೆಮಾಂಸದ ಊಟ ಹಾಕಿಸಿದ. ಮಲೆನಾಡಿಗರಾಗಿದ್ದ ನಮ್ಮಿಬ್ಬರಿಗೆ ಅನ್ನವೇ ಪ್ರಧಾನ ಆಹಾರ. ಆದರೆ ಪಿಯುಸಿ ಕಾಲದಿಂದ ಬೆಂಗಳೂರಿನ ಉಚಿತ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆದಿದ್ದ ನನಗೆ ಹಾಸ್ಟಲಿನ ಊಟದಲ್ಲಿ ನಿತ್ಯವೂ ರಾಗಿ ಮುದ್ದೆ ಇತ್ತು. ರಾಗಿ ಮುದ್ದೆಯೊಂದಿಗೆ ತಲೆ ಮಾಂಸದ ಗಸಿ ಒಳ್ಳೆಯ ಹೊಂದಾಣಿಕೆಯಾಗಿತ್ತು. ಎಂದಿನಂತೆ ಬಿಡುವಿಲ್ಲದೆ ಪ್ರಚಲಿತ ಸಾಹಿತ್ಯಕ್ಕೆ ಸಂಬಂಧಿಸಿದ ನಾನಾ ಸಂಗತಿಗಳನ್ನು ಚರ್ಚಿಸುತ್ತ ಊಟ ಮುಗಿಸಿದೆವು. ಅವನು ಇನ್ನೂ ಸ್ವಲ್ಪ ಹೊತ್ತು ನನಗೆ ಜೊತೆ ನೀಡಿದ. ಬಸ್ ನಿಲ್ದಾಣದವರೆಗೆ ಬಂದು ಬೀಳ್ಕೊಟ್ಟ. ತನ್ನದೇ ಸ್ವತಂತ್ರ ಬದುಕು ಕಟ್ಟಿಕೊಳ್ಳಲು ತಿಮ್ಮಪ್ಪ ಗಟ್ಟಿ ಹೆಜ್ಜೆ ಇಟ್ಟಿರುವುದು ನನಗೆ ಅಭಿಮಾನದ ಸಂಗತಿಯಾಗಿತ್ತು.

* * * *

**ಹೆಬ್ಬೆಟ್ಟಿನವರ ಶಿಕ್ಷಣಾಸಕ್ತಿ**

ತಿಮ್ಮಪ್ಪ ಕೆಲಸ ಪಡೆದು ಮಂಡ್ಯಕ್ಕೆ ಹೋದ ಮೇಲೆ ಎಂ ಎ ವಿದ್ಯಾರ್ಥಿಯಾಗಿದ್ದ ನಾನು ದಸರಾ, ಕ್ರಿಸ್ಮಸ್ ರಜೆಗಳಿಗೆ ಊರಿಗೆ ಹೋಗುತ್ತಿದ್ದರೂ ಮೊದಲಿನಂತೆ ಬರುವೆಗೆ ಹೋಗುತ್ತಿರಲಿಲ್ಲ. ಪೇಟೆಗೆ ಬಂದಾಗ ಅಲ್ಲಿ ಎದುರಾದ ತಿಮ್ಮಪ್ಪನ ಅಣ್ಣ ಚುಂಗಣ್ಣನನ್ನು ಭೇಟಿ ಮಾಡಿ ಮಾತಾಡಿಸುತ್ತಿದ್ದೆ. ವರ್ಷಗಳಿಂದ ರಜೆಯ ದಿನಗಳಲ್ಲಿ ಮನೆಗೆ ಭೇಟಿ ನೀಡುತ್ತಿದ್ದ ನನ್ನ ಬಗ್ಗೆ ಅವರಿಗೆ ತಿಮ್ಮಪ್ಪನ ಬಗ್ಗೆ ಇದ್ದ ವಾತ್ಸಲ್ಯವೇ ಇತ್ತು. ಕೆಲವೊಮ್ಮೆ ತಿಮ್ಮಪ್ಪನ ತಮ್ಮ ಗೋಪಾಲನೂ ಪೇಟೆಯಲ್ಲಿ ಎದುರಾಗುತ್ತಿದ್ದ. ಇಬ್ಬರೂ ಔಪಚಾರಿಕ ಮಾತುಕತೆ ನಡೆಸಿ ಅರುಗಾಗುತ್ತಿದ್ದೆವು. ಒಂದು ರಜದ ಭೇಟಿಯಲ್ಲಿ ಪೇಟೆಯಲ್ಲಿದ್ದಾಗ ಬಡಿಯನಾಯ್ಕರು ತಮ್ಮಷ್ಟಕ್ಕೆ ಬಿರುಸಾಗಿ ನಡೆಯುತ್ತಾ ಯಾವುದೋ ಅಂಗಡಿಗೆ ಹೋಗಿ ಅಲ್ಲೇನನ್ನೋ ಕೊಂಡು ಕೊಂಡು ಅಷ್ಟೇ

ಬಿರುಸಾಗಿ ಬರುವೆಯ ಕಡೆಗೆ ವಾಪಸಾಗುತ್ತಾ ಇದ್ದುದನ್ನು ನೋಡಿದೆ. ಅವರನ್ನು ತಡೆದು ನಿಲ್ಲಿಸಿ ಮಾತನಾಡಿಸುವ ಸಲಿಗೆ ಇರಲಿಲ್ಲ. ಎದುರು ಬಂದಿದ್ದರೆ ಮಾತಾಡಿಸಬಹುದಿತ್ತು. ಆಗಲೂ ಅವರು 'ಲಕ್ಷ್ಮಣ, ಊರಿಗೆ ಯಾವಾಗ ಬಂದೆ? ಎಲ್ಲ ಚೆನ್ನಾಗಿದಾರ?' ಎಂದಷ್ಟೆ ವಿಚಾರಿಸುತ್ತಿದ್ದರು ಎಂಬುದು ನನ್ನ ಊಹೆ. ರಜೆಯಲ್ಲಿ ಊರಿಗೆ ಹೋದಾಗ ನನಗೆ ಆದ ಅನುಭವಗಳೆಲ್ಲ ತಿಮ್ಮಪ್ಪನಿಗೆ ಎಂದಿನಂತೆ ಪತ್ರದ ಮೂಲಕ ಬರೆದು ತಿಳಿಸುತ್ತಿದ್ದೆ. ತಿಮ್ಮಪ್ಪ ಊರಿಗೆ ಬಂದಾಗ ಚುಂಗಣ್ಣನಾಗಲೀ, ಗೋಪಾಲನಾಗಲೀ ಪೇಟೆಯಲ್ಲಿ ನನ್ನನ್ನು ಭೇಟಿ ಮಾಡಿ ಮಾತಾಡಿಸಿದ್ದನ್ನು ಹೇಳಿದರೆ ಅದು ತಿಮ್ಮಪ್ಪನಿಗೆ ಹೊಸ ಸಂಗತಿ ಆಗುತ್ತಿರಲಿಲ್ಲ.

ಚುಂಗಣ್ಣನನ್ನು ಪೇಟೆಯಲ್ಲಿ ಭೇಟಿಯಾಗಿ ಅಲ್ಪೋಪಹಾರಕ್ಕೆ ಹೆಬ್ಬಾರನ ಹೋಟಲಿನಲ್ಲಿ ಕುಳಿತಿದ್ದಾಗ 'ಅಂತೂ ಕರಿಯಜ್ಜ (ತಿಮ್ಮಪ್ಪನೂ ನನ್ನ ಅಪ್ಪನನ್ನು ಹೀಗೆಯೇ ಕರೆಯುವುದು) ಹಠ ಹಿಡಿದು ಇಲ್ಲಿ ಹಾಸ್ಟಲು ಅಂತ ಮಾಡಿಸಿದ ಮೇಲೆ ನೀವೆಲ್ಲ ಓದಿ ಮುಂದೆ ಹೋಗಲು ಸಾಧ್ಯವಾಯಿತು. ಈಗಂತೂ ಮುಳುಗಡೆ ಕಡೆಯ ಹುಡುಗರಿಗೆ ತುಂಬಾ ಒಳ್ಳೆಯದಾಗಿದೆ' ಎಂದು ಹೇಳಿದ್ದು ನನ್ನ ತಲೆಯಲ್ಲಿ ಉಳಿಯಿತು. ಅವತ್ತು ಮನೆಗೆ ಹೋದವನು ಮೆತ್ತಿನ ಮೇಲೆ ಹಳೆಯ ಬೆತ್ತದ ಬುಟ್ಟಿಯಲ್ಲಿ ಜೀರ್ಣವಾದ ಸ್ಥಿತಿಯಲ್ಲಿದ್ದ ಹಳೆಯ ಕಡತವೊಂದನ್ನು ತಲಾಷು ಮಾಡಿದೆ. ಅದರಲ್ಲಿ ಹಳೆಯದಾಗಿದ್ದರೂ ಓದುವಷ್ಟು ಸುಮಾರಾಗಿದ್ದ ಒಂದು ಪ್ರಚಾರ ಪತ್ರವೂ ಸಿಕ್ಕಿತು. 1949ರ ಇಸವಿಯಲ್ಲಿ 'ಹೊಸನಗರ ತಾಲ್ಲೂಕಿನ ದೀವರ ಸಂಘ' ಎಂಬ ಹೆಸರಿನಲ್ಲಿ ಸಮಾಜದ ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲರನ್ನೂ ಸಂಘಟಿಸಲು ಕರೆದ ಸಭೆಯ ನಡಾವಳಿಗಳನ್ನು ದಾಖಲಿಸಿದ ಪುಸ್ತಕವೂ ಇತ್ತು. ಅದನ್ನು ಪೇಟೆಯಲ್ಲಿ ನೆಲೆಸಿದ್ದ ಶ್ಯಾನುಭೋಗ ರಾಮರಾಯ ಎಂಬುವರು ಬರೆದಿರುವುದಾಗಿ ಬಿಕ್ಕಲಂ ಎಂಬ ಸೂಚನೆ ಇತ್ತು. ದೀವರ ಸಭೆಯ ಅಧ್ಯಕ್ಷತೆಯನ್ನು ಪೇಟೆಯ ಗಣ್ಯರಲ್ಲಿ ಒಬ್ಬರಾಗಿದ್ದ ನಾಗೇಶ ರಾವ್ ಎಂಬುವರು ವಹಿಸಿದ್ದು ಅದರಲ್ಲಿ ನಮೂದಾಗಿತ್ತು. ನಮ್ಮಲ್ಲಿ ಇಂಥ ಸಭೆಗಳನ್ನು ಸಂಘಟಿಸುವ ಇಲ್ಲವೇ ಅದನ್ನು ನಡೆಸುವಂಥ ವಿದ್ಯಾವಂತರು ಇಲ್ಲ ಎಂಬುದನ್ನು ಅಂದಿನ ಹಿರಿಯರು ಮನಗಂಡು ತಮ್ಮ ಬಗ್ಗೆ ವಿಶ್ವಾಸ ಇಟ್ಟಿದ್ದ ನಾಗೇಶ ರಾವ್ ಅವರಂಥ ಗಣ್ಯರನ್ನು ಸಭೆಯನ್ನು ನಡೆಸಿಕೊಡಲು ಕೇಳಿಕೊಂಡಿದ್ದಿರಬಹುದು ಎಂದು ನಾನು ತರ್ಕಿಸಿದೆ. ಅದರಲ್ಲಿನ ವಿವಿಧ ಸಭೆಗಳ ಕಲಾಪಗಳ ವಿವರಗಳನ್ನು ಪರಿಶೀಲಿಸಿದೆ. ಪ್ರತಿ ಸಭೆಯಲ್ಲೂ ಅಪ್ಪನ ಹಾಜರಾತಿ ಇರುತ್ತಿತ್ತು. ನಮ್ಮವರ ವಿದ್ಯಾಭ್ಯಾಸಕ್ಕಾಗಿ ಪೇಟೆಯಲ್ಲಿ ಸ್ವಂತದ್ದಾದ ಒಂದು ವಿದ್ಯಾರ್ಥಿನಿಲಯವನ್ನು ಹೊಂದಬೇಕು ಎಂಬ ನಿರ್ಣಯವನ್ನು ಒಂದು ಸಭೆಯಲ್ಲಿ ಅಂಗೀಕರಿಸಿ ಆ ಸಂದರ್ಭಕ್ಕೆ ಸೇರಿದ್ದ ಎಲ್ಲರಿಂದಲೂ ಸ್ವಂತ ಕಟ್ಟಡಕ್ಕಾಗಿ ವಂತಿಗೆಯನ್ನು ಎತ್ತಿದ ವಿವರಗಳೂ ನಡವಳಿಕೆಯಲ್ಲಿ ಸೇರಿದ್ದವು. ನಮ್ಮ ಸೀಮೆಯಲ್ಲಿ ದೊಡ್ಡ ಜಮೀನ್ದಾರರೆಂದು ಖ್ಯಾತರಾಗಿದ್ದ ಬೆಳ್ಳೂರಿನ ಮಂಡ್ಲಿ ಪುಟ್ಟನಾಯ್ಕರನ್ನು ಸಂಘಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ವಿವರಗಳೂ ಆ ಕಡತದಲ್ಲಿದ್ದವು. ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿನಿಲಯವೊಂದನ್ನು ಅಸ್ತಿತ್ವಕ್ಕೆ ತರಲು ಸ್ವಂತ ಕಟ್ಟಡ ಹೊಂದಲು ಚಂದಾ ಕೊಟ್ಟವರ ಹೆಸರುಗಳನ್ನು ಪರಿಶೀಲಿಸಿದೆ. ಹೆಚ್ಚಿನ ಹೆಸರುಗಳ ಮುಂದೆ ಹೆಬ್ಬೆಟ್ಟಿನ ಗುರುತುಗಳು. ಕನ್ನಡದಲ್ಲಿ ಸಹಿ ಮಾಡಲಾರದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬೆಳ್ಳೂರಿನ ಮೂವರು ಯಜಮಾನರುಗಳ ಹೆಸರುಗಳಿದ್ದವು. ಗಂದ್ರಳ್ಳಿ, ಕುರಂಬಳ್ಳಿ, ವಡಾಸುಳ್ಳಿ, ಬಿದರಳ್ಳಿ, ಕಲ್ಲಳ್ಳಿ, ಕೊಡಸೆ, ಯಡಗುಡ್ಡೆ, ಬರುವೆ, ಹುಳುಗದ್ದೆ, ವಾರಂಬಳ್ಳಿ, ಜೇನಿ, ಹೊಳೇನಕೊಪ್ಪ, ಮಳವಳ್ಳಿ, ಚಿಬ್ಬಳ್ಳಿ ಇತ್ಯಾದಿ ಸಣ್ಣ ಪುಟ್ಟ ಮಜರೆ ಹಳ್ಳಿಗಳ ಯಜಮಾನರುಗಳು ಒಂದು, ಎರಡು ರೂಪಾಯಿಯಿಂದ ಐವತ್ತು ರೂಪಾಯಿವರೆಗೆ ಚಂದಾ ಹಣದ ಭರವಸೆ ನೀಡಿದ್ದು ನಡಾವಳಿಯ ಪುಸ್ತಕದಲ್ಲಿ ನಮೂದಾಗಿತ್ತು.

1949ರ ಅವಧಿಯೆಂದರೆ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ರಾಜ್ಯದಲ್ಲಿಯೂ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದ ಕಾಲ. ಮಲೆನಾಡಿನ ಆ ಮೂಲೆಯಲ್ಲಿ ತಮ್ಮವರಿಗೆ ವಿದ್ಯೆ ಪಡೆಯುವ ಪ್ರಯತ್ನದ ಅಂಗವಾಗಿ ನೆಂಟರಿಷ್ಟರನ್ನೆಲ್ಲ ಸಂಘಟಿಸುವ ಪ್ರಯತ್ನವನ್ನು ಅಪ್ಪ ಆರಂಭಿಸಿದ್ದ ಎನ್ನುವುದು ನನಗೆ ಕುತೂಹಲದ ಸಂಗತಿಯಾಗಿತ್ತು. ಆ ದಿನಗಳಲ್ಲಿ ಅವನು ಕೊಡಸೆಯ ದೊಡ್ಡ ಮನೆಯ ಯಜಮಾನನಾಗಿ ಹಲವು ಕುಟುಂಬಗಳ ದೊಡ್ಡ ಸಂಸಾರದ ಹೊಣೆಯನ್ನು ಹೊತ್ತಿದ್ದ. ಹಿಂದಿನ ಯಜಮಾನರ ಏಕೈಕ ಪುತ್ರನೂ, ತಮ್ಮ ದೊಡ್ಡ ಮಗನೂ ಶಿವಮೊಗ್ಗದಲ್ಲಿ ಹೈಸ್ಕೂಲಿನ ಮೇಲಿನ ತರಗತಿಗಳಲ್ಲಿ ಓದುತ್ತಾ ಇದ್ದ ಸಮಯ. (ಆಗ ಹೈಸ್ಕೂಲಿನ ತರಗತಿಗಳಿಗೆ ಫಾರ್ಮ್ ಎನ್ನುತ್ತಿದ್ದರಂತೆ. ಫೋರ್ತ್ ಫಾರ್ಮ್, ಫಿಫ್ತ್ ಫಾರ್ಮ್ ಎಂಬಂತೆ). ಅದಾದ ಮೂರು ವರ್ಷಗಳಲ್ಲಿ ಕೊಡಸೆಯ ದೊಡ್ಡ ಮನೆಯ ಹಿಸ್ಸೆಯಾಗಿತ್ತು. ಅವಿಭಕ್ತ ಕುಟುಂಬಗಳಲ್ಲಿ ಬೇರೆಯಾಗುವ ವಿದ್ಯಮಾನ ಹಠಾತ್ತಾಗಿ ಜರುಗುವಂಥದ್ದಲ್ಲ. ಸಣ್ಣಗೆ ಕಿಡಿಯಾಗಿ ಆರಂಭವಾಗುವ ಅಸಮಾಧಾನ, ಅದಕ್ಕೆ ಬೇರೆ ಬೇರೆ ಮೂಲಗಳಿಂದ ಗಾಳಿ ಬೀಸುವುದರಿಂದ ದೊಡ್ಡದಾಗಿ, ಇನ್ನು ಒಂದಾಗಿ ಒಂದೇ ಸೂರಿನಡಿಯಲ್ಲಿ ಬದುಕಲು ಸಾಧ್ಯವೇ ಇಲ್ಲವೆಂಬ ತಾರಕ ಸ್ಥಿತಿಗೆ ಬರುವುದಕ್ಕೆ ಎರಡು ಮೂರು ವರ್ಷಗಳಾದರೂ ಹಿಡಿಯುವಂಥದ್ದು. ಮನೆಯಲ್ಲಿ ಜ್ವಾಲಾಮುಖಿಯಿದ್ದ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ ಸಮುದಾಯದ ಸಂಘಟನೆಗಾಗಿ ಓಡಾಟ ನಡೆಸಿ ಪೇಟೆಯಲ್ಲಿ ಸಮಾಜಕ್ಕೆ ಸ್ವಂತ ಕಟ್ಟಡವೊಂದನ್ನು ಹೊಂದುವುದಕ್ಕೆ ಅಪ್ಪ ಮಾಡಿದ ಕೆಲಸವೇ ಸಮಾಜದ ಹಿರಿಯರಲ್ಲಿ ಅವನಿಗೆ ಗೌರವದ ಸ್ಥಾನ ಕೊಟ್ಟಿರಬೇಕು ಎಂದು ತರ್ಕಿಸಿದ್ದೆ.

**ಧರ್ಮಾಧಿಕಾರಿಗಳಿಂದಲೂ ಕೊಡುಗೆ**

ಆಗ ಪೇಟೆಯಲ್ಲಿ ಕಟ್ಟಿದ್ದ ಕಟ್ಟಡವನ್ನು ಖರೀದಿಗೆ ಕೊಂಡು ಅದನ್ನು ವಿದ್ಯಾರ್ಥಿನಿಲಯವನ್ನಾಗಿ ಬಳಸಲು ಹಿರಿಯರು ನಿರ್ಧರಿಸಿದ್ದರು. ಅಲ್ಲಿ ಕೆಲವು ಸಂಬಂಧಿಕರ ಮಕ್ಕಳನ್ನು ಸೇರಿಸಿ ಅದಕ್ಕೊಂದು ಸಾಂಸ್ಥಿಕ ರೂಪವನ್ನು ಕೊಡುವುದಕ್ಕೂ ಪ್ರಯತ್ನ ನಡೆಸಿದ್ದರು. ತಮ್ಮ ಕಡೆಯ ಮಕ್ಕಳಿಗೆ ವಿದ್ಯಾರ್ಥಿನಿಲಯವನ್ನು ತೆರೆದಿದ್ದೇವೆ ಎಂದು ಆ ಭಾಗದ ಹೆಚ್ಚಿನ ಜನರ ಶ್ರದ್ಧಾಕೇಂದ್ರವಾದ ಧರ್ಮಸ್ಥಳದ ಹೆಗ್ಗಡೆಯವರಿಗೆ ಪತ್ರ ಬರೆಸಿ ತಿಳಿಸಿದ್ದರು. ಆಗ ಧರ್ಮಾಧಿಕಾರಿಗಳಾಗಿದ್ದ ಮಂಜಯ್ಯ ಹೆಗ್ಗಡೆಯವರು ವಿದ್ಯಾರ್ಥಿನಿಲಯದ ಬಳಕೆಗೆ ದೊಡ್ಡ ಗಾತ್ರದ ಪಾತ್ರೆ ಪಗಡಿಗಳನ್ನು ಉಚಿತವಾಗಿ ಒದಗಿಸಲು ವ್ಯವಸ್ಥೆ ಮಾಡಿದ್ದರಂತೆ. ಅಲ್ಲಿ ಕೆಲವು ವರ್ಷ ಓದುವ ಹುಡುಗರಿಗೆ ಒಂದು ವ್ಯವಸ್ಥೆ ಆಗಿತ್ತು. ಪೇಟೆಯಲ್ಲಿ ಇದ್ದ ಮಾಧ್ಯಮಿಕ ಶಾಲೆಯಲ್ಲಿ ಎಂಟನೆಯ ತರಗತಿಯವರೆಗೆ ಮಾತ್ರವೇ ಕಲಿಯಲು ಅವಕಾಶವಿತ್ತು. ತಮಗಾಗಿ ವಿದ್ಯಾರ್ಥಿನಿಲಯ ಬೇಕೆಂದು ಶ್ರಮಿಸಿದ್ದ ಹಿರಿಯರಿಗೆ ಮುಂದೆ ವಿದ್ಯಾರ್ಥಿಗಳು ಸಿಗದೆ ಹೋದುದರಿಂದ ಆ ಕಟ್ಟಡವನ್ನು ಪೇಟೆಗೆ ವರ್ಗವಾಗಿ ಬರುವ ಸರ್ಕಾರಿ ನೌಕರರಿಗೆ ಬಾಡಿಗೆಗೆ ನೀಡಿದರು. ಮುಂದೆ 1965ರಲ್ಲಿ ಹೊಸನಗರ ತಾಲ್ಲೂಕು ಅಭಿವೃದ್ಧಿ ಮಂಡಲಿಯ ವತಿಯಿಂದ ಹೈಸ್ಕೂಲು ಆರಂಭವಾದ ಮೇಲೆ ಮತ್ತೆ ವಿದ್ಯಾರ್ಥಿನಿಲಯದ ಅವಶ್ಯಕತೆ ಬಂದು ಬಾಡಿಗೆಗೆ ನೀಡಿದ್ದ ಕಟ್ಟಡವನ್ನು ಬಿಡಿಸಿಕೊಳ್ಳಲಾಗಿತ್ತು. ಈ ದಿನಗಳಲ್ಲಿ ಪೇಟೆಯ ವಿದ್ಯಾರ್ಥಿನಿಲಯದ ಅನಧಿಕೃತ ಪಾಲಕನಾಗಿ ಅಪ್ಪನೇ ಮುಂದುವರಿದಿದ್ದನ್ನು ಮನೆಯಲ್ಲಿ ಅಣ್ಣಂದಿರಿಂದ ಕೇಳಿದ್ದೆ. ಆ ಕಟ್ಟಡದ ಮುಂಭಾಗದಲ್ಲಿದ್ದ ಎರಡು ಹೊರಕೋಣೆಗಳನ್ನು ಅಂಗಡಿ ನಡೆಸಲು ಬಾಡಿಗೆಗೆ ಕೊಡಲಾಗಿದ್ದರೂ ಅಲ್ಲಿ ವ್ಯಾಪಾರವಾಗದೆ, ಅಂಗಡಿ ಹಾಕಿದವರು ದಿವಾಳಿಯೆದ್ದು ಹೋಗಿದ್ದರು. ಹೈಸ್ಕೂಲು ಪ್ರಾರಂಭವಾಗಿದ್ದರಿಂದ

ವಿದ್ಯಾರ್ಥಿನಿಲಯದ ಕಟ್ಟಡವನ್ನು ಬಾಡಿಗೆದಾರರಿಂದ ಬಿಡಿಸಿಕೊಂಡು ಕಟ್ಟಡದ ಒಂದು ಭಾಗವನ್ನು ಹೆಡ್ಮಾಸ್ಟರ್ ಮುರುಗೇಂದ್ರಪ್ಪನವರಿಗೆ ಬಾಡಿಗೆಗೆ ಕೊಟ್ಟು ಇನ್ನೊಂದು ಭಾಗವನ್ನು ವಿದ್ಯಾರ್ಥಿಗಳ ವಾಸಕ್ಕೆ ವ್ಯವಸ್ಥೆ ಮಾಡುವುದರಲ್ಲಿ ಅಪ್ಪ ಶ್ರಮಿಸುತ್ತಾ ಇದ್ದುದನ್ನು ನಾನು ಪೇಟೆಯ ಮಾಧ್ಯಮಿಕ ಶಾಲೆಗೆ ಸೇರಿಕೊಂಡ ದಿನಗಳಲ್ಲಿ ನೋಡಿದ್ದೆ.

ಅಪ್ಪ ಕೇವಲ ನಮ್ಮ ಕುಟುಂಬದ ವಿಷಯಗಳಿಗೆ ಮಾತ್ರ ತಲೆ ಕೆಡಿಸಿಕೊಂಡವನಲ್ಲ. ರೈತಾಪಿ ಕೆಲಸ ಮಾಡುವುದೆಂದರೆ ಅದಕ್ಕೆ ಸಂಬಂಧಪಟ್ಟ ಎಲ್ಲ ಕೆಲಸಗಳಲ್ಲಿಯೂ ಅವರು ಸ್ವಾವಲಂಬಿಯಾಗಬೇಕು ಎಂಬುದು ಅವನ ನಿರೀಕ್ಷೆ ಆಗಿರಬೇಕು. ರಜೆಯ ದಿನಗಳಲ್ಲಿ ನಾನು ಕೊಡಸೆಯಲ್ಲಿದ್ದಾಗ ಹೆದ್ದಾರಿಪುರದ ಕಡೆಯಿಂದ ಯಾರಾದರೂ ಬಾಳೆಯ ಎಲೆ, ವೀಳೆಯದೆಲೆ, ಮನೆಯ ಮಾಡು ಹೊದಿಸಲು ಸೋಗೆಯನ್ನು ಕೇಳಿ ಬಂದರೆ ಸಣ್ಣದಾಗಿ ಅವನು ಅವರಿಗೆ ತಿಳಿಯ ಹೇಳುತ್ತಿದ್ದ. 'ಅಲ್ರೋ ಮಾರಾಯ, ನಿಮ್ಮಲ್ಲಿ ಮೀಯಕ್ಕೆ (ಸ್ನಾನಕ್ಕೆ) ಬಚ್ಚಲು ಅಂತ ಮಾಡಿರ್‍ತೀರಲ್ಲ, ಅದರ ನೀರು ಹರಿದು ಹೋಗುವ ಜಾಗದಲ್ಲಿ ಒಂದು ಬಾಳೆ ಕಂದು ಹಾಕಿ. ಅದು ವರ್ಷದಲ್ಲಿ ನಾಲ್ಕು ಗಿಡ ಕೊಡುತ್ತೆ. ಅವನ್ನೆಲ್ಲ ನಿಮ್ಮ ಬಳಕೆಯ ನೀರು ಹರಿಯೋ ಕಡೆ ಹಾಕಿ. ನಿಮಗೆ ಹೀಗೆ ಕಂಡೋರ ತ್ವಾಟಕ್ಕೆ ಬರೋ ತೊಂದ್ರೆ ತಪ್ಪುತ್ತೆ. ನಿಮ್ಮದೇ ಹಿತ್ತಲಲ್ಲಿ ಬಾಳೆ ಸಿಗುತ್ತೆ' ಎಂದು ಹೇಳುತ್ತಿದ್ದ. ಅದನ್ನು ಕೇಳಿಸಿಕೊಂಡವರಲ್ಲಿ ಕೆಲವರು ಒಪ್ಪಿಕೊಳ್ಳುತ್ತಿದ್ದರು. ಕೆಲವರು ಮಲೆತು ನಿಂತು ಸಣ್ಣದಾಗಿ 'ಬಂದುಬಿಟ್ಟ ದೊಡ್ಡ ಯಜಮಾನ..' ಎಂದು ಗೊಣಗುತ್ತಿದ್ದರು. ಇನ್ನೂ ಕೆಲವರು 'ಯಜಮಾನರು ಬೈದು ಹೇಳಿದರು ಅಂದರೆ ಬದುಕಲು ಹೇಳಿದರು ಅಂತ ತಿಳ್ಕಾಬೇಕಪ್ಪ' ಎಂದು ತಮ್ಮಷ್ಟಕ್ಕೆ ಸಮಾಧಾನಪಟ್ಟುಕೊಳ್ಳುತ್ತಿದ್ದರು.

ಅನಗತ್ಯ ಖರ್ಚುಗಳ ವಿಷಯದಲ್ಲಿ ಅಪ್ಪನಿಗೆ ಅಸಮಾಧಾನ ಸದಾಕಾಲ ಎದ್ದು ಕಾಣುತ್ತಿತ್ತು. ಅಣ್ಣನಿಗೆ ಮನೆಯ ಯಜಮಾನಿಕೆಯನ್ನು ವಹಿಸಿಕೊಟ್ಟ ಐದಾರು ವರ್ಷಗಳಲ್ಲಿ ಊರಿನಲ್ಲಿ ನಮಗಿಂತಲೂ ಆರ್ಥಿಕವಾಗಿ ಅನುಕೂಲವಿದ್ದ ದೊಡ್ಡಪ್ಪನ ಮಗ ಸಣ್ಣದೊಂದು ರೇಡಿಯೋ ತಂದಿದ್ದ. ಟ್ರಾನ್ಸಿಸ್ಟರ್ ಬಂದ ಮೇಲೆ ಅಲ್ಲಿಗೆ ರಾತ್ರಿಯ ಅಡಿಕೆ ಸುಲಿತಕ್ಕೆ ಜನ ಬರುವುದು ಹೆಚ್ಚಾಯಿತು. ಪೇಟೆಯಲ್ಲಿ ಮಾತ್ರವಲ್ಲದೆ, ವರ್ಷಕ್ಕೆ ಹಲವು ಬಾರಿ ಶಿವಮೊಗ್ಗಕ್ಕೂ ಹೋಗಿ ಬರುತ್ತಿದ್ದ ದೊಡ್ಡಣ್ಣ ಮೊದಲು ಒಂದು ಸೈಕಲ್ ಅನ್ನು ಮನೆಗೆ ತಂದ. ಅಣ್ಣಂದಿರೆಲ್ಲ ಸೈಕಲ್ ಹೊಡೆಯುವುದನ್ನು ಕಲಿತೇ ಇದ್ದುದರಿಂದ ತುರ್ತು ಸಂದರ್ಭಗಳಲ್ಲಿ ಅದನ್ನು ಬಳಸುತ್ತಿದ್ದರು. ಅದು ಉಪಯೋಗಿಯೂ ಆಗಿತ್ತು. ಅದರಂತೆಯೇ ಅಣ್ಣ ಮನೆಗೊಂದು ಟ್ರಾನ್ಸಿಸ್ಟರ್ ತಂದ. ಬಲೆಯಂಥ ಏರಿಯಲ್ ಅನ್ನು ಕಟ್ಟಿ ರೇಡಿಯೋ ತರಂಗಗಳನ್ನು ಸೆಳೆದುಕೊಳ್ಳುವಂಥ ಪುಟ್ಟ ಟ್ರಾನ್ಸಿಸ್ಟರ್. ಅದು ಮನೆಗೆ ಬಂದಾಗ ಹೊಸದೊಂದು ವಸ್ತುವನ್ನು ತಂದಾಗ ಉಂಟಾಗುವ ಸಂಭ್ರಮ ಮನೆಯಲ್ಲಿತ್ತು.

ಬ್ಯಾಂಡ್‌ಗಳನ್ನು ಬದಲಿಸಿ ಭದ್ರಾವತಿ ಸ್ಟೇಷನ್‌ನಿಂದ ಬರುವ ಕನ್ನಡ ಕಾರ್ಯಕ್ರಮಗಳು, ಮಧ್ಯಾಹ್ನ ಧಾರವಾಡ ಸ್ಟೇಷನ್‌ನಿಂದ ಅಭಿಲಾಷ ಹೆಸರಿನಲ್ಲಿ ಪ್ರಸಾರವಾಗುವ ಚಿತ್ರಗೀತೆಗಳು, ಸಂಜೆಯ ಕೃಷಿರಂಗ, ರಾತ್ರಿ ಹತ್ತರ ನಂತರ ಬಿತ್ತರವಾಗುತ್ತಿದ್ದ ಕಥಾಕಾಲಕ್ಷೇಪಗಳೆಂಬ ಹರಿಕತೆಗಳು ಮನೆಯಲ್ಲಿ ಎಲ್ಲರೂ ಇಷ್ಟಪಟ್ಟು ಕೇಳುವ ಕಾರ್ಯಕ್ರಮಗಳಾಗಿದ್ದವು. ಕನ್ನಡ ಕಾರ್ಯಕ್ರಮಗಳು ಇಲ್ಲದಿದ್ದಾಗ ಬ್ಯಾಂಡ್ ಬದಲಿಸಿ ವಿವಿಧ ಭಾರತಿಯಿಂದ ಹಿಂದಿ ಚಿತ್ರಗೀತೆಗಳನ್ನು ಕೇಳುವ ಪರಿಪಾಠವೂ ಆರಂಭವಾಯಿತು ಪ್ರತಿ ಭಾನುವಾರದಂದು ಪ್ರಸಾರವಾಗುವ ಚಲನಚಿತ್ರ ಧ್ವನಿವಾಹಿನಿಗಳು ಎದುರು ನೋಡುವ ಕಾರ್ಯಕ್ರಮಗಳಾಗಿದ್ದವು. ಅಪ್ಪ ಮತ್ತು ಅವನ ಸಮಕಾಲೀನರಿಗೆ ಚಿತ್ರಗೀತೆಗಳಲ್ಲಿ ಅಭಿರುಚಿ ಹುಟ್ಟುತ್ತಿರಲಿಲ್ಲ. ಅಪರೂಪಕ್ಕೆ ಪ್ರಸಾರವಾಗುವ

ಯಕ್ಷಗಾನಗಳು ಆಸಕ್ತಿ ಹುಟ್ಟಿಸುತ್ತಿದ್ದರೂ ಅವುಗಳ ಪ್ರಸಾರದ ಸೀಮಿತ ಅವಧಿಯ ಕಾರಣ ಗಮನ ಕೊಡುವಷ್ಟರಲ್ಲಿ ಮುಗಿದೇ ಹೋಗಿರುತ್ತಿದ್ದವು. ಕೃಷಿರಂಗದಲ್ಲಿ ಆಧುನಿಕ ರೀತಿಯ ಬೇಸಾಯ ಪದ್ಧತಿ, ಯಶಸ್ವೀ ರೈತರ ಅನುಭವ ನಿವೇದನೆಯಂಥ ಕಾರ್ಯಕ್ರಮಗಳನ್ನು ಅಪ್ಪ ಕೇಳಿಸಿಕೊಂಡಿದ್ದ. ಟ್ರಾನ್ಸಿಸ್ಟರ್‌ಅನ್ನು ಜಗುಲಿಯಲ್ಲಿ ಕಪಾಟಿನಲ್ಲಿಡಲಾಗಿತ್ತು. ಎಷ್ಟು ದೊಡ್ಡದಾಗಿ ಧ್ವನಿಯನ್ನು ಇರಿಸಿದರೂ ಒಬ್ಬರೇ ಕೇಳಿಸಿಕೊಳ್ಳುವಾಗ ಇರುವ ಆಪ್ತತೆ ಅಲ್ಲಿ ಇರುತ್ತಿರಲಿಲ್ಲ. ಆದರೂ ಕೇಳಿಸಿಕೊಂಡಷ್ಟು ಅಪ್ಪನ ತಲೆಯೊಳಗೆ ಇಳಿದಿರುತ್ತಿತ್ತು. ಟ್ರಾನ್ಸಿಸ್ಟರ್‌ನಿಂದ ಪ್ರಸಾರವಾಗುವ ಕೃಷಿರಂಗ ಕಾರ್ಯಕ್ರಮ ರೈತರಿಗೆ ಪ್ರಯೋಜನಕಾರಿ ಎಂಬುದು ಅವನ ಅರಿವಿಗೆ ಬಂದಿತ್ತು.

ಅದೊಂದು ಶನಿವಾರ ಸಂಜೆ ಕೆಲಸ ಮುಗಿಸಿ ಬಂದ ಅಪ್ಪನಿಗೆ ಜಗುಲಿಯಲ್ಲಿ ಟ್ರಾನ್ಸಿಸ್ಟರ್ ಸುತ್ತ ಗುಂಪುಗೂಡಿ ಎಲ್ಲರೂ ಆಸಕ್ತಿಯಿಂದ ಚಿತ್ರಗೀತೆಗಳನ್ನು ಕೇಳುತ್ತಿರುವುದನ್ನು ನೋಡಿದ. ತಕ್ಷಣಕ್ಕೆ ಏನನ್ನೂ ಹೇಳದೆ ತನ್ನ ಪಾಡಿಗೆ ಬಟ್ಟೆ ಬದಲಿಸಿ ಮಂಚದ ಮೇಲೆ ಕುಳಿತುಕೊಂಡವನು ಚಿತ್ರಗೀತೆಗಳ ಕಾರ್ಯಕ್ರಮ ಮುಗಿದ ಮೇಲೆ ಜಗುಲಿಯಲ್ಲಿ ಗುಂಪುಗೂಡಿ ಕುಳಿತಿದ್ದವರೆಲ್ಲರನ್ನೂ ಉದ್ದೇಶಿಸಿ 'ಈ ರೆಡಿಗೆ (ರೇಡಿಯೋಗೆ ಅಪ್ಪ ಬಳಸುತ್ತಿದ್ದ ಪದ) ಎಷ್ಟು ಕೊಟ್ಟಿದ್ದೀರೋ?' ಎಂದು ಪ್ರಶ್ನಿಸಿದ. ಅಲ್ಲಿ ಗುಂಪು ಸೇರಿದ್ದವರಲ್ಲಿ ಎರಡನೇ ಅಣ್ಣ 'ಒಟ್ಟು ನಾನೂರು ಅಂತ ಹೇಳಿದಂಗಿತ್ತು' ಎಂದು ಅಂದಾಜಿನ ಮೇಲೆ ಹೇಳಿದ. ಅಪ್ಪ 'ನಾನೂರು ರೂಪಾಯಿಗೆ ವರ್ಷಕ್ಕೆ ಎಷ್ಟು ಬಡ್ಡಿಯಾಯಿತು...' ಎಂದು ಗೊಣಗಿಕೊಂಡ. 'ನಾನೂರು ರೂಪಾಯಿ ಅಸಲು, ಅದಕ್ಕೆ ಹನ್ನೆರಡೂವರೆ ಬಡ್ಡಿಯಂತೆ ಎಷ್ಟೊಂದು ದುಡ್ಡು ಖರ್ಚು ಮಾಡ್ತಾ ಇದೀರಲ್ಲ... ಅದು ಹೇಳೋ ಹಂಗೆ ಕೃಷಿಯಲ್ಲಿ ದುಡಿಮೆ ಮಾಡಿದ್ರೇನೋ ಸರಿ. ಅದಿಲ್ಲದೆ ಹೀಗೆ ಹಾಡು ಕೇಳ್ತಾ ಕುಳಿತಿದ್ರೆ ಹೆಂಗ್ರೋ ಮಾರಾಯ..' ಎಂದು ಬೇಜಾರಿನಿಂದ ಪ್ರತಿಕ್ರಿಯೆ ನೀಡಿ ಸುಮ್ಮನಾಗಿದ್ದ. ಅಪ್ಪ ತನ್ನ ಯಜಮಾನಿಕೆಯ ದಿನಗಳಲ್ಲಿ ಸಾವುಕಾರರಿಂದ ತರುತ್ತಿದ್ದ ಸಾಲಕ್ಕೆ ತೆರುತ್ತಿದ್ದ ಬಡ್ಡಿ ವರ್ಷಕ್ಕೆ ಹನ್ನೆರಡೂವರೆ ರೂಪಾಯಿಯಂತೆ. ಆದ್ದರಿಂದ ರೇಡಿಯೋ ಕೊಳ್ಳಲು ವೆಚ್ಚ ಮಾಡಿದ ನಾಲ್ಕು ನೂರು ರೂಪಾಯಿಗೆ ವರ್ಷಕ್ಕೆ ಐವತ್ತು ರೂಪಾಯಿ ಬಡ್ಡಿಯಾಗುವಂತೆ ಅಷ್ಟು ಹಣವನ್ನಾದರೂ ಹೆಚ್ಚುವರಿಯಾಗಿ ಸಂಪಾದಿಸದಿದ್ದರೆ ಹೇಗೆ ಎಂಬುದು ಅವನ ಲೆಕ್ಕಾಚಾರ ಇದ್ದಂತೆ ತೋರುತ್ತಿತ್ತು. ಏಕೆಂದರೆ ವೆಚ್ಚವಾಗುವ ಪ್ರತಿ ರೂಪಾಯಿಯೂ ಅಪ್ಪನಿಗೆ ಅಮೂಲ್ಯವೆನಿಸಿತ್ತು.

ಓದಿದ್ದು ಎರಡೇ ವರ್ಷವೇ ಆಗಿದ್ದರೂ ಸಂಸಾರದ ಆದಾಯ ವೆಚ್ಚದ ಬಗ್ಗೆ ಅಪ್ಪನಿಗೆ ಖಚಿತ ಲೆಕ್ಕ ಇರುತ್ತಿತ್ತು. ಅಡಿಕೆ ವ್ಯಾಪಾರಕ್ಕೆ ಶಿವಮೊಗ್ಗದ ಮಂಡಿ ಸಾವುಕಾರರ ಜೊತೆ ವ್ಯವಹರಿಸುತ್ತಿದ್ದ ಕಾಲದಿಂದಲೂ ಅದನ್ನೆಲ್ಲ ಬರೆದಿಟ್ಟುಕೊಳ್ಳುವ ಅಭ್ಯಾಸ ಅಪ್ಪನಿಗೆ ಇತ್ತು. ಯಾವ ಬಾಬಿನಿಂದ ಎಷ್ಟು ದುಡ್ಡು ಬಂದಿದೆ, ಯಾವುದಕ್ಕೆ ಎಷ್ಟು ಖರ್ಚಾಗಿದೆ ಎಂಬುದನ್ನೆಲ್ಲ ದೊಡ್ಡದೊಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಿದ್ದ. ಯಜಮಾನಿಕೆಯನ್ನು ಅಣ್ಣನಿಗೆ ವಹಿಸಿಕೊಡುವ ವೇಳೆಗೆ ಶಿವಮೊಗ್ಗದಲ್ಲಿ ಅಡಿಕೆ ಬೆಳೆಗಾರರ ಹಿತ ಕಾಯುವುದಕ್ಕೆ ಸಹಕಾರ ಸಂಘವೊಂದು ಅಸ್ತಿತ್ವಕ್ಕೆ ಬಂದಿತ್ತು. ಸೊಸೈಟಿ ಎಂಬುದನ್ನು ಉಚ್ಚರಿಸಲು ಸುಲಭವೇ ಆಗಿದ್ದರಿಂದ ಅಪ್ಪನೂ ಅದರ ಜೊತೆ ವ್ಯವಹಾರಕ್ಕೆ ಸುಲಭವಾಗಿ ಒಗ್ಗಿ ಹೋಗಿದ್ದ. ಸೊಸೈಟಿಯವರು ಸದಸ್ಯರಿಗೆ ಪ್ರತಿವರ್ಷ ಒಂದು ಡೈರಿಯನ್ನು ಉಚಿತವಾಗಿ ಕೊಡುತ್ತಿದ್ದರು. ದಿನ, ವಾರ, ನಕ್ಷತ್ರಗಳಲ್ಲದೆ, ಮಲೆನಾಡಿನ ರೈತರು ಆಚರಿಸುವ ಹಬ್ಬ ಹರಿದಿನಗಳೂ, ಜಾತ್ರೆ ಸಮಾರಂಭಗಳೂ, ವಿಶೇಷವಾಗಿ ನೋಡುವ ಮಳೆ ನಕ್ಷತ್ರಗಳೂ ಇದ್ದ ಕಾರಣ ಆ ಡೈರಿ ಹೆಚ್ಚು ಉಪಯುಕ್ತವಾಗಿತ್ತು. ಅದನ್ನು ಇಡಲು ಜಗುಲಿಯಲ್ಲಿನ

ಕಪಾಟಿನಲ್ಲಿ ಜಾಗ ಮಾಡಲಾಗಿತ್ತು. ಅಪ್ಪನ ಅಭ್ಯಾಸ ಅಣ್ಣನಲ್ಲಿಯೂ ಮುಂದುವರಿಯಿತು. ಮನೆಯ ವ್ಯವಹಾರಕ್ಕೆ ಸಂಬಂಧಿಸಿದ ಹಣಕಾಸಿನ ಲೆಕ್ಕವನ್ನು ಅವನು ಅದರಲ್ಲಿ ಬರೆಯುತ್ತಿದ್ದ. 'ಬಾಳೆಕಾಯಿ ಮಾರಾಟದಿಂದ ಬಂದ ಜಮಾ...' 'ನಂಟರ ಉಪಚಾರಕ್ಕೆ ಒಣ ಮೀನು ತಂದ ಖರ್ಚು..' ಇತ್ಯಾದಿ ವಿವರಗಳನ್ನು ಬರೆದು 'ಜುಮ್ಲಾ ಜಮ..., 'ಜುಮ್ಲಾ ಖರ್ಚು...' ಎಂದು ಅಂದಂದಿನ ಜಮಾ ಖರ್ಚಿನ ವಿವರಗಳನ್ನು ಬರೆದಿಡುವ ಪದ್ಧತಿ ಯಜಮಾನಿಕೆಯ ಹೊಣೆಯಲ್ಲಿ ಸೇರಿತ್ತು. ದೊಡ್ಡಣ್ಣನ ಯಜಮಾನಿಕೆಯಲ್ಲಿ ಮನೆಯ ವ್ಯವಹಾರದ ಹಣಕಾಸಿನ ಲೆಕ್ಕವನ್ನು ಶಾಲೆಗೆ ಹೋಗುತ್ತಿದ್ದ ನಾವು ಕೂಡ ನೋಡುವಂತೆ ಮಾಡಿದ್ದ ವ್ಯವಸ್ಥೆ ಅದು. ಮನೆಯಲ್ಲಿ ದುಡಿಯುತ್ತಿರುವವರು ಸಂಸಾರದ ಆರ್ಥಿಕತೆಯ ಚಿತ್ರಣವನ್ನು ಹೀಗೆ ಮುಕ್ತವಾಗಿ ನೋಡಲು ಆಸ್ಪದವಾಗಿತ್ತು. ಮನೆಯ ಡೈರಿಯಲ್ಲಿ ಅಪ್ಪ ಮತ್ತು ಅಣ್ಣನಿಂದ ಬಳಕೆಯಾಗುತ್ತಿದ್ದ 'ಜಮಾ', 'ಖರ್ಚು', 'ಜುಮ್ಲಾ' (ಒಟ್ಟು ಎಂಬರ್ಥದಲ್ಲಿ), ಕೈಗಡ, ಮುಯ್ಯಾಳು, ಕೆಲಸಕ್ಕೆ ಉಳಿ (ರಜೆ ಎಂಬ ಅರ್ಥದಲ್ಲಿ) ಮೊದಲಾದ ವಿಶೇಷ ಪದಗಳ ಪರಿಚಯ ನಮಗೆಲ್ಲ ಶಾಲಾದಿನಗಳಲ್ಲಿಯೇ ಆಗಿತ್ತು. ಮುಂದೆ ಬೇರೆಯಾದ ಮೇಲೆಯೂ ತಮ್ಮ ತಮ್ಮ ಯಜಮಾನಿಕೆಯ ಕಾಲದಲ್ಲಿ ಅಣ್ಣಂದಿರು, ಅಪ್ಪನ ಮಾರ್ಗದಲ್ಲಿಯೇ ಜಮಾ ಖರ್ಚುಗಳನ್ನು ಬರೆಯುವ ಅಭ್ಯಾಸವನ್ನು ಮುಂದುವರಿಸಿದ್ದರು.

**ಆತ್ಮಾಭಿಮಾನದ ಸಾತ್ವಿಕ ಹಠ**

ಅಪ್ಪ ತನ್ನ ಯಜಮಾನಿಕೆಯ ಕಾಲದಲ್ಲಿ ಮಾಡುತ್ತಿದ್ದ ವ್ಯವಹಾರದಲ್ಲಿ ನಾಲಿಗೆ ಉಳಿಸಿಕೊಂಡವನೆಂದೇ ಹೆಸರಾಗಿದ್ದವನು. ಬೇಸಾಯವೊಂದನ್ನೇ ಅವಲಂಬಿಸಿದವರು ಸುಗ್ಗಿಯ ನಂತರ ದುಡ್ಡು ಕಾಣುವುದು ಕಷ್ಟ. ಸುಗ್ಗಿಯ ನಂತರ ಮತ್ತು ಅಡಿಕೆ ಕೊಯ್ಲಿನ ನಂತರ ಅವರಿಗೆ ಬತ್ತ ಮತ್ತು ಅಡಿಕೆ ಮಾರಾಟದಿಂದ ಒಂದೆರಡು ಸಲ ಬರುವ ದುಡ್ಡನ್ನು ಇಡೀ ವರ್ಷದ ಖರ್ಚಿಗೆ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ. ಆದ್ದರಿಂದಲೇ ಅಪ್ಪ ಪೇಟೆಗೆ ಹೋಗುವಾಗ ರೈತರು ಬರಿಗೈಯಲ್ಲಿ ಹೋಗಬಾರದು ಎಂದು ಹೇಳುತ್ತಿದ್ದ. ತಾನು ಬೆಳೆದದ್ದನ್ನು ಮಾರಾಟಕ್ಕೆ ಒಯ್ಯಬೇಕು. ಅದರಿಂದ ಬರುವ ಆದಾಯದಲ್ಲಿ ಮನೆಗೆ ಬೇಕಾದ ಸಾಮಾನು ತೆರಬೇಕು ಎಂಬುದು ಅಪ್ಪನ ವ್ಯವಹಾರ ಸಿದ್ಧಾಂತ. ಅವನ ಪದ್ಧತಿಯನ್ನೇ ದೊಡ್ಡಣ್ಣನೂ ತನ್ನ ಯಜಮಾನಿಕೆಯ ಕಾಲದಲ್ಲಿ ಅನುಸರಿಸುತ್ತಿದ್ದ. ಪೇಟೆಗೆ ಅಕ್ಕಿ ಮಾಡಿಸಲು ಗಾಡಿಯಲ್ಲಿ ಬತ್ತ ತುಂಬಿಕೊಂಡು ಹೋದಾಗ ತೋಟದಲ್ಲಿ ಬೆಳೆದ ಬಾಳೆಕಾಯಿ, ಬಾಲೆ ಎಲೆ, ಹಿತ್ತಿಲಲ್ಲಿ ಬೆಳೆದ ತರಕಾರಿ ಇತ್ಯಾದಿ ತೆಗೆದುಕೊಂಡು ಹೋಗುವುದು ಪದ್ಧತಿಯಾಗಿತ್ತು. ತುರ್ತು ಸಂದರ್ಭಕ್ಕೆ ಪರಿಚಿತ ಸಾವುಕಾರರಿಂದ ಅಲ್ಪಾವಧಿಗೆ ಪಡೆದ ಹಣ ಕೈಗಡ ಎಂತಲೂ ವರ್ಷದ ಅವಧಿಗೆ ಪಡೆಯುವ ಹಣ ಬಡ್ಡಿ ಸಹಿತ ತೀರಿಸಬೇಕಾದ ಸಾಲ ಎಂತಲೂ ಅಪ್ಪ ಹೇಳುತ್ತಿದ್ದ. ಕೈಗಡದ ಹಣವನ್ನು ಒಂದೆರಡು ತಿಂಗಳಲ್ಲಿ ತೀರಿಸಬೇಕಾಗುತ್ತಿತ್ತು. ಸಾಲದ ಹಣವನ್ನು ನಿರ್ದಿಷ್ಟ ವಾಯಿದೆಯಲ್ಲಿ ಬಡ್ಡಿ ಸಹಿತ ತೀರಿಸುವುದು ಅಪ್ಪನ ನೀತಿಯಾಗಿತ್ತು. ಮಾಘ ಬಹುಳ ಅಮಾವಾಸ್ಯೆಯ ಒಳಗಡೆ ಜಮೀನಿಗೆ ಸಂಬಂಧಿಸಿ ಗೌಡರಿಗೆ ಜಮೀನಿನ ಮೇಲಿದ್ದ ಸಾಲಕ್ಕೆ ಕಟ್ಟಬೇಕಿದ್ದ ದೀರ್ಘಾವಧಿ ಕಂತಿನ ಹಣವನ್ನು ಅಂಚೆ ಕಚೇರಿಯಲ್ಲಿ ಮನಿ ಆರ್ಡರ್ ಮಾಡುವ ವ್ಯವಸ್ಥೆಯಾಗಿತ್ತು. ವರ್ಷದ ಜನವರಿ ತಿಂಗಳಲ್ಲಿ ಈ ಗಡುವು ಇರುತ್ತಿತ್ತು. ಇದೇ ಗಡುವನ್ನೇ ಅಪ್ಪ ಸಾವುಕಾರರಿಂದ ಪಡೆಯುವ ಸಾಲಕ್ಕೂ ಅನ್ವಯಿಸಿಕೊಳ್ಳುತ್ತಿದ್ದ. ಪಡೆದ ಸಾಲವನ್ನು ಹೇಳಿದ ಗಡುವಿನ ಒಳಗೆ ಸಂದಾಯ ಮಾಡದಿದ್ದರೆ ಅಪ್ಪನಿಗೆ ಚಡಪಡಿಕೆ ಆಗುತ್ತಿತ್ತು. 'ಒಂದೇ ಮಾತು, ಒಂದೇ ನಾಲಿಗೆ' ಎಂಬ

ಆತ್ಮಾಭಿಮಾನದ ಹಠ. ಹೇಳಿದ ಗಡುವಿಗೆ ಅಡಿಕೆಯನ್ನು ಮಾರಲಾಗದಿದ್ದರೆ, ಊಟಕ್ಕೆ ಇಟ್ಟ ಬತ್ತವನ್ನಾದರೂ ಮಾರಾಟ ಮಾಡಿ ನಾಲಿಗೆ ಉಳಿಸಿಕೊಳ್ಳಬೇಕೆಂಬ ಸಾತ್ವಿಕ ಹಠ. ಅದು ಅಪ್ಪನ ನಿಷ್ಠುರ ವ್ಯವಹಾರ ತಜ್ಞತೆಗೆ ನಿದರ್ಶನವೂ ಆಗಿತ್ತು.

ಇದೇ ನಿಷ್ಠುರತೆಯನ್ನು ಬರುವೆ ಬಡಿಯನಾಯ್ಕರೂ ಅನುಸರಿಸುತ್ತಿದ್ದುದನ್ನು ತಿಮ್ಮಪ್ಪನೂ ನೆನಪು ಮಾಡಿಕೊಳ್ಳುತ್ತಿದ್ದ. ಅವರ ಲೆಕ್ಕದಲ್ಲಿ ಸಾಲ ಪಡೆದರೆ ವಾಯಿದೆಯಲ್ಲಿ ತೀರಿಸಬೇಕು, ಬಡ್ಡಿಯ ದರ ನೂರಕ್ಕೆ ಹನ್ನೆರಡೂವರೆ ರೂಪಾಯಿ. ಇದು ಧರ್ಮದಂತೆ ನ್ಯಾಯವಾಗಿ ನಿಗದಿ ಆಗಿರುವ ಬಡ್ಡಿಯ ದರ. ಒಮ್ಮೆ ಅವರಿಗೆ ತುರ್ತಾಗಿ ಸಾಲ ಬೇಕಾಗಿತ್ತು. ಕುರಂಬಳ್ಳಿ ಸಾವುಕಾರರ ಬಳಿ ಹೋದಾಗ ಅವರು ಚೆನ್ನಾಗಿ ಉಪಚಾರ ಮಾಡಿ 'ಭಾವ, ನನ್ನ ಹತ್ರ ದುಡ್ಡಿಲ್ಲ, ಆದರೆ ನಮ್ಮ ಹೆಂಗಸರ ದುಡ್ಡು ಐತೆ. ಆದರೆ ಬಡ್ಡಿ ಮಾತ್ರ ಶೇಕಡಾ ಹದಿನೈದು..' ಎಂದರಂತೆ. 'ನಾನು ಬಡ್ಡಿ ಸಮೇತ ಸಾಲ ತೀರಿಸಬೇಕು, ದುಬಾರಿ ಬಡ್ಡಿಗೆ ಅಂತ ಸಾಲ ಪಡೆದರೆ ಮೂಕು ಹಾರಿಸಬೇಕಾಗುತ್ತೆ, ಬೇಡ..' ಎಂದು ನಿರಾಕರಿಸಿ ಬಂದರಂತೆ. ಬಡಿಯನಾಯ್ಕರು ತಮ್ಮ ವಾರಿಗೆಯ ರೈತರ ಅಗತ್ಯಕ್ಕೆ ಸಾಲ ಕೊಡುವ ಸ್ಥಿತಿಗೆ ಬಂದಿದ್ದಾಗಲೂ ಬಡ್ಡಿ ದರವನ್ನು ಹನ್ನೆರಡೂವರೆಗಿಂತ ಹೆಚ್ಚಿಸಿದವರಲ್ಲ. ಸಾಲ ಕೇಳಲು ಬಂದವರ ಆಸ್ತಿ ಎಷ್ಟು ಎಂಬುದನ್ನು ತಿಳಿದು, ಅದರಿಂದ ಬರುವ ಉತ್ಪತ್ತಿಯನ್ನೂ ಲೆಕ್ಕ ಹಾಕಿ ಅವರು ವರ್ಷದಲ್ಲಿ ತೀರಿಸಬಹುದಾದಷ್ಟು ಹಣವನ್ನು ಮಾತ್ರವೇ ಸಾಲ ನೀಡುವ ಎಚ್ಚರಿಕೆ ವಹಿಸುತ್ತಿದ್ದರೆಂದು ತಿಮ್ಮಪ್ಪ ಅನೇಕ ಸಲ ನಿದರ್ಶನಗಳನ್ನು ಕೊಟ್ಟು ತಿಳಿಸಿದ್ದ. ಅಪ್ಪನಲ್ಲಿ ಮಾತ್ರವಲ್ಲ, ಬಡಿಯನಾಯ್ಕರಲ್ಲಿಯೂ ಹಣಕಾಸಿನ ವ್ಯವಹಾರವನ್ನು ಚೊಕ್ಕವಾಗಿ ಇಟ್ಟುಕೊಳ್ಳಬೇಕು ಎಂಬುದು ಅವರು ನಂಬಿಕೊಂಡ ನೈತಿಕ ಮೌಲ್ಯವೇ ಆಗಿ ಹೋಗಿತ್ತು.

ನಾನು ಎಂಎ ವಿದ್ಯಾರ್ಥಿಯಾಗಿದ್ದಾಗ ರಜೆಗೆ ಊರಿಗೆ ಬಂದಿದ್ದ ಸಂದರ್ಭದಲ್ಲಿ ತಿಮ್ಮಪ್ಪನೂ ಮಂಡ್ಯದಿಂದ ಒಂದೆರಡು ದಿನಗಳ ಮಟ್ಟಿಗೆ ಬಂದಿದ್ದ. ಅದನ್ನು ತಿಳಿದು ನಾನು ಬರುವೆಗೆ ಹೋದೆ. ನೌಕರಿಯಲ್ಲಿದ್ದವನ ಆರೋಗ್ಯಕರ ಪ್ರಭೆಯೊಂದು ಅವನಲ್ಲಿ ಸ್ಫುರಿಸುತ್ತಿದ್ದಂತೆ ಕಂಡಿತು. 'ಏನು ತಮ್ಮ, ಬರಾದೆ ಅಪರೂಪ' ಎಂದು ಅವನ ತಾಯಿ ಕಕ್ಕುಲಾತಿಯಿಂದ ವಿಚಾರಿಸಿಕೊಂಡರು. 'ಹುಡುಗ (ಅಂದರೆ ತಿಮ್ಮಪ್ಪನಿಗೆ ಅವರು ಕರೆಯುತ್ತಿದ್ದಂತೆ) ಇದ್ದಾಗಷ್ಟೆ ಬತ್ತೀಯ' ಎಂದು ಲಘುವಾಗಿ ಆಕ್ಷೇಪಿಸಿದರು. ನನ್ನ ತಮ್ಮ ಅವರ ಮನೆಗೆ ಒಂದೆರಡು ಸಲ ಭೇಟಿ ನೀಡಿದ್ದನಂತೆ. ಟೋಪಣ್ಣನೂ ಅವರಿಗೆ ಸಿಕ್ಕಿದಾಗಲೆಲ್ಲ ಬಾಯಿ ತುಂಬ ಮಾತಾಡಿಸುತ್ತಿದ್ದನಂತೆ. ನನ್ನ ದೊಡ್ಡಣ್ಣ ಎಲ್ಲಿ ಭೇಟಿಯಾಗಿದ್ದನೊ, ಸರಿಯಾಗಿ ಮಾತನಾಡಿಸಲಿಲ್ಲವೆಂದು ತೋರುತ್ತದೆ, 'ಅವನಿಗೆ ಕಣ್ಣೇ ಕಾಣಿಸಾದಿಲ್ಲ' ಎಂಬ ಟೀಕೆಯೂ ಕೇಳಿಬಂತು. ಅವೆಲ್ಲವೂ ಪ್ರಾಸಂಗಿಕವಾಗಿ ಮಾತಿನಲ್ಲಿ ಬಂದ ಪ್ರಸ್ತಾಪವಷ್ಟೆ. ಗಂಭೀರ ಟೀಕೆಗಳಲ್ಲ. 'ಕರಿಯಜ್ಜ ಮೊದಲೆಲ್ಲ ತುಂಬ ಬರ್ತಿದ್ದ. ಇಲ್ಲಿ ಮಧ್ಯಾಹ್ನದ ಊಟ ಮಾಡಿ ಸ್ವಲ್ಪ ಹೊತ್ತು ಇದ್ದು ಒಳಹಾದಿಯಲ್ಲಿ ನಿಮ್ಮೂರಿಗೆ ಹೋಗತಿದ್ದ' ಎಂದು ತಿಮ್ಮಪ್ಪ ಹೇಳಿದ್ದು ನನಗೆ ವಿಶೇಷ ಸಂಗತಿಯಾಗಿತ್ತು. ಅವರ ಮನೆಯ ಒಡನಾಟ ನನ್ನ ಹೈಸ್ಕೂಲು ದಿನಗಳಿಂದಲೇ ಆರಂಭವಾಗಿತ್ತು. ಏಳೆಂಟು ವರ್ಷಗಳಿಂದ ಹೋಗಿ ಬರುತ್ತಿದ್ದೆ. ಒಮ್ಮೆಯೂ ನಾನು ಬರುವೆಯಲ್ಲಿದ್ದಾಗ ಅಪ್ಪ ಅಲ್ಲಿ ಎದುರಾಗಿರಲಿಲ್ಲ. ಎದುರಾಗಿದ್ದರೆ ಎಂಬ ಅಳುಕು ಇರಲಿಲ್ಲ. ಅಪ್ಪ ಹುಳುಗದ್ದೆಗೆ ಆಗಾಗ ಭೇಟಿ ಮಾಡುತ್ತಿದ್ದ. ನಾನು ಅಲ್ಲಿದ್ದ ಐದು ವರ್ಷಗಳಲ್ಲಿ ಲೆಕ್ಕವಿಲ್ಲದಷ್ಟು ಸಲ ಅಪ್ಪ ಬಂದಿದ್ದ. ಬಂದಾಗಲೆಲ್ಲ ರಾತ್ರಿ ಉಳಿದು ಬೆಳಗ್ಗೆ ಹೋಗುವುದು ವಾಡಿಕೆ. ಅಪರೂಪಕ್ಕೆ ಮಧ್ಯಾಹ್ನಕ್ಕೆ ಬಂದು ಊಟ ಮುಗಿಸಿ ವಾಪಸು ಹೋಗುತ್ತಿದ್ದ. ಬರುವೆ ಮನೆಗೆ ನನ್ನ ಒಡನಾಟ ಬರುವುದಕ್ಕೆ ಮೊದಲಿನಿಂದಲೂ ಅಪ್ಪ ಅಲ್ಲಿಗೆ ಹೋಗಿ

ಬಂದು ಮಾಡುತ್ತಿದ್ದ ಎಂದು ತಿಮ್ಮಪ್ಪ ಹೆಚ್ಚಿನ ವಿವರಗಳನ್ನು ನೀಡಿದಾಗಲೇ ಅರಿವಿಗೆ ಬಂದಿತ್ತು.

'ಕರಿಯಜ್ಜ ಪೇಟೆ ಕಡೆಯಿಂದ ಇಲ್ಲಿಗೆ ಹನ್ನೊಂದು ಹನ್ನೆರಡು ಗಂಟೆಯ ಹೊತ್ತಿಗೆ ಬರುತ್ತಿದ್ದ. ಅವನು ಬಂದರೆ ಅವ್ವನಿಗೆ 'ಅಯ್ಯ ಬಂದ' ಅಂತ ಸಂಭ್ರಮ. ಬಂದ ತಕ್ಷಣ ಕಾಲು ತೊಳೆಯಲು ನೀರು ಕೊಟ್ಟು ತಕ್ಷಣ ಕಾಫಿ ಉಪಚಾರ. 'ಬಡೇಬಾವ ಎಲ್ಲಿ' ಅಂತ ಕೇಳೋನು. ಸ್ವಲ್ಪ ಹೊತ್ತು ಅದೂ ಇದೂ ಮಾತಾಡುವ ಹೊತ್ತಿಗೆ ಅಪ್ಪ ಊಟಕ್ಕೆ ಬರೋನು. ಬಂದವನು 'ಕರೇ ಬಾವ, ಈಗ ಬಂದ್ಯಾ..?' ಎಂದು ವಿಚಾರಿಸೋನು. ಊಟಕ್ಕೆ ಹೋಗುವ ಮೊದಲು ಕರಿಯಜ್ಜ ನಾಮ ಹಚ್ಚಿಕೊಳ್ಳಲು ಕೂರುತ್ತಿದ್ದ. ನಮ್ಮಲ್ಲಿ ನಾಗಂದಿಗೆ ಮೇಲೆ ಮರದ ನಾಮದ ಪೆಟ್ಟಿಗೆ ಇತ್ತು. ಅದನ್ನು ಎತ್ತಿಕೊಂಡು ಏನೋ ಮಣಮಣ ಹೇಳುತ್ತಾ ನಾಮ ಹಚ್ಚಿಕೊಳ್ಳಲು ಶುರು ಮಾಡುತ್ತಿದ್ದ. ಕೆಂಪು ನಾಮವನ್ನು ಎಡ ಅಂಗೈ ಮೇಲೆ ಉದುರಿಸಿ ಅದಕ್ಕೆ ಸ್ವಲ್ಪ ನೀರನ್ನು ಹಾಕಿ ನಯವಾಗಿ ಕಲಿಸಿ ಅದಕ್ಕೆಂದೇ ಇರಿಸಿದ್ದ ಬಿದಿರಿನ ನಾಮದ ಕಡ್ಡಿಯನ್ನು ಬಲಗೈಯಲ್ಲಿ ಹಿಡಿದು ನಾಮದಲ್ಲಿ ಅದ್ದಿ ಭ್ರೂಮಧ್ಯದಿಂದ ನೆತ್ತಿಯ ಕಡೆಗೆ ಒಂದು ಗೆರೆಯನ್ನು ಎಳೆದುಕೊಳ್ಳುತ್ತಿದ್ದ. ನಾಮದ ಶಾಸ್ತ್ರ ಮುಗಿಸಿ ಅಪ್ಪನೊಂದಿಗೆ ಒಳಗೆ ಊಟಕ್ಕೆ ಕೂರುತ್ತಿದ್ದ. ಏನೇನೋ ಮಾತಾಡುತ್ತಿದ್ದರು. ಎಲ್ಲವೂ ಬೇಸಾಯಕ್ಕೆ ಸಂಬಂಧಿಸಿದ ಮಾತುಗಳೇ. ಊಟ ಮುಗಿಸಿ ಜಗುಲಿಗೆ ಬಂದು ಎಲೆ ಅಡಿಕೆ ಹಾಕುತ್ತಿದ್ದರು. ಅಪ್ಪನ ಸ್ವಭಾವ ಕರಿಯಜ್ಜನಿಗೂ ಗೊತ್ತಿರಬೇಕು, ಊಟದ ನಂತರ ತಕ್ಷಣ ಕೆಲಸಕ್ಕೆ ಹೊರಡುತ್ತಿದ್ದ. ಹೋಗುವ ಮೊದಲು 'ಕರೇಬಾವ, ನೀನು ಸ್ವಲ್ಪ ಹೊತ್ತು ಮಲಗಿ ಕಾಪಿ ಕುಡಿದು ಹೋಗು' ಎಂದು ಉಪಚರಿಸಿ ನಿರ್ಗಮಿಸುತ್ತಿದ್ದ. ಕರಿಯಜ್ಜ ಬಿಸಿಲು ಇಳಿಯುವವರೆಗೆ ಮಲಗಿದ್ದು ನಂತರ ಎದ್ದು ಕಾಫಿ ಕುಡಿದು ಬಗಲ ಚೀಲ ಏರಿಸಿಕೊಂಡು ಒಳಹಾದಿಯಲ್ಲಿ ಹೊರಡುತ್ತಿದ್ದ' ಎಂಬುದು ತಿಮ್ಮಪ್ಪನ ವಿವರಣೆಯಾಗಿತ್ತು.

ತಿಮ್ಮಪ್ಪನ ತಾಯಿ ನನ್ನ ದೊಡ್ಡಪ್ಪನ ಮಗಳಾಗಿದ್ದರಿಂದ ಅಪ್ಪನೂ ಬಡಿಯನಾಯ್ಕರೂ ಭಾವ ನೆಂಟರೇ ಆಗಿದ್ದರು. ಹುಳುಗದ್ದೆಯ ನನ್ನ ಸೋದರ ಮಾವನಿಗೂ ಬಡಿಯನಾಯ್ಕರು 'ಯಲ್ಲಬಾವ' ಎಂದೇ ಕರೆಯುತ್ತಾ ಇದ್ದುದನ್ನು ನಾನು ಅವರು ಒಂದು ಹಂದಿ ಹಸಿಗೆಯ ಸಂದರ್ಭದಲ್ಲಿ ಬಂದಿದ್ದಾಗ ಕೇಳಿಸಿಕೊಂಡಿದ್ದೆ. ಹುಳುಗದ್ದೆ ಮಾವನೂ ಅವರನ್ನು 'ಬಡೇಬಾವ' ಎಂದೇ ಕರೆಯುತ್ತಿದ್ದ. ಹತ್ತಿರದಲ್ಲಿ ಹೆಣ್ಣು ಕೊಟ್ಟು ತಂದ ಸಂಬಂಧಗಳ ಕಾರಣ ಇಂಥ ನೆಂಟಸ್ಥಿಕೆಯ ಸಂಬಂಧವಾಚಿ ಪದಗಳ ಬಳಕೆ ಅವರಲ್ಲಿ ಇರಬೇಕು ಎಂದು ಸಮಾಧಾನ ಪಟ್ಟುಕೊಂಡೆವು. ಅಪ್ಪನಿಗೆ ಹುಳುಗದ್ದೆ ಮಾವ ಬಂದಾಗ ಒಟ್ಟಿಗೆ ಸೇರಿದ ಸಂಭ್ರಮಕ್ಕೆ ಭಂಗಿ ಸೇದುವ ಅಭ್ಯಾಸ ಇದೆ ಎಂದು ತಿಮ್ಮಪ್ಪನಲ್ಲಿ ಹೇಳಿದ್ದೆ. ಅದು ಬಡಿಯನಾಯ್ಕರಲ್ಲಿಯೂ ಇದ್ದ ಅಪರೂಪದ ತಲುಬು ಎಂದು ತಿಮ್ಮಪ್ಪನೂ ದನಿಗೂಡಿಸಿದ್ದ. ಭಂಗಿಯನ್ನು ಅಪ್ಪ ಒಬ್ಬನೇ ಸೇದುತ್ತಿದ್ದುದು ಅಪರೂಪ. ಹುಳುಗದ್ದೆ ಮಾವ ಬಂದು ರಾತ್ರಿ ವಾಸ್ತವ್ಯಕ್ಕೆ ಉಳಿದುಕೊಂಡಾಗ ಮಾತುಕತೆಗೆ ಇನ್ನಷ್ಟು ಸ್ವಾರಸ್ಯ ತುಂಬಲು ಭಂಗಿಯ ಆತಿಥ್ಯ ನೆರವಾಗುತ್ತಿತ್ತು.

**ಭಂಗಿಯ ಆತಿಥ್ಯ**

ಅದಕ್ಕೆ ಚಿಲುಮೆಯನ್ನು ಸಿದ್ಧಪಡಿಸುವುದು ಕುತೂಹಲದ ಚಿತ್ರಣ. ಮಾತಿನಲ್ಲಿ ತುಂಬ ಸರಸಿಯಾಗಿದ್ದ ಹುಳುಗದ್ದೆ ಮಾವ ಭಂಗಿ ಸೊಪ್ಪನ್ನು ಅಂಗೈಯಲ್ಲಿಟ್ಟುಕೊಂಡು ನೀರು ಹಾಕಿ ಹದಗೊಳಿಸುವ ಕೆಲಸವನ್ನು ತುಂಬ ಶ್ರದ್ಧೆಯಿಂದ ಮಾಡುತ್ತಿದ್ದ. ಅಂಗೈಯಲ್ಲಿ ಒಣಗಿದ ಭಂಗಿಸೊಪ್ಪನ್ನು ಹರಡಿಕೊಂಡು ಅದರಲ್ಲಿದ್ದ ಬೀಜಗಳನ್ನು ಆರಿಸಿ ತೆಗೆಯುವುದು ನಾಜೂಕಿನ ಕೆಲಸ. ಅವನ್ನೆಲ್ಲ ತೆಗೆದು ಸೊಪ್ಪನ್ನು ಕಸಕಡ್ಡಿಗಳಿಂದ

ಸ್ವಚ್ಛಗೊಳಿಸುತ್ತಿದ್ದ. ಸ್ವಚ್ಛಗೊಳಿಸಿದ ಮೇಲೆ ಅದಕ್ಕೆ ಬೀಡಿಯೊಂದನ್ನು ಬಿಚ್ಚಿ ಅದರಲ್ಲಿದ್ದ ತಂಬಾಕಿನ ಪುಡಿಯನ್ನು ಮಿಶ್ರಮಾಡಿ ಹದಗೊಳಿಸುವುದು ನಂತರದ ಹಂತ. ಭಂಗಿ ಸೊಪ್ಪು ಮತ್ತು ಬೀಡಿಯೊಳಗಿನ ತಂಬಾಕಿನ ಪುಡಿಯ ಹದ ಮಿಶ್ರಣಕ್ಕೆ ಎರಡು ಮೂರು ಹುಂಡು (ಹನಿ) ನೀರನ್ನು ಹಾಕಿ ಬಲಗೈ ಹೆಬ್ಬೆರಳಿನಿಂದ ಬಲವಾಗಿ ತಿಕ್ಕಿ ರಸವನ್ನು ಹೊರಚೆಲ್ಲುವುದು ಮೂರನೆಯ ಹಂತ. ಎರಡು ಮೂರು ಸಲ ನೀರಿನಲ್ಲಿ ಸ್ವಚ್ಛಗೊಳಿಸಿದ ಭಂಗಿ ಸೊಪ್ಪನ್ನು ನಂತರ ಅಂಗೈನಲ್ಲಿಯೇ ಹರಡಿ ಅದಕ್ಕೆಂದೇ ಇರುವ ಮಣ್ಣಿನ ಚಿಲುಮೆಗೆ ಕಲಾತ್ಮಕವಾಗಿ ತುಂಬುವುದು ನಾಲ್ಕನೆಯ ಹಂತ. ಚಿಲುಮೆಯಲ್ಲಿ ಕೊನೆಯವರೆಗೆ ತುಂಬಿ ನಿಧಾನವಾಗಿ ಒತ್ತಿ ಹಿಡಿದ ನಂತರ ಅದರ ಮೇಲೆ ಉರಿಯುತ್ತಿದ್ದ ತೆಂಗಿನ ನಾರಿನ ಉಂಡೆಯನ್ನು ಇರಿಸಿ ಚಿಲುಮೆಯ ಬುಡದಿಂದ ಹೊಗೆಯನ್ನು ಎಳೆದುಕೊಳ್ಳುವುದು ಭಂಗಿ ಸೇದುವ ವಿಧಾನ. ಚಿಲುಮೆಯನ್ನು ಎರಡೂ ಕೈಯಲ್ಲಿ ಹಿಡಿದು ಬಾಯಿಗೆ ಸಂಪರ್ಕ ಕಲ್ಪಿಸುವ ಮೊದಲು ಅದರ ಬುಡಕ್ಕೆ ಒದ್ದೆ ಬಟ್ಟೆಯೊಂದನ್ನು ಅಡ್ಡ ಹಿಡಿದುಕೊಳ್ಳುತ್ತಿದ್ದರು. ಅದು ಬೆಂಕಿಯ ಕಾವನ್ನು ನಿಯಂತ್ರಿಸುತ್ತಿತ್ತೋ, ಈಗಿನ ಫಿಲ್ಟರ್ ಸಿಗರೇಟುಗಳಂತೆ ಭಂಗಿ ಸೊಪ್ಪಿನ ತೀವ್ರತೆಯನ್ನು ಕಡಿಮೆ ಮಾಡುತ್ತಿತ್ತೋ ನಮಗೆ ಆಗ ಗೊತ್ತಾಗುತ್ತಿರಲಿಲ್ಲ. ವೃತ್ತಾಕಾರವಾಗಿ ಕುಳಿತುಕೊಂಡು ಒಬ್ಬರಾದ ನಂತರ ಇನ್ನೊಬ್ಬರಿಗೆ ಚಿಲುಮೆಯನ್ನು ವರ್ಗಾಯಿಸುತ್ತ ಮಜಾ ತೆಗೆದುಕೊಳ್ಳುತ್ತಿದ್ದ ಅಪ್ಪ ಮತ್ತು ಅವನ ಮಿತ್ರವರ್ಗದ ಮೋಜನ್ನು ಹುಡುಗರಾದ ನಾವು ಬೆರಗಿನಿಂದ ನೋಡುತ್ತಿದ್ದುದನ್ನು ನೆನಪು ಮಾಡಿ ತಿಮ್ಮಪ್ಪನಲ್ಲಿ ಹೇಳಿದ್ದೆ. ಮೊದಲು ಚಿಲುಮೆಯ ಬುಡಕ್ಕೆ ಬಾಯಿ ಹಾಕಿ ಹೊಗೆಯನ್ನು ಎಳೆದುಕೊಂಡವರು ಅದನ್ನು ಪಕ್ಕದಲ್ಲಿದ್ದವನ ಕೈಗೆ ವರ್ಗಾಯಿಸುವಾಗ ಚಿಲುಮೆಗೆ ಒಂದು ಸಲಾಂ ಮಾಡುತ್ತಿದ್ದರು. ಚಿಲುಮೆಯನ್ನು ಕೈಗೆತ್ತಿಕೊಳ್ಳುವವರೂ ಅದನ್ನು ನಮಸ್ಕಾರದ ಗೌರವ ನೀಡಿಯೇ ಬಾಯಿಗೆ ತಗುಲಿಸುತ್ತಿದ್ದರು. ನಾಲ್ಕು ಜನ ಮಂಡಲಾಕಾರದಲ್ಲಿ ಕುಳಿತಿದ್ದರೆ ಒಂದೇ ಸುತ್ತಿಗೆ ಭಂಗಿಯ ಸೊಪ್ಪು ಖಾಲಿಯಾಗಿ ಬಿಡುತ್ತಿತ್ತು. ಹಳೆಯ ಬೂದಿಯನ್ನು ಉದುರಿಸಿ ಎರಡನೇ ಸಲ ತುಂಬಿ ಇನ್ನೊಮ್ಮೆ ಸೇದುತ್ತಿದ್ದರು. ಎರಡು ಮೂರು ಸುತ್ತು ಬರುತ್ತಿದ್ದಂತೆ ಭಂಗಿ ಸೊಪ್ಪಿನ ಪ್ರಭಾವ ಅದನ್ನು ಸೇದುತ್ತಿದ್ದವರ ಮೇಲೆ ಆಗುತ್ತಿತ್ತು. ನಾಲಿಗೆ ತೊದಲುತ್ತಿತ್ತು. ಮಾತಿನ ಜಾಡು ತಪ್ಪುತ್ತಿತ್ತು. ಬೀಡಿಯ ಹೊಗೆಗೂ, ಸಿಗರೇಟಿನ ಹೊಗೆಗೂ ಹೊರತಾದ ವಿಶಿಷ್ಟ ವಾಸನೆ ಭಂಗಿಯ ಹೊಗೆಗೆ ಇರುತ್ತಿತ್ತು.

ಭಂಗಿಯನ್ನು ಸಿದ್ಧಪಡಿಸಿ ಸೇದುವ ಮೋಜನ್ನು ಇಬ್ಬರೂ ಚರ್ಚೆ ನಡೆಸಿದ್ದೆವು. ಇಬ್ಬರಿಗೂ ಆಪ್ತರಾಗಿದ್ದ ಕೋಮಲಾಪುರದ ಮೇಷ್ಟರ ಮನೆಯಲ್ಲಿ ನಾವಿಬ್ಬರೂ ಇನ್ನು ಒಂದಿಬ್ಬರು ಗೆಳೆಯರೊಂದಿಗೆ ಸೇರಿದ್ದ ರಾತ್ರಿ ಸುಖಭೋಜನದ ನಂತರ ಚಿಲುಮೆಯನ್ನು ಸೇದುವ ಚಪಲಕ್ಕೆ ಒಳಗಾಗಿದ್ದೆವು. ಅಕ್ಕಿ ರೊಟ್ಟಿಯೊಂದಿಗೆ ಕೋಳಿಸಾರಿನ ಊಟ ಮಾಡಿ ಬಂದು ಮಲಗುವುದಕ್ಕೆ ಹಾಸಿಗೆ ಬಿಚ್ಚಿಕೊಂಡ ನಂತರ ಭಂಗಿ ಸೇದುವ ದುಸ್ಸಾಹಸ ನಡೆಸಿದ್ದೆವು. ಭೋಜನಪೂರ್ವದಲ್ಲಿ ಸೇವಿಸಿದ್ದ ಆಲೆಮನೆಯ ದ್ರಾವಕದ ಪ್ರಭಾವ ಇದ್ದಾಗ ಸೇರಿದ ಭಂಗಿಯ ಹೊಗೆ ನಮ್ಮ ದೇಹದ ಬಿಸಿಯನ್ನು ಹೆಚ್ಚಿಸಿತ್ತು. ಎರಡು ದಮ್ಮು ಎಳೆಯುವುದರಲ್ಲಿ ತಂದಿದ್ದ ಸೊಪ್ಪು ಬೂದಿಯಾಗಿದ್ದರಿಂದ ಅಷ್ಟಕ್ಕೆ ಮುಗಿಸಿ ಹಾಸಿಗೆಗೆ ತಲೆ ಕೊಟ್ಟರೆ ಸೌರಮಂಡಲದ ಗ್ರಹಗಳ ಚಲನೆಯನ್ನು ಸೂಚಿಸುವ ವೃತ್ತಾಕಾರದ ಚಿತ್ರಗಳು ಮುಚ್ಚಿದ ಕಣ್ಣೊಳಗೆ ತಿರುಗುತ್ತಿರುವ ವಿಚಿತ್ರ ಅನುಭವ ಆಗತೊಡಗಿತ್ತು. ಅದೊಂದು ಅನುಭವ ವಿಶೇಷವಾಗಿ ಆ ದಿನಗಳಲ್ಲಿ ಉಳಿದುಕೊಂಡಿತು.

* * *

**ಕೆಲಸದ ಬೇಟೆ**

ಎಂ.ಎ. ಅಂತಿಮ ವರ್ಷದ ಪರೀಕ್ಷೆಯೂ ಮುಗಿದು ಅದಕ್ಕೆ ಅಗತ್ಯವಾಗಿದ್ದ ಸಂದರ್ಶನವೂ (ವೈವೊ ವೊಸಿ) ನಡೆದು ಪದವಿಯ ಘೋಷಣೆಯೂ ಆಯಿತು. ಅದನ್ನು ಪತ್ರ ಬರೆದು ಮಂಡ್ಯದಲ್ಲಿದ್ದ ತಿಮ್ಮಪ್ಪನಿಗೆ ತಿಳಿಸಿದೆ. ಸದ್ಯ ಒಂದು ಹಂತ ದಾಟಿದೆಯಲ್ಲ ಎಂದು ಅವನಿಂದ ಮೆಚ್ಚುಗೆಯ ಪತ್ರವೂ ಬಂದಿತು. ಅದುವರೆಗೆ ಉಚಿತ ವಿದ್ಯಾರ್ಥಿನಿಲಯದ ಊಟ, ಊರಿನಿಂದ ಅಣ್ಣಂದಿರು ಕಳಿಸುತ್ತಿದ್ದ ಹಣದಿಂದ ಬೆಂಗಳೂರಿನ ಸಾಹಿತ್ಯಿಕ ಪ್ರಪಂಚದಲ್ಲಿ ವಿಹಾರ ನಡೆಸುತ್ತಿದ್ದ ನನಗೆ ಸ್ವಂತ ಕಾಲ ಮೇಲೆ ನಿಂತು ಒಂದು ನೆಲೆಯನ್ನು ಕಂಡುಕೊಳ್ಳುವ ವಾಸ್ತವ ಪ್ರಪಂಚ ಎದುರಾಯಿತು. ಎಂ.ಎ. ಫಲಿತಾಂಶ ಬಂದ ನಂತರ ಊರಿನಿಂದ ಎಪ್ಪತ್ತೈದು ರೂಪಾಯಿ ಹಿಡಿದು ಕೆಲಸ ಹುಡುಕಲು ಬೆಂಗಳೂರಿಗೆ ಬಂದವನು ನನಗೆ ಆರು ವರ್ಷಗಳ ಕಾಲ ಆಶ್ರಯ ನೀಡಿದ್ದ ಶೇಷಾದ್ರಿಪುರದ ಹಾಸ್ಟಲು ತಲುಪಿದೆ. ಗೆಳೆಯರು ಇದ್ದ ಕಾರಣ ಕೆಲವು ದಿನ ಅವರ ಕೋಣೆಗಳಲ್ಲಿ ಆಶ್ರಯ ಪಡೆಯಬಹುದಿತ್ತು. ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಷ್ಟೆ ಅಲ್ಲ, ನಾಲ್ಕನೇ ರ‍್ಯಾಂಕ್ ಕೂಡ ಗಳಿಸಿದ್ದು ಹಾಸ್ಟಲ್ ವಾರ್ಡನ್ ಅವರಿಗೆ ಮೆಚ್ಚುಗೆಯ ಸಂಗತಿಯಾಗಿತ್ತು. ನಿಲಯದ ವಿದ್ಯಾರ್ಥಿಯಾಗಿ ಉಳಿಯದಿದ್ದರೂ ಕೆಲಸ ಪಡೆಯುವವರೆಗೆ ಕೆಲವು ದಿನ ಅಲ್ಲಿ ಗೆಳೆಯರ ಕೋಣೆಗಳಲ್ಲಿ ಉಳಿದುಕೊಳ್ಳುವುದಕ್ಕೆ ಅವರ ಆಕ್ಷೇಪ ಇರಲಿಲ್ಲ.

ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದ ಜಿ.ಎಸ್.ಶಿವರುದ್ರಪ್ಪನವರೇ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಕಾಲೇಜುಗಳ ಕನ್ನಡ ವಿಭಾಗಕ್ಕೆ ಉಪನ್ಯಾಸಕರನ್ನು ಆಯ್ಕೆ ಮಾಡುವ ಮಹತ್ವದ ವ್ಯಕ್ತಿ ಎಂಬುದು ಆಗ ನನಗೆ ಅರಿವಿಗೆ ಬಂತು. ಅವರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಹಾಗೂ ಅವರ ಮೇಲೆ ಪ್ರಭಾವ ಬೀರಬಲ್ಲ ಸಂಪರ್ಕಗಳನ್ನು ಹೊಂದಿದ್ದ ಬಸವರಾಜ ಕಲ್ಗುಡಿ, ಡಿ.ಆರ್.ನಾಗರಾಜ ಮತ್ತು ಪುಂಡಲೀಕ ಹಾಲಂಬಿ ಪರೀಕ್ಷೆಯ ಫಲಿತಾಂಶಗಳು ಹೊರಬಿದ್ದ ಕೆಲವೇ ದಿನಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಂಶೋಧನಾ ಸಹಾಯಕರಾಗಿ ನೇಮಕಗೊಂಡರು. ಮೊದಲ ರ‍್ಯಾಂಕ್ ಪಡೆದು ಚಿನ್ನದ ಪದಕ ಹಿಡಿದು ಸಂಭ್ರಮಿಸುತ್ತಿದ್ದ ಬಾಲಸುಬ್ರಹ್ಮಣ್ಯ ಮೊದಲು ಕ್ರೈಸ್ಟ್ ಕಾಲೇಜಿನಲ್ಲಿ ಸೇರಿಕೊಳ್ಳುವ ಉಮೇದು ತೋರಿಸಿದರಾದರೂ ಅಲ್ಲಿ ಇದ್ದ ಅರೆಕಾಲಿಕ ಉಪನ್ಯಾಸಕನ ಹುದ್ದೆಯನ್ನು ನಮಗಿಂತ ಹಿರಿಯರಾಗಿದ್ದ ಡಿ.ವಿ.ರಾಜಶೇಖರ್ ಅವರಿಗೆ ಬಿಟ್ಟುಕೊಟ್ಟು ಶೇಷಾದ್ರಿಪುರ ಕಾಲೇಜಿನಲ್ಲಿ ತೆರವಾಗಿದ್ದ ಅರೆಕಾಲಿಕ ಉಪನ್ಯಾಸಕ ಹುದ್ದೆಗೆ ಬಂದರು. ಆನರ್ಸ್ ಮತ್ತು ಎಂ ಎ ಅವಧಿಯೂ ಸೇರಿ ಸತತ ಐದು ವರ್ಷ ಬಾಲಸುಬ್ರಹ್ಮಣ್ಯ ಅವರ ಜೊತೆಗೆ ತಿರುಗಾಡುತ್ತಿದ್ದ ನಾನು ಅದೊಂದು ದಿನ ಮೊದಲಬಾರಿಗೆ ಏಕಾಂಗಿಯಾಗಿ ಪ್ರೊಫೆಸರ್ ಜಿ.ಎಸ್.ಶಿವರುದ್ರಪ್ಪ ಅವರನ್ನು ಜ್ಞಾನಭಾರತಿ ಕ್ಯಾಂಪಸಿನಲ್ಲಿ ಕಂಡೆ. 'ನನಗೊಂದು ಕೆಲಸ ಕೊಡಿ'ಸುವಂತೆ ಬೇಡಿಕೆ ಸಲ್ಲಿಸಿದೆ. 'ನಿಮಗೆ ಪ್ರಜಾವಾಣಿಯಲ್ಲೋ ಸುಧಾದಲ್ಲೋ ಕೆಲಸವಾಗಿದೆ ಎಂದು ಕೇಳಿದ್ದೆನಲ್ಲ' ಎಂದರು, ನನ್ನ ಬೇಡಿಕೆಯನ್ನು ಸಾವಧಾನವಾಗಿ ಕೇಳಿ. ಆ ಮಾಹಿತಿಯನ್ನು ಹೇಗೆ ಸಂಗ್ರಹಿಸಿದರೋ ಎಂದು ಆಶ್ಚರ್ಯವಾದರೂ ಅದನ್ನು ತೋರಿಸಿಕೊಳ್ಳದೆ, 'ಅದು ಎರಡು ವರ್ಷಗಳ ಹಿಂದೆ ಸರ್. ಹುಬ್ಬಳ್ಳಿ ಮುದ್ರಣಕ್ಕೆ ಅಂತ ಸಂದರ್ಶನ ಆಗಿತ್ತು. ಆಮೇಲೆ ಆ ಪ್ರಸ್ತಾಪವನ್ನೇ ಕೈ ಬಿಟ್ಟರಂತೆ..' ಎಂದೆ. ಅಷ್ಟು ಹೊತ್ತಿಗೆ ಚೇಂಬರ್‌ಗೆ ಬಂದ ಕಂಬಾರರ ಕಡೆ ತಿರುಗಿ 'ನಿಮಗೆ ಮರಿಪುಟ್ಟಣ್ಣ ಗೊತ್ತಲ್ಲ, ಅದೇ ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು, ಅವರ ಪ್ರಕಟಣೆಗೆ ಒಬ್ಬರು ಸಹಾಯಕರು ಬೇಕಂತೆ. ವಿಚಾರಿಸಿ' ಎಂದರು. ಕಂಬಾರರು ನನ್ನತ್ತ ನೋಡಿ ಪರಿಚಯದ ನಗೆಯೊಂದಿಗೆ 'ಆಯ್ತು' ಎಂದರು. ಪ್ರೊಫೆಸರ್ ಚೇಂಬರ್‌ನಿಂದ ಹೊರಬಂದೆ. ಕಂಬಾರರು ಬರುವವರೆಗೆ ಕಾದು ನಿಂತೆ. ಸ್ವಲ್ಪ

ಹೊತ್ತಿಗೆ ಹೊರಬಂದ ಕಂಬಾರರು 'ಈಗ ಸದ್ಯಕ್ಕೆ ಅವರಲ್ಲಿ ಕೆಲಸ ಇಲ್ಲವಂತೆ, ಮುಂದೆ ನೋಡೋಣ ಎಂದಿದ್ದಾರೆ' ಎಂದು ಹೇಳಿ ತಮ್ಮ ಕೋಣೆಯತ್ತ ನಡೆದರು. ಅವರನ್ನು ಹಿಂಬಾಲಿಸಿ ಗೋಗರೆಯಲು ಮನಸ್ಸಾಗಲಿಲ್ಲ. ಹಾಗೆಯೇ ಹೊರಬಂದೆ. ನಗರಕ್ಕೆ ಹೊರಟಿದ್ದ ವಿಶ್ವವಿದ್ಯಾಲಯದ ಬಸ್ಸನ್ನು ಹಿಡಿದು ಹಾಸ್ಟಲು ಸೇರಿಕೊಂಡೆ. ಸ್ವಂತ ಪ್ರಯತ್ನದಿಂದ ಹೇಗಾದರೂ ಕೆಲಸ ಪಡೆಯಲೇಬೇಕಿತ್ತು.

ಮನೆಯಿಂದ ತಂದಿದ್ದ ಹಣ ದಿನದಿನಕ್ಕೂ ಕ್ಷೀಣಿಸುತ್ತಿತ್ತು. ಹಾಸ್ಟಲಿನ ಗೆಳೆಯರು ನನ್ನ ನೆರವಿಗೆ ಏನನ್ನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಮರುದಿನ ಬೆಳಗ್ಗೆಯೇ ಹಾಸ್ಟಲಿನಿಂದ ಹೊರಟು ರಾಜಾಜಿನಗರ ತಲುಪಿದೆ. ಅಲ್ಲಿದ್ದವರು ಹೇಮದಳ ರಾಮದಾಸ್. ಪ್ರಜಾವಾಣಿಯಲ್ಲಿ ಮುಖ್ಯ ಉಪಸಂಪಾದಕರಾಗಿದ್ದವರು. ಹಾಸ್ಟಲಿಗೆ ಆಗಾಗ ಬಂದು ಹೋಗುತ್ತಿದ್ದರು. ನನ್ನ ಬರವಣಿಗೆಯನ್ನು ಗಮನಿಸಿದ್ದರು. ಎದುರಿಗೆ ಕಂಡಾಗ ವಿಶ್ವಾಸದಿಂದ ಮಾತಾಡಿಸುತ್ತಿದ್ದರು. ಅದೇ ಸಲುಗೆಯನ್ನು ಅವಲಂಬಿಸಿ ಅವರ ಮನೆಗೆ ಬಂದೆ. ತುಂಬ ವಿಶ್ವಾಸದಿಂದ ಬರಮಾಡಿಕೊಂಡರು. ಬೆಳಗಿನ ಕಾಫಿ ಕೊಡಿಸಿ ನನ್ನನ್ನು ಕರೆದುಕೊಂಡು ತಮ್ಮ ಬೀದಿಯ ಹಿಂದೆಯೇ ಇದ್ದ ಇನ್ನೊಂದು ಮನೆಗೆ ಕರೆದೊಯ್ದರು. ಅಲ್ಲಿಗೆ ಕರೆದೊಯ್ದು ಅಲ್ಲಿದ್ದ ಹಿರಿಯರೊಬ್ಬರಿಗೆ ಪರಿಚಯ ಮಾಡಿಸಿದರು. ಅವರು ಕಲ್ಲೆ ಶಿವೋತ್ತಮ ರಾವ್. 'ಜನಪ್ರಗತಿ' ಪತ್ರಿಕೆಯ ಸಂಪಾದಕರು. ಅವರ ಹೆಸರನ್ನು ಕೇಳಿದ್ದೆ. ನಾನು ಎಂ ಎ ಅಂತಿಮ ವರ್ಷದಲ್ಲಿದ್ದಾಗ ಡಿ.ಆರ್.ನಾಗರಾಜ ತಂದುಕೊಟ್ಟಿದ್ದ ದುರ್ಗದ ರಾಜೇಗೌಡ ಎಂಬುವರ 'ಕ್ರಾಂತಿ' ಎಂಬ ಕಾದಂಬರಿಯ ಬಗ್ಗೆ ಪರಿಚಯ ಟಿಪ್ಪಣಿಯೊಂದನ್ನು ಬರೆದಿದ್ದೆ. ಅದನ್ನು ಡಿ.ಆರ್.ನಾಗರಾಜ ಅವರೇ ಒಯ್ದು ಕೊಟ್ಟಿರಬೇಕು. ಅದನ್ನು 'ಜನಪ್ರಗತಿ'ಯಲ್ಲಿ ಪ್ರಕಟಿಸಿದ್ದರು. ಕಲ್ಲೆಯವರಿಗೆ ನನ್ನ ಹೆಸರು ಗೊತ್ತಿತ್ತು. ರಾಮದಾಸ್ ನನ್ನನ್ನು ಪರಿಚಯಿಸಿ 'ಇವರಿಗೆ ಒಂದು ಕೆಲಸ ಆಗಬೇಕು' ಎಂದು ನನ್ನ ಬೇಡಿಕೆಯನ್ನು ಮುಂದಿಟ್ಟರು. ನನ್ನ ಅಂಕಪಟ್ಟಿ ಮತ್ತು ಪ್ರಕಟವಾಗಿದ್ದ ಕಥೆಗಳನ್ನೆಲ್ಲ ನೋಡಿದ ರಾಯರು ತಕ್ಷಣವೇ ಫೋನ್ ಕೈಗೆತ್ತಿಕೊಂಡು ಅಸ್ಖಲಿತ ಇಂಗ್ಲಿಷಿನಲ್ಲಿ ನನ್ನ ಬಗ್ಗೆ ಯಾರಿಗೋ ಹೇಳಿದರು. ಆ ಕಡೆಯಿಂದ ಯಾವ ಪ್ರತಿಕ್ರಿಯೆ ಬಂದಿತೋ ಗೊತ್ತಾಗಲಿಲ್ಲ. ನನ್ನತ್ತ ತಿರುಗಿ 'ಪಿ.ಕೆ.ಶ್ರೀನಿವಾಸ್ ಅವರನ್ನು ಕೇಳಿದೆ. ಸದ್ಯಕ್ಕೆ ಅವರೂ ಅಸಹಾಯಕರಾಗಿದ್ದಾರೆ' ಎಂದರು. ಪಿ.ಕೆ.ಶ್ರೀನಿವಾಸ್ ಯಾರು ಎಂಬುದೇನೂ ಗೊತ್ತಾಗಲಿಲ್ಲ. ನಿರಾಶೆಯಿಂದ ರಾಯರ ಮನೆಯಿಂದ ಹೊರ ಬರುತ್ತಿದ್ದಾಗ ರಾಮದಾಸ್ 'ಪಿ.ಕೆ.ಶ್ರೀನಿವಾಸ್ ಮುಖ್ಯಮಂತ್ರಿ ದೇವರಾಜ ಅರಸರ ಪ್ರೆಸ್ ಸೆಕ್ರೆಟರಿಯಾಗಿದ್ದಾರೆ, ಅಲ್ಲಿಗೆ ನಿಮ್ಮನ್ನು ಸೇರಿಸಬಹುದೇ ಎಂದು ರಾಯರು ವಿಚಾರಿಸಿದರು' ಎಂದು ವಿವರ ನೀಡಿದರು.

ರಾಮದಾಸ್ ಹೇಳಿದ್ದು ಕೇಳಿ ಒಂದು ಕ್ಷಣಕ್ಕೆ ರೋಮಾಂಚನವಾಯಿತು. ದೇವರಾಜ ಅರಸರ ಪ್ರೆಸ್ ಸೆಕ್ರೆಟರಿಗೆ ಸಹಾಯಕನಾಗುವ ಸಾಧ್ಯತೆಯೇ ಖುಷಿಯ ಸಂಗತಿಯಾಯಿತು. ಮರುಕ್ಷಣಕ್ಕೆ ಅದೆಲ್ಲ ಸಾಧ್ಯವೇ ಎಂಬ ನಿರಾಶೆಯೂ ಕವಿಯಿತು. ಮತ್ತೆ ರಾಮದಾಸ್ ಅವರ ಮನೆಗೆ ಹೋಗಿ ಅಲ್ಲಿಂದ ಹಾಸ್ಟಲು ಕಡೆ ಹೊರಟೆ. ಹೊರಡುವ ಮೊದಲು ರಾಮದಾಸ್ 'ಕಲ್ಲೆಯವರನ್ನು ಮತ್ತೆ ಮತ್ತೆ ಕಾಣುತ್ತಿರಿ, ಅವರೇ ಏನಾದರೂ ಮಾರ್ಗ ತೋರಿಸುತ್ತಾರೆ' ಎಂದು ಭರವಸೆ ಮೂಡಿಸಿದರು.

ಮಾರನೆಯ ದಿನವೋ ಮೂರು ದಿನಗಳ ನಂತರವೋ ಬೆಳಗ್ಗೆ ಶ್ರೀರಾಮಪುರದಲ್ಲಿದ್ದ ಕಲ್ಲೆಯವರ 'ಜನಪ್ರಗತಿ' ಕಚೇರಿಯನ್ನು ಹುಡುಕಿಕೊಂಡು ಹೋದೆ. ಕರೆದು ಕುಳ್ಳಿರಿಸಿದರು. ನನ್ನ ಊರುಮನೆಯ ಹಿನ್ನೆಲೆಗಳನ್ನು ವಿಚಾರಿಸಿಕೊಂಡರು. 'ನಿಮ್ಮ ಇಂಗ್ಲಿಷ್ ಹೇಗಿದೆ?' ಎಂದರು. ಪದವಿಯ ಮೊದಲ ವರ್ಷ ಮಾತ್ರ ಇಂಗ್ಲಿಷಿನ ಒಂದು ಪೇಪರ್ ಇತ್ತು. ಅದರಲ್ಲಿ ಎರಡನೇ ದರ್ಜೆಯಲ್ಲಿ ಪಾಸಾಗಿದ್ದೆ. ಇಂಗ್ಲಿಷಿನಲ್ಲಿ

ಮಾತಾಡಿಸಿದರೆ ಉತ್ತರ ನೀಡುವಷ್ಟು ವ್ಯಾವಹಾರಿಕ ಇಂಗ್ಲಿಷಿಗೆ ಕೊರತೆ ಇರಲಿಲ್ಲ. ಅದನ್ನು ಅಳುಕಿನಿಂದಲೇ ಹೇಳಿದೆ. 'ಮಾತಾಡಿದರೆ ಸಾಲದು, ಒಂದು ಭಾಷೆಯ ಮೇಲೆ ಹಿಡಿತ ಇದ್ದರೆ ಅದನ್ನು ಚೆನ್ನಾಗಿ ಬಳಸಿಕೊಳ್ಳಬಹುದು. ನೀವು ಕನ್ನಡ ಎಂಎ ಮಾಡಿದ್ದೀರಿ. ಇಂಗ್ಲಿಷಿನಲ್ಲಿಯೂ ಹಿಡಿತ ಇದ್ದರೆ ಅನುವಾದ ಮಾಡಬಹುದು. ಕನ್ನಡದಿಂದ ಇಂಗ್ಲಿಷಿಗೆ ಅನುವಾದ ಮಾಡುವುದು ಕಷ್ಟ ಎನಿಸಿದರೂ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಬಹುದಲ್ಲ' ಎಂದು ಸ್ವಲ್ಪ ಹೊತ್ತು ವಿವರಣೆ ನೀಡಿದರು. ನಾನು ಆಸಕ್ತಿಯಿಂದ ಕೇಳಿಸಿಕೊಂಡೆ. ಹನ್ನೆರಡು ಗಂಟೆ ಮೀರಿದರೂ ಅವರಿಂದ ಏನಾದರೊಂದು ವಿಷಯ ಪ್ರಸ್ತಾಪವಾಗುತ್ತಲೇ ಇತ್ತು. ನನ್ನ ನೌಕರಿಯ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ. ಬೇಸರವಾಗಿ ಹೊರಡುವುದಾಗಿ ಹೇಳಿ ಎದ್ದೆ. 'ಬರ್ತಾ ಇರಿ.. ನಿಮಗೆ ಎಲ್ಲಿ ಸಾಧ್ಯವೋ ಅಲ್ಲಿ ಒಂದು ವ್ಯವಸ್ಥೆ ಮಾಡೋಣ' ಎಂದು ನನ್ನ ನೌಕರಿಯ ಬಗ್ಗೆ ಹೇಳಿದಾಗ ಸ್ವಲ್ಪ ನಿರಾಳವಾಯಿತು. 'ಆಯ್ತು ಸಾರ್' ಎಂದು ಅವರ ಕಚೇರಿಯಿಂದ ಹೊರಬಂದು ಹಾಸ್ಟಲಿನ ಕಡೆ ಹೆಜ್ಜೆ ಹಾಕಿದೆ.

**ಪರಿಷತ್ತಿನಲ್ಲಿ ಪ್ರಯತ್ನ**

ವಸತಿಗೆ ತತ್ಕಾಲಕ್ಕೆ ತೊಂದರೆ ಇರಲಿಲ್ಲ. ಆದರೆ ಹಣವನ್ನು ಅತ್ಯಂತ ಮಿತಪ್ರಮಾಣದಲ್ಲಿ ಬಳಸುವುದು ಅನಿವಾರ್ಯವಾಗಿತ್ತು. ಬೆಳಗಿನ ತಿಂಡಿಯ ಸಂಭ್ರಮ ಮೊದಲಿನಿಂದಲೂ ಇರಲಿಲ್ಲ. ಹನ್ನೆರಡು ಗಂಟೆಯವರೆಗೆ ಹೇಗಾದರೂ ಸಮಯ ಕಳೆದು ಊಟಕ್ಕೆ ಹೋಗುತ್ತಿದ್ದೆ. ಮತ್ತೆ ಏಳು ಗಂಟೆಗೆ ಇನ್ನೊಂದು ಊಟ. ಹೀಗೆ ಕೆಲವು ದಿನ ಕಳೆಯುತ್ತಿದ್ದಂತೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜಾನಪದ ಮಾಹಿತಿ ಸಂಗ್ರಾಹಕನ ಕೆಲಸಕ್ಕೆ ಸಂದರ್ಶನದ ಕರೆ ಬಂದಿತು. ಜಾನಪದ ಮಾಹಿತಿ ಸಂಗ್ರಹ ಕಾರ್ಯವನ್ನು ಆಗಿನ ಅಧ್ಯಕ್ಷ ಜಿ.ನಾರಾಯಣ ಪ್ರಾರಂಭಿಸಿದ್ದರು. ಅದಕ್ಕೆ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದ ಗೊ.ರು.ಚನ್ನಬಸಪ್ಪ ಅವರು ಮಾರ್ಗದರ್ಶನ ಮಾಡುತ್ತಿದ್ದರು. ನಾನು ಜಾನಪದ ವಿದ್ಯಾರ್ಥಿ ಆಗಿರಲಿಲ್ಲ. ಎಂ.ಎ ಓದುವಾಗ ಸಾಹಿತ್ಯದ ತಲಸ್ಪರ್ಶಿ ಅಧ್ಯಯನದ ಉಮೇದಿನಲ್ಲಿ ಇಂಗ್ಲಿಷ್ ಮತ್ತು ಪಾಶ್ಚಾತ್ಯ ಸಾಹಿತ್ಯದ ವಿಷಯವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದೆ. ಪರಿಷತ್ತಿನ ಯೋಜನೆಯಲ್ಲಿ ನಾನು ಆಯ್ಕೆ ಆಗುವಂತೆಯೇ ಇರಲಿಲ್ಲ. ಆದರೆ ಏನೋ ಹುಂಬ ಧೈರ್ಯ ಮಾಡಿಕೊಂಡು ಬೇರೆ ಯಾವ ಭರವಸೆಯೂ ಇಲ್ಲದ ಸ್ಥಿತಿಯಲ್ಲಿ ಸಂದರ್ಶನಕ್ಕೆ ಹೋದೆ.

ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಆಗಲೇ ನನ್ನ ಅನೇಕ ಸಹಪಾಠಿಗಳು ಸೇರಿದ್ದರು. ಅವರೆಲ್ಲರೂ ಎಂ ಎ ಓದುವಾಗ ಐಚ್ಛಿಕವಾಗಿ ಜಾನಪದವನ್ನು ಅಧ್ಯಯನ ಮಾಡಿದವರು. ಎಲ್ಲರ ಮುಖದಲ್ಲೂ ಅನಿಶ್ಚಿತ ಭವಿಷ್ಯದ ಆತಂಕದ ಗೆರೆಗಳು. ವಿದ್ಯಾರ್ಥಿಗಳಾಗಿದ್ದಾಗ ಪುಟಿಯುತ್ತಿದ್ದ ಪ್ರಾಯದ ಉತ್ಸಾಹ ನಿರುದ್ಯೋಗದ ಒಂದೇ ತಿಂಗಳಲ್ಲಿ ಮಸುಕಾಗಿತ್ತು. ಆಗಲೇ ಕೆಲವರು ಜಾತಿ ಸಂಘಟನೆಗಳನ್ನು ಆಶ್ರಯಿಸಿ ಖಾಸಗಿ ಹೈಸ್ಕೂಲುಗಳಲ್ಲಿ ಕನ್ನಡ ಮೇಷ್ಟರುಗಳಾಗಿ ಕೆಲಸಕ್ಕೆ ಒಪ್ಪಿಕೊಂಡಿದ್ದರು. ಮಂಡ್ಯ ಕಡೆಯ ಮಿತ್ರನೊಬ್ಬ ಸಿರಿವಂತ ಮಾವನನ್ನು ಹಿಡಿದು ಆಗಲೇ ಮದುವೆಯ ಒಪ್ಪಂದ ಮಾಡಿಕೊಂಡಿದ್ದ. ಮಿತ್ರರ ಕತೆಗಳನ್ನು ಕೇಳುತ್ತಾ ಸಂದರ್ಶನದ ಕರೆಗಾಗಿ ಎದುರು ನೋಡುತ್ತಿದ್ದೆ. ಸಂದರ್ಶನ ನಡೆಸುತ್ತಿದ್ದವರು ಆಗ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಎಲ್.ನಾಗೇಗೌಡರು. ಅವರಿಗೆ ನೆರವಾಗಲು ಬಂದವರು ನನ್ನ ಗುರುಗಳಾಗಿದ್ದ ಚಂದ್ರಶೇಖರ ಕಂಬಾರರು. ಪರಿಷತ್ತಿನ ವತಿಯಿಂದ ಸದಸ್ಯ– ಕಾರ್ಯದರ್ಶಿಯಂತೆ

ಗೊ.ರು.ಚನ್ನಬಸಪ್ಪ ಅವರು ಇದ್ದರು. ಅದು ಎಚ್.ಎಲ್.ನಾಗೇಗೌಡರದೇ ಪರಿಕಲ್ಪನೆಯಾಗಿದ್ದು ಅದನ್ನು ಅಧ್ಯಕ್ಷರಾಗಿದ್ದ ಜಿ.ನಾರಾಯಣ ಕಾರ್ಯರೂಪಕ್ಕೆ ತರುತ್ತಿದ್ದಾರೆಂದು ಗೆಳೆಯರ ಮಾತುಗಳಿಂದ ತಿಳಿದುಬಂದಿತ್ತು. ಜಾನಪದ ಸಂಗ್ರಾಹಕರಾಗಿ ನಿಷ್ಠೆಯಿಂದ ಕೆಲಸ ಮಾಡಿದವರನ್ನು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರೂ ಆಗಿರುವ ನಾಗೇಗೌಡರು ಕಾಲೇಜು ಉಪನ್ಯಾಸಕರ ಹುದ್ದೆಗಳಿಗೆ ನೇಮಕ ಮಾಡುವರೆಂಬ ವದಂತಿಯನ್ನೂ ಅಲ್ಲಿ ಕೇಳಿದ್ದೆ. ನಮಗಿಂತ ಹಿಂದಿನ ಬ್ಯಾಚಿನ ಕನ್ನಡ ಎಂ ಎ ಪದವೀಧರರಲ್ಲಿ ಕೆಲವರು ಹೋದ ವರ್ಷ ಜಾನಪದ ಮಾಹಿತಿ ಸಂಗ್ರಾಹಕರಾಗಿ ಕೆಲಸ ಮಾಡಿ ಅನೇಕ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ ಆಯ್ಕೆ ಆಗಿದ್ದಾರೆ ಎಂಬ ಸಂಗತಿಯೂ ಅಲ್ಲಿ ಗೆಳೆಯರ ಮಾತಿನಲ್ಲಿ ಹೊರಬಿದ್ದು ಹೇಗಾದರೂ ಈ ಅಲ್ಪ ಕಾಲಾವಧಿಯ ಕೆಲಸ ಸಿಗಲೆಂದು ಹಾರೈಸುತ್ತಾ ಸಂದರ್ಶನವನ್ನು ಎದುರು ನೋಡುತ್ತಿದ್ದೆ.

ಸಮಯ ಹನ್ನೆರಡು ಮೀರಿತು. ಬೆಳಗ್ಗೆಯಿಂದ ಏನನ್ನೂ ತಿಂದಿರಲಿಲ್ಲ. ಹಸಿವು ಅಭ್ಯಾಸವಾಗಿದ್ದರೂ ಆತಂಕದಿಂದ ಇದ್ದ ನನಗೆ ಸಂದರ್ಶನಕ್ಕೆ ಕರೆಯನ್ನು ಎದುರು ನೋಡುತ್ತಾ ಕುಳಿತಿರುವುದಕ್ಕೆ ಸಂಕಟವಾಗಿ ಚಡಪಡಿಸತೊಡಗಿದೆ. ನನ್ನ ಪಕ್ಕದಲ್ಲಿ ಕುಳಿತಿದ್ದ ಮಂಡ್ಯದ ಶಿವರಾಮು ನನ್ನ ಬಾಡಿದ ಮುಖವನ್ನು ಗಮನಿಸಿ 'ಬನ್ನಿ, ಇದು ಎಷ್ಟು ಹೊತ್ತು ಆಗುತ್ತೋ.. ಇಲ್ಲೇ ಹೋಗಿ ಬೈ ಟು ಕಾಫಿ ಕುಡಿದು ಬರೋಣ' ಎಂದ. ಸಂದರ್ಶನಕ್ಕೆ ಕಾದವರ ಸಾಲಿನಲ್ಲಿ ನನ್ನ ಪಾಳಿ ಇನ್ನೂ ತಡವಾಗುವ ಸೂಚನೆಯನ್ನು ಗಮನಿಸಿ ಶಿವರಾಮು ಜೊತೆ ಪರಿಷತ್ತಿನ ಕಾಂಪೌಂಡಿಗೆ ಅಂಟಿಕೊಂಡಿದ್ದ ಗೂಡಂಗಡಿ ಕಡೆ ಹೊರಟು ಬಂದು ಬೈ ಟು ಕಾಫಿ ಕುಡಿದೆವು. ದುಡ್ಡು ಕೊಡಲು ನಾನು ಮುಂದಾದರೂ ಅದನ್ನು ಶಿವರಾಮು ತಡೆದರು. ವಾಪಸು ಬಂದು ಸಂದರ್ಶನಕ್ಕೆ ನಿಂತವರ ಪಾಳಿಯನ್ನು ಸೇರಿಕೊಂಡೆವು. ಅಷ್ಟರಲ್ಲಿ ಒಳಗಡೆ ಸಂದರ್ಶನ ನಡೆಸುತ್ತಿದ್ದ ಎಚ್.ಎಲ್.ನಾಗೇಗೌಡರಿಗೆ ಯಾವುದೋ ತುರ್ತು ಕರೆ ಬಂದು ಅವಸರದಲ್ಲಿ ಹೊರಬಂದು ಕಾರಿನಲ್ಲಿ ನಿರ್ಗಮಿಸಿದರು. ಹೊರಗಡೆ ಕಾದು ನಿಂತಿದ್ದ ಹತ್ತಿಪ್ಪತ್ತು ಮಂದಿಯಲ್ಲಿ ಗೊಂದಲ. ಅವರಲ್ಲಿ ಮುಕ್ಕಾಲು ಮಂದಿಯ ಸಂದರ್ಶನ ಆಗಿತ್ತು. ನಾನೂ ಸೇರಿದಂತೆ ಅಲ್ಲಿ ಸೇರಿದ್ದ ಕೆಲವರ ಸಂದರ್ಶನ ಆಗಿರಲಿಲ್ಲ. ಸಂದರ್ಶನ ಆಗಿದ್ದವರು ಫಲಿತಾಂಶಕ್ಕಾಗಿ ಕಾದಿದ್ದರು. ಎಲ್ಲರೂ ಒಂದಾಗಿ ಸಂದರ್ಶಕ ಕೋಣೆಗೆ ನುಗ್ಗಿದೆವು. ಗೊ.ರು.ಚನ್ನಬಸಪ್ಪನವರು ನಮ್ಮ ಗುಂಪು ಚಡಪಡಿಸುತ್ತಾ ಇದ್ದುದನ್ನು ಗಮನಿಸಿ ಎದ್ದು ಬಂದರು. ಸಮಾಧಾನದಿಂದ ಇರುವಂತೆ ಮನವಿ ಮಾಡುತ್ತಾ 'ಒಂದು ಅರ್ಧ ಗಂಟೆ ಬಿಟ್ಟು ಬರ್‍ರಪ್ಪಾ' ಎಂದರು.

ಅವರು ಹೇಳಿದ್ದಂತೆ ಅರ್ಧ ಗಂಟೆಯ ಒಳಗೆ ಒಬ್ಬೊಬ್ಬರನ್ನು ಕರೆದು ಮತ್ತೊಮ್ಮೆ ವಿವರಗಳನ್ನು ಪರಿಶೀಲಿಸಿ ಕೆಲವರನ್ನು ಅವರ ಆಯ್ಕೆಯ ಜಿಲ್ಲೆಗಳಿಗೆ ಜಾನಪದ ಮಾಹಿತಿ ಸಂಗ್ರಾಹಕರಾಗಿ ತಾತ್ಕಾಲಿಕ ನೆಲೆಯಲ್ಲಿ ನೇಮಿಸುವ ಪತ್ರವನ್ನು ಕೊಟ್ಟರು. ನನ್ನ ಸಂದರ್ಶನ ಆಗಿರಲಿಲ್ಲ. ಆದರೆ, ಕಂಬಾರರು ನನ್ನ ಬಗ್ಗೆ ಭರವಸೆಯ ಮಾತುಗಳನ್ನು ಹೇಳಿದ್ದರಿಂದ ಎಚ್.ಎಲ್.ನಾಗೇಗೌಡರ ಸಂದರ್ಶನ ಇಲ್ಲದೆಯೇ ಮೈಸೂರು ಜಿಲ್ಲೆಗೆ ಜಾನಪದ ಮಾಹಿತಿ ಸಂಗ್ರಾಹಕನಾಗಿ ನೇಮಿಸಲಾಗಿದೆ ಎಂದು ಹೇಳಿ ನನಗೂ ನೇಮಕ ಪತ್ರವನ್ನು ಕೊಟ್ಟರು. ಹತಾಶೆಯಿಂದ ಕುಗ್ಗಿ ಹೋಗಿದ್ದ ನನಗೆ ಭರವಸೆಯ ಬೆಳಕು ಮೂಡಿದಂತೆ ನಿರಾಳವಾಯಿತು. ಜಾನಪದ ಮಾಹಿತಿ ಸಂಗ್ರಹಣೆಗೆ ಪರಿಷತ್ತು ರೂಪಿಸಿದ ಪ್ರಶ್ನಾವಳಿಯ ಫಾರ್ಮ್‌ಗಳನ್ನು ಪಡೆದು ಹಾಸ್ಟಲಿಗೆ ಬಂದೆ. ತಕ್ಷಣವೇ ತಿಮ್ಮಪ್ಪನ ಮಂಡ್ಯದ ವಿಳಾಸಕ್ಕೆ ಕಾಗದ ಬರೆದು ನನ್ನ ತಾತ್ಕಾಲಿಕ ಉದ್ಯೋಗದ ಮಾಹಿತಿ ನೀಡಿದೆ.

ಅದೇ ಮಧ್ಯಾಹ್ನವೇ ಮೈಸೂರಿಗೆ ಹೊರಟೆ. ಕೃಷ್ಣಮೂರ್ತಿಪುರದಲ್ಲಿ ಇದ್ದ ಹಾಸ್ಟಲಿನಲ್ಲಿ ನನ್ನ ತಮ್ಮ ಷಣ್ಮುಖಪ್ಪ ಬಿಕಾಂ ವಿದ್ಯಾರ್ಥಿಯಾಗಿ ಓದುತ್ತಿದ್ದ. ಅವನ ಕೋಣೆಯಲ್ಲಿ ಆಶ್ರಯ ಪಡೆದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ವಿ.ಎಚ್.ಗೌಡರನ್ನು ಭೇಟಿ ಮಾಡಿ ನನ್ನ ಮಾಹಿತಿ ಸಂಗ್ರಹ ಕಾರ್ಯವನ್ನು ಮುಂದುವರಿಸಬೇಕಿತ್ತು. ಅವರ ಮನೆಯನ್ನು ಹುಡುಕಿಕೊಂಡು ಹೋಗಿ ಭೇಟಿಯಾದೆ. ಬೆಂಗಳೂರಿನಿಂದ ಬಂದ ನನಗೆ ಏನು ಸಹಕಾರ ನೀಡಬಹುದು ಎಂಬ ಬಗ್ಗೆ ಅವರಲ್ಲಿ ಯಾವ ಸ್ಪಷ್ಟತೆಯೂ ಇದ್ದಂತೆ ತೋರಲಿಲ್ಲ. ಏನೋ ಒಂದು ಹೇಳಿ ಸಾಗಹಾಕಿದರು. ಒಂದೊಂದೇ ತಾಲ್ಲೂಕನ್ನು ಸುತ್ತಾಡುತ್ತಾ ಗ್ರಾಮೀಣ ಭಾಗದ ಜಾನಪದ ಕಲಾವಿದರನ್ನು ಪತ್ತೆ ಮಾಡಿ ಅವರ ಮಾಹಿತಿಗಳನ್ನು ಸಂಗ್ರಹಿಸುವ ಸೂಚನೆ ನನಗೆ ಒದಗಿಸಿದ ಪ್ರಶ್ನಾವಳಿಯ ಫಾರ್ಮ್‌ನಲ್ಲಿತ್ತು. ಒಂದು ಹಳ್ಳಿಗೆ ಹೋದರೆ ಅಲ್ಲೊಬ್ಬ ಕಲಾವಿದ ಸಿಕ್ಕಿದರೆ ಅವನಿಂದ ಇನ್ನೊಬ್ಬ ಕಲಾವಿದನ ಮಾಹಿತಿ ಸಿಗಬಹುದೆಂಬ ಭರವಸೆಯ ಮೇಲೆ ಮೊದಲು ಹುಣಸೂರು ತಾಲ್ಲೂಕನ್ನು ಆಯ್ಕೆ ಮಾಡಿಕೊಂಡೆ. ನಾನು ಮೈಸೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಮುಖ್ಯ ಪ್ರೇರಣೆ ಹುಣಸೂರಿನಲ್ಲಿ ನನ್ನ ನಾಲ್ಕನೆಯ ಅಣ್ಣನ ಮನೆ ಇದ್ದುದು. ಅವನು ಅಲ್ಲಿನ ಮೈಸೂರು ಬ್ಯಾಂಕ್ ಶಾಖೆಯಲ್ಲಿದ್ದ. ಆಗಷ್ಟೆ ಮದುವೆಯಾಗಿ ಮನೆ ಮಾಡಿಕೊಂಡಿದ್ದ. ಅಲ್ಲಿದ್ದು ಹುಣಸೂರು ತಾಲ್ಲೂಕಿನ ಗ್ರಾಮೀಣ ಭಾಗಗಳನ್ನು ಸುತ್ತಾಡಿ ಜಾನಪದ ಕಲಾವಿದರು ಮತ್ತು ಅವರ ವೈಶಿಷ್ಟ್ಯದ ಮಾಹಿತಿಗಳನ್ನು ಸಂಗ್ರಹಿಸಬಹುದು ಎಂಬುದು ನಾನು ಮೈಸೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ನೆಪವಾಗಿತ್ತು.

ವಿ.ಎಚ್.ಗೌಡರನ್ನು ಔಪಚಾರಿಕವಾಗಿ ಭೇಟಿ ಮಾಡಿ ಅಲ್ಲಿಂದ ಹುಣಸೂರಿಗೆ ಹೋದೆ. ಅಣ್ಣನ ಮನೆಯಲ್ಲಿ ಇಳಿದುಕೊಂಡು ಅವನ ಪರಿಚಯಕ್ಕೆ ಬಂದ ಗ್ರಾಮಪಂಚಾಯತಿ ಕಾರ್ಯದರ್ಶಿಯೊಬ್ಬರ ನೆರವು ಪಡೆದು ಕಲ್ಲಹಳ್ಳಿ, ಚಿಲಕುಂದ, ಹನಗೋಡು ಮೊದಲಾದ ಗ್ರಾಮಗಳನ್ನು ಸುತ್ತಿದೆ. ನನಗೆ ಕೊಟ್ಟಿದ್ದ ಮಾರ್ಗಸೂಚಿ ಎಂದರೆ ಪ್ರಶ್ನಾವಳಿಯ ಫಾರ್ಮ್‌ಗಳು. ಕಂಸಾಳೆ, ಪಟದ ಕುಣಿತ, ತಮಟೆ ವಾದನ ಮೊದಲಾದ ಪ್ರಕಾರಗಳಲ್ಲಿ ತೊಡಗಿದ್ದ ಕೆಲವರನ್ನು ಭೇಟಿ ಮಾಡುವುದಕ್ಕೆ ಸಾಧ್ಯವಾಯಿತು. ಕೃಷಿ ಕಾರ್ಮಿಕರೆಂದು ತೋರುತ್ತಿದ್ದ ಅವರೆಲ್ಲ ತಮ್ಮ ಬಗ್ಗೆ ಮಾಹಿತಿ ನೀಡುವುದಕ್ಕೆ ನನ್ನಿಂದ ಹಣವನ್ನು ಅಪೇಕ್ಷೆ ಮಾಡುತ್ತಿದ್ದರು. ಅವರಿಗೆ ಮಾಸಾಶನದ ಇಲ್ಲವೇ ಕಾರ್ಯಕ್ರಮ ನೀಡುವ ಸಾಧ್ಯತೆಯನ್ನು ಹೇಳಿ, ಅದಕ್ಕಾಗಿ ಮಾಹಿತಿ ಸಂಗ್ರಹಿಸುತ್ತಿರುವ ಪರಿಯನ್ನು ವಿವರಿಸುತ್ತಿದ್ದೆ. ಹನಗೋಡು ಹೋಬಳಿಯ ಒಂದು ಹಳ್ಳಿಗೆ ಹೋದಾಗ ಮಧ್ಯಾಹ್ನ ಮೂರು ಗಂಟೆಯ ಮೇಲಾಗಿತ್ತು. ದಣಿದಿದ್ದರೂ ಕಲಾವಿದನೊಬ್ಬನನ್ನು ಹುಡುಕಿಕೊಂಡು ಹೋಗಿದ್ದೆ. ಗದ್ದೆ ಕೆಲಸಕ್ಕೆ ಹೋಗಿದ್ದ ರೈತ ಆತ. ಮನೆಗೆ ಬಂದವನು ನನ್ನನ್ನು ವಿಚಾರಿಸಿಕೊಂಡು ಊಟಕ್ಕೂ ಏರ್ಪಾಟು ಮಾಡಿದ. ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರ ರಾಜಕೀಯ ವಿರೋಧಿ ಇದ್ದವನಂತೆ ಕಂಡ. ಅರಸರನ್ನು ಬೈಯುತ್ತಾ ನನಗೆ 'ಸಂದರ್ಶನ' ನೀಡಿದ. ನಾನು ಪ್ರಶ್ನಾವಳಿಗೆ ಸೀಮಿತವಾಗಿದ್ದರೆ ಅದನ್ನೂ ಮೀರಿ ಅವನು ಇನ್ನೇನೋ ಹೇಳುತ್ತಿದ್ದ. ಅದನ್ನು ಬರೆದುಕೊಳ್ಳುವಂತೆ ಒತ್ತಾಯ ಕೂಡ ಮಾಡುತ್ತಿದ್ದ. ಅವನಲ್ಲಿ ಊಟ ಮಾಡಿದ್ದ ದಾಕ್ಷಿಣ್ಯಕ್ಕೆ ಅವನು ಹೇಳಿದ್ದನ್ನೆಲ್ಲ ಬರೆದುಕೊಂಡು ಕೊನೆಗೂ ಬಿಡುಗಡೆಯಾಗಿ ಹೊರಬಂದೆ.

ಹುಣಸೂರು ತಾಲ್ಲೂಕಿನಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಫಾರ್ಮ್‌ನಲ್ಲಿ ತುಂಬಿ ಬೆಂಗಳೂರಿನ ಸಾಹಿತ್ಯ ಪರಿಷತ್ ಕಚೇರಿಗೆ ಕಳಿಸಿದೆ. ಅವುಗಳಲ್ಲಿನ ವಿವರಗಳನ್ನು ಪರಿಶೀಲಿಸಿದ ಕಚೇರಿಯ ಅಧೀಕ್ಷಕರಂತೆ ಕೆಲಸ ಮಾಡುತ್ತಿದ್ದವರೊಬ್ಬರು ಮಾಹಿತಿ ಸಂಗ್ರಹದಲ್ಲಿದ್ದ ಲೋಪಗಳನ್ನು ಪತ್ತೆ ಮಾಡಿ ಎಂತೆಂಥ ಮಾಹಿತಿಗಳು

ಅವಶ್ಯಕ ಎಂದು ಪತ್ರ ಬರೆದು ತಿಳಿಸಿದ್ದರು. ಹುಣಸೂರಿನಲ್ಲಿ ಕೆಲವರಾದರೂ ಸರ್ಕಾರಿ ಸಿಬ್ಬಂದಿ ನನಗೆ ಕಲಾವಿದರ ಹೆಸರುಗಳನ್ನು ತಿಳಿಸಿದ್ದರು. ಅದರಂತೆ ಕೆಲವರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿದ್ದೆ. ಹುಣಸೂರು ತಾಲ್ಲೂಕಿನ ಸುತ್ತಾಟದಲ್ಲಿ ಗಳಿಸಿದ್ದ ಅನುಭವ ಆಧರಿಸಿ ಧೈರ್ಯ ಮಾಡಿ ಮುಂದುವರಿಯಲು ನಿರ್ಧರಿಸಿದೆ. ಒಂದು ಬೆಳಗ್ಗೆ ಮೈಸೂರಿನಿಂದ ಹೊರಟು ಕೊಳ್ಳೇಗಾಲಕ್ಕೂ ಹೋದೆ. ಮೈಸೂರಿನಲ್ಲಿ ಪಡೆದಿದ್ದ ಒಂದೆರಡು ಸಂಪರ್ಕಗಳನ್ನು ಹುಡುಕಿಕೊಂಡು ಹೋದೆ. ಇಬ್ಬರು ಕಲಾವಿದರ ಹೆಸರುಗಳನ್ನು ಸೂಚಿಸಿದ್ದರು. ಅವರ ಮನೆಗಳನ್ನು ಹುಡುಕಿಕೊಂಡು ಹೋದೆ. ಪುಣ್ಯಾತ್ಮರು ಇಬ್ಬರೂ ನನಗೆ ಸಿಗಲಿಲ್ಲ. ಅವರನ್ನು ಹುಡುಕುವ ಪ್ರಯತ್ನ ಕೈಬಿಟ್ಟು ಬಸ್ ನಿಲ್ದಾಣಕ್ಕೆ ಬಂದೆ. ಅಲ್ಲಿ ಊಟ ಮಾಡಿ ಹೊರ ಬಂದಾಗ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಬಸ್ಸೊಂದು ಹೊರಡುವುದಿತ್ತು. ಅದನ್ನು ಹತ್ತಿ ಕುಳಿತೆ. ಸಂಜೆಯ ವೇಳೆಗೆ ಬೆಂಗಳೂರಿಗೆ ಬಂದೆ. ಹಾಸ್ಟಲಿಗೆ ಹೋಗದೆ ನೇರವಾಗಿ ಶ್ರೀರಾಮಪುರದ ಕಡೆ ತಿರುಗಿದೆ. ಕಲ್ಲೆ ಶಿವೋತ್ತಮರಾವ್ ಅವರು ಕಚೇರಿಯಲ್ಲಿ ಇದ್ದರು. 'ಜನಪ್ರಗತಿ' ಪತ್ರಿಕೆಯನ್ನು ಅದೇ ದಿನವೇ ಮುದ್ರಣಕ್ಕೆ ಕಳಿಸುವ ಒತ್ತಡದಲ್ಲಿದ್ದರು. ಅವರಿಗೆ ಸಹಾಯಕರು ಯಾರೂ ಇದ್ದಂತೆ ತೋರಲಿಲ್ಲ. ನಾನು ಬಂದಾಗ ಔಪಚಾರಿಕವಾಗಿ ಮಾತನಾಡಿಸಿ 'ಹೇಗೂ ಬಂದಿದ್ದೀರಲ್ಲ, ಈ ಪ್ರೂಫುಗಳನ್ನು ನೋಡಿ' ಎಂದರು. 'ಕ್ರಿಸ್ತಾಂಜಲಿ' ಸಂಕಲನವನ್ನು ಸಿದ್ಧಪಡಿಸುತ್ತಿದ್ದಾಗ ಶೇಷನಾರಾಯಣರು ನಮಗೆ ಪ್ರೂಫ್ ನೋಡುವ ಕ್ರಮವನ್ನು ಪರಿಚಯಿಸಿದ್ದು ಇಲ್ಲಿ ನೆರವಿಗೆ ಬಂದಿತು. ಉತ್ಸಾಹದಿಂದಲೇ ಪ್ರೂಫುಗಳನ್ನು ನೋಡಿದೆ. ಮನ್ವಾಚಾರ್, ಬೋರೇಗೌಡ ಎಂಬ ಕಂಪೋಜಿಟರುಗಳಿದ್ದರು. ಅವರ ಬಳಿ ನಿಂತು ತಪ್ಪುಗಳನ್ನು ಸರಿಪಡಿಸಿದೆ.

**'ಜನಪ್ರಗತಿ'ಯ ನೆರಳಿಗೆ**

ಎಲ್ಲ ಪುಟಗಳನ್ನೂ ಸಿದ್ಧಪಡಿಸಿ ಪಕ್ಕದಲ್ಲಿ ಇದ್ದ ಸಂಪಾದಕರ ಕಚೇರಿಗೆ ವಾಪಸು ಬಂದೆ. ಎದುರಿಗೆ ಕುಳಿತುಕೊಳ್ಳಲು ಹೇಳಿದ ರಾವ್ ಅವರು ಸದ್ಯದ ನನ್ನ ಕೆಲಸದ ವಿವರ ಕೇಳಿದರು. ಸಾಹಿತ್ಯ ಪರಿಷತ್ತಿನ ಕೆಲಸದ ಬಗ್ಗೆ ಹೇಳಿದೆ. ಅದು ತತ್ಕಾಲದ ಕೆಲಸ. ಮಾಹಿತಿ ಸಂಗ್ರಹದ ಕ್ಷೇತ್ರಕಾರ್ಯ. ಕೆಲವೇ ತಿಂಗಳಲ್ಲಿ ಮುಗಿಯಬಹುದು ಎಂಬ ವಿವರಗಳನ್ನೂ ನೀಡಿದೆ. ಸ್ವಲ್ಪ ಹೊತ್ತು ಸುಮ್ಮನಿದ್ದು 'ಇಲ್ಲಿ ಕೆಲಸ ಮಾಡುವುದಿದ್ದರೆ ಬನ್ನಿ' ಎಂದರು. ತಿಂಗಳಿಗೆ ತಾವು ಎಷ್ಟು ಕೊಡಬಹುದು ಎಂದೂ ಹೇಳಿದರು. ಅವರು ಹೇಳಿದ ಮೊತ್ತ ಸಾಹಿತ್ಯ ಪರಿಷತ್ತಿನ ಹಂಗಾಮಿ ಕೆಲಸದಲ್ಲಿ ಸಿಗುತ್ತಿದ್ದ ಮೊತ್ತಕ್ಕಿಂತಲೂ ಹೆಚ್ಚಾಗಿತ್ತು. ಬದುಕಿಗೆ ಸದ್ಯಕ್ಕೆ ಒಂದು ಆಸರೆ ಎಂದು ಸಮಾಧಾನವಾಯಿತು. 'ಆಯಿತು ಸರ್' ಎಂದೆ. 'ನಾಳೆಯಿಂದ ಬನ್ನಿ. ಸಾಹಿತ್ಯ ಪರಿಷತ್ತಿಗೆ ರಾಜೀನಾಮೆ ಕಳಿಸಿಬಿಡಿ' ಎಂದರು. 'ಸರಿ ಸರ್' ಎಂದು ನಿರಾಳವಾದೆ. ಹಾಸ್ಟಲಿಗೆ ವಾಪಸಾದೆ. ಆದರೂ 'ಜನಪ್ರಗತಿ'ಯಲ್ಲಿ ಕೆಲಸ ಸಿಕ್ಕಿದ್ದನ್ನು ಖುಷಿಯಿಂದ ಹೇಳಿಕೊಳ್ಳುವಷ್ಟು ಸಂಭ್ರಮ ಇರಲಿಲ್ಲ. ಹೇಗೂ ಅದು ಒಬ್ಬರ ಮರ್ಜಿಯನ್ನು ಅನುಸರಿಸಿದ ಉದ್ಯೋಗ ಎಂಬುದು ಮನವರಿಕೆ ಆಗಿತ್ತು. ಎಷ್ಟು ದಿನ ಇರುತ್ತದೆ ಎಂಬ ಖಾತರಿಯೂ ಇರಲಿಲ್ಲ. ಆದ್ದರಿಂದ ಎಂದಿನಂತೆ ಗೆಳೆಯರೊಬ್ಬರ ಕೋಣೆಯಲ್ಲಿ ಸೇರಿಕೊಂಡೆ.

ಸದ್ಯಕ್ಕೆ ಜೀವನೋಪಾಯದ ಒಂದು ಮಾರ್ಗ ತೆರೆಯಿತು. ಮೊದಲ ದಿನ ಕಚೇರಿಗೆ ಹೋದೆ. ನಾನು ಬೆಳಗ್ಗೆ ಒಂಬತ್ತು ಗಂಟೆಗೆ ಹೋದರೆ ಕಲ್ಲೆಯವರು ಆಗಲೇ ಬಂದಿದ್ದರು. ನನ್ನನ್ನು ಗೌರವದಿಂದ ಸ್ವಾಗತಿಸಿ 'ಬ್ಲಿಟ್ಸ್' ಪತ್ರಿಕೆಯನ್ನು ಕೊಟ್ಟು ಅದರಲ್ಲಿನ ಕೆಲವು ಸುದ್ದಿಯ ತುಣುಕುಗಳನ್ನು ಅನುವಾದಿಸಲು ಹೇಳಿದರು. ಟ್ಯಾಬ್ಲಾಯ್ಡ್ ಎಂದು ನಂತರ ನನಗೆ ಪರಿಚಯವಾದ ಬ್ಲಿಟ್ಜ್ ಪತ್ರಿಕೆಯ ಸಂಪಾದಕರು ಕಾರಂಜಿಯ

(ಕರಂಜಿಯ?). ಅದೇ ಮಾದರಿಯ 'ಕರಂಟ್' ಎಂಬ ಪತ್ರಿಕೆಯೂ ಕಲ್ಲೆಯವರ ಕಚೇರಿಗೆ ಬರುತ್ತಿತ್ತು. ಎರಡನ್ನೂ ಅವರ ತಮ್ಮ ಮೇಜಿನ ಮೇಲೆ ಇಟ್ಟುಕೊಂಡಿದ್ದರು. ಕಲ್ಲೆಯವರು ಗುರುತು ಹಾಕಿ ತೋರಿಸಿದ ಸುದ್ದಿಯ ತುಣುಕುಗಳನ್ನು ಓದಿದೆ. ಅರ್ಥವಾಗುವಂತಿದ್ದವು. ಅವನ್ನು ಸ್ವತಂತ್ರವಾಗಿ ಬರೆಯುವುದಕ್ಕೆ ಆರಂಭಿಸಿದೆ. ನನಗೆ ಕೊಡುವಾಗಲೇ ಅವರು 'ಇಲ್ಲಿರುವ ಸಾರಾಂಶವೆಲ್ಲ ಬರಬೇಕು; ಸ್ವತಂತ್ರವಾಗಿಯೂ ಇರಬೇಕು. ಯಾವ ಅಂಶವನ್ನೂ ಬಿಡಬಾರದು' ಎಂದು ಸೂಚಿಸಿದ್ದರು. ಅದರಂತೆ ಅವರು ಕೊಟ್ಟ ಮೂರು ಸುದ್ದಿಯ ತುಣುಕುಗಳನ್ನೂ ಬರೆದು ಒರಿಜಿನಲ್ ಸಹಿತ ಅವರಿಗೆ ಒಪ್ಪಿಸಿದೆ. ಹೊಸದಾಗಿ ಕೆಲಸ ಆರಂಭಿಸಿದ ದಿನ. ಕೆಲಸದಲ್ಲಿ ಯಶಸ್ಸನ್ನು ಸಾಧಿಸಲೇಬೇಕಾದ ಅನಿವಾರ್ಯತೆ. ಈ ಒತ್ತಡದಲ್ಲಿ ಬರೆದ ಸುದ್ದಿಯ ತುಣುಕುಗಳು ಕಲ್ಲೆಯವರ ಮೊದಲ ಪರೀಕ್ಷೆಯಲ್ಲಿ ತೇರ್ಗಡೆಯಾದವು. ಒಂದೆರಡು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಿ ನನ್ನ ಬರಹದ ಹಾಳೆಗಳನ್ನು ಮನ್ವಾಚಾರ್ ಎಂಬ ಕಂಪೋಜಿಟರ್‌ನನ್ನು ಕರೆದು ಕೊಟ್ಟರು. ಅವನು ಅದನ್ನು ಒಯ್ದು ಕೇವಲ ಹತ್ತೇ ನಿಮಿಷದಲ್ಲಿ ಕಂಪೋಸ್ ಮಾಡಿ ಗ್ಯಾಲಿಯಲ್ಲಿ ಪ್ರೂಫು ತೆಗೆದು ಕೊಟ್ಟ. ಮಧ್ಯಾಹ್ನದ ವರೆಗೆ ಕುಳಿತು ಬರೆದದ್ದನ್ನು ಕೆಲವೇ ನಿಮಿಷಗಳಲ್ಲಿ ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟದ್ದನ್ನು ಕಂಡು ಬೆರಗಾಯಿತು. ಪತ್ರಿಕೆಯಲ್ಲಿ ಪುಟಗಳನ್ನು ತುಂಬಿಸುವುದಕ್ಕೆ ಬರೆಯುವ ಕೆಲಸ ಸುಲಭದ್ದಲ್ಲ ಎನಿಸಿತು.

'ಬ್ಲಿಟ್ಜ್', 'ಕರಂಟ್' ಅಲ್ಲದೆ, 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಬರುತ್ತಿದ್ದ ಅನೇಕ ಸ್ವಾರಸ್ಯಕರ ಸುದ್ದಿಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ನನಗೆ ಕಲ್ಲೆಯವರು ಹೇಳುತ್ತಿದ್ದರು. ಜೊತೆಗೆ ಆಗ ಜನಪ್ರಗತಿಯಲ್ಲಿ ಪ್ರಾರಂಭವಾಗಿದ್ದ 'ಪ್ರೇಮ ದುರಂತ' ಎಂಬ ಧಾರಾವಾಹಿ ಕಾದಂಬರಿಯ ಕರಡನ್ನು ತಿದ್ದುವುದಕ್ಕೂ ಹೇಳುತ್ತಿದ್ದರು. ಚಿತ್ರದುರ್ಗದ ಬಿ.ಎಲ್. ವೇಣುಗೋಪಾಲ್ ಎಂಬ ಉದಯೋನ್ಮುಖ ಬರಹಗಾರ ಮುದ್ದಾದ ಅಕ್ಷರದಲ್ಲಿ ಬರೆದು ಕಳುಹಿಸಿದ್ದ ಕಾದಂಬರಿ ಅದು. ಅದಕ್ಕೆ ಚಿತ್ರಗಳನ್ನು ಜಿ.ವೈ.ಹುಬ್ಳೀಕರ್ ಅವರು ಪದ್ಮ ಅವರ ಹೆಸರಿನಲ್ಲಿ ಬರೆದು ಕಳುಹಿಸುತ್ತಿದ್ದರು. ಡ್ರಾಯಿಂಗ್ ಶೀಟ್‌ನಲ್ಲಿ ಬರೆದು ಕಳಿಸುತ್ತಿದ್ದ ಚಿತ್ರಗಳನ್ನು ಷಣ್ಮುಗಂ ಎಂಬ ತಮಿಳರೊಬ್ಬರ ಬಳಿ ಕಳುಹಿಸಿ ಬ್ಲಾಕ್ ಮಾಡಿಸುವ ಕೆಲಸಕ್ಕೆ ಕಲ್ಲೆಯವರ ಕಚೇರಿಯ ವ್ಯವಸ್ಥಾಪಕನಂತೆಯೂ ಕೆಲಸ ಮಾಡುತ್ತಿದ್ದ ಚನ್ನಪ್ಪ ಎಂಬುವರು ನಿಯೋಜಿತರಾಗಿದ್ದರು. ಚನ್ನಪ್ಪ ಪುಟಗಳನ್ನು ವಿನ್ಯಾಸ ಮಾಡುತ್ತಿದ್ದರು. ಮುದ್ರಿಸುತ್ತಿದ್ದರು. ಕಲ್ಲೆಯವರ ಸ್ವಂತ ಕೆಲಸಗಳಿಗೂ ಓಡಾಡುತ್ತಿದ್ದರು. ಕಚೇರಿಯ ಕರಂಟು ಬಿಲ್ಲು, ಟೆಲಿಫೋನ್ ಬಿಲ್ಲು ಕಟ್ಟುವುದರ ಜೊತೆಗೆ ಕಂಪೋಜಿಟರ್‌ಗಳನ್ನು ಹೊಂದಿಸುವುದು, ಅವರಿಂದ ಕೆಲಸ ಮಾಡಿಸುವುದು ಇತ್ಯಾದಿ ಕೆಲಸಗಳನ್ನೂ ಮಾಡುತ್ತಿದ್ದರು. ಶ್ರೀರಾಮಪುರದಲ್ಲಿ ರೈಲ್ವೆ ಹಳಿಗೆ ಹತ್ತಿರವಾಗಿದ್ದ ಮನೆಯೊಂದರ ನೆಲಮಹಡಿಯಲ್ಲಿ ಬಾಡಿಗೆಗೆ ಪಡೆದಿದ್ದ ಕಟ್ಟಡದಲ್ಲಿ ಜನಪ್ರಗತಿ ಮುದ್ರಣಾಲಯ. ಅದರಲ್ಲಿಯೇ ಕಚೇರಿ. ವಾರದಲ್ಲಿ ಒಂದೆರಡು ದಿನವಷ್ಟೆ ಮುದ್ರಣದ ಗದ್ದಲ. ಉಳಿದಂತೆ ನಿಶ್ಶಬ್ದದ ವಾತಾವರಣ. ನನಗೆ ಬೆಳಗ್ಗೆ ಒಂಬತ್ತು ಗಂಟೆಗೆ ಕಚೇರಿಗೆ ಬರುವುದಕ್ಕೆ ಹೇಳಿದ್ದರು. ಸಂಜೆ ಐದೂವರೆ ಆರು ಗಂಟೆಗೆ ಕಚೇರಿ ಮುಗಿಯುತ್ತಿತ್ತು. ಅಲ್ಲಿರುವಷ್ಟು ಕಾಲ ಸಂಪಾದಕರ ಕೋಣೆಯಲ್ಲಿ ಕುಳಿತು ಅವರು ಹೇಳಿದ್ದನ್ನು ಬರೆಯುತ್ತಾ, ಕಚೇರಿಗೆ ಬರುತ್ತಿದ್ದ ಪತ್ರಿಕೆಗಳನ್ನು ಓದುತ್ತಾ ಸಮಯ ಕಳೆಯುತ್ತಿದ್ದೆ. (ಕಲ್ಲೆಯವರನ್ನು ನೋಡುವುದಕ್ಕೆ ಬರುತ್ತಿದ್ದವರಲ್ಲಿ ನಾನಾ ಬಗೆಯ ಜನ ಇರುತ್ತಿದ್ದರು. ಶ್ರೀರಾಮಪುರದಲ್ಲಿದ್ದ ಬಿ.ಪುಟ್ಟಸ್ವಾಮಯ್ಯ ಅವರು ಟೆಲಿಫೋನ್ ಮಾಡುವುದಕ್ಕಾಗಿಯೇ ಬರುತ್ತಿದ್ದರು. ಅವರನ್ನು ಕಲ್ಲೆಯವರು 'ಪ್ರಜಾವಾಣಿ'ಯ ಮೊದಲ ಸಂಪಾದಕರು ಎಂದು ಪರಿಚಯಿಸಿದ್ದರು. ವಾಟಾಳ್

ನಾಗರಾಜ್ ತಮ್ಮ ಪಟಾಲಂ ಜೊತೆ ಆಗಾಗ ಬರುತ್ತಿದ್ದರು. ಪ.ಸು.ಭಟ್ಟ ಎಂಬುವರೊಂದಿಗೆ ನಿತ್ಯವೂ ದೂರವಾಣಿ ಸಂಭಾಷಣೆ ಇರುತ್ತಿತ್ತು. ಬಸವರಾಜ ಕಟ್ಟಿಮನಿ, ರಾವ ಬಹದ್ದೂರ, ಜಿ.ಬಿ.ಮನ್ವಾಚಾರ್ ಅವರೂ ಬಂದು ಹೋಗುತ್ತಿದ್ದರು. ಸು.ತ.ರಾಮೇಗೌಡ ಚನ್ನಪಟ್ಟಣದಿಂದ ಬರುತ್ತಿದ್ದ ಉತ್ಸಾಹಿ ಪತ್ರಕರ್ತ. 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿದ್ದ ರಾಮಣ್ಣ ಕೋಡಿಹೊಸಹಳ್ಳಿ ಕಲ್ಲೆಯವರ ಕಚೇರಿಗೆ ಬಂದು ಚಲನಚಿತ್ರ ವಿಭಾಗಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಕೊಡುತ್ತಿದ್ದರು. ಇವರೆಲ್ಲರೂ ನನ್ನ ಪರಿಸ್ಥಿತಿಯನ್ನು ಕ್ರಮೇಣ ಅರ್ಥ ಮಾಡಿಕೊಂಡು ಒಳ್ಳೆಯ ಗೆಳೆಯರಾದರು).

1975 ರ ಏಪ್ರಿಲ್ ಮೇ ತಿಂಗಳಲ್ಲಿ ನನ್ನ ಎಂ.ಎ ಪದವಿ ಮುಗಿದಿತ್ತು. ಜೂನ್ ವೇಳೆಗೆ ನನ್ನ ಓರಗೆಯ ಕೆಲವು ಅದೃಷ್ಟವಂತರು ಅಲ್ಲಲ್ಲಿ ಕೆಲಸಗಳನ್ನು ಪಡೆದಿದ್ದರು. ಜೂನ್ ಕೊನೆಯ ಸುಮಾರಿಗೆ ಸಾಹಿತ್ಯ ಪರಿಷತ್ತಿನ ಹಂಗಾಮಿ ಕೆಲಸಕ್ಕೆ ಸೇರಿಕೊಂಡಿದ್ದೆ. ಅಲ್ಲಿ ಒಂದು ಒಂದೂವರೆ ತಿಂಗಳು ಕೆಲಸ ಮಾಡಿದ್ದೆ. ಆಗಸ್ಟ್ ಮೊದಲ ವಾರಕ್ಕಾಗಲೇ 'ಜನಪ್ರಗತಿ'ಯನ್ನು ಸೇರಿದ್ದೆ. ಜೂನ್ 12ರಂದು ಅಲಹಾಬಾದ್ ಹೈಕೋರ್ಟ್ ನ್ಯಾಯಾಧೀಶ ಸಿನ್ಹಾ ಐತಿಹಾಸಿಕವಾದ ತೀರ್ಪು ನೀಡಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ರದ್ದುಪಡಿಸಿದ್ದು ಅದರಿಂದ ಬೀದಿಗೆ ಇಳಿದ ವಿರೋಧ ಪಕ್ಷಗಳ ನಾಯಕರು ಇಂದಿರಾ ಗಾಂಧಿಯವರ ರಾಜೀನಾಮೆಗೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದ ವಿವರಗಳೆಲ್ಲ ನಿತ್ಯದ ಪತ್ರಿಕಾ ಓದಿಗೆ ಆಕರ್ಷಣೆಯಾಗಿದ್ದವು. ಜೂನ್ 26ರ ಮಧ್ಯರಾತ್ರಿ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ವಿಧಿಸಿದ್ದು ಮರುದಿನದ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟವಾಗಿತ್ತು. ಅದರ ಮರುದಿನದ ಪತ್ರಿಕೆಗಳಲ್ಲಿ ಪತ್ರಿಕಾ ಸೆನ್ಸಾರ್‌ಶಿಪ್ ವಿರೋಧಿಸಿ ಒಂದೆರಡು ಪತ್ರಿಕೆಗಳಲ್ಲಿ ಸಂಪಾದಕೀಯದ ಜಾಗವನ್ನು ಖಾಲಿ ಬಿಟ್ಟಿದ್ದುದು ನಮ್ಮಲ್ಲಿ ಚರ್ಚೆಗೆ ಬಂದಿತ್ತು. ನಮ್ಮ ಭವಿಷ್ಯದ ಚಿಂತೆಯಲ್ಲಿ ಮುಳುಗಿದ್ದ ನನ್ನ ವಾರಗೆಯ ಗೆಳೆಯರಲ್ಲಿ ದೇಶದಲ್ಲಿ ವಿಧಿಸಲಾಗಿದ್ದ ತುರ್ತು ಪರಿಸ್ಥಿತಿಯ ಬಗ್ಗೆ ಭಯವಾಗಲೀ, ಆತಂಕವಾಗಲೀ ಇರಲಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ಸಿನ ದೇವರಾಜ ಅರಸರು ಮುಖ್ಯಮಂತ್ರಿ. ಆದ್ದರಿಂದ ತುರ್ತು ಪರಿಸ್ಥಿತಿಯ ವಿರುದ್ಧವಾಗಿ ದೊಡ್ಡ ರೀತಿಯಲ್ಲಿ ಪ್ರತಿಭಟನೆಗಳು ನಡೆದಿರಲಿಲ್ಲ. ತುರ್ತುಪರಿಸ್ಥಿತಿಯನ್ನು ಅದೇ ಮೊದಲ ಸಲಕ್ಕೆ ವಿಧಿಸಿದ್ದರಿಂದ ಬೆಂಗಳೂರಿನಲ್ಲಿ ಜನ ಆತಂಕದಿಂದಲೇ ಇದ್ದಂತೆ ತೋರುತ್ತಿತ್ತು. ತುರ್ತು ಪರಿಸ್ಥಿತಿಯನ್ನು ವಿಧಿಸಿದ ಒಂದೆರಡು ದಿನಗಳಲ್ಲಿಯೇ ಬೆಂಗಳೂರಿಗೆ ಬಂದಿದ್ದ ಜನಸಂಘದ ನಾಯಕರಾದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಆಡ್ವಾಣಿ ಮೊದಲಾಗಿ ವಿರೋಧ ಪಕ್ಷಗಳ ಮುಖಂಡರನ್ನು ಆಂತರಿಕ ಭದ್ರತಾ ಕಾಯ್ದೆ ಅನ್ವಯ ಬಂಧಿಸಲಾಯಿತು. ಅವರೆಲ್ಲರನ್ನೂ ಸೆಂಟ್ರಲ್ ಜೈಲಿನಲ್ಲಿ ಇರಿಸಿದ್ದು ನಮ್ಮಲ್ಲಿ ಭಯದ ವಾತಾವರಣವನ್ನು ಮೂಡಿಸಿತ್ತು.

**'ತುರ್ತು ಪರಿಸ್ಥಿತಿ'ಯಲ್ಲಿ**

ತುರ್ತು ಪರಿಸ್ಥಿತಿಯ ಪ್ರಾರಂಭದ ದಿನಗಳಲ್ಲಿ ಅಂತಹ ಉಸಿರುಕಟ್ಟುವಂಥ ಸ್ಥಿತಿಯನ್ನು ಬೆಂಗಳೂರಿನ ಜನ ಅನುಭವಿಸಲಿಲ್ಲವೆಂದು ತೋರುತ್ತದೆ. 1971ರ ಡಿಸೆಂಬರ್ 3ರಿಂದ 16 ರವರೆಗೆ ಬಾಂಗ್ಲಾ ವಿಮೋಚನೆಗಾಗಿ ಪಾಕಿಸ್ತಾನದ ವಿರುದ್ಧ ನಡೆದ ಯುದ್ಧದ ಕಾಲದಲ್ಲಿ ಅದರ ಬಿಗುವು ಆಗ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳಾಗಿದ್ದ ನಮಗೆ ಚೆನ್ನಾಗಿಯೇ ತಟ್ಟಿತ್ತು. ಬೆಂಗಳೂರಿನಲ್ಲಿ ವಿಮಾನ ಕಾರ್ಖಾನೆ (ಎಚ್‌ಎಎಲ್) ಇದ್ದ ಕಾರಣ ಶತ್ರುಪಡೆ ರಕ್ಷಣಾ ಸ್ಥಾವರಗಳ ಮೇಲೆ ಗುರಿ ಇಟ್ಟು ಬಾಂಬ್ ದಾಳಿ ಮಾಡಬಹುದೆಂದು ಮುನ್ನೆಚ್ಚರಿಕೆ ಕ್ರಮವಾಗಿ ಸಂಜೆಯಿಂದ ಬ್ಲಾಕ್ ಔಟ್ ಮಾಡಲಾಗುತ್ತಿತ್ತು. ಆ ದಿನಗಳಲ್ಲಿ ಬೆಂಗಳೂರು ಇಡೀ

ರಾತ್ರಿ ಕತ್ತಲಲ್ಲಿರುತ್ತಿತ್ತು. ಪ್ರತಿ ಗಂಟೆಗೆ ಆಕಾಶವಾಣಿಯಿಂದ ಯುದ್ಧದ ಸುದ್ದಿಯ ಪ್ರಸಾರ. ಹಗಲೆಲ್ಲ ಜನ ಅಲ್ಲಲ್ಲಿ ಗುಂಪುಗೂಡಿ ರೇಡಿಯೋಗಳಿಗೆ ಕಿವಿಯಾನಿಸಿ ಯುದ್ಧದ ಸುದ್ದಿಗಳನ್ನು ಕೇಳುತ್ತಿದ್ದರು. ಸಂಜೆಯಾಗುತ್ತಲೂ ಮನೆ ಸೇರಿಕೊಳ್ಳುತ್ತಿದ್ದರು. ಐದು ವರ್ಷಗಳ ಹಿಂದಷ್ಟೆ ಪೂರ್ಣ ಪ್ರಮಾಣದ ಯುದ್ಧ ನಡೆದು ಅದರ ಬಿಗುವನ್ನು ಅನುಭವಿಸಿದ್ದ ಬೆಂಗಳೂರಿನ ಜನತೆಗೆ ತುರ್ತು ಪರಿಸ್ಥಿತಿಯ ವಾತಾವರಣ ಅಪರಿಚಿತವಾಗಿರಲಿಲ್ಲ. ಪತ್ರಿಕೆಗಳ ಮೇಲೆ ಸೆನ್ಸಾರ್ ಇತ್ತು. ನಾನು 'ಜನಪ್ರಗತಿ'ಯನ್ನು ಸೇರಿಕೊಂಡ ಮೇಲೆ ಸರ್ಕಾರದ ವಾರ್ತಾ ಇಲಾಖೆಯಿಂದ ಯಾವೊಬ್ಬ ಅಧಿಕಾರಿಯೂ ಕಚೇರಿಗೆ ಬಂದು ಪ್ರಕಟವಾಗುತ್ತಿದ್ದ ವರದಿ– ಲೇಖನಗಳನ್ನು ನೋಡಿ ಅನುಮೋದಿಸುವ ಸಂದರ್ಭ ಬರಲಿಲ್ಲ. 'ಬಗ್ಗಲು ಹೇಳಿದರೆ ನೀವು ತೆವಳಿದಿರಿ' ಎಂದು ಅಂದಿನ ಪತ್ರಕರ್ತರ ನಡವಳಿಕೆಯನ್ನು ತುರ್ತು ಪರಿಸ್ಥಿತಿಯ ನಂತರ ಅಸ್ತಿತ್ವಕ್ಕೆ ಬಂದ ಜನತಾ ಪಕ್ಷದ ಸರ್ಕಾರದ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವ ಎಲ್.ಕೆ.ಆಡ್ವಾಣಿ ಅವರು ತಮ್ಮನ್ನು ಭೇಟಿ ಮಾಡಲು ಬಂದಿದ್ದ ಪತ್ರಕರ್ತರ ನಿಯೋಗಕ್ಕೆ ತಿಳಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದ್ದುದನ್ನು ನೆನೆಸಿದರೆ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ಬಗ್ಗೆ ತೀರ ವಿರುದ್ಧವಾದ ವರದಿಗಳು, ಸಂಪಾದಕೀಯಗಳು ಬರಲಿಲ್ಲ ಎನಿಸುತ್ತದೆ. ಬಂದಿದ್ದರೂ ಆಗ ನಾನು 'ಜನಪ್ರಗತಿ' ಕಚೇರಿಯ ಒಳಗಡೆಯೇ ಇರುತ್ತಿದ್ದ ಕಾರಣ ನನ್ನ ಗಮನಕ್ಕೆ ಬರುತ್ತಿರಲಿಲ್ಲ.

ಬಿ.ಎನ್.ಗುಪ್ತರು ಪ್ರಾರಂಭಮಾಡಿದ್ದ 'ಜನಪ್ರಗತಿ' ಒಂದು ಕಾಲದಲ್ಲಿ ತುಂಬ ಪ್ರಭಾವ ಇದ್ದ ಪತ್ರಿಕೆಯಾಗಿತ್ತು. ವಸ್ತುನಿಷ್ಠ ವರದಿ, ಲೇಖನಗಳಿಗೆ ಹೆಸರಾಗಿತ್ತು. ನಾನು ಸೇರಿದಾಗ ಕಲ್ಲೆ ಶಿವೋತ್ತಮ ರಾವ್ ಒಬ್ಬರೇ ಇದ್ದರು. ಅವರೇ ಸಂಪಾದಕರು, ಪ್ರಕಾಶಕರು, ಮುದ್ರಕರು. ಸಂಪಾದಕೀಯ ವಿಭಾಗಕ್ಕೆ ಬೇರೆ ಸಹಾಯಕರಿರಲಿಲ್ಲ. 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ಉಪ ಸಂಪಾದಕರಾಗಿದ್ದ ರಾಮಣ್ಣ ಕೋಡಿಹೊಸಹಳ್ಳಿ ತಮ್ಮ ಬಿಡುವಿನ ಸಮಯದಲ್ಲಿ ಬಂದು ಚಲನಚಿತ್ರಕ್ಕೆ ಸಂಬಂಧಿಸಿದ ಸುದ್ದಿಗಳನ್ನು ನೀಡುತ್ತಿದ್ದರು. ವೇಮಣ್ಣ ಎಂಬ ತಮಿಳರು ಪೆರಿಯಾರ್ ವಿಚಾರಧಾರೆಯನ್ನು ಸಂಗ್ರಹಿಸಿ ಕೊಡುತ್ತಿದ್ದರು. ಅವರು ಕನ್ನಡವನ್ನು ಕಲಿತು ಸರಳವಾಗಿ ಬರೆದು ಕೊಡುತ್ತಿದ್ದರು. ಅವರೂ ಸಂಜೆಯ ವೇಳೆಗೆ ಬಂದು ಹೋಗುವವರು. ನನಗೆ ಪ್ರಾರಂಭದಲ್ಲಿ ಇಂಗ್ಲಿಷ್ ಪತ್ರಿಕೆಗಳಲ್ಲಿ ಬರುತ್ತಿದ್ದ ಸ್ವಾರಸ್ಯಕರ ಸುದ್ದಿಗಳನ್ನು ಕನ್ನಡದಲ್ಲಿ ಸಿದ್ಧಪಡಿಸಲು ಹೇಳುತ್ತಿದ್ದರು. 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಪ್ರಕಟವಾಗುತ್ತಿದ್ದ ಅನೇಕ ನುಡಿಚಿತ್ರಗಳನ್ನು ಆಧರಿಸಿ ಸ್ವತಂತ್ರ ಲೇಖನಗಳನ್ನು ಬರೆಯಲು ಉತ್ತೇಜಿಸುತ್ತಿದ್ದರು. ಕ್ರಮೇಣ ಕತೆ, ಕವನ, ನಗೆಹನಿಗಳು, ಚುಟುಕುಗಳು, ವಿಶೇಷ ಲೇಖನಗಳು, ಸಾಂದರ್ಭಿಕ ಲೇಖನಗಳು, ವ್ಯಂಗ್ಯ ಚಿತ್ರಗಳ ಆಯ್ಕೆಯ ಅವಕಾಶವನ್ನೂ ನೀಡಿದರು. ನಾನು ಕೆಲಸಕ್ಕೆ ಸೇರಿಕೊಂಡ ಕೆಲವೇ ವಾರಗಳಲ್ಲಿ ಬಾಂಗ್ಲಾದೇಶದಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆದು ಬಂಗಬಂಧು ಮುಜೀಬುರ್ ರಹಮಾನ್ ಅವರನ್ನು ಕುಟುಂಬ ಸಹಿತ ಕಗ್ಗೊಲೆ ಮಾಡಲಾಯಿತು. ಮುಜೀಬರ ಮಗಳು ಹಸೀನಾ ವಾಜಿದ್ ಆ ಸಂದರ್ಭದಲ್ಲಿ ಪತಿಯೊಂದಿಗೆ ಹೊರದೇಶದಲ್ಲಿ ಇದ್ದುದರಿಂದ ಅವರೊಬ್ಬರು ಉಳಿದುಕೊಂಡಿದ್ದರು. ಮುಜೀಬರ ಎಳೆಯ ಮೊಮ್ಮಗನನ್ನೂ ಸಂಚುಕೋರರು ಗುಂಡಿಟ್ಟು ಕೊಂದಿದ್ದರು. 1975ರ ಆಗಸ್ಟ್ 15ರಂದು ಮುಂಜಾನೆ ನಡೆದ ಆ ರಕ್ತಕ್ರಾಂತಿ ದೇಶವನ್ನೇ ತಲ್ಲಣಗೊಳಿಸಿತ್ತು. 'ಜನಪ್ರಗತಿ'ಗಾಗಿ ಆ ಕುರಿತು ವಿಶೇಷ ಲೇಖನವನ್ನು ಸಿದ್ಧಪಡಿಸಲು ಕಲ್ಲೆಯವರು ಹೇಳಿದರು. ಪತ್ರಿಕೆ ಮುದ್ರಣಕ್ಕೆ ಹೋಗುವುದಕ್ಕೆ ಒಂದು ದಿನ ಇತ್ತು. ಎಲ್ಲ ಕನ್ನಡ, ಇಂಗ್ಲಿಷ್ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಓದಿ ಲೇಖನ ಸಿದ್ಧಪಡಿಸುವ ಹೊಣೆಗಾರಿಕೆ. ವಿಶ್ವಾಸದಿಂದಲೇ ಮಾಹಿತಿಗಳನ್ನು ಕಲೆ ಹಾಕಿ ಟಿಪ್ಪಣಿ

ಮಾಡಿಕೊಂಡೆ. ಪತ್ರಿಕೆಯಲ್ಲಿ ಎಷ್ಟು ಪುಟಗಳಿಗೆ ಅದನ್ನು ವಿಸ್ತರಿಸಬೇಕು ಎಂಬ ಕಲ್ಪನೆ ಇತ್ತು. ನಮ್ಮ ಪತ್ರಿಕೆ ಬರುವ ವೇಳೆಗೆ ಮಿಲಿಟರಿ ಕ್ರಾಂತಿಯ ವಿವರಗಳೆಲ್ಲವೂ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆಯಾದ್ದರಿಂದ ನಮ್ಮ ಪತ್ರಿಕೆ ವಿಶ್ಲೇಷಣಾತ್ಮಕ ಲೇಖನ ಕೊಡಬೇಕಾಗುತ್ತದೆ ಎಂದು ಸೂಚನೆ ಕೊಟ್ಟಿದ್ದರು. ಅದರಂತೆಯೇ ಒಂದು ಲೇಖನವನ್ನೂ, ಅದಕ್ಕೆ ಬಾಕ್ಸ್ ಆಗಿ ಬಳಸುವುದಕ್ಕೆ ಇನ್ನೆರಡು ಕಿರು ಲೇಖನಗಳನ್ನೂ ಸಿದ್ಧಪಡಿಸಿದೆ. ಅವು ಮೂರನ್ನೂ ಓದಿದ ಕಲ್ಲೆಯವರು ಒಂದೆರಡು ಕಡೆ ತಿದ್ದುಪಡಿ ಸೂಚಿಸಿದರು. ಶೀರ್ಷಿಕೆಗಳನ್ನೂ ನೀಡಿದರು. 'ಬಂಗಬಂಧುವಿನ ಏಳುಬೀಳು' ಎಂಬ ಉಪಶೀರ್ಷಿಕೆಯನ್ನೂ ಹೊತ್ತ ವಿಶೇಷ ವರದಿ 'ಜನಪ್ರಗತಿ'ಯ ಮಧ್ಯಪುಟದಲ್ಲಿ ಚಿತ್ರಗಳ ಸಹಿತ ವಿನ್ಯಾಸಗೊಂಡು ಪ್ರಕಟವಾಯಿತು. ಪತ್ರಕರ್ತನಾಗಿ ಬರೆದ ಮೊದಲ ವಿಶೇಷ ಲೇಖನ. ಅದಕ್ಕೆ ನನ್ನ ಹಾಸ್ಟಲು ಗೆಳೆಯರು ವ್ಯಕ್ತಪಡಿಸಿದ ಮೆಚ್ಚುಗೆ ಈ ವೃತ್ತಿಯಲ್ಲಿ ಮುಂದುವರಿಯಬಹುದು ಎಂಬ ಆತ್ಮವಿಶ್ವಾಸ ಮೂಡಿಸಿತು.

**ದೀಪಾವಳಿ ಸಂಚಿಕೆಯ ತಾಲೀಮು**

ಸಂಪಾದಕೀಯ ವಿಭಾಗದ ನಿರ್ವಹಣೆಯಲ್ಲಿ ನನ್ನ ಕೆಲಸ ತೃಪ್ತಿಕರ ಎನಿಸಿರಬೇಕು, ಕಲ್ಲೆಯವರು ಆ ವರ್ಷ ದೀಪಾವಳಿ ಸಂಚಿಕೆಯನ್ನು ತರಲು ನಿರ್ಧರಿಸಿದರು. ನಾನು ಸೇರಿಕೊಳ್ಳುವ ಒಂದು ವರ್ಷದ ಮೊದಲು ಆ ಸಂಬಂಧ ಒಂದಿಷ್ಟು ಸಿದ್ಧತೆಗಳಾಗಿದ್ದವು. ಕೆಲವು ಕತೆಗಳನ್ನು ತರಿಸಿಕೊಂಡಿದ್ದರು. ಅವುಗಳಿಗೆ ಹುಬ್ಳೀಕರ್ ಅವರ ಚಿತ್ರಗಳೂ ಸಿದ್ಧವಿದ್ದವು. ಅವನ್ನು ಬಳಸಿಕೊಂಡು ಇನ್ನಷ್ಟು ಲೇಖನಗಳನ್ನು ಸೇರಿಸಿ ಸಾಕಷ್ಟು ದೊಡ್ಡ ಗಾತ್ರದ ಸಂಚಿಕೆಯನ್ನು ತರಲು ಉದ್ದೇಶಿಸಿದರು. ಕಲ್ಲೆಯವರಿಗೆ ಪರಿಚಿತವಿದ್ದ ವೇಣು, ಜ್ಯೋತಿಪ್ರಕಾಶ್ ಎಂಬಿಬ್ಬರು ಜಾಹೀರಾತು ಸಂಗ್ರಹಿಸುವುದಕ್ಕೆ ಮುಂದೆ ಬಂದರು. ಚಲನಚಿತ್ರಕ್ಕೆ ಸಂಬಂಧಿಸಿ ರಾಮಣ್ಣ ಅವರೇ ಇದ್ದರು. ಕತೆ, ಕವನ ಮತ್ತು ವಿಶೇಷ ಲೇಖನಗಳನ್ನು ಕಲೆ ಹಾಕುವುದಕ್ಕೆ ನನಗೆ ಒಪ್ಪಿಸಿದರು. ಕರ್ಕೇರ ಎಂಬುವರೊಬ್ಬರು ಹಣಕಾಸಿನ ವ್ಯವಹಾರ ನೋಡಲು ಸಂಜೆ ವೇಳೆಗೆ ಬರುತ್ತಿದ್ದರು. ಅವರಿಗೂ ಬರೆಯುವ ಆಸಕ್ತಿ. ನಗೆ ಲೇಖನ ಬರೆದುಕೊಡುವುದಾಗಿ ಹೇಳಿದರು. ನನಗೆ ಒಂದು ವಿಶೇಷ ಸಂಚಿಕೆಯ ಉಸ್ತುವಾರಿ ನೋಡಿಕೊಳ್ಳುವ ಅವಕಾಶ. ಉತ್ಸಾಹದಿಂದಲೇ ಅದರಲ್ಲಿ ತೊಡಗಿಕೊಂಡೆ. ಒಂದೂವರೆ ತಿಂಗಳಲ್ಲಿ ವಿಶೇಷ ಸಂಚಿಕೆಯನ್ನು ಸಿದ್ಧಪಡಿಸುವ ಸವಾಲು ಕಠಿಣವಾಗಿತ್ತು. ಕಲ್ಲೆಯವರೇ ದೂರವಾಣಿಯ ಮೂಲಕವೇ ಜಾಹೀರಾತುಗಳಿಗೆ ಬೇಡಿಕೆ ಸಲ್ಲಿಸುತ್ತಿದ್ದರು. ಸಂಪಾದಕರ ಕಚೇರಿಯಲ್ಲಿ, ಅವರ ಎದುರಿನಲ್ಲಿಯೇ ಕುಳಿತು ಕೆಲಸ ಮಾಡುತ್ತಿದ್ದ ನನಗೆ ಅವರ ದೂರವಾಣಿ ಮಾತುಕತೆಗಳೆಲ್ಲ ಎದುರಾ ಎದುರೇ ನಡೆಯುತ್ತಿದ್ದವು. ಅವರ ಅಸ್ಖಲಿತ ಇಂಗ್ಲಿಷ್ ಕೇಳುವಂತೆ ಇರುತ್ತಿತ್ತು. ಅವರು ದೂರವಾಣಿಯಲ್ಲಿ ಬೈಯುತ್ತಾ ಇದ್ದುದು ಕೂಡ ಒಳ್ಳೆಯ ಇಂಗ್ಲಿಷ್ ಮಾದರಿಯಲ್ಲಿ. ಅದೂ ಒಂದು ರೀತಿಯ ಶಿಕ್ಷಣವೂ ಆಗಿತ್ತು.

ಎಂದಿನ ವಾರದ ಸಂಚಿಕೆಯನ್ನು ಸಿದ್ಧಪಡಿಸುತ್ತಾ ವಿಶೇಷ ಸಂಚಿಕೆಯನ್ನು ಯಾರೊಬ್ಬರ ಸಹಕಾರ ಇಲ್ಲದೆ ಸಿದ್ಧಪಡಿಸುವ ಕೆಲಸ ಎಷ್ಟು ಜಟಿಲವಾದದ್ದು ಎಂಬುದು ಆ ಒಂದೂವರೆ ತಿಂಗಳಲ್ಲಿ ನನಗೆ ಅನುಭವಕ್ಕೆ ಬಂದಿತು. ಆ ವೇಳೆಗೆ ನಾನು ಹಾಸ್ಟಲಿನಿಂದ ಹೊರಬಂದು ಜನಪ್ರಗತಿ ಕಚೇರಿಯಲ್ಲಿಯೇ ಉಳಿದುಕೊಂಡಿದ್ದೆ. ಅದು ವಾಸದ ಮನೆಯೇ ಆಗಿದ್ದರಿಂದ ಅದರಲ್ಲಿ ಬಚ್ಚಲು, ಸ್ನಾನದ ಮನೆ, ಶೌಚಾಲಯಗಳ ವ್ಯವಸ್ಥೆ ಇತ್ತು. ವರಾಂಡದಂತಹ ಭಾಗದಲ್ಲಿ ಪೇಪರು ಕತ್ತರಿಸುವ ಯಂತ್ರ, ಹಾಲ್ ಜಾಗದಲ್ಲಿ ಮುದ್ರಣಯಂತ್ರ, ಮಲಗುವ ಕೋಣೆಯ ಜಾಗ ಸಂಪಾದಕರ ಕಚೇರಿಯಂತೆ ಪರಿವರ್ತಿತವಾಗಿದ್ದ ವ್ಯವಸ್ಥೆ.

ಪುಟಗಳನ್ನು ಕಟ್ಟುವ, ಮುದ್ರಿಸುವ, ಬೈಂಡ್ ಮಾಡಿಸುವ ಹಾಗೂ ಇನ್ನಿತರ ಕಚೇರಿಯ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದ ಚನ್ನಪ್ಪ ಅಲ್ಲಿಯೇ ಉಳಿದುಕೊಂಡಿದ್ದರು. ಬೇರೆ ವ್ಯವಸ್ಥೆ ಮಾಡಿಕೊಳ್ಳುವವರೆಗೆ ನಾನೂ ಅವರೊಂದಿಗೆ ಉಳಿದುಕೊಳ್ಳಲು ಕಲ್ಲೆಯವರು ಅವಕಾಶ ನೀಡಿದ್ದರು. ಅಲ್ಲಿ ಉಳಿದುಕೊಂಡಿದ್ದ ಕಾರಣ ನಿದ್ದೆಯ ಅವಧಿಯನ್ನು ಹೊರತುಪಡಿಸಿ ಉಳಿದೆಲ್ಲ ಸಮಯವನ್ನೂ ವಿಶೇಷ ಸಂಚಿಕೆಯನ್ನು ಸಿದ್ಧಪಡಿಸುವುದಕ್ಕೆ ಬಳಸುವುದು ಅನಿವಾರ್ಯವಾಯಿತು. ಬೆಳಗ್ಗೆ ತಿಂಡಿ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟವನ್ನೂ ಕಚೇರಿಗೆ ತರಿಸಲು ವ್ಯವಸ್ಥೆ ಮಾಡಿದ್ದರಿಂದ ಆ ಕೆಲವು ವಾರ ಕಚೇರಿಯಿಂದ ಹೊರಗಡೆ ಬರುವುದಕ್ಕೆ ಆಗಿರಲಿಲ್ಲ. ವಿಶೇಷ ಸಂಚಿಕೆ ಮುಗಿಯುವ ಹಂತದಲ್ಲಿದ್ದಾಗ ಒಂದು ಸಂಜೆ ಕಚೇರಿಯಿಂದ ಹೊರಬಂದು ಬೆಂಗಳೂರಿನ ಇಳಿಹಗಲಿನ ವಾತಾವರಣವನ್ನು ಅದೇ ಮೊದಲ ಸಲಕ್ಕೆ ನೋಡಿದಂತೆ ವಿಸ್ಮಯಪಟ್ಟು ಕಣ್ಣುತುಂಬಿಕೊಂಡಿದ್ದೆ. ಅಷ್ಟರಮಟ್ಟಿಗೆ ಅಷ್ಟೂ ದಿನ ಕಚೇರಿಯ ಒಳಗಡೆ ಕೆಲಸದಲ್ಲಿ ಮುಳುಗಿ ಹೋಗಿದ್ದೆ. ಸಂಚಿಕೆಯ ರಕ್ಷಾಪುಟವನ್ನು ಬಣ್ಣದಲ್ಲಿ ಮುದ್ರಿಸಿಕೊಂಡು ಬರುವುದಕ್ಕೆ ಕಲ್ಲೆಯವರೇ ಮದ್ರಾಸಿಗೆ ಹೋಗಿ ಎರಡು ದಿನ ಇದ್ದು ಮುದ್ರಿತ ರಕ್ಷಾಪುಟಗಳೊಂದಿಗೆ ವಾಪಸಾದರು. ರಾಜ್‌ಕುಮಾರ್ ಅವರ ಆಕರ್ಷಕ ಭಾವಚಿತ್ರ ಇದ್ದ ಮುಖಪುಟ. ಆ ವರ್ಷ ಹೊರಬಂದಿದ್ದ ಎಲ್ಲ ದೀಪಾವಳಿ ಸಂಚಿಕೆಗಳಲ್ಲಿ 'ಜನಪ್ರಗತಿ'ಯನ್ನೂ ಸಾಹಿತ್ಯಾಸಕ್ತರು ಸಂಗ್ರಹಯೋಗ್ಯ ಸಂಚಿಕೆ ಎಂದು ಪರಿಗಣಿಸಿದ್ದಾರೆ ಎಂದು ಕಲ್ಲೆಯವರು ನನಗೆ ಸಂಬಳ ಕೊಡುತ್ತಾ ಹೇಳಿದರು.

ದೀಪಾವಳಿ ಸಂಚಿಕೆಯನ್ನು ಮುಗಿಸಿದ ತೃಪ್ತಿಯೊಂದಿಗೆ ಹಬ್ಬಕ್ಕೆ ರಜೆ ಪಡೆದು ಹಬ್ಬಕ್ಕೆ ಊರಿಗೆ ಹೊರಟೆ. ರಜೆ ಪಡೆದದ್ದು ಊರಿಗೆ ಹೋಗುವುದಕ್ಕೆ ಎಂದು ತಿಳಿದ ಕಲ್ಲೆಯವರು ದೀಪಾವಳಿ ಸಂಚಿಕೆಯ ಒಂದು ನೂರು ಪ್ರತಿಗಳನ್ನು ಶಿರಸಿಯ ಏಜೆಂಟರಿಗೆ ಒಪ್ಪಿಸಲು ಹೇಳಿದರು. ಚನ್ನಪ್ಪ ಒಂದು ನೂರು ಪ್ರತಿಗಳನ್ನು ಕಟ್ಟಿ ಬಸ್ ನಿಲ್ದಾಣಕ್ಕೆ ಕಳಿಸುವ ವ್ಯವಸ್ಥೆ ಮಾಡಿದರು. ರಾತ್ರಿ ಬಸ್ಸು ಹತ್ತಿ ಬೆಳಗ್ಗೆ ಶಿರಸಿಗೆ ತಲುಪಿದೆ. ಬೆಂಗಳೂರು ಕಚೇರಿಯಿಂದ ತಿಳಿಸಿದ್ದರಿಂದ ಅಲ್ಲಿದ್ದ ಏಜೆಂಟರು ಬಸ್ ನಿಲ್ದಾಣಕ್ಕೆ ಬಂದು ವಿಶೇಷಾಂಕದ ಪ್ರತಿಗಳನ್ನು ಪಡೆದರು. ಅಲ್ಲಿಂದ ಶಿವಮೊಗ್ಗದ ಕಡೆಯ ಬಸ್ಸು ಹಿಡಿದು ಸಾಗರದಲ್ಲಿ ಇಳಿದೆ. ಇನ್ನೊಂದು ಬಸ್ಸು ಹಿಡಿದು ಊರು ಸೇರುವಾಗ ಸಂಜೆಯಾಗಿತ್ತು.

ಹಬ್ಬದ ಸಡಗರದ ಮಧ್ಯದಲ್ಲಿಯೇ ವಾಡಿಕೆಯಂತೆ ಬರುವೆಗೆ ಹೋಗಿ ತಿಮ್ಮಪ್ಪನನ್ನು ಭೇಟಿಯಾಗಿ ನಂತರ ಬೆಂಗಳೂರಿಗೆ ಬಂದೆ. ತುರ್ತು ಪರಿಸ್ಥಿತಿಯ ವಾತಾವರಣವಿತ್ತು. ದಿನಪತ್ರಿಕೆಗಳು ಪರಿಸ್ಥಿತಿಗೆ ಒಗ್ಗಿ ಹೋಗಿ ಸರ್ಕಾರದ ವಿರುದ್ಧದ ವರದಿಗಳಿಗೆ ನಿಯಂತ್ರಣ ಹಾಕಿಕೊಂಡಿದ್ದಂತೆ ತೋರುತ್ತಿತ್ತು. ಪ್ರಜಾವಾಣಿಯಲ್ಲಿ ಜನರ ಸಮಸ್ಯೆಗಳ ಚಿತ್ರಸಹಿತ ವರದಿಗಳು ಪ್ರಕಟವಾಗತೊಡಗಿದ್ದವು. ಉಳಿದ ಪತ್ರಿಕೆಗಳನ್ನು ನೋಡಲು ನಮ್ಮ ಕಚೇರಿಯಲ್ಲಿ ಅನುಕೂಲ ಇರಲಿಲ್ಲ. ಆದರೆ ಹಿಂದೂ ಪತ್ರಿಕೆ ನಿತ್ಯ ನೋಡಲು ಸಿಗುತ್ತಿತ್ತು. 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಬಾಂಗ್ಲಾದಲ್ಲಿ ಪಶ್ಚಿಮ ಪಾಕಿಸ್ತಾನದ ಸೈನ್ಯದ ದೌರ್ಜನ್ಯದ ವಿವರಗಳಿದ್ದ ಲೇಖನಮಾಲೆ ಡೊಮಿನಿಕ್ ಲ್ಯಾಪಿಯರ್ ಮತ್ತು ಲಾರಿ ಕಾಲಿನ್ಸ್ ಅವರ ಜಂಟಿ ಹೆಸರಿನಲ್ಲಿ ಪ್ರಕಟವಾಗುತ್ತಿತ್ತು. ಅದನ್ನು ಓದುತ್ತಾ ಕುತೂಹಲ ಬೆಳೆಸಿಕೊಂಡವನು ಇಂಗ್ಲಿಷ್ ಪತ್ರಿಕೆಗಳನ್ನು ನೋಡುವುದಕ್ಕೆ ಪ್ರಾರಂಭಿಸಿದೆ.

ಕಲ್ಲೆಯವರು ಕಾರ್ಕಳ ಸಮೀಪದ ಕಲ್ಯ ಎಂಬ ಊರಿನವರು. ತಮ್ಮ ಹೆಸರಿನ ಜೊತೆಗೆ ಕಲ್ಲೆ ಎಂದು ಸೇರಿಸಿಕೊಂಡಿದ್ದರು. ಅವರ ತಂದೆ ನಾರಾಯಣ ಕಲ್ಲೆಯವರು ಆಗಾಗ ಕಚೇರಿಗೆ ಬಂದು ಹೋಗುತ್ತಿದ್ದರು. ಅವರೂ ವಿದ್ವಾಂಸರಿದ್ದು ಪತ್ರಿಕೋದ್ಯಮದಲ್ಲೂ ನುರಿತವರೆಂದು ಕಲ್ಲೆಯವರು ಹೇಳುತ್ತಿದ್ದರು. ನಾನು ಇದ್ದಾಗ

ನಾರಾಯಣ ಕಲ್ಲೆಯವರು ಒಂದು ಲೇಖನವನ್ನು ಜನಪ್ರಗತಿಗೆ ಪ್ರಕಟಣೆಗೆ ಕೊಟ್ಟಿದ್ದು ನೆನಪಿದೆ. ಪ್ರತಿ ವಾರವೂ ಒಂದು ವಿಶೇಷ ಲೇಖನವನ್ನು ಮಧ್ಯದ ಪುಟದಲ್ಲಿ ಹಾಕುವುದು ಆಗಿನ ಪದ್ಧತಿ. ಅತ್ಯಂತ ಮುಖ್ಯವಾಗಿದ್ದ ಲೇಖನಕ್ಕೆ ಮಧ್ಯದ ಪುಟದಲ್ಲಿ ಸ್ಥಾನ. ಅಲ್ಲಿ ಯಾವ ಲೇಖನ ಎಂಬುದನ್ನು ಕಲ್ಲೆಯವರೇ ಸೂಚಿಸುತ್ತಿದ್ದರು. ಅದು ಅಚ್ಚುಮೊಳೆಗಳ ಬಳಕೆ ಇದ್ದ ಕಾಲ. ಪ್ರತಿ ಪುಟವನ್ನು ಪ್ರತ್ಯೇಕವಾಗಿ ವಿನ್ಯಾಸ ಮಾಡಲಾಗುತ್ತಿತ್ತು. ಆದರೆ ಮಧ್ಯದ ಎರಡು ಪುಟಗಳನ್ನೂ ಒಟ್ಟಿಗೆ ಸಿದ್ಧಪಡಿಸಬೇಕಿತ್ತು. ಅದನ್ನು ಎದುರು ನಿಂತು ಮಾಡಿಸಬೇಕು ಎಂಬುದು ಸಂಪಾದಕರ ಆದೇಶವೂ ಆಗಿತ್ತು. ಪುಟ ವಿನ್ಯಾಸದಲ್ಲಿ ಚನ್ನಪ್ಪ ಪರಿಣಿತರಾಗಿದ್ದರೂ ನಾನು ಹೋಗುವ ವೇಳೆಗೆ ಮನ್ವಾಚಾರ್ ಎಂಬ ಹುಡುಗ ಅದನ್ನು ಮಾಡುತ್ತಿದ್ದ. ವಾರದಲ್ಲಿ ಅತಿ ಮುಖ್ಯವಾದ ವಿದ್ಯಮಾನದ ವಿಶ್ಲೇಷಣೆಗೆ ಮಧ್ಯದ ಪುಟ ನಿಗದಿಯಾಗಿತ್ತು. ಬಾಂಗ್ಲಾದಲ್ಲಿ ನಡೆದಿದ್ದ ಕ್ಷಿಪ್ರಕ್ರಾಂತಿ ಕುರಿತ ವಿಶ್ಲೇಷಣಾತ್ಮಕ ಲೇಖನ ಮಧ್ಯಪುಟದಲ್ಲಿ ವಿನ್ಯಾಸಗೊಂಡಿತ್ತು.

**'ಕೋಟಿ ಚೆನ್ನಯ'ದ ವಿಶುಕುಮಾರ್**

ಕೆಲಸಕ್ಕೆ ಸೇರಿದ ಮೂರು ನಾಲ್ಕು ತಿಂಗಳಲ್ಲಿ ನಾನು ಕಚೇರಿಗೆ ಹೊಂದಿಕೊಂಡದ್ದು ಕಲ್ಲೆಯವರಿಗೆ ವಿಶ್ವಾಸ ಮೂಡಿಸಿರಬೇಕು. ಪತ್ರಿಕೆಯನ್ನು ಆಕರ್ಷಕವಾಗಿ ರೂಪಿಸಲು ಯೋಚಿಸಿದರು. ಚಲನಚಿತ್ರಕ್ಕೆ ಸಂಬಂಧಿಸಿ ರಾಮಣ್ಣ ಕೋಡಿಹೊಸಹಳ್ಳಿ ಸುದ್ದಿಗಳನ್ನು ನೀಡುತ್ತಿದ್ದರೂ ಆ ಪುಟಗಳಲ್ಲಿ ಆಕರ್ಷಣೆ ಹೆಚ್ಚಿಸುವುದಕ್ಕೆ ಗಾಸಿಪ್ ತುಣುಕುಗಳನ್ನು ಸೇರಿಸಲು ನಿರ್ಧರಿಸಿದರು. ಅದನ್ನು ಚಿತ್ರರಂಗದಲ್ಲಿದ್ದು ಅಲ್ಲಿನ ವಿದ್ಯಮಾನಗಳನ್ನು ಒಳಗಿನಿಂದ ನೋಡುತ್ತಿದ್ದ ವಿಶುಕುಮಾರ್ ಬರೆಯುತ್ತಿದ್ದರು. ವಿಶುಕುಮಾರ್ ಹೆಸರನ್ನು ನಾನು ಮೊದಲೇ ಕೇಳಿದ್ದೆ. ಅವರು ನಿರ್ದೇಶಿಸಿದ 'ಕೋಟಿ ಚೆನ್ನಯ' ತುಳು ಚಿತ್ರವನ್ನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಬೆಳಗಿನ ಪ್ರದರ್ಶನದಲ್ಲಿ ಬಾಲಸುಬ್ರಹ್ಮಣ್ಯ ಅವರೊಂದಿಗೆ ನೋಡಿದ್ದೆ. ತುಳು ಭಾಷೆ ಅರ್ಥವಾಗದಿದ್ದರೂ ಚಿತ್ರದ ಕತೆಯನ್ನು ಅನುಸರಿಸುವುದಕ್ಕೆ ಕಷ್ಟವಾಗಿರಲಿಲ್ಲ. ಚಿತ್ರದಲ್ಲಿ ಮಿನುಗುತಾರೆ ಎಂದು ಹೆಸರಾಗಿದ್ದ ಕಲ್ಪನಾ, ಹಿಂದಿಯಲ್ಲಿ ಖ್ಯಾತರಾಗಿದ್ದ ಫೈಟರ್ ಶೆಟ್ಟಿ ಇದ್ದುದು, ಜೊತೆಗೆ ಪತ್ರಿಕೆಯಲ್ಲಿ ದೈನಿಕ ಧಾರಾವಾಹಿಯಾಗಿ ವಿಶುಕುಮಾರ್ ಅವರ ಒಂದು ಕಾದಂಬರಿ ಪ್ರಕಟವಾಗುತ್ತಿದ್ದಾಗ ವಿವಾದ ಎಬ್ಬಿಸಿದ್ದರಿಂದ ಅವರ ಬಗ್ಗೆ ಕುತೂಹಲ, ಗೌರವ ಇತ್ತು. ಒಮ್ಮೆ ಅವರು ಕಚೇರಿಗೂ ಬಂದಾಗ ಕಲ್ಲೆಯವರು ಪರಿಚಯ ಮಾಡಿಸಿದ್ದರು. ಆ ವೇಳೆಗೆ ನನ್ನ ಕತೆಗಳೂ ಪ್ರಜಾವಾಣಿಯಲ್ಲಿ ಪ್ರಕಟವಾಗಿದ್ದುದನ್ನು ಕಲ್ಲೆಯವರು ತಿಳಿಸಿದಾಗ ವಿಶುಕುಮಾರ್ ಸ್ನೇಹದಿಂದಲೇ ಮಾತನಾಡಿದರು. ಕಚೇರಿಯ ಹೊರಗಡೆ ಸಿಕ್ಕಿದಾಗಲೂ ಅವರು ಪರಿಚಯವನ್ನು ನೆನಪಿನಲ್ಲಿ ಇರಿಸಿಕೊಂಡಿದ್ದರು. ಅವರು ಜನಪ್ರಗತಿಗೆ ಬರೆಯುತ್ತಿದ್ದ ಗಾಸಿಪ್ ಸುದ್ದಿಗಳಿಗೆ ಹನಿಗುಳ್ಳೆಗಳು ಎಂದೇನೋ ಹೆಸರಿತ್ತು. ಚಿತ್ರರಂಗದ ನಟ–ನಟಿಯರು, ನಿರ್ದೇಶಕರು ಆಪ್ತವಾಗಿ ನಡೆಸುತ್ತಿದ್ದ ವ್ಯವಹಾರಗಳನ್ನು ಸ್ವಾರಸ್ಯಕರ ತುಣುಕು ಸುದ್ದಿಗಳಾಗಿ ಬರೆಯುತ್ತಿದ್ದ ಅಂಕಣಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರುತ್ತಿತ್ತು.

ಕೆಲಸದ ಒತ್ತಡ ಇಲ್ಲದಿದ್ದಾಗ ಒಳ್ಳೆಯ ಮೂಡ್ ಇದ್ದರೆ ಕಲ್ಲೆಯವರು ಅಂದಿನ ರಾಜಕೀಯ ವಿದ್ಯಮಾನಗಳ ಬಗ್ಗೆಯೂ ಮುಕ್ತವಾಗಿ ನನ್ನೊಡನೆ ಮಾತನಾಡುತ್ತಿದ್ದರು. ಅವರ ಸಹಾಯಕನಾಗಿದ್ದರೂ ಸ್ನೇಹಪರರಾಗಿ ವರ್ತಿಸುತ್ತಿದ್ದರು. ಕೆಲವೊಮ್ಮೆ ನನ್ನಿಂದ ಲೋಪವಾದಾಗ ಉಗ್ರವಾಗಿ ಕೆರಳುತ್ತಿದ್ದರೂ ವಾಚಾಮಗೋಚರ ಎನಿಸುವಂಥ ತೀವ್ರ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಅವರ ದೂರವಾಣಿಯಲ್ಲಿ ಯಾರು ಯಾರಿಗೋ ರವಾನಿಸುತ್ತಿದ್ದ ಇಂಗ್ಲಿಷ್ ಬೈಗುಳಗಳ ಬಿಸಿಯನ್ನು ಎದುರು ಕುಳಿತಿದ್ದೇ ಅರಿತಿದ್ದೆ. ಆದರೆ ಕೆಲಸಕ್ಕೆ

ಅಂಟಿಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ನನ್ನ ಮುಖಭಾವದಲ್ಲಿ ಇರುವುದನ್ನು ಗ್ರಹಿಸುತ್ತಿದ್ದರೋ ಏನೋ, ನಾನು ಒಮ್ಮೆ ಅವರ ಉಗ್ರ ಕೋಪಕ್ಕೆ ಗುರಿಯಾಗಿ ಬಾಗಿಲು ಕಡೆ ನೋಡುವಂಥ ಬಿಸಿ ವಾತಾವರಣ ಏರ್ಪಟ್ಟರೂ ಅವರೇ ತಡೆದುಕೊಂಡು ಎದ್ದು ಶೌಚಾಲಯದ ಕಡೆ ಹೋಗಿದ್ದರು. ವಾಪಸು ಬಂದವರು ಸ್ವಲ್ಪ ಹೊತ್ತು ನನ್ನನ್ನು ದಿಟ್ಟಿಸಿ ನೋಡಿ ವಿಷಯಾಂತರದ ನೆಪದಲ್ಲಿ ಟೆಲಿಫೋನ್ ಎತ್ತಿಕೊಂಡಿದ್ದರು.

ದೀಪಾವಳಿ ಸಂಚಿಕೆ ಮುಗಿಸಿ ಎಂದಿನಂತೆ ವಾರದ ಸಂಚಿಕೆಗಳನ್ನು ವೈವಿಧ್ಯಮಯವಾಗಿ ತರುವುದಕ್ಕೆ ಆರಂಭಿಸಿ ಮೂರು ವಾರಗಳು ಕಳೆದಿದ್ದಾಗ ಒಂದು ಮಧ್ಯಾಹ್ನ ಭರ್ಜರಿಯಾದ ಕತ್ತು ಮುಚ್ಚುವಂಥ ಕೋಟು ಹಾಕಿಕೊಂಡ ವ್ಯಕ್ತಿಯೊಬ್ಬರು ಕಚೇರಿಗೆ ಬಂದರು. ಆ ವೇಳೆಗೆ, ಗಣ್ಯರು ಬಂದಾಗ ನಾನು ಸಂಪಾದಕರ ಕಚೇರಿಯಿಂದ ಹೊರಗೆ ಬಂದು ಕಂಪೋಸಿಂಗ್ ವಿಭಾಗದ ಮೂಲೆಯಲ್ಲಿ ಹಾಕಿದ್ದ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದೆ. ಹಾಗೆಯೇ ನಾನು ಎದ್ದು ಹೊರಗಡೆ ಬಂದೆ. ಬಂದಿದ್ದ ಗಣ್ಯ ವ್ಯಕ್ತಿ ಸ್ವಲ್ಪ ಹೊತ್ತಿಗೆ ಕಲ್ಲೆಯವರೊಂದಿಗೆ ಮಾತುಕತೆ ಮುಗಿಸಿ ಎದ್ದರು. ಆಗ ನನ್ನನ್ನು ಒಳಕ್ಕೆ ಕರೆದ ಕಲ್ಲೆಯವರು ಗಣ್ಯ ವ್ಯಕ್ತಿಯನ್ನು 'ಮಂಡ್ಯದ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಎಂ. ಲಿಂಗಯ್ಯ'ನವರೆಂದು ಪರಿಚಯಿಸಿದರು. ನಾನು ಸಂಕೋಚದಿಂದ ಸುಮ್ಮನೆ ನಿಂತೆ. 'ಇವರೊಂದು ಪತ್ರಿಕೆ ಆರಂಭಿಸುತ್ತಿದ್ದಾರೆ. ವಾರದಲ್ಲಿ ಮೂರು ದಿನ ನೀವು ಮಂಡ್ಯಕ್ಕೆ ಹೋಗಿ ಕೆಲಸ ಮಾಡಿ. ಇಲ್ಲಿ ಮೂರು ದಿನ.. ಅಲ್ಲಿ ಮೂರು ದಿನ..' ಎಂದು ಹೇಳಿದರು. ಲಿಂಗಯ್ಯನವರ ಮುಖ ನೋಡಿದೆ. 'ಕೆಲವು ಕಾಲ ಅಷ್ಟೆ, ಅಲ್ಲಿ ಎಲ್ಲಾ ಸೆಟಪ್ ಆಗುವವರೆಗೆ ಮಾತ್ರ' ಎಂದು ನನ್ನ ಕಡೆ ತಿರುಗಿ ಹೇಳಿದರು. 'ಆಯಿತು ಸರ್' ಎಂದೆ. 'ನಾಳೆ ಬೆಳಗ್ಗೆ ಹೊರಟು ಬಂದು ಬಿಡಿ' ಎಂದು ಲಿಂಗಯ್ಯನವರು ಹೇಳಿ ಮಂಡ್ಯದ ವಿಳಾಸ ತಿಳಿಸಿದರು. ಲಿಂಗಯ್ಯನವರು ಒಳಗಡೆ ಕಲ್ಲೆಯವರೊಂದಿಗೆ ಮಾತನಾಡುತ್ತಿದ್ದಾಗ ಅವರೊಂದಿಗೆ ಬಂದಿದ್ದ ಆಲಹಳ್ಳಿ ಲಕ್ಷ್ಮಣ, ಬೂದನೂರು ರಾಜು ಹೊರಗಡೆಗೆ ನಿಂತು ಕಾಯುತ್ತಿದ್ದರು. ಲಿಂಗಯ್ಯನವರು ನಿರ್ಗಮಿಸಿದ ನಂತರ ನನ್ನನ್ನು ಎದುರು ಕೂರಿಸಿಕೊಂಡ ಕಲ್ಲೆಯವರು 'ಉದಯರವಿ' ಅಂತ ಪತ್ರಿಕೆ. ಎಷ್ಟು ಪುಟ ಮಾಡುತ್ತಾರೋ. ಮೂರು ದಿನ ಕೆಲಸ ಮಾಡಿ ಒಂದು ಹಂತಕ್ಕೆ ತಂದು ಬಂದುಬಿಡಿ. ತಿಂಗಳಿಗೆ ಇನ್ನೂರೈವತ್ತು ಕೊಡುವುದಕ್ಕೆ ಹೇಳಿದ್ದೇನೆ' ಎಂದರು.

**ಮಂಡ್ಯದ ಮಡಿಲಿಗೆ**

ಮಂಡ್ಯದಲ್ಲಿ ಕೆಲಸ ಎಂಬ ಯೋಚನೆಯೇ ನನ್ನಲ್ಲಿ ನಿರಾಳವಾದ ಭಾವವನ್ನು ಮೂಡಿಸಿತು. ತಿಮ್ಮಪ್ಪನ ಜೊತೆಯಲ್ಲಿದ್ದು ಎಂ.ಲಿಂಗಯ್ಯ ಅವರ ಪತ್ರಿಕೆಗೆ ವಾರದಲ್ಲಿ ಮೂರು ದಿನ ಕೆಲಸ ಮಾಡುವುದು ಖುಷಿಯ ಸಂಗತಿಯಾಯಿತು. ಅವನಿಗೆ ತಕ್ಷಣವೇ ಪತ್ರ ಬರೆದು ತಿಳಿಸಿದೆ. ಅವನು ಮಂಡ್ಯದಲ್ಲಿ ಬಾಡಿಗೆ ರೂಮು ಹಿಡಿದಿದ್ದ. ಅವನ ಜೊತೆ ಅವನ ಬ್ಯಾಂಕಿನ ಹಿರಿಯ ಸಹೋದ್ಯೋಗಿಯೊಬ್ಬರು ಸೇರಿಕೊಂಡಿದ್ದರು. ಕೋಣೆಗೆ ಹೊಂದಿಕೊಂಡು ಸ್ನಾನಕ್ಕೆ ವ್ಯವಸ್ಥೆ ಇತ್ತು. ಪ್ರತ್ಯೇಕ ಶೌಚಾಲಯ ಸೌಲಭ್ಯ ಇದ್ದ ಅವನ ಕೋಣೆಯಲ್ಲಿ ಅತಿಥಿಯಾಗಿ ನನ್ನನ್ನು ವಾರದಲ್ಲಿ ಮೂರು ದಿನ ಉಳಿಸಿಕೊಳ್ಳುವುದು ಅವನಿಗೆ ಸಮಸ್ಯೆಯಾಗಲಿಲ್ಲ. ಎಂ.ಎ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಡೆದರೂ ಸೂಕ್ತ ಕೆಲಸ ನನಗೆ ಸಿಕ್ಕಿರಲಿಲ್ಲ ಎಂಬುದು ಅವನಿಗೂ ಬೇಸರದ ಸಂಗತಿಯಾಗಿತ್ತು. 'ಸದ್ಯಕ್ಕೆ ಏನೋ ಒಂದು ವ್ಯವಸ್ಥೆ ಆಯಿತಲ್ಲ' ಎಂಬ ಸಮಾಧಾನದಿಂದ ನನ್ನನ್ನು ಅವನು ಬರಮಾಡಿಕೊಂಡ. ಅಲ್ಲಿ ವಸತಿಯ ವ್ಯವಸ್ಥೆಯಷ್ಟೆ ಇತ್ತು. ಬೆಳಗಿನ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ಇಬ್ಬರೂ ಹೋಟಲನ್ನು ಅವಲಂಬಿಸಿದ್ದೆವು. ಬೆಳಗ್ಗೆ ಇಬ್ಬರೂ

ಒಟ್ಟಾಗಿ ತಿಂಡಿ ಸೇವಿಸಿ ನಮ್ಮ ನಮ್ಮ ಕಚೇರಿಗಳಿಗೆ ಹೊರಡುತ್ತಿದ್ದೆವು. ಮಧ್ಯಾಹ್ನದ ಊಟ ಪ್ರತ್ಯೇಕವಾಗಿ ಆಗುತ್ತಿತ್ತು. ರಾತ್ರಿಯ ಊಟಕ್ಕೆ ಜೊತೆಯಾಗಿ ಹೋಗುತ್ತಿದ್ದೆವು. ಕೆಲವೊಮ್ಮೆ ತಿಮ್ಮಪ್ಪನ ಸಹೋದ್ಯೋಗಿಗಳು ಸೇರುತ್ತಿದ್ದರು. ಆಗ ವಿಶೇಷ ಊಟದ ವ್ಯವಸ್ಥೆ ಆಗುತ್ತಿತ್ತು. ನನ್ನ ಆರ್ಥಿಕ ಸ್ಥಿತಿಯ ಅರಿವಿದ್ದ ತಿಮ್ಮಪ್ಪ ಮತ್ತು ಅವನ ಸಹೋದ್ಯೋಗಿಗಳು ನನಗೆ ಮುಜುಗರವಾಗದಂತೆ ಎಚ್ಚರ ವಹಿಸಿ ವಿಶೇಷ ಊಟದ ವೆಚ್ಚವನ್ನು ಭರಿಸುತ್ತಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರು ಪ್ರಕಟಿಸಿದ್ದ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅನುಷ್ಠಾನ ಭರದಿಂದ ಸಾಗಿದ್ದ ದಿನಗಳು. ಎಂ.ಲಿಂಗಯ್ಯ ಮುಖ್ಯಮಂತ್ರಿ ದೇವರಾಜ ಅರಸರ ಅನುಯಾಯಿಯಾಗಿದ್ದರು. ಸಕ್ಕರೆ ಕಾರ್ಖಾನೆಯ ಅಧಿಕಾರೇತರ ಅಧ್ಯಕ್ಷರಾಗಿದ್ದ ಅವರು ರಾಜಕೀಯದಲ್ಲಿ ಆಸಕ್ತರಾಗಿದ್ದರು. ಅಲ್ಲಿ ಹಿರಿಯರಾದ ಕೆ.ವಿ.ಶಂಕರೇಗೌಡರು, ಎಚ್.ಡಿ.ಚೌಡಯ್ಯ ಇದ್ದರು. ಅವರ ನಂತರದ ಪೀಳಿಗೆಯವರಾಗಿ ಎಸ್.ಎಂ.ಕೃಷ್ಣ ಪ್ರವರ್ಧಮಾನಕ್ಕೆ ಬಂದಿದ್ದರು. ದೇವರಾಜ ಅರಸರ ಸರ್ಕಾರದಲ್ಲಿ ಪ್ರಭಾವಿ ಖಾತೆಗಳನ್ನು ಹೊಂದಿದ್ದ ಕೃಷ್ಣ ಅವರು ಆ ಹೊತ್ತಿನಲ್ಲಿ(1975) ಅರಸರಿಂದ ಅಂತರ ಕಾಯ್ದುಕೊಳ್ಳುವಂತೆ ವರ್ತಿಸುತ್ತಾ ಇದ್ದಾರೆ ಎಂದು ಕಲ್ಲೆಯವರು ಒಮ್ಮೆ ಹೇಳಿದ್ದರು. ‘ಕೃಷ್ಣ ಅವರು ಕೆ.ಎನ್.ನಾಗೇಗೌಡರನ್ನು ಬೆಳೆಸುತ್ತಿದ್ದಾರೆ, ಆದ್ದರಿಂದ ಬುದ್ಧಿಯವರು (ಅರಸರು) ಅದಕ್ಕೆ ಎದುರಾಗಿ ಲಿಂಗಯ್ಯನವರಲ್ಲಿ ಆಸಕ್ತಿ ವಹಿಸಿದ್ದಾರೆ’ ಎಂದೇನೋ ಕಲ್ಲೆಯವರು ಹೇಳಿದ್ದರು. ಆದ್ದರಿಂದ ಲಿಂಗಯ್ಯನವರು ಸಕ್ಕರೆ ಕಾರ್ಖಾನೆಗೆ ಅಧ್ಯಕ್ಷರಾಗಿ ಅರಸರಿಂದ ನೇಮಕಗೊಂಡಿದ್ದು ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಒಂದು ವಾರಪತ್ರಿಕೆಯನ್ನು ಹೊರಡಿಸಲು ನಿರ್ಧರಿಸಿದ್ದರು. ಕುವೆಂಪು ಅವರನ್ನು ಆರಾಧಿಸುವವರು ಮಂಡ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ‘ಉದಯರವಿ’ ಎಂಬ ಶೀರ್ಷಿಕೆಯನ್ನು ತಮ್ಮ ವಾರಪತ್ರಿಕೆಗೆ ಇಟ್ಟಿದ್ದರು.

ಮಂಡ್ಯಕ್ಕೆ ಹೋಗಿ ತಿಮ್ಮಪ್ಪನ ಕೋಣೆಯಲ್ಲಿ ಉಳಿದುಕೊಂಡು ಮರುದಿನ ಲಿಂಗಯ್ಯನವರ ಕಚೇರಿ ಹುಡುಕಿದೆ. ಅವರ ಮನೆಗೆ ಹೊಂದಿಕೊಂಡ ದೊಡ್ಡ ವಾಣಿಜ್ಯ ಸಮುಚ್ಚಯದಲ್ಲಿ ಒಂದು ಭಾಗದಲ್ಲಿ ಪತ್ರಿಕಾ ಕಚೇರಿ ಹಾಗೂ ಪ್ರಿಂಟಿಂಗ್ ಪ್ರೆಸ್ ನೆಲೆಗೊಳಿಸಿದ್ದರು. ಅಲ್ಲಿ ಮುದ್ರಣ ಕಾರ್ಯ ಆರಂಭವಾಗುವ ಮೊದಲು ‘ಉದಯರವಿ’ಯ ಪ್ರಾರಂಭದ ಸಂಚಿಕೆಗಳು ಮೈಸೂರಿನ ಜಿ.ಎಚ್.ರಾಮರಾಯರ ಪ್ರೆಸ್‌ನಲ್ಲಿ ಮುದ್ರಣವಾಗುತ್ತಿದ್ದವು. ಲಿಂಗಯ್ಯನವರ ಜೊತೆ ಅವರ ಕಾರಿನಲ್ಲಿ ಮೈಸೂರಿಗೆ ಹೋಗಿ ಕೃಷ್ಣಮೂರ್ತಿಪುರದಲ್ಲಿದ್ದ ಮೈಸೂರು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪುಟಗಳ ವಿನ್ಯಾಸ ಮಾಡಿಸುವ ಕೆಲಸ ಆರಂಭಿಸಿದೆ. ಯಾವ ಯಾವ ಪುಟಗಳಲ್ಲಿ ಎಂತೆಂಥ ವಿಷಯಗಳ ಲೇಖನಗಳಿರಬೇಕು ಎಂಬುದನ್ನು ಲಿಂಗಯ್ಯನವರೇ ನಿರ್ಧರಿಸಿದ್ದರು. ಅವರು ಹೇಳಿದಂತೆ ಲೇಖನಗಳನ್ನು ಆಯ್ಕೆ ಮಾಡಿ ಕಂಪೋಜಿಟರ್‌ಗಳಿಗೆ ಕೊಡುವುದು, ಅವರು ಸಿದ್ಧಪಡಿಸಿ ಕೊಟ್ಟ ನಂತರ ಪ್ರೂಫ್ ನೋಡುವುದು, ಅಂತಿಮವಾಗಿ ಪುಟಗಳಿಗೆ ಹಾಕಿಸುವುದು. ಇವೆಲ್ಲ ಸಂಪಾದಕೀಯ ಸಹಾಯಕರ ಕೆಲಸವಾಗಿದ್ದು ನನಗೆ ಆ ಎಲ್ಲ ಹಂತಗಳ ಪ್ರತ್ಯಕ್ಷ ಅನುಭವ ಆಯಿತು. ಕಲ್ಲೆಯವರಂತೆಯೇ ಲಿಂಗಯ್ಯನವರೂ ತಮ್ಮ ಸಂಪಾದಕೀಯವನ್ನು ಉಕ್ತಲೇಖನ ಬರೆಸುತ್ತಿದ್ದರು. ಬರೆಯುವ ವಿಷಯದ ಬಗ್ಗೆ ಇಬ್ಬರಲ್ಲೂ ಅಸಾಧಾರಣ ಅರಿವಿರುವುದು ಬರೆದುಕೊಳ್ಳುತ್ತಿದ್ದ ನನಗೆ ಗೊತ್ತಾಗುತ್ತಿತ್ತು. ಆದರೆ ಕಲ್ಲೆಯವರದು ತುಂಬಾ ಆಳವಾದ ಪಾಂಡಿತ್ಯ. ತಮ್ಮ ನಿಲುವಿಗೆ ವಿರುದ್ಧ ಇದ್ದವರನ್ನು ಮುಟ್ಟಿ ನೋಡುವಂತೆ ದಂಡಿಸುವುದರಲ್ಲಿ ಕಲ್ಲೆಯವರದು ವಿಶೇಷ ಸಾಮರ್ಥ್ಯ. ಎಪ್ಪತ್ತರ ದಶಕದ ಅನೇಕ ಸಮಾಜವಾದಿ ಹೋರಾಟಗಳಿಗೆ ಒತ್ತಾಸೆಯಾಗಿದ್ದ ಕಲ್ಲೆಯವರು ವಿದ್ಯಾರ್ಥಿ ಮುಖಂಡರಿಗೂ, ಯುವ

ಬರಹಗಾರರಿಗೂ ಉತ್ತೇಜನ ನೀಡಿದ್ದರು. ಮಂಡ್ಯ, ರಾಮನಗರ ಕಡೆಯ ಅನೇಕ ಯುವ ಬರಹಗಾರರು 'ಜನಪ್ರಗತಿ'ಯಲ್ಲಿ ಅವಕಾಶ ಪಡೆದಿದ್ದರು. ಅವರ ನಿಕಟವರ್ತಿಗಳಾಗಿ ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ, ರಮೇಶ ಹುಲ್ಲುಕೆರೆ ಮೊದಲಾದವರು ಹೋರಾಟಗಳಲ್ಲಿದ್ದರು. ಅಸಾಂಪ್ರದಾಯಿಕ ರೀತಿಯಲ್ಲಿ ಮದುವೆಯಾಗಿದ್ದ ಕಾಳೇಗೌಡರಂತೂ ಕಲ್ಲೆಯವರ ಅಭಿಮಾನದ ಯುವ ಪ್ರತಿಭೆಯಾಗಿದ್ದರು. ನಾನು ಅವರನ್ನು ಸೇರಿಕೊಳ್ಳುವ ಹೊತ್ತಿಗೆ ಈ ಯುವ ಬರಹಗಾರರೊಂದಿಗೆ ಕಲ್ಲೆಯವರ ಸಂಪರ್ಕ ಮೊದಲಿನಂತೆ ಇರಲಿಲ್ಲ. ಕಲ್ಲೆಯವರನ್ನು ಸಾಮಾನ್ಯವಾಗಿ 'ರಾಯರು' ಎಂದು ಕರೆಯುತ್ತಿದ್ದ ಈ ಯುವ ಪಡೆಯಲ್ಲಿ ಯಾರೋ ಎಲ್ಲಿಯೋ ಏನೋ ಟೀಕಿಸಿದ್ದನ್ನು ಕೇಳಿ ತಿಳಿದ ಕಲ್ಲೆಯವರು ತಮ್ಮ ಮುಂದಿನ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಸ್ತಾಪಿಸಿದ್ದರು. ಅದರ ಒಂದು ಸಾಲು ಹಲವು ದಶಕಗಳ ನಂತರವೂ ನನಗೆ ನೆನಪಿನಲ್ಲಿದೆ. 'ಕಾಳಬೋಳರೂ, ಬೆಸುಗೆಯಿಲ್ಲದ ಬಾಯಿಗಳೂ, ಹುಲ್ಲುಕಡ್ಡಿಗಳೂ ನಮ್ಮ ವಿಚಾರಗಳನ್ನು ಎಂದಿಗೂ ದುರ್ಬಲಗೊಳಿಸಲಾರವು'...

'ಉದಯರವಿ' ಪತ್ರಿಕೆ 'ಜನಪ್ರಗತಿ'ಯಂತೆಯೇ ವಾರಪತ್ರಿಕೆ. 'ಜನಪ್ರಗತಿ'ಯ ಸ್ವರೂಪ ನಿರ್ಧಾರವಾಗಿತ್ತು. ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ, ವೈಚಾರಿಕ ಚಿಂತನೆಯ ಬರಹಗಳಿಗೆ ಅಲ್ಲಲ್ಲಿ ಅವಕಾಶ. ಪೆರಿಯಾರ್ ಚಿಂತನೆ, ಅಪರಾಧ ಸುದ್ದಿಗಳು, ಒಂದು ಧಾರಾವಾಹಿ, ಒಂದು ಕಥೆ, ಒಂದು ಹಾಸ್ಯ ಬರಹ, ಸ್ಥಳಾವಕಾಶ ಇದ್ದಲ್ಲಿ ನಗೆಹನಿಗಳು, ಹೊಸಬರ ಕವನಗಳು, ಸಿನಿಮಾ ಸುದ್ದಿಗಳು, ಸ್ವಾರಸ್ಯಕರ ಗಾಸಿಪ್, ಮಕ್ಕಳಿಗಾಗಿ ಕಿರುಕತೆಗಳು, ಪದ್ಯಗಳು. ಭವಿಷ್ಯ ಹಾಕುವುದು ಮೂಢನಂಬಿಕೆ ಎಂದು ಕಲ್ಲೆಯವರು ಹೇಳುತ್ತಾ ಇದ್ದುದರಿಂದ ವಾರಭವಿಷ್ಯ ಎಂಬ ಅಂಕಣ ಇರಲಿಲ್ಲ. ಈ ಎಲ್ಲಾ ವಿಷಯಗಳಿಗೂ ನಿರ್ದಿಷ್ಟ ಪುಟಗಳನ್ನು ನಿರ್ಧರಿಸಲಾಗಿತ್ತು. ಪುಟ ವಿನ್ಯಾಸ ಮಾಡುವ ಕಂಪೋಜಿಟರ್ ಬಂದು 'ಈ ವಾರಕ್ಕೆ ಕತೆ ಬೇಕು, ಹಾಸ್ಯಲೇಖನ ಬೇಕು, ಮಕ್ಕಳ ಕತೆ ಹೋದ ವಾರಕ್ಕೆ ಮಾಡಿಸಿದ್ದು ಉಳಿದಿದೆ. ಧಾರಾವಾಹಿಯ ಕಂತು ದೀರ್ಘವಾಗಿದೆ...' ಇತ್ಯಾದಿ ಹೇಳಿ ಸಂಪಾದಕೀಯ ವಿಭಾಗಕ್ಕೆ ನೆರವಾಗುತ್ತಿದ್ದರು. ಆದರೆ 'ಉದಯರವಿ' ಆಗಷ್ಟೆ ಪ್ರಾರಂಭವಾದ ಪತ್ರಿಕೆ. ಎಂಟು ಪುಟಗಳಲ್ಲಿ ವೈವಿಧ್ಯಮಯ ಲೇಖನಗಳನ್ನು ಹಾಕಬೇಕು ಎಂಬುದು ಲಿಂಗಯ್ಯನವರ ಉದ್ದೇಶ. ದಿನಪತ್ರಿಕೆಗಳೂ, ವಾರಪತ್ರಿಕೆಗಳೂ ಇರುವಾಗ ಅವುಗಳಿಗೆ ಭಿನ್ನವಾಗಿ ತಮ್ಮ ವಿಚಾರಧಾರೆಯನ್ನು ಬಿಂಬಿಸುವಂತೆ ಮತ್ತು ಅದು ತಮಗೆ ಸಾರ್ವಜನಿಕವಾಗಿ ಬಲ ತಂದುಕೊಡುವಂತೆ ರಾಜಕಾರಣದಲ್ಲಿ ಆಸಕ್ತಿ ಇದ್ದ ಲಿಂಗಯ್ಯನವರು ಪತ್ರಿಕೆಯನ್ನು ರೂಪಿಸಲು ಇಚ್ಛಿಸಿದ್ದರು. ಆದ್ದರಿಂದ ಅದರಲ್ಲಿ ಕಥೆ, ಕವನ, ಧಾರಾವಾಹಿ ಮೊದಲಾದ ಸಾಹಿತ್ಯ ಬರಹಗಳಿಗೆ ನಿರ್ದಿಷ್ಟ ಪುಟಗಳನ್ನು ನಿಗದಿಪಡಿಸಿರಲಿಲ್ಲ. ಆದರೆ ಸಂಪಾದಕರು ಸೂಚಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಸಂಗ್ರಹಿಸುವ ಕೆಲಸವನ್ನು ನಾನು ಮಾಡಬೇಕಿತ್ತು. ಸಕ್ಕರೆ ಕಾರ್ಖಾನೆಯ ಆಡಳಿತ, ಜಿಲ್ಲಾ ರಾಜಕೀಯದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದು, ಚುನಾವಣೆ ರಾಜಕೀಯಕ್ಕೆ ಬಂದರೆ ಅದಕ್ಕೆ ಬೇಕಾದ ಸ್ವಂತ ನೆಲೆಯನ್ನು ಸೃಷ್ಟಿಸಿಕೊಳ್ಳುವುದು– ಇವೇ ಮೊದಲಾದ ಹೊಣೆಯನ್ನು ನಿರ್ವಹಿಸಬೇಕಾದ ಲಿಂಗಯ್ಯನವರು ಸಂಪಾದಕೀಯವನ್ನು ಉಕ್ತಲೇಖನ ಕೊಡುವಷ್ಟಕ್ಕೆ ತಮ್ಮ ಹೊಣೆಯನ್ನು ನಿಗದಿಪಡಿಸಿಕೊಂಡಿದ್ದರು.

'ಉದಯರವಿ' ಮೈಸೂರಿನ ಜಿ.ಎಚ್.ರಾಮರಾಯರ ಪ್ರೆಸ್‌ನಲ್ಲಿ ಮುದ್ರಣವಾಗುತ್ತಿದ್ದಾಗ ಅದನ್ನು ಸಿದ್ಧಪಡಿಸುವ ಹೊಣೆ ಹೊತ್ತಿದ್ದ ರಾಮರಾಯರ ಸೋದರ ಕೃಷ್ಣಮೂರ್ತಿ ಅವರು ತಮ್ಮ ಆಸಕ್ತಿಯಿಂದ ಮೈಸೂರಿನ ಲೇಖಕರಿಂದ ಲೇಖನಗಳನ್ನು ಪಡೆದು ಉದಯರವಿಯ ಪುಟಗಳನ್ನು ತುಂಬಿಸುತ್ತಿದ್ದರು. ಸಿ.ಪಿಕೆ,

ಕ್ಯಾತನಹಳ್ಳಿ ರಾಮಣ್ಣ ಮೊದಲಾದವರ ಕೆಲವು ಕತೆ, ಲೇಖನಗಳು 'ಉದಯರವಿ'ಯ ಪ್ರಾರಂಭದ ಸಂಚಿಕೆಗಳಲ್ಲಿ ಪ್ರಕಟವಾದವು. ಆದರೆ ಪತ್ರಿಕೆಯ ಸ್ವರೂಪವನ್ನು ಅವರು ನಿರ್ಧರಿಸಲಿಲ್ಲ. ತಮ್ಮಲ್ಲಿ ಮುದ್ರಣವಾಗುತ್ತಿದ್ದ ಅವಧಿಯಲ್ಲಿ ಪತ್ರಿಕೆ ಆಕರ್ಷಕವಾಗಿರಬೇಕು ಎಂಬಷ್ಟರಮಟ್ಟಿಗೆ ಅವರು ಆಸಕ್ತಿ ವಹಿಸಿದ್ದರು. ನಾನು ಸಹಾಯಕನಾಗಿ ಮಂಡ್ಯದಲ್ಲಿ ನಿಂತ ಮೇಲೆ ಮಂಡ್ಯದಲ್ಲಿಯೇ ಪತ್ರಿಕೆಯ ಮುದ್ರಣ ಪ್ರಾರಂಭವಾಯಿತು. ಅದರ ಎಲ್ಲಾ ಪುಟಗಳನ್ನೂ ತುಂಬಿಸುವ ಹೊಣೆಗಾರಿಕೆ ನನ್ನ ಮೇಲೆ ಬಿತ್ತು. ಸ್ಥಳೀಯ ಲೇಖಕರನ್ನು ಗುರುತು ಮಾಡಿಕೊಂಡು ಅವರಿಂದ ಕತೆಗಳನ್ನು ಬರೆಸುವುದಕ್ಕೆ ಪ್ರಯತ್ನ ಆರಂಭಿಸಿದೆ. 'ಉದಯರವಿ' ಕಚೇರಿಯಲ್ಲಿ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ರಾಮಸ್ವಾಮಿ ಎಂಬುವವರು ಲೆಕ್ಕಪತ್ರ ನೋಡಿಕೊಳ್ಳಲು ನಿಯೋಜಿತರಾದರು. ಕಚೇರಿಯ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳಲು ಲಿಂಗಯ್ಯನವರು ತಮ್ಮವರೇ ಆದ ಬೋರಯ್ಯ ಎಂಬುವವರನ್ನು ತಂದು ಹಾಕಿದ್ದರು. ರಾಮಸ್ವಾಮಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರಂತೆ. ಸಾಹಿತ್ಯದ ಅಭಿರುಚಿಯೂ ಇದ್ದವರು. ನನ್ನ ಬಗ್ಗೆ, (ಅಂದರೆ ಎಂ ಎ ಪದವಿ ಮಾಡಿದ್ದು ಜೀವನ ನಿರ್ವಹಣೆಗಾಗಿ ಮಂಡ್ಯದಂಥ ಜಿಲ್ಲಾ ಕೇಂದ್ರದಲ್ಲಿ ಅಲ್ಪಾವಧಿ ಕೆಲಸಕ್ಕೆ ಬಂದ ಅವಸ್ಥೆಯ ಬಗ್ಗೆ) ಅನುಕಂಪ ಇದ್ದವರು. ಪತ್ರಿಕೆಯ ಪುಟಗಳನ್ನು ತುಂಬಿಸಲು 'ರಾ.ಕಿಕ್ಕೇರಿ' ಎಂಬ ಹೆಸರಿನಲ್ಲಿ ಸ್ವಾತಂತ್ರ್ಯ ಹೋರಾಟದ ತಮ್ಮ ನೆನಪುಗಳನ್ನು ಬರೆದುಕೊಡುತ್ತಿದ್ದರು. ತೈಲೂರು ವೆಂಕಟಕೃಷ್ಣ, ಶಿವಳ್ಳಿ ಕೆಂಪೇಗೌಡ, ಶಂಭೂನಹಳ್ಳಿ ಕೃಷ್ಣೇಗೌಡ, ಕೊತ್ತತ್ತಿ ನಂಜುಂಡೇಗೌಡ ಮೊದಲಾದ ಬರಹಗಾರರು ನನ್ನ ಸಂಪರ್ಕಕ್ಕೆ ಬಂದು ಅವರಿಂದಲೂ ಲೇಖನಗಳನ್ನು ಪಡೆಯುತ್ತಿದ್ದೆ. ಸಂಪಾದಕೀಯವನ್ನು ಉಕ್ತಲೇಖನ ಕೊಡುತ್ತಿದ್ದ ಲಿಂಗಯ್ಯನವರಿಗೆ ಪತ್ರಿಕೆಯಲ್ಲಿ ಯಾವ ಯಾವ ಬಗೆಯ ಲೇಖನಗಳಿರಬೇಕು ಎಂಬುದರ ಬಗ್ಗೆ ನನಗೆ ಖಚಿತ ನಿರ್ದೇಶನಗಳನ್ನು ನೀಡಲಾಗುತ್ತಿರಲಿಲ್ಲ. ಲಿಂಗಯ್ಯನವರ ರಾಜಕೀಯ ಹಿತಾಸಕ್ತಿಯನ್ನು ಅವರಿಂದ ನಿಯೋಜಿತರಾದ ಬೋರಯ್ಯನವರಿಂದ ಮತ್ತು ಲೆಕ್ಕಪತ್ರ ನೋಡಿಕೊಳ್ಳುತ್ತಿದ್ದ ರಾಮಸ್ವಾಮಿ ಅವರಿಂದ ತಿಳಿದುಕೊಂಡು ಪತ್ರಿಕೆಯ ಸ್ವರೂಪ ನಿರ್ಧರಿಸುವ ಒತ್ತಡಕ್ಕೆ ನಾನು ಒಳಗಾದೆ.

ವಾರದಲ್ಲಿ ಮೂರು ದಿನ ಬೆಂಗಳೂರಿನಲ್ಲಿ 'ಜನಪ್ರಗತಿ', ಮತ್ತೆ ಮೂರು ದಿನ ಮಂಡ್ಯದಲ್ಲಿ 'ಉದಯರವಿ' ಪತ್ರಿಕೆಗಾಗಿ ಕೆಲಸ ಮಾಡುವುದು ನನಗೆ ತಾತ್ಕಾಲಿಕ ನೌಕರಿ ಎಂಬುದು ಸ್ಪಷ್ಟವಿತ್ತು. ಎರಡೂ ಪತ್ರಿಕೆಗಳಿಂದ ಒಟ್ಟು ಐದು ನೂರು ರೂಪಾಯಿ ಸಿಗುತ್ತಿತ್ತು. ಅದು ಕಡಿಮೆ ಮೊತ್ತವೇನೂ ಆಗಿರಲಿಲ್ಲ. ಆದರೆ ಇಬ್ಬರು ಸಂಪಾದಕರ ಮರ್ಜಿಗೆ ಅನುಗುಣವಾಗಿ ಕೆಲಸ ಮಾಡುವುದು ಸುಲಭದ್ದಾಗಿರಲಿಲ್ಲ. ಇದೇ ಕಸರತ್ತನ್ನು ಹೆಚ್ಚು ಕಾಲ ನಡೆಸುವುದು ಸಾಧ್ಯವಿಲ್ಲ, ಕಾಯಂ ಸ್ವರೂಪದ ಕೆಲಸ ಹಿಡಿಯುವುದು ಭವಿಷ್ಯದ ದೃಷ್ಟಿಯಿಂದ ಅಗತ್ಯವಾಗಿತ್ತು. ಆನರ್ಸ್ ಓದುತ್ತಿದ್ದಾಗ 'ಪ್ರಜಾವಾಣಿ'ಯಲ್ಲಿ ಕೆಲಸಕ್ಕೆ ಪ್ರಯತ್ನಿಸಿ ಒಂದು ಹಂತದಲ್ಲಿ ಯಶಸ್ವಿಯೂ ಆಗಿದ್ದೆ. ಆದರೆ ಹುಬ್ಬಳ್ಳಿ ಆವೃತ್ತಿಗಾಗಿ ಮಾಡಿಕೊಳ್ಳಲಾಗಿದ್ದ ನೇಮಕ ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಗಿದ್ದರಿಂದ ನಾನು ಮತ್ತೆ ಎಂ ಎ ಓದಲು ಬಂದಿದ್ದೆ. ಎಂ ಎ ಆದ ಮೇಲೂ ಪ್ರಜಾವಾಣಿಯಲ್ಲಿ ಕೆಲಸ ಪಡೆಯುವುದಕ್ಕೆ ಪ್ರಯತ್ನ ನಡೆಸಿದ್ದೆ. ಬಿ.ವಿ.ವೈಕುಂಠರಾಜು, ವೈಎನ್‌ಕೆ ನನ್ನನ್ನು ಕಾಲೇಜು ದಿನಗಳಿಂದ ಕಥೆಗಾರನಾಗಿ ಗುರುತಿಸಿದ್ದರು. ಅಲ್ಲಿ ಕೆಲಸಕ್ಕೆ ಪ್ರಯತ್ನ ನಡೆಸಿದ್ದು ಅವರಿಗೆ ತಿಳಿದಿತ್ತು. ಆದರೆ ಎಂ.ಎ ಮುಗಿಸಿದ ಮೇಲೆ ಅಲ್ಲಿ ಅವಕಾಶ ಇದ್ದರೆ ಅದನ್ನು ಕೊಡಿಸುವುದಕ್ಕೆ ಅವರಿಬ್ಬರೂ ಸಮರ್ಥರಿರಲಿಲ್ಲ. ನಾನು ಪ್ರಯತ್ನ ನಡೆಸುತ್ತಿದ್ದಾಗ ಪರಿಚಯಕ್ಕೆ ಬಂದವರು ಎಂ.ಬಿ.ಸಿಂಗ್. ಅವರು

‘ಮಯೂರ’ ಪತ್ರಿಕೆಗೆ ಸಂಪಾದಕರಾಗಿದ್ದರು. ಆಡಳಿತ ಮಂಡಲಿಯ ಜೊತೆಗೆ ಅವರ ಬಾಂಧವ್ಯ ಹೆಚ್ಚು ಗಟ್ಟಿಯಾಗಿದ್ದರಿಂದ ‘ಸುಧಾ’ ಪತ್ರಿಕೆಯಲ್ಲಿಯೂ ಅವರ ಹಿಡಿತ ಬಲವಾಗಿದೆ ಎಂಬ ಪ್ರತೀತಿ ಇತ್ತು. ‘ಸಿಂಗ್ ಈಸ್ ದಿ ಕಿಂಗ್ ಆಫ್ ಸುಧಾ ಅಂಡ್ ಮಯೂರ’ ಎಂಬುದು ಆಗ ಪ್ರಜಾವಾಣಿಯ ಸಂಪಾದಕೀಯ ವಲಯದಲ್ಲಿ ಕೇಳಿಬರುತ್ತಿದ್ದ ಪಿಸು ಮಾತು. ನನ್ನ ಹಾಸ್ಟಲ್ ವಾಸದ ದಿನಗಳಲ್ಲಿ ಗುರುತಾಗಿದ್ದ ಹೇಮದಳ ರಾಮದಾಸ್ ಅವರಿಗೆ ನನಗೆ ಪ್ರಜಾವಾಣಿಯಲ್ಲಿ ಕೆಲಸ ಸಿಗಲಿ ಎಂಬ ಆಸೆ ಇತ್ತು. ನಾನು ‘ಜನಪ್ರಗತಿ’ಯಲ್ಲಿ ಕಲ್ಲೆ ಶಿವೋತ್ತಮ ರಾವ್ ಅವರ ಬಳಿ ಕೆಲಸ ಮಾಡುತ್ತಾ ಇದ್ದುದು ಪ್ರಜಾವಾಣಿಯ ಸಂಪಾದಕೀಯ ಬಳಗಕ್ಕೆ ಗೊತ್ತಾದರೆ ನನಗೆ ಅಲ್ಲಿ ಕೆಲಸ ಸಿಗಲಾರದು ಎಂದು ನನ್ನ ಗೆಳೆಯರು ಹೇಳಿ ಭಯ ಹುಟ್ಟಿಸಿದ್ದರು. ಕಲ್ಲೆಯವರು ಅರವತ್ತರ ದಶಕದಲ್ಲಿ ಪ್ರಜಾವಾಣಿಯಲ್ಲಿ ಸಹಾಯಕ ಸಂಪಾದಕರಾಗಿದ್ದು ಅಲ್ಲಿನ ಕೆಲವರ ಚಿತಾವಣೆಯಿಂದ ಹೊರಬೀಳಬೇಕಾಯಿತೆಂದೂ ಅವರೆಲ್ಲರ ವಿರುದ್ಧ ಅವರು ಸಂದರ್ಭ ಸಿಕ್ಕಾಗಲೆಲ್ಲ ಹರಿ ಹಾಯುತ್ತಾರೆ ಎಂಬುದು ಅಂಥ ಪರಿಸ್ಥಿತಿಗೆ ಕಾರಣವಾಗಿತ್ತು.

**ಆಪದ್ಬಾಂಧವ ಎಂ.ಬಿ.ಸಿಂಗ್**

ನಾನು ಪ್ರಜಾವಾಣಿಯಲ್ಲಿ ಕೆಲಸ ಪಡೆಯುವುದಕ್ಕೆ ಎಂ.ಬಿ.ಸಿಂಗ್ ಅವರನ್ನು ಅವಲಂಬಿಸುವುದು ಸೂಕ್ತ ಎಂದು ಪ್ರಜಾವಾಣಿಯಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಹಾಸ್ಟಲ್ ವಾಸಿ ಮಿತ್ರರು ಹೇಳುತ್ತಿದ್ದರು. ಅದನ್ನು ಅನುಸರಿಸಿ ನಾನು ನನ್ನೆಲ್ಲ ಪ್ರಕಟಿತ ಕಥೆಗಳ ಪೇಪರ್ ಕಟಿಂಗ್‌ಗಳನ್ನೆಲ್ಲ ಒಮ್ಮೆ ಕಚೇರಿಗೆ ಹೋಗಿ ಸಿಂಗ್ ಅವರಲ್ಲಿ ತೋರಿಸಿ ಕೆಲಸಕ್ಕೆ ಮೌಖಿಕ ಬೇಡಿಕೆ ಸಲ್ಲಿಸಿದ್ದೆ (ಆಗಿದ್ದ ಪದ್ಧತಿಯಂತೆ ಪ್ರಜಾವಾಣಿ ಆಡಳಿತ ಮಂಡಲಿಗೆ ಹತ್ತಿರವಿದ್ದ ಸಿಂಗ್ ಅಥವಾ ಟಿ.ಎಸ್.ರಾಮಚಂದ್ರರಾವ್ ಮನಸ್ಸು ಮಾಡಿದರೆ ಅಭ್ಯರ್ಥಿಯಿಂದ ಅರ್ಜಿ ಪಡೆದು ಶಿಫಾರಸು ಮಾಡಿ ಕಳಿಸಿದರೆ ಪ್ರಜಾವಾಣಿ ಪತ್ರಿಕಾ ಬಳಗದ ಕಾರ್ಯದರ್ಶಿ ಅವರಿಂದ ನೇಮಕ ಪತ್ರ ಬರುತ್ತಿತ್ತಂತೆ. ನೆಪಕ್ಕೊಂದು ಲಿಖಿತ ಪರೀಕ್ಷೆ ನಡೆಸಿ ‘ಪರವಾಯಿಲ್ಲ’ ಎಂದು ಶಿಫಾರಸು ಮಾಡಿದರೆ ಸಾಕಿತ್ತಂತೆ. ಅದೇ ಕುರುಡು ಧೈರ್ಯದ ಮೇಲೆ ಸಿಂಗ್ ಅವರನ್ನು ಕಂಡಿದ್ದೆ). ಸಿಂಗ್ ತಮ್ಮೆದುರು ಕೂರಿಸಿಕೊಂಡು ನನ್ನೆಲ್ಲ ಪ್ರಕಟಿತ ಕತೆಗಳ ಮೇಲೆ ಕಣ್ಣಾಡಿಸಿದರು. ಅವುಗಳನ್ನು ತಮ್ಮ ಪಕ್ಕದಲ್ಲಿ ಕುಳಿತಿದ್ದ ಎಸ್.ಆರ್.ರಾಮಸ್ವಾಮಿ ಎಂಬುವರಿಗೂ ನೋಡಲು ಹೇಳಿದರು. ‘ಸುಧಾ’ ಪತ್ರಿಕೆಯ ಸಂಪಾದಕರಾಗಿದ್ದ ಇ.ಆರ್.ಸೇತೂರಾಮ್ ಅವರ ಬಳಿಗೂ ಕಳಿಸಿದರು. ಸೇತುರಾಮ್ ಅವರದು ಪಕ್ಕದಲ್ಲಿ ಪ್ರತ್ಯೇಕವಾಗಿದ್ದ ಚೇಂಬರ್. ನನ್ನ ಮನವಿಯನ್ನು ನೋಡಿದ ಸೇತುರಾಮ್ ಪತ್ರಕರ್ತರಾಗುವುದಕ್ಕೆ ಅಗತ್ಯವಾದ ಅರ್ಹತೆ ಕುರಿತು ಹತ್ತು ನಿಮಿಷಗಳ ಕಾಲ ನಿರಂತರವಾಗಿ ಮಾತನಾಡಿ ಸಿಂಗ್ ಅವರ ಬಳಿಗೆ ವಾಪಸು ಕಳಿಸಿದರು. ನಾನು ಬಂದು ನಿಂತಾಗ ‘ಸದ್ಯಕ್ಕೆ ಅವಕಾಶ ಇಲ್ಲಪ್ಪ, ಅವಕಾಶ ಇದ್ದಾಗ ತಿಳಿಸುತ್ತೇನೆ’ ಎಂದು ಕಳಿಸಿದರು. ಅದೇ ಪರಿಚಯದ ಎಳೆ ಹಿಡಿದು ನಾನು ‘ಜನಪ್ರಗತಿ’ಯಲ್ಲಿ ಬಿಡುವಿನಲ್ಲಿದ್ದಾಗ ಹೊರಬಂದು ಪಬ್ಲಿಕ್ ಬೂತ್‌ನಿಂದ ಸಿಂಗ್ ಅವರಿಗೆ ಫೋನ್ ಮಾಡುತ್ತಿದ್ದೆ. ಪ್ರತಿ ಸಲ ಫೋನ್ ಮಾಡಿದಾಗಲೂ ಅವರು ಕಿಂಚಿತ್ತೂ ಬೇಜಾರು ಮಾಡಿಕೊಳ್ಳದೆ ಭರವಸೆ ಉಳಿಸಿಕೊಳ್ಳುವಂಥ ಉತ್ತರ ಕೊಡುತ್ತಿದ್ದರು. ಮಂಡ್ಯದಲ್ಲಿ ಕೆಲಸ ಮುಗಿಸಿ ಬೆಂಗಳೂರಿಗೆ ಬಂದಾಗಲೆಲ್ಲ ಸಿಂಗ್ ಅವರಿಗೆ ಫೋನ್ ಮಾಡಿ ವಿಚಾರಿಸುವುದು ನನ್ನ ಅಭ್ಯಾಸವೂ ಆಗಿತ್ತು. ಅವರಿಗೆ ನಾನು ಮಂಡ್ಯದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದಷ್ಟೇ ಹೇಳುತ್ತಿದ್ದೆ. ಆದರೆ, ಅವರಿಗೆ ನಾನು ‘ಜನಪ್ರಗತಿ’ಯಲ್ಲಿ ಕೆಲಸ ಮಾಡುತ್ತಿರುವುದು ಗೊತ್ತಿತ್ತು.

ಕಲ್ಲೆಯವರೊಂದಿಗೆ ಅವರ ಸಂಬಂಧವೂ ಚೆನ್ನಾಗಿತ್ತು ಎಂಬುದು ನನಗೆ ನಂತರದ ದಿನಗಳಲ್ಲಿ ತಿಳಿಯಿತು.

ಈ ನಡುವೆ ನನ್ನ ತೀರ ವೈಯಕ್ತಿಕ ಸಮಸ್ಯೆಯ ಕಾರಣ ಬೆಂಗಳೂರಿನಲ್ಲಿ ಕೆಲವು ತಿಂಗಳು ಸುತ್ತಾಡದ ಪರಿಸ್ಥಿತಿಯನ್ನು ನಾನೇ ತಂದುಕೊಂಡೆ. ಅದನ್ನೇ ಕಲ್ಲೆಯವರಿಗೆ ತಿಳಿಸಿ ಕೆಲವು ತಿಂಗಳು ಮಂಡ್ಯದಲ್ಲಿಯೇ ಮುಂದುವರಿಯಬೇಕಾಗುತ್ತದೆ ಎಂದು ವಿನಂತಿಸಿಕೊಂಡೆ. ನನ್ನ ಪರಿಸ್ಥಿತಿಯನ್ನು ನೇರವಾಗಿ ಹೇಳಲು ಧೈರ್ಯವಾಗದೆ ಪತ್ರ ಬರೆದಿದ್ದೆ. ಅದಕ್ಕೆ ಅವರು ಪತ್ರವನ್ನೇನೂ ಬರೆದು ಅನುಮತಿ ಕೊಡಲಿಲ್ಲ. ಅದರ ನಿರೀಕ್ಷೆಯೂ ನನಗೆ ಇರಲಿಲ್ಲ. ಚನ್ನಪ್ಪನ ಎದುರು ಬೈದುಕೊಂಡರಂತೆ. ಅವರ ಇಂಗ್ಲಿಷ್ ಬೈಗಳದ ಮಾದರಿಯನ್ನು ಅವರ ಕಚೇರಿಯಲ್ಲಿಯೇ ಕೇಳಿದ್ದೆ. ಆದ್ದರಿಂದ ಅದರ ಬಗ್ಗೆ ಸೂಕ್ಷ್ಮವಾಗಲಿಲ್ಲ. ನಾನು ಮಾಡಿಕೊಂಡ ಪರಿಸ್ಥಿತಿಯಂತೆ ಸದ್ಯಕ್ಕೆ ಮಂಡ್ಯದಲ್ಲಿಯೇ ಉಳಿದುಕೊಳ್ಳುವುದು ಅನಿವಾರ್ಯವಾಯಿತು. ನಾನು ಮಂಡ್ಯದಲ್ಲಿಯೇ ವಾರ ಪೂರ್ತಿ ಇರುವುದನ್ನು ಲಿಂಗಯ್ಯನವರು ತಿಳಿದುಕೊಂಡರು. ಕೊಡುತ್ತಿದ್ದ ಇನ್ನೂರೈವತ್ತು ರೂಪಾಯಿಗೆ ಪೂರ್ಣಾವಧಿ ಸಹಾಯಕನೊಬ್ಬ ಸಿಕ್ಕಿದ್ದರ ಬಗ್ಗೆ ಅವರಿಗೆ ತಕರಾರು ಇರಲಿಲ್ಲ. ಕಲ್ಲೆಯವರು ತಮ್ಮ ಬಗ್ಗೆ ಏನಾದರೂ ತಿಳಿದುಕೊಂಡರೆ ಎಂಬ ಅಳುಕನ್ನು ನನ್ನೊಂದಿಗೆ ಹೇಳಿದಾಗ ನಾನು ಅವರಲ್ಲಿ ಅನುಮತಿ ಪಡೆದುಕೊಂಡಿದ್ದೇನೆ ಎಂದು ಸಮಾಧಾನ ಹೇಳಿದ್ದೆ.

ಮಂಡ್ಯದಲ್ಲಿ ನಾನು 'ಉದಯರವಿ' ಪತ್ರಿಕೆಗೆ ಪೂರ್ಣಾವಧಿ ಸಂಪಾದಕೀಯ ಸಹಾಯಕನಾಗಿ ಸೇರಿಕೊಂಡಾಗ ಸ್ಥಳೀಯ ರಾಜಕಾರಣದಲ್ಲಿ ಬದಲಾವಣೆಗಳಾಗಿದ್ದವು. ತುರ್ತು ಪರಿಸ್ಥಿತಿಯಲ್ಲಿ ಯಾರನ್ನು ಬೇಕಾದರೂ ಆಂತರಿಕ ಸುರಕ್ಷತಾ ಕಾಯ್ದೆ ಅನ್ವಯ ವಿಚಾರಣೆ ಇಲ್ಲದೆ ಜೈಲಿಗೆ ಹಾಕಿಸುವ ವಿಶೇಷ ಅಧಿಕಾರ ಆಳುವ ಪಕ್ಷದ ಮುಖಂಡರಿಗೆ ಇತ್ತು. ಅದು ಮೇಂಟೇನೆನ್ಸ್ ಆಫ್ ಇಂಟರ್ನಲ್ ಸೆಕ್ಯುರಿಟಿ ಆಕ್ಟ್(ಮೀಸಾ) ಎಂಬ ಅಸ್ತ್ರ. ದೇವರಾಜ ಅರಸರಿಗೆ ನಿಷ್ಠರಾಗಿದ್ದ ಲಿಂಗಯ್ಯನವರು ತಮ್ಮ ರಾಜಕೀಯ ವಿರೋಧಿಗಳ ಬಗ್ಗೆ ಕಟುವಾಗಿ ಮಾತನಾಡುವ ಪ್ರಸಂಗ ಬಂದಾಗ 'ಅವನನ್ನು ಮೀಸಾ ಒಳಗೆ ಹಾಕಿಸಬೇಕು' ಎಂದು ಗದರುತ್ತಾ ಇದ್ದುದನ್ನು ಖುದ್ದಾಗಿ ಕೇಳಿದ್ದೆ. ಅರಸರ ಸಂಪುಟದಲ್ಲಿ ಕೈಗಾರಿಕೆ, ವಾಣಿಜ್ಯ ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವರಾಗಿದ್ದ ಮಂಡ್ಯ ಜಿಲ್ಲೆಯ ಎಸ್.ಎಂ.ಕೃಷ್ಣ ತುರ್ತು ಪರಿಸ್ಥಿತಿಯ ದಿನಗಳಲ್ಲಿ ಅರಸರಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರೆ ಎಂದು 'ಜನಪ್ರಗತಿ'ಯಲ್ಲಿದ್ದಾಗ ಕಲ್ಲೆಯವರು ಹೇಳುತ್ತಾ ಇದ್ದುದನ್ನು ಕೇಳಿದ್ದೆ. ಕೃಷ್ಣ ರಾಜಕೀಯಕ್ಕೆ ಬಂದದ್ದೇ ಪ್ರಜಾ ಸೋಷಲಿಸ್ಟ್ ಪಕ್ಷದಿಂದ ಎಂದು ಕಲ್ಲೆಯವರು ತಿಳಿಸಿದ್ದರು. 1962ರಲ್ಲಿ ಮದ್ದೂರಿನಿಂದ ಸ್ಪರ್ಧಿಸಿ ವಿಧಾನ ಸಭೆ ಸದಸ್ಯರಾಗಿದ್ದು 1968ರಲ್ಲಿ ಮಂಡ್ಯ ಲೋಕಸಭೆ ಕ್ಷೇತ್ರಕ್ಕೆ ನಡೆದ ಮಧ್ಯಂತರ ಚುನಾವಣೆ ನಡೆದಾಗ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ್ದರೆಂದು ಅವರು ಮೆಚ್ಚುಗೆಯಿಂದ ಹೇಳುತ್ತಿದ್ದರು. ದೇವರಾಜ ಅರಸರು ಇಂದಿರಾ ಗಾಂಧಿಯವರ ಬೆಂಬಲದಿಂದ ಬಲಿಷ್ಠ ಜಾತಿಗಳಾದ ಲಿಂಗಾಯತ, ಒಕ್ಕಲಿಗ ಮುಖಂಡರಲ್ಲಿ ಪ್ರತಿಭಾವಂತ ಯುವ ನಾಯಕರನ್ನು ಉಳಿಸಿಕೊಂಡು ಹಿಂದುಳಿದ ವರ್ಗಗಳಿಗೆ ರಾಜಕೀಯ ಅಧಿಕಾರ ನೀಡುತ್ತಿರುವುದನ್ನು ಅವರು ಆಗಾಗ ವಿಶ್ಲೇಷಣೆ ನಡೆಸುತ್ತಿದ್ದರು. ತುರ್ತುಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿಯವರಿಗೆ ನೆರವಾಗಲು ಅವರ ಎರಡನೆಯ ಪುತ್ರ ಸಂಜಯ್ ಗಾಂಧಿ ಯುವಕಾಂಗ್ರೆಸ್ ನಾಯಕನಾಗಿ ಬಂದಿರುವ ಬಗ್ಗೆ ಕಲ್ಲೆಯವರ ಒಳನೋಟದ ವಿವರಗಳಿರುತ್ತಿದ್ದವು. ದೇವರಾಜ ಅರಸರು ಕಾಂಗ್ರೆಸ್ ಪಕ್ಷದಲ್ಲಿದ್ದ ಬಲಿಷ್ಠ ಜಾತಿಗಳ ಹಿರಿಯ ಮುಖಂಡರ ವಿರೋಧವನ್ನು ಸದಾ ಕಾಲವೂ ಎದುರಿಸುತ್ತಾ ಇರುವ ಬಗ್ಗೆ ಅವರ ಸಂಪಾದಕೀಯಗಳಲ್ಲಿಯೂ ಪ್ರಸ್ತಾಪ ಇರುತ್ತಿತ್ತು. 'ಸಂಜಯ್ ಗಾಂಧಿಯವರನ್ನು ಓಲೈಸಿದರೆ ತಮ್ಮ ಸ್ಥಾನ

ಸುಭದ್ರ ಎಂಬ ಪರಿಸ್ಥಿತಿ ಇದ್ದು ಅದಕ್ಕಾಗಿ ಆಗ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಚ್. ಪಾಟೀಲರು ಅವರನ್ನು ಬೀದರ್ ನಲ್ಲಿ ಯುವ ಕಾಂಗ್ರೆಸ್ ಸಮಾವೇಶಕ್ಕೆ ಆಹ್ವಾನಿಸಿದ್ದಾರೆ, ಇದರಲ್ಲಿ ಗುಂಡೂರಾವ್, ಎಫ್.ಎಂ.ಖಾನ್ ಕೈವಾಡ ಇದೆ. ಇದು ಅರಸರ ಬಗ್ಗೆ ಸಂಜಯ್ ಗಾಂಧಿ ಅವರು ಅಸಮಾಧಾನಗೊಳ್ಳುವಂತೆ ಮಾಡುವ ಹುನ್ನಾರ' ಎಂದು ಎಂದು ಅವರು ತಮ್ಮೊಂದು ಸಂಪಾದಕೀಯದಲ್ಲಿ ವಿಶ್ಲೇಷಿಸಿದ್ದರು.

**ರಾಜಕೀಯ ತಂತ್ರಗಳ ಪರಿಚಯ**

ನಾನು 'ಉದಯರವಿ'ಗೆ ಸೇರಿಕೊಳ್ಳುವ ಕೆಲವು ತಿಂಗಳ ಮೊದಲು ಸಂಜಯ್ ಗಾಂಧಿಯವರನ್ನು ಮಂಡ್ಯಕ್ಕೆ ಆಹ್ವಾನಿಸಲಾಗಿತ್ತು. 'ಅದು ಎಸ್.ಎಂ.ಕೃಷ್ಣ ಅವರ ರಾಜಕೀಯ ತಂತ್ರ; ಈ ಮೂಲಕ ದೇವರಾಜ ಅರಸರಿಗೆ ಹಿನ್ನಡೆಯಾಗುವಂತೆ ಮಾಡುವುದು ಅವರ ಉದ್ದೇಶ' ಎಂದು ಹೇಳಲಾಗಿತ್ತು. ಆದರೆ ಮಂಡ್ಯದ ಸಮಾವೇಶಕ್ಕೆ ಮುಖ್ಯಮಂತ್ರಿ ದೇವರಾಜ ಅರಸರು ಬಂದು ಸಂಜಯ್ ಗಾಂಧಿಯವರನ್ನು ಬರಮಾಡಿಕೊಂಡಿದ್ದರು. ಅಷ್ಟೇ ಅಲ್ಲ, ಅವರ ಹಿಂದಿ ಭಾಷಣವನ್ನು ಕನ್ನಡಕ್ಕೆ ತಾವೇ ಅನುವಾದಿಸಿದ್ದರು. 'ಮುಖ್ಯಮಂತ್ರಿಯಾಗಿದ್ದು ಪಕ್ಷದಲ್ಲಿ ಯಾವ ಹುದ್ದೆಯಲ್ಲಿಯೂ ಇಲ್ಲದ ಸಂಜಯ್ ಗಾಂಧಿಯ ಭಾಷಣವನ್ನು ಅನುವಾದಿಸುವುದು ಸರಿಯಲ್ಲ' ಎಂದು ಕಲ್ಲೆಯವರು ಹೇಳಿ, 'ಅಧಿಕಾರದಲ್ಲಿ ಉಳಿಯುವುದಕ್ಕೆ ಏನೆಲ್ಲ ಕಸರತ್ತು ಮಾಡಬೇಕಾಗುತ್ತದೆ ನೋಡಿ' ಎಂದು ನನ್ನೊಡನೆ ಹಂಚಿಕೊಂಡಿದ್ದರು.

ತುರ್ತು ಪರಿಸ್ಥಿತಿ ಜಾರಿಗೆ ಬಂದಿದ್ದಾಗ ಇಂದಿರಾ ಗಾಂಧಿಯವರು ರೂಪಿಸಿದ ಇಪ್ಪತ್ತು ಅಂಶಗಳ ಕಾರ್ಯಕ್ರಮ ಮತ್ತು ಸಂಜಯ ಗಾಂಧಿಯವರ ಐದು ಅಂಶಗಳ ಕಾರ್ಯಕ್ರಮಗಳು ಪ್ರಚಾರದಲ್ಲಿದ್ದಾಗ ವಾರಪತ್ರಿಕೆಯಾದ 'ಉದಯರವಿ'ಗೆ ಅಭಿವೃದ್ಧಿಪರ ವರದಿಗಳಿಗೆ ಆದ್ಯತೆ ನೀಡುವುದು ಅನಿವಾರ್ಯವಾಯಿತು. ಜಿಲ್ಲೆಯ ವಾರ್ತಾಧಿಕಾರಿಯಿಂದ ಸರ್ಕಾರದ ಪ್ರಕಟಣೆಗಳು ಬರುತ್ತಿದ್ದವು. ಎಲ್ಲೆಲ್ಲಿ ಎಷ್ಟೆಷ್ಟು ಮಂದಿ ಜೀತದಾಳುಗಳನ್ನು ಬಿಡುಗಡೆ ಮಾಡಲಾಗಿದೆ, ಋಣ ಪರಿಹಾರ ಕಾಯ್ದೆಯಿಂದ ಎಷ್ಟು ಜನರಿಗೆ ಪ್ರಯೋಜನವಾಗಿದೆ ಎಂಬಂಥ ಪತ್ರಿಕಾ ಪ್ರಕಟಣೆಗಳು ಬರುತ್ತಿದ್ದವು. ಅವನ್ನೆಲ್ಲ ವಾರಪತ್ರಿಕೆಗೆ ಸೂಕ್ತವಾಗಿ ಪುನರ್ ರೂಪಿಸಿ ಲೇಖನವಾಗಿ ಪರಿವರ್ತಿಸಿ ಪುಟಗಳನ್ನು ತುಂಬಿಸುತ್ತಿದ್ದೆ. ಮಂಡ್ಯ ನಗರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಜನೋಪಯೋಗಿ ಕಾರ್ಯಕ್ರಮಗಳಿಗೆ ವಿಸ್ತೃತ ವರದಿಗಳನ್ನು ಸಿದ್ಧಪಡಿಸುತ್ತಿದ್ದೆ. ಆ ಸಂದರ್ಭದಲ್ಲಿ ಅಲ್ಲಿನ ಪಿಇಎಸ್ ಶಿಕ್ಷಣ ಸಂಸ್ಥೆಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇದ್ದವರು ಎಸ್. ರಾಮೇಗೌಡರು. ಅವರು ಒಂದು ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಸಂಘಟಿಸಿದ್ದರು. ಅದರ ವಿವರ ಪಡೆಯಲು ಆಗ ಮಂಡ್ಯದ ಅಸಿಟೇಟ್ ಫ್ಯಾಕ್ಟರಿಯಲ್ಲಿದ್ದ ರಾಮಪ್ರಸಾದ್ ಎಂಬುವರು ನನ್ನನ್ನು ಅವರಲ್ಲಿಗೆ ಕರೆದೊಯ್ದರು. ರಾಮಪ್ರಸಾದ್ ಲಿಂಗಯ್ಯನವರಿಗೂ ಆಪ್ತರು. ಕಲ್ಲೆಯವರಿಗೂ ಪರಿಚಿತರಿದ್ದರು. ಕಲ್ಲೆಯವರ ಅಭಿಮಾನಿಯೂ ಆಗಿದ್ದ ಪ್ರಗತಿಪರ ಮನೋಭಾವದವರು. ನನ್ನ ಕೆಲವು ಕತೆಗಳು ಆ ವೇಳೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು ತಿಳಿದಿದ್ದ ಅವರು 'ನಿಮ್ಮದೊಂದು ಕಥಾ ಸಂಕಲನ ಪ್ರಕಟವಾಗಬೇಕು. ಪ್ರಕಟಣೆಗೆ ನಾನೂ ಸ್ವಲ್ಪ ಹಣ ಹಾಕುತ್ತೇನೆ' ಎಂದು ಮುಂದೆ ಬಂದಿದ್ದ ಸಹೃದಯಿ. ಲಯನ್ಸ್ ಕ್ಲಬ್ ವ್ಯವಸ್ಥೆ ಮಾಡಿದ್ದ ಉಚಿತ ನೇತ್ರ ಚಿಕಿತ್ಸೆ ಶಿಬಿರದ ಕುರಿತಾಗಿ ನಾನು ಸಿದ್ಧಪಡಿಸಿದ ಸಚಿತ್ರ ವರದಿಯನ್ನು ಎಸ್. ರಾಮೇಗೌಡರು ಎಷ್ಟು ಚೆನ್ನಾಗಿ ನೆನಪಿಟ್ಟುಕೊಂಡಿದ್ದರೆಂದರೆ ಹದಿನಾರು ವರ್ಷಗಳ ನಂತರ (1992)

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ಧಾರವಾಡಕ್ಕೆ ಬಂದಿದ್ದಾಗ ಹುಬ್ಬಳ್ಳಿಯಲ್ಲಿ ಪ್ರಜಾವಾಣಿ ವರದಿಗಾರನಾಗಿದ್ದ ನನ್ನ ಹೆಸರನ್ನು ಕೇಳಿದವರು 'ನೀವು ಮಂಡ್ಯದಲ್ಲಿ ಇದ್ದವರಲ್ಲವೇ' ಎಂದು ಕೇಳಿ ತಮ್ಮ ಅಗಾಧ ನೆನಪಿನ ಶಕ್ತಿಯನ್ನು ಪರಿಚಯಿಸಿದ್ದರು. ನನ್ನ ಒಂದು ವರದಿ, ಅದೂ ವಾರಪತ್ರಿಕೆಯಲ್ಲಿ ಬಂದದ್ದು ಅವರ ನೆನಪಿನಲ್ಲಿ ಉಳಿದಿತ್ತು.

ನನ್ನ ಮಂಡ್ಯ ವಾಸ್ತವ್ಯದ ದಿನಗಳಲ್ಲಿ ನಡೆದ ಬೃಹತ್ ಜನಾಂದೋಲನ ವರುಣಾ ನಾಲೆಗೆ ಸಂಬಂಧಿಸಿದ್ದು. ದೇವರಾಜ ಅರಸರ ವಿರುದ್ಧ ಅವರ ಸರ್ಕಾರದಲ್ಲಿದ್ದ ಬಲಿಷ್ಠ ಜಾತಿಗಳ ಮುಖಂಡರ ಅಸಹನೆಯೂ ಅದಕ್ಕೆ ಪರೋಕ್ಷವಾಗಿ ಕಾರಣವಾಗಿತ್ತು. ಆಗಿನ ಮೈಸೂರು ಜಿಲ್ಲೆಯ ಚಾಮರಾಜನಗರ ಪ್ರದೇಶಕ್ಕೆ ಕುಡಿಯುವ ನೀರಿನ ಸಲುವಾಗಿ ಕೃಷ್ಣರಾಜಸಾಗರದಿಂದ ವರುಣಾ ಮೂಲಕ ನೀರನ್ನು ಒಯ್ಯುವ ಯೋಜನೆ ಅದು. ಅರಸರ ವಿರುದ್ಧ ಅವರ ಪಕ್ಷದಲ್ಲಿಯೇ ಇದ್ದ ಮಂಡ್ಯದ ಮುಖಂಡರು ವರುಣಾ ನಾಲೆ ಆದರೆ ಮಂಡ್ಯದ ರೈತರಿಗೆ ನೀರಿನ ಕೊರತೆ ಆಗುತ್ತದೆ ಎಂದು ಗುಲ್ಲು ಎಬ್ಬಿಸಿದರು. ಜಿಲ್ಲೆಗೆ ಅನ್ಯಾಯವಾಗುತ್ತಿದೆ ಎಂದು ಕಾಲೇಜು ವಿದ್ಯಾರ್ಥಿಗಳಲ್ಲಿ ಸುದ್ದಿ ಹಬ್ಬಿಸಿದಾಗ ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆ ಮೊದಲು ನಡೆಯಿತು. ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಮಂಡ್ಯ ಕ್ಲಬ್‌ನಲ್ಲಿ ಆಟದಲ್ಲಿ ನಿರತರಾಗಿದ್ದ ಕೆ.ವಿ.ಶಂಕರಗೌಡರನ್ನು ಮುತ್ತಿಗೆ ಹಾಕಿದರು. ಕಾಂಗ್ರೆಸ್ಸಿನಲ್ಲಿಯೇ ಇದ್ದರೂ ಅವರಿಗೆ ಯಾವ ಅಧಿಕಾರಗಳೂ ಇರಲಿಲ್ಲ. ಅವರು ಹೋರಾಟದ ಮುಂಚೂಣಿಗೆ ಬಂದರು. ಅರಸರ ಸಂಪುಟದಲ್ಲಿದ್ದರೂ ಆ ವೇಳೆಗೆ ಅಂತರ ಕಾಯ್ದುಕೊಂಡಿದ್ದ ಎಸ್.ಎಂ.ಕೃಷ್ಣ ಇತರ ಕೆಲವು ಹಿರಿಯ ಸಚಿವರೊಂದಿಗೆ ಸೇರಿ ರಾಜಿನಾಮೆ ಸಲ್ಲಿಸಿ ಅರಸರಿಗೆ ಬಿಕ್ಕಟ್ಟು ಸೃಷ್ಟಿಸಿದರು. ಜಿಲ್ಲೆಯ ಜನರ ಎದುರು ತಮ್ಮ ರಾಜಕೀಯ ವ್ಯಕ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ಅವರು ಸರ್ಕಾರದಿಂದ ಹೊರಬಂದರು. ಅವರೊಂದಿಗೆ ಹಿರಿಯರಾದ ಹುಚ್ಚಮಾಸ್ತಿಗೌಡರು, ಕೆ.ಎಚ್.ಪಾಟೀಲರು, ಎನ್.ಚಿಕ್ಕೇಗೌಡರು ಸೇರಿದಂತೆ ಎಂಟು ಮಂದಿ ಸಚಿವರು ರಾಜಿನಾಮೆ ಸಲ್ಲಿಸಿದರು. ಎಸ್.ಎಂ.ಕೃಷ್ಣ ಒಂದು ಹೆಜ್ಜೆ ಮುಂದೆ ಹೋಗಿ ಅರಸರನ್ನು ಬೆಂಬಲಿಸಿದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಾಗಿ ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಒಂದು ದಿನದ ಉಪವಾಸಕ್ಕೂ ಕುಳಿತರು. ಶಾಮಿಯಾನದ ಅಡಿಯಲ್ಲಿ ದಪ್ಪನೆಯ ಹಾಸುಗೆಗಳನ್ನು ಹಾಸಿಕೊಂಡು ಕೃಷ್ಣ ಅವರು ಒಂದು ದಿನದ ಉಪವಾಸ ಕುಳಿತ ಚಿತ್ರ ಮತ್ತು ವರದಿ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾಯಿತು. ಕೃಷ್ಣ ಅವರ ಪ್ರಾಯಶ್ಚಿತ್ತ ಉಪವಾಸದ ಬಗ್ಗೆ ಸ್ಥಳೀಯ ಮುಖಂಡರಲ್ಲಿಯೇ ಸಹಾನುಭೂತಿ ಇರಲಿಲ್ಲ. ಮಂಡ್ಯದಿಂದ ಪ್ರಕಟವಾಗುತ್ತಿದ್ದ ರಮೇಶ ಹುಲ್ಲುಕೆರೆ ಅವರ 'ವೀಕ್ಷಕ' ಪತ್ರಿಕೆ 'ಕೃಷ್ಣ ಅವರು ಆರೋಗ್ಯದ ಕಾರಣಕ್ಕೆ ಇಲ್ಲಿ ಉಪವಾಸ ಕೂರುವ ಅಗತ್ಯ ಇರಲಿಲ್ಲ. ಎನಿಮಾ ತೆಗೆದುಕೊಂಡಿದ್ದರೆ ಸಾಕಿತ್ತು' ಎಂದು ಬರೆದಿತ್ತು. ಆದರೂ ವರುಣಾ ನಾಲೆ ವಿರುದ್ಧ ಹೋರಾಟ ತೀವ್ರವಾಯಿತು. ದಿನವೂ ಸರದಿ ಉಪವಾಸ ನಡೆಯುತ್ತಿತ್ತು. ಸತ್ಯಾಗ್ರಹ ಶಿಬಿರಕ್ಕೆ ಹೋಗಿ ಆ ದಿನ ಯಾರು ಯಾರು ಉಪವಾಸ ಕುಳಿತಿದ್ದಾರೆ ಎಂದು ಅವರ ಹೆಸರುಗಳನ್ನು ನಾವು ಪತ್ರಕರ್ತರು ಬರೆದುಕೊಂಡು ಬರುತ್ತಿದ್ದೆವು.

**ಚಡ್ಡಿ ಮೆರವಣಿಗೆ**

ಆಗ ಮಂಡ್ಯಕ್ಕೆ ಜಿಲ್ಲಾಧಿಕಾರಿಯಾಗಿ ಬಂದವರು ಚಿರಂಜೀವ್ ಸಿಂಗ್. ದೇವರಾಜ ಅರಸರ ಆಪ್ತ ಕಾರ್ಯದರ್ಶಿ ಜೆ.ಸಿ.ಲಿನ್ ಅವರಿಗೆ ಸಹಾಯಕ ಅಧಿಕಾರಿಯಾಗಿ ಕೆಲವು ವರ್ಷ ಕೆಲಸ ಮಾಡಿದ್ದ, ಅರಸರ

ವಿಶ್ವಾಸ ಗಳಿಸಿದ್ದ ಐಎಎಸ್ ಅಧಿಕಾರಿ. ವರುಣಾ ನಾಲೆ ವಿರುದ್ಧ ಮಂಡ್ಯದ ರೈತರು ನಡೆಸುತ್ತಿದ್ದ ಹೋರಾಟವನ್ನು ನಿಯಂತ್ರಣಕ್ಕೆ ತರುವುದಕ್ಕೆ ಸ್ವತಃ ಜಿಲ್ಲಾಧಿಕಾರಿ ಚಿರಂಜೀವ್ ಸಿಂಗ್ ಚಳವಳಿ ಮುಖಂಡರನ್ನು ಕರೆದು ಮಾತನಾಡುತ್ತಿದ್ದರು. 'ಶಾಂತಿಯುತವಾಗಿ ಪ್ರತಿಭಟನೆ ನಡೆಸಿ, ಸರ್ಕಾರಿ ಆಸ್ತಿಪಾಸ್ತಿಗೆ ನಷ್ಟ ಮಾಡಬೇಡಿ' ಎಂದು ಮನವಿ ಮಾಡಿಕೊಳ್ಳುತ್ತಿದ್ದರು. ಜನರಲ್ಲಿ ಮುಕ್ತವಾಗಿ ಬೆರೆಯುತ್ತಿದ್ದ ಅವರ ನಡವಳಿಕೆ ಮಂಡ್ಯದ ಆಗಿನ ಯುವ ನಾಯಕರಲ್ಲಿ ಇಷ್ಟವಾಗುತ್ತಿತ್ತು. ಚಳವಳಿ ಮುಖಂಡರೊಂದಿಗೆ ಒಮ್ಮೆ ಮಾತನಾಡುವಾಗ 'ಪಂಜಾಬಿನಲ್ಲಿ ರೈತರು ತಮ್ಮ ವಿಶೇಷ ಬ್ರಾಂಡ್ ಆದ ಟ್ರ್ಯಾಕ್ಟರ್ ರ್‍ಯಾಲಿ ನಡೆಸಿ ಸರ್ಕಾರದ ಗಮನ ಸೆಳೆಯುತ್ತಾರೆ. ಇಲ್ಲಿ ನಿಮ್ಮ ಮಂಡ್ಯದ ಜನರ ಸಾಮಾನ್ಯ ಚಹರೆ ಏನು? ಅದನ್ನು ಮುಂದೆ ಮಾಡಿ ಪ್ರತಿಭಟನೆ ನಡೆಸಿ' ಎಂದು ಸಲಹೆ ನೀಡಿದ್ದರು. ಆಗ ಮೂಡಿದ್ದು ಚಡ್ಡಿ ಧರಿಸಿ ರೈತರು ಮೆರವಣಿಗೆ ನಡೆಸುವ ಕಲ್ಪನೆ. ಚಡ್ಡಿ ಮೆರವಣಿಗೆಗೆ ದಿನ ನಿಗದಿಪಡಿಸಿ ನಡೆಸಿದ ಪ್ರಚಾರಕ್ಕೆ ದೊಡ್ಡಪ್ರಮಾಣದಲ್ಲಿ ಬೆಂಬಲ ಸಿಕ್ಕಿತು.

ಚಡ್ಡಿ ಮೆರವಣಿಗೆ ಆ ದಿನಗಳಲ್ಲಿ ಅತ್ಯಂತ ದೊಡ್ಡದಾಗಿ ಸಂಘಟಿತವಾದ ಪ್ರತಿಭಟನೆ. ಪಟ್ಟಾಪಟ್ಟಿ ಚಡ್ಡಿ ಧರಿಸಿ ಹೆಗಲ ಮೇಲೆ ಟವೆಲ್ ಹಾಕಿಕೊಂಡು ಮುಖಂಡರೂ, ಕಾರ್ಯಕರ್ತರೂ, ರೈತಯುವಕರೂ ಉತ್ಸಾಹದಿಂದ ಸತ್ಯಾಗ್ರಹ ಶಿಬಿರದಿಂದ ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆ ಹೋಗಿ ಮನವಿ ಸಲ್ಲಿಸುವ ಕಾರ್ಯಕ್ರಮ. ಜೊತೆಗೆ ಎತ್ತಿನ ಗಾಡಿಗಳೂ, ಟ್ರ್ಯಾಕ್ಟರ್‌ಗಳೂ ರೈತ ಸಮುದಾಯದ ಬೆಂಬಲಕ್ಕೆ ಜೊತೆಯಾಗಿದ್ದವು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗುತ್ತಿದ್ದ ಮೆರವಣಿಗೆ ಸರ್ಕಾರಿ ಬಸ್ ನಿಲ್ದಾಣದ ಮುಂದೆ ಸಾಗುತ್ತಿದ್ದಂತೆ ಕಿಡಿಗೇಡಿಗಳ ಕಲ್ಲು ತೂರಾಟದಿಂದ ಉಗ್ರ ಸ್ವರೂಪ ತಾಳಿತು. ಅವರನ್ನು ನಿಯಂತ್ರಿಸಲು ಮೆರವಣಿಗೆಯ ಹಿಂದೆ, ಆಜುಬಾಜು ಸಾಗುತ್ತಿದ್ದ ಮೀಸಲು ಪಡೆ ಪೊಲೀಸರು ಲಘುವಾಗಿ ಲಾಠಿಯನ್ನೂ ಬೀಸಬೇಕಾಯಿತು. ಚಳವಳಿನಿರತ ರೈತರಲ್ಲಿ ಶಾಂತಿ ಕದಡಬೇಡಿ ಎಂದು ಉಪದೇಶ ನೀಡಲು ತಮ್ಮ ಕಾರಿನಿಂದ ಕೆಳಕ್ಕೆ ಇಳಿದ ಜಿಲ್ಲಾಧಿಕಾರಿ ಚಿರಂಜೀವ್ ಸಿಂಗ್ ಅವರಿಗೂ ಮೀಸಲು ಪಡೆಯ ಪೇದೆಯೊಬ್ಬ ಲಾಠಿಯ ರುಚಿ ತೋರಿಸಿದ್ದನಂತೆ. ಆದರೂ ಅವರು ಧೃತಿಗೆಡದೆ ಉದ್ರಿಕ್ತ ಜನರ ಮಧ್ಯೆ ಸಾಗಿ ಪರಿಸ್ಥಿತಿಯನ್ನು ತಹಬಂದಿಗೆ ತಂದರು ಎಂದು ಚಳವಳಿಯ ವಿವರಗಳನ್ನು ಪತ್ರಕರ್ತರಲ್ಲಿ ಹಂಚಿಕೊಳ್ಳುತ್ತಿದ್ದ ಮುಖಂಡರು ಜಿಲ್ಲಾಧಿಕಾರಿಯ ಬಗ್ಗೆ ಮೆಚ್ಚುಗೆಯಿಂದ ಹೇಳುತ್ತಿದ್ದರು.

ಕೆಲವು ದಿನಗಳು ವರುಣಾ ನಾಲೆ ವಿರುದ್ಧ ಚಳವಳಿ ನಡೆಯಿತು. ಅದು ನಿಜವಾಗಿಯೂ ರಾಜಕೀಯ ಪ್ರತಿಷ್ಠೆಗಾಗಿ ನಡೆದ ಚಳವಳಿ ಎಂದು ಚಳವಳಿಯ ಮುಖಂಡರೇ ಖಾಸಗಿಯಾಗಿ ಹೇಳುತ್ತಿದ್ದರು. ಮಂಡ್ಯದ ಜನರಿಗೆ ನೀರಿನ ಯಾವ ಕೊರತೆಯೂ ಆಗುವುದಿಲ್ಲ ಎಂಬ ಹೇಳಿಕೆಗಳನ್ನು ಸರ್ಕಾರದ ಕಡೆಯಿಂದ ಬೆಂಗಳೂರಿನಲ್ಲಿ ಕೊಡಿಸಲಾಗುತ್ತಿತ್ತು. ದೇವರಾಜ ಅರಸರನ್ನೇ ಗುರಿಯಾಗಿಸಿ ಸಂಘಟಿಸಿದ್ದ ಚಳವಳಿಗೆ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಎಚ್.ಡಿ.ದೇವೇಗೌಡರು ಬೆಂಬಲಿಸಿದ್ದರು. ಕಾಂಗ್ರೆಸ್ಸಿನಲ್ಲಿದ್ದ ಅರಸು ವಿರೋಧಿಗಳು ಮತ್ತು ಪ್ರತಿಪಕ್ಷವಾಗಿದ್ದ ಸಂಸ್ಥಾ ಕಾಂಗ್ರೆಸ್ಸಿನ ಎಲ್ಲ ಮುಖಂಡರು ಒಂದಾಗಿ ಅರಸರಿಗೆ ಮಂಡ್ಯಕ್ಕೆ ಕಾಲಿಡದಂತೆ ಎಚ್ಚರಿಕೆ ನೀಡಿದ್ದರು. ಅವರ ಮೇಲೆ ಹಲ್ಲೆ ನಡೆಸುವ ಬೆದರಿಕೆಯೂ ಇತ್ತು. ಲಿಂಗಯ್ಯನವರು ಮಾತ್ರ ಸ್ಥಳೀಯರ ವಿರೋಧದ ಕಾರಣ ಕೆಲವು ಕಾಲ ತಟಸ್ತರಾಗಿದ್ದರು. ಲಿಂಗಯ್ಯನವರದು ಬೌದ್ಧಿಕ ವ್ಯಕ್ತಿತ್ವ. ರಾಜಕೀಯ ಮುಖಂಡರಂತೆ ನೇರಾನೇರ ಟೀಕಾಸ್ತ್ರ ಪ್ರಯೋಗ ಮಾಡುವ ಜಾಯಮಾನವಲ್ಲ. ಕೈಯಲ್ಲೊಂದು ಪತ್ರಿಕೆ. ಜೊತೆಗೆ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸ್ಥಾನ. ಮಂಡ್ಯದ ಸಾಮಾಜಿಕ ಸಂರಚನೆಯನ್ನು ಚೆನ್ನಾಗಿಯೇ ತಿಳಿದಿದ್ದ ಅರಸರು ಅಲ್ಲಿನ ಪ್ರಬಲ ಜಾತಿ ಮುಖಂಡರ ವಿರೋಧವನ್ನು

ಸ್ಥಳೀಯ ನಾಯಕರನ್ನು ಮುಂದಿಟ್ಟುಕೊಂಡು ಎದುರಿಸಲು ಲಿಂಗಯ್ಯನವರನ್ನೂ ಉತ್ತೇಜಿಸುತ್ತಿದ್ದರು. ಕೃಷ್ಣ ಅವರು ತಮ್ಮನ್ನು ತ್ಯಜಿಸಿದ ನಂತರ ಅಲ್ಲಿಂದಲೇ ಪರ್ಯಾಯ ನಾಯಕತ್ವವನ್ನು ಅರಸುವ ತಂತ್ರವಾಗಿ ಲಿಂಗಯ್ಯನವರಿಗೆ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಸ್ಥಾನಕ್ಕಿಂತ ಉನ್ನತ ಸ್ಥಾನ ಕೊಟ್ಟರು. ಅದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ಸ್ಥಾನ. ಸಂಪುಟದರ್ಜೆ ಸಚಿವ ಸ್ಥಾನದ ಅಧಿಕಾರ ಗೌರವ ಇದ್ದ ಹುದ್ದೆ. ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಸ್ಥಾನ ಕೃಷ್ಣ ಅವರ ಅನುಯಾಯಿ ಎಂದು ಹೆಸರಾಗಿದ್ದ ಕೆ.ಎನ್.ನಾಗೇಗೌಡರಿಗೆ ಸಿಕ್ಕಿತು. ಎರಡೂ ಗುಂಪುಗಳ ಮಧ್ಯೆ ಸಮತೋಲನ ಸಾಧಿಸುವ ರಾಜೀಸೂತ್ರ. ಆದರೆ ವರುಣಾ ನಾಲೆಯ ನೆಪದಲ್ಲಿ ಶುರುವಾದ ವಿರೋಧ ಅನೇಕ ತಿಂಗಳ ನಂತರ ಮಂಡ್ಯದ ರೈತರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬೆಂಗಳೂರಿಗೆ ಜಾಥಾ ಹೋಗಿ ಕಬ್ಬನ್ ಪಾರ್ಕ್‌ನಲ್ಲಿ ಸಮಾವೇಶಗೊಂಡು ಅಲ್ಲಿಗೇ ಮುಖ್ಯಮಂತ್ರಿ ದೇವರಾಜ ಅರಸರನ್ನು ಕರೆಸುವವರೆಗೆ ಮುಂದುವರಿಯಿತು. ಕಬ್ಬನ್ ಪಾರ್ಕ್‌ನಲ್ಲಿ ನಡೆದ ಮಂಡ್ಯದ ರೈತರ ಬೃಹತ್ ಪ್ರತಿಭಟನೆಯ ಸ್ಥಳಕ್ಕೆ ಬಂದು ದೇವರಾಜ ಅರಸರು ಯಾವ ಸಂದರ್ಭದಲ್ಲೂ ಮಂಡ್ಯ ರೈತರಿಗೆ ವರುಣಾ ನಾಲೆಯ ಕಾರಣದಿಂದ ನೀರಿನ ಪಾಲಿನಲ್ಲಿ ಕೊರತೆ ಆಗುವುದಿಲ್ಲ ಎಂದು ಭರವಸೆ ಕೊಡಬೇಕಾಯಿತು. ಆ ನಂತರವೇ ವರುಣಾ ನಾಲೆ ವಿರುದ್ಧದ ಹೋರಾಟ ನಿಂತಿತು.

**ಕೈಗೆ ಬಂದ ತುತ್ತು**

1975ರ ನವೆಂಬರ್ ಸುಮಾರಿಗೆ ಮಂಡ್ಯದ ಕೆಲಸಕ್ಕೆ ನಿಯೋಜಿತನಾದವನು 1976ರ ನವೆಂಬರ್ ವರೆಗೆ ವಾರದಲ್ಲಿ ಮೂರು ದಿನ 'ಜನಪ್ರಗತಿ' ಗಾಗಿ ಬೆಂಗಳೂರಿಗೆ ಬಂದು ಹೋಗುತ್ತಿದ್ದೆ. ಬೆಂಗಳೂರಿಗೆ ಹೋದಾಗ ಯಾವುದಾದರೂ ಒಂದು ದೊಡ್ಡ ಪತ್ರಿಕೆಯಲ್ಲಿ ಕಾಯಂ ಆದ ಕೆಲಸ ಸಿಕ್ಕಿದರೆ ಸಾಕೆಂದು ಚಡಪಡಿಸುತ್ತಿದ್ದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪಸಂಪಾದಕರ ಕೆಲಸಕ್ಕೆ ಅರ್ಜಿ ಕರೆದಾಗ ಹಾಕಿದ್ದೆ. ಆಗ ಅದು ಅರಸರ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಎಂ.ವೈ.ಘೋರ್ಪಡೆ ಅವರ ಒಡೆತನದಲ್ಲಿತ್ತು. ಖಾದ್ರಿ ಶಾಮಣ್ಣನವರು ಅದರ ಪ್ರಧಾನ ಸಂಪಾದಕರಾಗಿದ್ದರು. ಎಸ್.ವಿ.ಜಯಶೀಲರಾವ್ ಜಂಟಿ ಸಂಪಾದಕರಾಗಿದ್ದರು (ಖಾದ್ರಿ ಶಾಮಣ್ಣ ಪ್ರಜಾವಾಣಿಯಲ್ಲಿ ಸುದ್ದಿ ಸಂಪಾದಕರಾಗಿ ತುಂಬ ಪ್ರಸಿದ್ಧಿ ಪಡೆದಿದ್ದವರು. ಜಯಶೀಲರಾವ್ 1948ರಿಂದಲೂ ಪ್ರಜಾವಾಣಿಯ ಮುಖ್ಯವರದಿಗಾರರಾಗಿ ಹೆಸರಾಗಿದ್ದರು. ಈ ಇಬ್ಬರೂ ಸಂಯುಕ್ತ ಕರ್ನಾಟಕ ಪತ್ರಿಕೆಯ ಒಡೆತನ ಲೋಕಶಿಕ್ಷಣ ಟ್ರಸ್ಟ್‌ನಿಂದ ಎಂ.ವೈ.ಘೋರ್ಪಡೆ ಅವರ ಒಡೆತನದ ಕರ್ನಾಟಕ ಪತ್ರಿಕಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಸೇರಿದಾಗ ಪ್ರಜಾವಾಣಿಗೆ ರಾಜೀನಾಮೆ ನೀಡಿ ಸಂಯುಕ್ತ ಕರ್ನಾಟಕಕ್ಕೆ ಬಂದಿದ್ದರು. ಇವರೊಂದಿಗೆ ಪ್ರಜಾವಾಣಿ ತ್ಯಜಿಸಿ ಬಂದಿದ್ದವರು ಕೆ.ಜನಾರ್ದನ. ಅವರು ವರದಿಗಾರರಾಗಿದ್ದರು. ಈ ಬೆಳವಣಿಗೆ 1974ರಲ್ಲಿ ನಡೆದಿತ್ತು). ಅಲ್ಲಿ ಸಂದರ್ಶನಕ್ಕೆ ಕರೆ ಬಂದಾಗ ಯಾವುದೋ ತುರ್ತು ಕೆಲಸದ ನೆಪ ಹೇಳಿ ಮಂಡ್ಯದಿಂದ ಬಂದಿದ್ದೆ. ಪತ್ರಿಕೆಯಲ್ಲಿ ಕೆಲಸಕ್ಕೆ ಪ್ರಯತ್ನ ಮಾಡುವುದು ಎಂದರೆ ಆಗ ನನ್ನಮಟ್ಟಿಗೆ ಪ್ರಜಾವಾಣಿ ಕಚೇರಿಗೆ ಹೋಗಿ ಬಿ.ವಿ.ವೈಕುಂಠರಾಜು ಅವರನ್ನು ನೋಡುವುದು, ಎಂ.ಬಿ. ಸಿಂಗ್ ಅವರಲ್ಲಿ ಮನವಿ ಸಲ್ಲಿಸುವುದು. ಈ ಸಲವೂ ಸಂಯುಕ್ತ ಕರ್ನಾಟಕದಿಂದ ಸಂದರ್ಶನಕ್ಕೆ ಕರೆ ಬಂದದ್ದನ್ನು ತಿಳಿಸಿದಾಗ ವೈಕುಂಠರಾಜು 'ನನಗಂತೂ ನಿನಗೆ ಕೆಲಸ ಕೊಡಿಸುವುದು ಸಾಧ್ಯವಿಲ್ಲ. ಜಯಶೀಲರಾವ್ ಅವರಿಗೆ ಯಾರಿಂದಲಾದರೂ ಹೇಳಿಸು' ಎಂದು ಸೂಚಿಸಿದರು. ಮಿತ್ರ ಬಾಲಸುಬ್ರಹ್ಮಣ್ಯ ಅವರೊಂದಿಗೆ ಸಮಾಲೋಚಿಸಿದಾಗ 'ಜಯಶೀಲರಾವ್ ಅವರಿಗೆ ನಮ್ಮ ಮೇಷ್ಟರು

ಲಕ್ಷ್ಮೀನಾರಾಯಣ ಭಟ್ಟರಿಂದ ಒಂದು ಮಾತು ಹೇಳಿಸುವುದು' ಎಂಬ ಸಲಹೆ ಬಂತು. ಸಂದರ್ಶನದ ಹಿಂದಿನ ದಿನ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಮನೆಗೆ ಹೋದೆ. ಅದು ಜಯನಗರದ ಮೂಲೆಯಲ್ಲಿತ್ತು. ಅವರ ಮನೆಗೆ ಸಮೀಪದಲ್ಲಿಯೇ ಜಯಶೀಲರಾವ್ ಅವರ ಮನೆಯಂತೆ. ನಾನು ಭಟ್ಟರ ಮನೆಗೆ ಹೋದಾಗ ಅವರು ಮನೆಯಲ್ಲಿ ಇದ್ದರು. ಬಿ.ಎ.ಆನರ್ಸ್ ಮತ್ತು ಎಂ ಎ ಓದುವಾಗ ಬರವಣಿಗೆಯಲ್ಲಿ ತೊಡಗಿದ್ದ ಹುಡುಗ ಎಂಬ ಪರಿಚಯವೂ, ಅಭಿಮಾನವೂ ಅವರಲ್ಲಿ ಇತ್ತು. 'ಆಯ್ತು, ನಾನೇ ಖುದ್ದಾಗಿ ಹೋಗಿ ಹೇಳಿ ಬರುತ್ತೇನೆ' ಎಂದರಲ್ಲದೆ ನನಗೆ ತಿಂಡಿ, ಕಾಫಿ ಕೊಡಿಸಿ ಸಮಾಧಾನ ಪಡಿಸಿದರು. ಸಂಯುಕ್ತ ಕರ್ನಾಟಕದ ಆಡಳಿತ ಮಂಡಲಿಗೆ ಪತ್ರಕರ್ತರಾಗಿ ಹತ್ತಿರ ಇದ್ದವರು ಎಂದು ಕೆ.ಜನಾರ್ದನ್ ಅವರ ಹೆಸರನ್ನು ಹೇಳಿದ್ದರು ವೈಕುಂಠರಾಜು. 'ಸಿಂಗ್ ಹತ್ತಿರ ಮಾತನಾಡು, ಅವರು ಜನಾರ್ದನ್‌ಗೆ ಹೇಳಬಲ್ಲರು' ಎಂದು ನನಗೆ ಹೇಳಿದ್ದರು. ಅದರಂತೆ ಸಿಂಗ್ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದೆ. ಅವರು ನನ್ನ ವರಾತವನ್ನು ಮೊದಲಿಂದಲೂ ಸಹಿಸಿಕೊಳ್ಳುತ್ತಾ ಇದ್ದವರು. 'ನಾನು ಹೇಳಿರುತ್ತೇನೆ. ನಾಳೆ ಬೆಳಗ್ಗೆ ಹೋಗಿ ನೋಡು' ಎಂದು ಸೇಂಟ್ ಮಾರ್ಕ್ಸ್ ರಸ್ತೆಯ ಹೋಟಲಿನ ವಿಳಾಸ ತಿಳಿಸಿದರು. ಅದರಂತೆ ಸಂದರ್ಶನ ನಿಗದಿಯಾದ ದಿನ ಬೆಳಗ್ಗೆ ಜನಾರ್ದನ್ ಇಳಿದುಕೊಂಡಿದ್ದ ಹೋಟಲಿಗೆ ಹೋಗಿ ಸ್ವಾಗತಕಾರರ ಮೂಲಕ ನಾನು ಭೇಟಿಗೆ ಬಂದಿರುವ ವಿಷಯ ತಿಳಿಸಿದೆ. ಎಂ.ಬಿ.ಸಿಂಗ್ ಹೇಳಿದ್ದು ಅವರ ಗಮನದಲ್ಲಿತ್ತು. ತಕ್ಷಣವೇ ಬರುವಂತೆ ಸೂಚಿಸಿದರು. ಹೋಟಲಿನ ಮೊದಲ ಮಹಡಿಯಲ್ಲಿದ್ದ ಕೋಣೆ. ಅಂಥ ಹೋಟಲನ್ನು ಬೆಂಗಳೂರಿನಲ್ಲಿ ಆರೇಳು ವರ್ಷಗಳಿಂದ ಇದ್ದರೂ ನೋಡಿರಲಿಲ್ಲ. ಎಲ್ಲ ಕಡೆ ನಿಶ್ಶಬ್ದ ವಾತಾವರಣ. ಎಲ್ಲ ಮುಚ್ಚಿದ ಕೋಣೆಗಳು. ಕೆಳಕ್ಕೆ ನೆಲಹಾಸು. ಸ್ವಲ್ಪವೂ ದೂಳು ಇರದಂಥ ಹವಾನಿಯಂತ್ರಿತ ಪರಿಸರ.

ಕೋಣೆಯನ್ನು ಸಮೀಪಿಸಿದ ಸದ್ದಿಗೆ ಅವರೇ ಬಾಗಿಲು ತೆರೆದು ಬರಮಾಡಿಕೊಂಡರು. ನನ್ನ ವಿವರಗಳನ್ನು ಕೇಳಿದರು. ನನ್ನ ಬರವಣಿಗೆಯ ಕಾಪಿಗಳನ್ನೂ ನೋಡಿದರು. 'ಸಂದರ್ಶನದಲ್ಲಿ ಘೋರ್ಪಡೆಯವರೂ ಇರುತ್ತಾರೆ. ಧೈರ್ಯವಾಗಿ ಉತ್ತರ ಕೊಡಿ. ಗೊತ್ತಿಲ್ಲದಿದ್ದರೆ ಗೊತ್ತಿಲ್ಲ ಅಂತ ಹೇಳಿ' ಎಂದು ಸಂದರ್ಶನದ ಬಗ್ಗೆ ಕಿವಿಮಾತು ಹೇಳಿದರು. 'ಸದ್ಯ ಏನು ಮಾಡುತ್ತಿದ್ದೀರಿ' ಎಂದು ಕೇಳಿದಾಗ ಮಂಡ್ಯದ ಪತ್ರಿಕೆಯ ವಿಷಯ ಹೇಳಿದೆ.

ಅದೇ ದಿನ ಬೆಳಗ್ಗೆ ಹನ್ನೊಂದು ಗಂಟೆಯ ಹೊತ್ತಿಗೆ ರೆಸಿಡೆನ್ಸಿ ರಸ್ತೆಯ ಸಂಯುಕ್ತ ಕರ್ನಾಟಕ ಕಚೇರಿಯಲ್ಲಿ ಸಂದರ್ಶನ ನಿಗದಿಯಾಗಿತ್ತು. ಜನಾರ್ದನ್ ಅವರನ್ನು ಕಂಡು ಹೊರಬಂದಾಗ ಒಂಬತ್ತು ಗಂಟೆಯಾಗಿತ್ತು. ಅಲ್ಲಿಗೆ ಹತ್ತಿರದಲ್ಲಿದ್ದ ಸಂಯುಕ್ತ ಕರ್ನಾಟಕ ಕಚೇರಿ. ಎಷ್ಟು ನಿಧಾನವಾಗಿ ನಡೆದುಕೊಂಡು ಬಂದರೂ ಹತ್ತು ನಿಮಿಷದ ಹಾದಿ. ಒಂಬತ್ತೂವರೆಗೆ ಅಲ್ಲಿ ಬಂದವನು ಸುಮ್ಮನೆ ಅಲ್ಲಿ ಇಲ್ಲಿ ಸುತ್ತಾಡುತ್ತಾ ಸಮಯ ಕಳೆದು ಹತ್ತು ಗಂಟೆಯ ಹೊತ್ತಿಗೆ ಕಚೇರಿಯ ಬಳಿ ಸೇರಿದೆ. ನಮಗೆ ಕಳುಹಿಸಲಾಗಿದ್ದ ಸಂದರ್ಶನ ಪತ್ರಗಳನ್ನು ನೋಡಿ ಒಂದೆಡೆ ಕೂರಿಸಲಾಯಿತು. ಆಗಲೇ ಒಬ್ಬೊಬ್ಬರಾಗಿ ಬಂದು ಸೇರುತ್ತಿದ್ದ ಅಭ್ಯರ್ಥಿಗಳಲ್ಲಿ 'ಜನಪ್ರಗತಿ'ಯಲ್ಲಿ ನಾನು ಇದ್ದಾಗ ಭೇಟಿ ನೀಡುತ್ತಿದ್ದ ಕೆಲವರೂ ಇದ್ದರು. ಎಲ್ಲರಲ್ಲೂ ಸಮಾನವಾಗಿದ್ದ ಉದ್ಯೋಗ ಪಡೆಯುವ ಸವಾಲು. ಸಮಾನ ಸಂಕಟ ಹೊಂದಿದ್ದ ನಾವು ಗುರುತಿನ ಕೆಲವರು ಒಳಗಿನ ಆತಂಕವನ್ನು ಮರೆಮಾಚಲು ಏನೇನೋ ಮಾತಾಡುತ್ತಿದ್ದೆವು. ಎಷ್ಟು ಜನರನ್ನು ತೆಗೆದುಕೊಳ್ಳುತ್ತಾರೆ ಎಂಬ ಖಚಿತತೆ ಇರಲಿಲ್ಲ. ಅದೃಷ್ಟ ಪರೀಕ್ಷೆಗೆ ಬಂದಂತೆ ಆತಂಕದಿಂದ ಸಂದರ್ಶನ ಮಾಡುವವರನ್ನು ಕಾಯುತ್ತಾ ಕುಳಿತೆವು.

ಹತ್ತೂವರೆ ಸುಮಾರಿಗೆ ಜಯಶೀಲರಾವ್ ಬಂದರು. ಅವರ ಪ್ರತ್ಯೇಕ ಕೋಣೆಗೆ ಹೋದರು. ಹತ್ತೂ ಮುಕ್ಕಾಲು ಸುಮಾರಿಗೆ 'ಖಾದ್ರಿ ಅವರ ಕಾರು ಬಂತು' ಎಂಬ ಸುದ್ದಿ ಬಂತು. ಅದರೊಂದಿಗೆ ಸ್ಥೂಲ ಕಾಯದ ಖಾದ್ರಿಯವರೂ ನಿಧಾನವಾಗಿ ಬಂದು ಅವರ ಕೋಣೆ ಪ್ರವೇಶಿಸಿದರು. ದಿನಪತ್ರಿಕೆಯಲ್ಲಿ ಸಾಮಾನ್ಯವಾಗಿ ಬೆಳಗಿನ ಹೊತ್ತು ಕೆಲಸ ಪ್ರಾರಂಭವಾಗುವುದಿಲ್ಲ. ಸಂಪಾದಕೀಯ ವಿಭಾಗದ ಸ್ಥಳವೆಲ್ಲ ಖಾಲಿ ಇತ್ತು. ಡೆಸ್ಕ್ ವಿಭಾಗದ ಖಾಲಿ ಜಾಗದಲ್ಲಿ ನಮ್ಮೆಲ್ಲರನ್ನು ಕೂರಿಸಲಾಗಿತ್ತು. ಖಾದ್ರಿ ಅವರು ಬಂದ ಸ್ವಲ್ಪ ಹೊತ್ತಿಗೆ ಉಪಸಂಪಾದಕರ ಹುದ್ದೆಗೆ ಬಂದ ನಮ್ಮೆಲ್ಲರಿಗೆ ಲಿಖಿತ ಪರೀಕ್ಷೆ ನಡೆಸುವುದೆಂದು ಗೊತ್ತಾಯಿತು. ನೇಮಿನಾಥ್ ಮತ್ತು ಜಿ.ಪಿ. ಬಸವರಾಜು ಎಂಬ ಇಬ್ಬರು ನಮ್ಮೆಲ್ಲರ ಲಿಖಿತ ಪರೀಕ್ಷೆ ನಡೆಸುವ ಉಸ್ತುವಾರಿ ಹೊತ್ತಂತೆ ನಮ್ಮನ್ನೆಲ್ಲ ಬಿಡಿ ಬಿಡಿಯಾಗಿ ಕೂರಿಸಿದರು. ಐದು ಹತ್ತು ನಿಮಿಷಗಳಲ್ಲಿ ಪ್ರಶ್ನೆ ಪತ್ರಿಕೆಯನ್ನು ನೀಡಿ ಅದಕ್ಕೆ ಉತ್ತರಿಸಲು ಅಗತ್ಯ ನ್ಯೂಸ್ ಪ್ರಿಂಟ್ ಕಾಗದಗಳನ್ನು ನೀಡಿದರು. ಎರಡು ಗಂಟೆ ಅವಧಿಯಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರ ಬರೆಯುವ ಪರೀಕ್ಷೆ. ಪ್ರಶ್ನೆಗಳೆಲ್ಲ ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ್ದವು. ಒಂದು ಪುಟದಲ್ಲಿ ಇಂಗ್ಲಿಷಿನ ಒಂದು ಪ್ಯಾರವನ್ನು ನೀಡಿ ಅದನ್ನು ಕನ್ನಡಕ್ಕೆ ಅನುವಾದಿಸಲು ಸೂಚಿಸಿದ್ದರು. ಎರಡು ವಾರಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ನನಗೆ ಅಲ್ಲಿನ ಪ್ರಶ್ನೆಗಳಿಗೆ ಉತ್ತರ ನೀಡಲು ಕಷ್ಟ ಎನಿಸಲಿಲ್ಲ. ನಿಧಾನವಾಗಿ ಯೋಚಿಸಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದೆ. ಪ್ರಚಲಿತ ವಿದ್ಯಮಾನಗಳೊಂದಿಗೆ ನನ್ನ ಮುಖಾಮುಖಿ ಇದ್ದ ಕಾರಣ ಸ್ವಂತವಾಗಿ ಯೋಚಿಸಿ ಬರೆಯಬೇಕಿದ್ದ ಪ್ರಶ್ನೆಗಳಿಗೂ ಉತ್ತರ ನೀಡಿದೆ. ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡುವುದು ಕೂಡ ನನಗೆ 'ಜನಪ್ರಗತಿ' ಕಚೇರಿಯಲ್ಲಿ ಅನುಭವಕ್ಕೆ ಬಂದಿತ್ತು. ನನಗೆ ಉದ್ಯೋಗ ಪಡೆದುಕೊಳ್ಳುವುದು ಜೀವನ್ಮರಣ ಪ್ರಶ್ನೆಯೇ ಆಗಿತ್ತು. ಅದನ್ನು ನೆನಪು ಮಾಡಿಕೊಂಡು ತುಂಬ ಗಂಭೀರವಾಗಿ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡಿದೆ. ಎರಡು ಗಂಟೆಯ ಸಮಯ ಮಿತಿಯ ಒಳಗಡೆಯೇ ಉತ್ತರ ಪತ್ರಿಕೆಯನ್ನು ಬಸವರಾಜು ಅವರಿಗೆ ಒಪ್ಪಿಸಿ ನಿರಾಳವಾಗಿ ಹೊರಬಂದೆ. 'ಜನಪ್ರಗತಿ'ಯಲ್ಲಿ ನಾನು ಕೆಲಸ ಮಾಡುತ್ತಾ ಇದ್ದುದನ್ನು ನೋಡಿದ್ದ ರಾಮಣ್ಣ ಕೋಡಿಹೊಸಹಳ್ಳಿ ಅವರು ಮಧ್ಯಾಹ್ನದ ಪಾಳಿಗೆ ಬಂದಾಗ ನಾನು ಉತ್ತರ ಪತ್ರಿಕೆಯನ್ನು ಬಸವರಾಜು ಅವರಿಗೆ ಕೊಟ್ಟಿದ್ದೆ. ನಾನು ಸಂದರ್ಶನಕ್ಕೆ ಬಂದ ಸಂಗತಿ ಅವರಿಗೆ ಗೊತ್ತಿತ್ತು. ಮೊದಲೇ ಪರಿಚಯವಿದ್ದ ಕಾರಣ ಮಾತಾಡಿಸಿದರು. ರೆಸಿಡೆನ್ಸಿ ರಸ್ತೆಯ ಹೊರಗಡೆ ಕರೆದುಕೊಂಡು ಬಂದು ಅಲ್ಲಿದ್ದ ಯಾವುದೋ ಹೋಟಲಿನಲ್ಲಿ ತಿಂಡಿ ಕೊಡಿಸಿದರು. ಅವರ ಕಡೆಯಿಂದ ಸಂಪಿಗೆ ಶಿವಪ್ರಕಾಶ್ ಎಂಬ ವ್ಯಕ್ತಿ ಅಭ್ಯರ್ಥಿಯಾಗಿ ಬಂದಿದ್ದ ಎಂಬುದು ಆತನೂ ನಮ್ಮೊಂದಿಗೆ ಬಂದಾಗಲೇ ನನಗೆ ಗೊತ್ತಾಯಿತು.

ಮೂರು ಗಂಟೆ ಸುಮಾರಿಗೆ ಎಂ.ವೈ.ಘೋರ್ಪಡೆಯವರು ಬಂದರು. ಸಂದರ್ಶನಕ್ಕೆ ಅವರೂ ಕುಳಿತರು. ಒಬ್ಬರಾದ ನಂತರ ಒಬ್ಬರಂತೆ ನಿಧಾನವಾಗಿ ನಡೆಸಿದ ಸಂದರ್ಶನ. ನನ್ನ ಪಾಳಿ ಸಂಜೆ ಆರು ಗಂಟೆಯಾದರೂ ಬರಲಿಲ್ಲ. ಲಿಖಿತ ಪರೀಕ್ಷೆಯಲ್ಲಿ ನನ್ನ ಸಾಧನೆ ಉತ್ತಮವಾಗಿದೆ ಎಂದು ಬಸವರಾಜು ಅವರು ತಮ್ಮ ಸಹೋದ್ಯೋಗಿ ನೇಮಿನಾಥ್ ಅವರೊಂದಿಗೆ ಹೇಳುತ್ತಾ ಇದ್ದುದನ್ನು ರಾಮಣ್ಣ ನನಗೆ ತಿಳಿಸಿದ್ದರು. ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಎದುರಿಗೆ ಇಟ್ಟುಕೊಂಡು ಖಾದ್ರಿ ಶಾಮಣ್ಣ, ಎಸ್.ವಿ.ಜಯಶೀಲರಾವ್ ಮತ್ತು ಎಂ.ವೈ.ಘೋರ್ಪಡೆ ಅವರಿದ್ದ ವರಿಷ್ಠ ಮಂಡಲಿ ಸಂದರ್ಶನ ನಡೆಸುತ್ತಾ ಇತ್ತು. ಸಂದರ್ಶನ ನಡೆಸುತ್ತಾ ಇದ್ದವರು ಉಳಿದವರ ಸಂದರ್ಶನವನ್ನು ಮರುದಿನಕ್ಕೆ ಮುಂದಕ್ಕೆ ಹಾಕಿದರು. ಘೋರ್ಪಡೆಯವರ ಆಣತಿಯಂತೆ ಆ ರಾತ್ರಿ ಉಳಿದುಕೊಳ್ಳಬೇಕಾಗಿದ್ದ ಹೊರಗಿನ ಅಭ್ಯರ್ಥಿಗಳಿಗೆ ಪ್ರವಾಸ

ವೆಚ್ಚ ಮತ್ತು ರಾತ್ರಿ ಉಳಿದುಕೊಳ್ಳುವ ವೆಚ್ಚವನ್ನೂ ಅದೇ ಸಂಜೆ ನೀಡಲಾಯಿತು. ಸಂದರ್ಶನಕ್ಕೆ ಬರುವವರಿಗೆ ಪ್ರವಾಸ ವೆಚ್ಚ ನೀಡುತ್ತಾರೆ ಎಂಬುದು ನನಗೆ ಹೊಸದಾಗಿತ್ತು. ಖುಷಿಯಿಂದ ಸಹಿ ಹಾಕಿ ನನಗೆ ಲೆಕ್ಕ ಹಾಕಿ ನೀಡಿದ್ದ ಹಣವನ್ನು ಪಡೆದುಕೊಂಡು ಬಾಲಸುಬ್ರಹ್ಮಣ್ಯ ಅವರ ಕೋಣೆಗೆ ಹಿಂತಿರುಗಿದೆ. ಮಂಡ್ಯದಲ್ಲಿ ಮೂರು ದಿನಗಳ ಪಾಳಿ ಮುಗಿಸಿದ ನಂತರ 'ಜನಪ್ರಗತಿ' ಕಚೇರಿಯಲ್ಲಿ ವಾಸ್ತವ್ಯಕ್ಕಾಗಿ ಹಿಂತಿರುಗಿದ್ದವನು ಮೂರು ದಿನಕ್ಕೆ ಮೊದಲೇ ಬಂದಿದ್ದರಿಂದ ಬೇರೆ ಕಡೆ ಉಳಿದುಕೊಳ್ಳುವುದು ಅನಿವಾರ್ಯವಾಗಿತ್ತು. ಅದಕ್ಕೆ ನಾನು ಬಾಲಸುಬ್ರಹ್ಮಣ್ಯ ಅವರ ಕೋಣೆಯಲ್ಲಿ ಉಳಿದುಕೊಳ್ಳಲು ಹೋಗಿದ್ದೆ. ಅದಕ್ಕೆ ಅವರ ಆಕ್ಷೇಪ ಇರಲಿಲ್ಲ. ಶೇಷಾದ್ರಿಪುರ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿದ್ದ ಅವರಿಗೆ ನನ್ನ ಅತಂತ್ರ ಸ್ಥಿತಿಯ ಅರಿವಿತ್ತು.

**ಘೋರ್ಪಡೆ ಎದುರು ಸಂದರ್ಶನ**

ಮರುದಿನ ಬೆಳಗ್ಗೆ ಬಾಲಸುಬ್ರಹ್ಮಣ್ಯ ಅವರ ಕೋಣೆ ಇದ್ದ ಶೇಷಾದ್ರಿಪುರದಿಂದ ಸಂಯುಕ್ತ ಕರ್ನಾಟಕ ಕಚೇರಿ ಇದ್ದ ರೆಸಿಡೆನ್ಸಿ ರಸ್ತೆಯವರೆಗೆ ಎಂದಿನಂತೆ ನಡೆದುಕೊಂಡು ಹೋದೆ. ಹನ್ನೊಂದು ಗಂಟೆಗೆ ಸಂದರ್ಶನ ಎಂದಿದ್ದರೂ ಘೋರ್ಪಡೆಯವರಿಗಾಗಿ ಕಾಯುವುದು ಅನಿವಾರ್ಯವಾಗಿತ್ತು. ಅರಸು ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದ ಅವರು ನಿತ್ಯದ ಕೆಲಸಗಳ ಒತ್ತಡ ನಿವಾರಿಸಿಕೊಂಡು ತಮ್ಮ ಒಡೆತನದ ಪತ್ರಿಕೆಯ ಸಂಪಾದಕೀಯ ವಿಭಾಗಕ್ಕೆ ಕೆಳಹಂತದ ಸಿಬ್ಬಂದಿಯನ್ನು ಖುದ್ದಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ಸಮಯ ಹೊಂದಿಸಿಕೊಳ್ಳಬೇಕಿತ್ತು. ಅಂತೂ ಅವರು ಬಂದಾಗ ಮಧ್ಯಾಹ್ನ ಮೂರು ಗಂಟೆಯ ಮೇಲಾಗಿತ್ತು. ಅಷ್ಟರಲ್ಲಿ ಹಿಂದಿನ ದಿನದಂತೆಯೇ ಕೋಡಿಹೊಸಳ್ಳಿ ರಾಮಣ್ಣನವರು ಕಚೇರಿಯ ಕ್ಯಾಂಟೀನಿನಲ್ಲಿ ಊಟ ಕೊಡಿಸಿದ್ದರು. ಸಂದರ್ಶನಕ್ಕೆ ನನ್ನ ಪಾಳಿ ಬಂದಾಗ ಸಂಜೆ ಆರು ಗಂಟೆ ಮೀರಿತ್ತು. ಪ್ರಮುಖ ಸ್ಥಾನದಲ್ಲಿ ಘೋರ್ಪಡೆಯವರು. ಅವರ ಅಕ್ಕ ಪಕ್ಕ ಖಾದ್ರಿ ಶಾಮಣ್ಣ, ಜಯಶೀಲರಾವ್. ಪ್ರಶ್ನೆಗಳನ್ನು ಖಾದ್ರಿಯವರೂ, ಜಯಶೀಲರಾವ್ ಅವರೂ ಕೇಳಿದರು. ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಅವರು ಪ್ರಶ್ನೆ ಕೇಳಿದ್ದಂತೆ ನೆನಪು. ಘೋರ್ಪಡೆಯವರು ಮೀಸಲಾತಿ ಕುರಿತಂತೆ ಪ್ರಶ್ನೆ ಕೇಳಿದ್ದರು. ಆಗಷ್ಟೇ ಹಾವನೂರು ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿತ್ತು. ಅದನ್ನು ದೇವರಾಜ ಅರಸರು ಒಪ್ಪಿಕೊಂಡು ಅದು 'ಹಿಂದುಳಿದವರ ಬೈಬಲ್' ಎಂದು ಬಣ್ಣಿಸಿದ್ದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅರಸರ ಬಣ್ಣನೆಯನ್ನು ಆಧರಿಸಿ ಪ್ರಜಾವಾಣಿಯ 'ಛೂಬಾಣ' ಅಂಕಣದಲ್ಲಿ ಟೀಯೆಸ್ಸಾರ್ (ಟಿ.ಎಸ್.ರಾಮಚಂದ್ರರಾವ್) ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ 'ಯಾವನಾರ್ ಎಂದರೆ ಹಾವನೂರ್..' ಎಂದು ಅದರ ಬಗ್ಗೆ ವ್ಯಾಖ್ಯಾನ ಮಾಡಿದ್ದು ನನ್ನ ನೆನಪಿನಲ್ಲಿತ್ತು. ಸಾಮಾಜಿಕ ಅಸಮಾನತೆಯನ್ನು ನಿವಾರಿಸುವುದಕ್ಕೆ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ ಒತ್ತಾಯ ಮಂಡಿಸುವ ಹೇಳಿಕೆಗಳನ್ನೂ ಪ್ರಜಾವಾಣಿಯಲ್ಲಿ ಓದಿದ್ದೆ. ಅದರ ನೆನಪಿನಲ್ಲಿ ಮೀಸಲಾತಿಯ ಸೌಲಭ್ಯ ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಸಿಗಬೇಕು ಎಂದು ಉತ್ತರಿಸಿದ್ದೆ. 'ಮೆರಿಟ್ ಇದ್ದವರಿಗೆ ಬಿಟ್ಟು ಹಳ್ಳಿಯಿಂದ ಬಂದ ಕಾರಣಕ್ಕೆ ಉದ್ಯೋಗ ಕೊಡಬೇಕೇ?' ಎಂದು ಅವರು ಉಪಪ್ರಶ್ನೆ ಕೇಳಿದ್ದರು. 'ಹಳ್ಳಿಯಿಂದ ಬಂದವರಿಗೆ ಅರ್ಹತೆ ಇದ್ದಾಗ ಕೊಡಬೇಕು' ಎಂದು ಹೇಳಿದ್ದೆ. ಅಂಕಪಟ್ಟಿಯಲ್ಲಿ ಗಳಿಸಿದ್ದೇ ಮೆರಿಟ್ ಎಂಬ ಗ್ರಹಿಕೆ ನನ್ನದಾಗಿತ್ತು. ನಾನು ಎಂ ಎ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೆನಲ್ಲ. ವಾಸ್ತವವಾಗಿ ನನಗೆ ಮೀಸಲಾತಿಯ ಬಗ್ಗೆ ಖಚಿತತೆ ಇರಲಿಲ್ಲ. ಘೋರ್ಪಡೆಯವರು ಮೀಸಲಾತಿಯ ಪರ ಇರಬಹುದು ಎಂಬ ಊಹೆಯ ಮೇಲೆ ಉತ್ತರ ನೀಡಿದ್ದೆ. ನನ್ನ ಉತ್ತರಕ್ಕೆ

ಖಾದ್ರಿಯವರದು ನಸುನಗೆಯ ಪ್ರತಿಕ್ರಿಯೆ. ಅಷ್ಟರಲ್ಲಿ ಜಯಶೀಲರಾವ್ ಇನ್ನೊಂದು ಸುಲಭದ ಪ್ರಶ್ನೆ ಕೇಳಿ ನನ್ನನ್ನು ಪಾರು ಮಾಡಿದರು.

ಅದೇ ದಿನ ಸಂಜೆ ಏಳೂವರೆಯ ಹೊತ್ತಿಗೆ ಸಂದರ್ಶನದ ಫಲಿತಾಂಶವೂ ಪ್ರಕಟವಾಯಿತು. 'ಹತ್ತು ಹನ್ನೆರಡು ಮಂದಿ ಉಪಸಂಪಾದಕರನ್ನು ವಿವಿಧ ವಿಭಾಗಗಳಿಗೆ ತೆಗೆದುಕೊಳ್ಳಬೇಕೆಂದಿದ್ದ ಆಡಳಿತ ಮಂಡಲಿ ಸದ್ಯಕ್ಕೆ ಯಾರನ್ನೂ ತೆಗೆದುಕೊಳ್ಳುತ್ತಿಲ್ಲ. ಈಗ ಆಯ್ಕೆ ಮಾಡಿಕೊಂಡವರನ್ನು ಮುಂದೆ ಅವಕಾಶವಾದಾಗ ಪರಿಗಣಿಸಲಾಗುತ್ತದೆ. ಆದರೆ ಕ್ರೀಡಾ ವಿಭಾಗದಲ್ಲಿ ತುರ್ತಾಗಿ ಒಬ್ಬರನ್ನು ತೆಗೆದುಕೊಳ್ಳಬೇಕಿರುವುದರಿಂದ ಪೊನ್ನಪ್ಪ ಎಂಬುವರನ್ನು ಆಯ್ಕೆ ಮಾಡಲಾಗಿದೆ' ಎಂದು ತಿಳಿಯಿತು. 'ಪೊನ್ನಪ್ಪ ಎಂಬುವರು ಜನರಲ್ ಕಾರ್ಯಪ್ಪ ಅವರ 'ಮೊಮ್ಮಗ'ನಂತೆ, ಸದ್ಯ 'ಲೋಕವಾಣಿ'ಯಲ್ಲಿ ಕೆಲಸ ಮಾಡುತ್ತಿರುವ ಅನುಭವಿಯಂತೆ' ಎಂದು ಅಲ್ಲಿ ನನ್ನಂತೆಯೇ ಕೆಲಸಕ್ಕಾಗಿ ಕಾದು ನಿಂತಿದ್ದವರಲ್ಲಿ ಯಾರೋ ಒಬ್ಬರು ಹೇಳಿದರು. ನಿರಾಸೆಯಿಂದ ಅಲ್ಲಿಂದ ನೇರವಾಗಿ ಬಸ್ ನಿಲ್ದಾಣಕ್ಕೆ ಬಂದು ಮಂಡ್ಯಕ್ಕೆ ಹೊರಟೆ. ಹನ್ನೊಂದು ಗಂಟೆಯ ಸುಮಾರಿಗೆ ತಿಮ್ಮಪ್ಪನ ಕೋಣೆಯನ್ನು ಸೇರಿದೆ. ಮಾರ್ಗಮಧ್ಯೆ ಮದ್ದೂರಿನಲ್ಲಿ ಬಸ್ಸು ನಿಲ್ಲಿಸಿದಾಗ ಎರಡು ಇಡ್ಲಿ ಸಾಂಬಾರು ತಿಂದಿದ್ದೇ ರಾತ್ರಿಯ ಊಟವೂ ಆಗಿತ್ತು.

ಮಂಡ್ಯದಲ್ಲಿ ಉದಯರವಿ ಪತ್ರಿಕೆಯಲ್ಲಿ ಕೆಲಸ ಮಾಡುವುದು ಸದ್ಯಕ್ಕೆ ಅನಿವಾರ್ಯ ಎಂಬ ಪರಿಸ್ಥಿತಿ. ನಾನು ಬೆಂಗಳೂರಿನಲ್ಲಿ ಕಲ್ಲೆಯವರ ವಲಯದಿಂದ ದೂರ ಇರುವುದನ್ನು ತಿಳಿದ ಲಿಂಗಯ್ಯನವರು ಎಂದಿನಂತೆಯೇ ಗೌರವದಿಂದ ನೋಡಿಕೊಳ್ಳುತ್ತಾ ಇದ್ದರೂ ಅದೊಂದು ತಿಂಗಳು ಗರಿಗರಿ ನೋಟುಗಳಲ್ಲಿ ಸಂಬಳ ಕೊಟ್ಟರು. ಅವರ ಎದುರು ಅದನ್ನು ಎಣಿಸುತ್ತಿರಲಿಲ್ಲ. ಹೊರಗೆ ಬಂದು ಎಣಿಸಿದಾಗ ಐವತ್ತು ರೂಪಾಯಿ ಕಡಿಮೆ ಇತ್ತು. ತಕ್ಷಣಕ್ಕೆ ಅದನ್ನು ಅವರಲ್ಲಿ ಹೇಳಬೇಕೆಂದರೆ ಅವರು ಆಗಲೇ ಎದ್ದು ತಮ್ಮ ಮನೆಯೊಳಕ್ಕೆ ಹೋಗಿದ್ದರು. ಕಡಿಮೆ ಕೊಟ್ಟದ್ದು ಮರೆತು ಅಲ್ಲ ಎನಿಸಿ ನನ್ನ ಅಸಹಾಯಕತೆಗೆ ಸಂಕಟಪಟ್ಟುಕೊಂಡೆ. ಸಂಪಾದಕರಾಗಿ ಅವರು ವಾರಕ್ಕೆ ಒಮ್ಮೆ ಮಾತ್ರ ನನಗೆ ಸಿಗುತ್ತಿದ್ದರು. ಈಗ ಕೆಎಸ್‌ಆರ್‌ಟಿಸಿ ಅಧ್ಯಕ್ಷರಾಗಿದ್ದ ಕಾರಣ ಅವರ ವಾಸ್ತವ್ಯ ಬೆಂಗಳೂರಿಗೆ ಆಗಿತ್ತು. ಕೆಲವೊಮ್ಮೆ ಸಂಪಾದಕೀಯ ಬರೆದುಕೊಳ್ಳುವುದಕ್ಕೆ ಬೆಂಗಳೂರಿಗೆ ಬರುವಂತೆ ಬೋರಯ್ಯನವರ ಮೂಲಕ ತಿಳಿಸುತ್ತಿದ್ದರು. ಬೆಂಗಳೂರಿಗೆ ಬಂದು ಜಯನಗರದಲ್ಲಿದ್ದ ರಸ್ತೆ ಸಾರಿಗೆ ಸಂಸ್ಥೆಯ ಅತಿಥಿಗೃಹದಲ್ಲಿ ಅವರನ್ನು ಒಮ್ಮೆ ಭೇಟಿ ಮಾಡಿ ಸಂಪಾದಕೀಯದ ಉಕ್ತಲೇಖನ ಬರೆದುಕೊಂಡು ಹೋಗಿದ್ದೆ. ಬೆಂಗಳೂರಿಗೆ ಬಂದಾಗ ಬಾಲಸುಬ್ರಹ್ಮಣ್ಯ ಅವರ ಕೋಣೆಯಲ್ಲಿ ಆಶ್ರಯ ಪಡೆಯುತ್ತಿದ್ದೆ. ಶೇಷಾದ್ರಿಪುರ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿದ್ದ ಅವರಿಗೆ ನಮ್ಮ ಕಾಲೇಜು ದಿನಗಳಲ್ಲಿ ತೊಡಗಿಕೊಂಡಿದ್ದ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರಿಸುವ ಸಂಕಲ್ಪ. ಅದಕ್ಕೆ ನಾನೂ ಜೊತೆಯಾಗಿದ್ದೆ. ಇಬ್ಬರೂ ಒಟ್ಟಾಗಿ 'ಅಭಿವ್ಯಕ್ತಿ ವಿಚಾರ ವೇದಿಕೆ'ಯನ್ನು ಆರಂಭಿಸುವ ನಿರ್ಧಾರ ಮಾಡಿದೆವು. ಸಾಹಿತ್ಯಿಕ ಚಟುವಟಿಕೆಗಳನ್ನು ಕಾಲಕಾಲಕ್ಕೆ ನಡೆಸುವ ನಮ್ಮ ಯೋಜನೆಗೆ ಸಲಹೆ ಕೇಳಲು ಇಬ್ಬರೂ ಒಟ್ಟಾಗಿ ಪ್ರಜಾವಾಣಿಗೆ ಹೋಗಿ ವೈಕುಂಠರಾಜು ಅವರನ್ನು ನೋಡಿದೆವು. ಅಂಥ ಒಂದು ವೇದಿಕೆಯ ಅಗತ್ಯವನ್ನು ಮನಗಂಡಿದ್ದರೇನೋ, ತಕ್ಷಣವೇ ಅದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಭಿವ್ಯಕ್ತಿ ವಿಚಾರ ವೇದಿಕೆಗೆ ಸಲಹೆಗಾರರಾಗಿ ತಾವು ಇರುವುದಾಗಿ ಹೇಳಿದ್ದಲ್ಲದೆ, ಜೊತೆಗೆ ಎಂ.ಗೋಪಾಲಕೃಷ್ಣ ಅಡಿಗರು ಮತ್ತು ಕೆ.ವಿ.ಸುಬ್ಬಣ್ಣ ಅವರನ್ನು ಸೇರಿಸಿಕೊಂಡು ಲೆಟರ್ ಹೆಡ್ ಮಾಡಿಸಲು ಸೂಚಿಸಿದರು. ಅವರೇ ಆ ಇಬ್ಬರೊಂದಿಗೆ ಮಾತನಾಡಿ ಒಪ್ಪಿಗೆ ಪಡೆಯುವುದಾಗಿ ಹೇಳಿ ನಮ್ಮ ಹೊರೆಯನ್ನು ಕಡಿಮೆ ಮಾಡಿದರು.

ಅಡಿಗರು ಆಗ ನ್ಯಾಷನಲ್ ಬುಕ್ ಟ್ರಸ್ಟ್ ಅಧ್ಯಕ್ಷರಾಗಿ ಹಿಮಾಚಲಪ್ರದೇಶದ ಶಿಮ್ಲಾದಲ್ಲಿದ್ದರು. ಸುಬ್ಬಣ್ಣ ಹೆಗ್ಗೋಡಿನಲ್ಲಿದ್ದರು. ಇಬ್ಬರ ಸಮ್ಮತಿಯನ್ನೂ ವೈಕುಂಠರಾಜು ಪಡೆದ ಮೇಲೆ ಆಕರ್ಷಕವಾದ ಲೆಟರ್ ಹೆಡ್ ಮಾಡಿಸಿದೆವು.

ನನ್ನ ಈ ಎಲ್ಲ ಚಟುವಟಿಕೆಗಳನ್ನು ತಿಮ್ಮಪ್ಪನಲ್ಲಿ ಹೇಳಿಕೊಳ್ಳುತ್ತಿದ್ದೆ. 'ನಿನಗೊಂದು ಒಳ್ಳೆಯ ಕೆಲಸ ಸಿಗಬೇಕು' ಎಂದು ಸಮಾಧಾನ ಹೇಳುತ್ತಿದ್ದ. ಬ್ಯಾಂಕಿನಲ್ಲಿ ಗುಮಾಸ್ತೆಯಾಗಿದ್ದ ಅವನಿಗೆ ತುರ್ತು ಪರಿಸ್ಥಿತಿಯ ದಿನಗಳಲ್ಲಿ ಕೆಲಸದ ಒತ್ತಡವೂ ಹೆಚ್ಚಿನ ಪ್ರಮಾಣದಲ್ಲಿತ್ತು.

**'ಅಭಿವ್ಯಕ್ತಿ ವಿಚಾರ ವೇದಿಕೆ'**

ಬೆಂಗಳೂರಿನಲ್ಲಿ 'ಅಭಿವ್ಯಕ್ತಿ ವಿಚಾರ ವೇದಿಕೆ'ಯಿಂದ ತಿಂಗಳಿಗೆ ಎರಡು ಸಾಹಿತ್ಯಿಕ ಕಾರ್ಯಕ್ರಮಗಳನ್ನಾದರೂ ಮಾಡಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಅರೆಹೊಟ್ಟೆಯ ಉದ್ಯೋಗದಲ್ಲಿ ಮಂಡ್ಯದಲ್ಲಿ ನಾನು, ಅರೆಕಾಲಿಕ ಉಪನ್ಯಾಸಕರಾಗಿ ಬಾಲಸುಬ್ರಹ್ಮಣ್ಯ. ಅದೇನು ಧೈರ್ಯವೋ, ಅಂತೂ ಒಂದು ಭಾನುವಾರ ಸಂಜೆ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಕೆ.ಸದಾಶಿವ ಅವರ ಕಥೆಗಳ ಬಗ್ಗೆ ಪ್ರಬಂಧ ಮಂಡನೆ ಮತ್ತು ಚರ್ಚೆಯ ಕಾರ್ಯಕ್ರಮ. ಬೆಂಗಳೂರಿಗೆ ಬಂದಿದ್ದ ಅಡಿಗರ ಅಧ್ಯಕ್ಷತೆ. ವೈಕುಂಠರಾಜು, ಜಿ.ಎಸ್.ಸದಾಶಿವ, ಜಿ.ಎನ್. ರಂಗನಾಥರಾವ್, ಎಚ್.ಎಸ್.ವೆಂಕಟೇಶಮೂರ್ತಿ, ಎಂ.ವಿ.ಸತ್ಯನಾರಾಯಣ, ರೇಣುಕಾರಾಧ್ಯ ಮೊದಲಾದವರ ಹಾಜರಾತಿ. ಒಂದೆರಡು ಗಂಟೆಗಳ ಕಾಲ ಚರ್ಚೆ. ಅಡಿಗರ ಅಧ್ಯಕ್ಷೀಯ ಮಾತಿನಲ್ಲಿ ಅಂದಿನ ಕಲಾಪಗಳ ವಿಶ್ಲೇಷಣೆ ಇತ್ತು. ಸದಾಶಿವ ಅವರ ಕಥೆಗಳ ಬಗ್ಗೆ ವೆಂಕಟೇಶಮೂರ್ತಿ ಅವರು ಮಾತನಾಡಿದ್ದನ್ನು ಅಡಿಗರು ಪ್ರಸ್ತಾಪಿಸಿ ಇನ್ನೂ ಒಳ್ಳೆಯ ಪ್ರಯತ್ನ ಆಗಬೇಕು ಎಂದು ಹೇಳಿದ್ದರು. ಕಾರ್ಯಕ್ರಮ ಮುಗಿದ ನಂತರ ಹತ್ತಿರದಲ್ಲಿ ಯಾವುದೋ ಹೋಟಲಿಗೆ ಹೋಗಿ ಕಾಫಿ ಕುಡಿದು ನಿರ್ಗಮಿಸಿದರು. ಬಾಲಸುಬ್ರಹ್ಮಣ್ಯ ಅವರ ಕೋಣೆಗೆ ವಾಪಸಾಗಿ ಅಂದಿನ ಕಲಾಪಗಳನ್ನು ಪತ್ರಿಕಾ ವರದಿಯ ರೂಪದಲ್ಲಿ ಬರೆದು ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮತ್ತು ಕನ್ನಡ ಪ್ರಭ ಪತ್ರಿಕೆಗಳಿಗೆ ಕಳುಹಿಸುವ ವ್ಯವಸ್ಥೆಯನ್ನು ಇಬ್ಬರೂ ಮಾಡಿದೆವು. ನಾವು ಬರೆದು ಕಳಿಸಿದ ವರದಿಗಳು ಹೆಚ್ಚು ಬದಲಾವಣೆ ಇಲ್ಲದೆ ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ನೋಡಿ ನಮಗೆ ಅಂಥ ಸ್ಥಿತಿಯಲ್ಲಿಯೂ ಉತ್ಸಾಹ. ಮುಂದಿನ ಕಾರ್ಯಕ್ರಮವನ್ನು ಸಂಯೋಜಿಸುವ ಪ್ರಸ್ತಾಪ. 'ನೀನು ಬೆಂಗಳೂರಿಗೆ ಬರಬೇಕು.. ಆದರೆ ನನಗೆ ಕೆಲಸ ಕೊಡಿಸಲು ಆಗುತ್ತಿಲ್ಲ' ಎಂದು ವೈಕುಂಠರಾಜು ಎದುರು ಸಿಕ್ಕಿದಾಗ ಪೇಚಾಡುತ್ತಿದ್ದರು.

ಆ ದಿನಗಳಲ್ಲಿ ನಮ್ಮ ಸಾಹಿತ್ಯಿಕ ಉತ್ಸಾಹ ನಮ್ಮದೇ ಪ್ರಕಟಣೆ ಮಾಲೆಯನ್ನು ಆರಂಭಿಸಲು ಪ್ರೇರಕವಾಗಿತ್ತು. ಅದಕ್ಕೆ 'ಕ್ರಿಯಾ ಪ್ರಕಾಶನ' ಎಂಬ ಹೆಸರನ್ನೂ ಇರಿಸಿದೆವು. ಸಮಾಜಕ್ಕೆ ಮಹತ್ವದ ಕೊಡುಗೆ ನೀಡಿದ ವ್ಯಕ್ತಿಗಳ ಪರಿಚಯವನ್ನು ಗಣ್ಯರಿಂದ ಬರೆಸಿ ಪ್ರಕಟಿಸುವುದು ನಮ್ಮ ಉದ್ದೇಶವಾಗಿತ್ತು. ಯಾವ ಯಾವ ಕ್ಷೇತ್ರದ ಗಣ್ಯರನ್ನು ಕುರಿತ ಕೃತಿರಚನೆ ಮಾಡುವುದು ಎಂಬ ಪಟ್ಟಿಯನ್ನು ಮಾಡಿದೆವು. ಸಾರ್ವಜನಿಕ ಬದುಕಿನಲ್ಲಿ ತಮ್ಮ ನಿಸ್ಪೃಹ ನಡವಳಿಕೆಯಿಂದ ಪ್ರಭಾವ ಬೀರಿದ್ದ ಶಾಂತವೇರಿ ಗೋಪಾಲಗೌಡ, ಪತ್ರಿಕಾ ರಂಗದಲ್ಲಿ ತಮ್ಮದೇ ಛಾಪು ಮೂಡಿಸಿದ ಪ್ರಜಾವಾಣಿಯ ಅಂದಿನ ಸಂಪಾದಕ ಟಿ.ಎಸ್.ರಾಮಚಂದ್ರರಾವ್... ಇತ್ಯಾದಿ ಅನೇಕರ ಪಟ್ಟಿಯನ್ನು ಮಾಡಿ ಲೇಖಕರನ್ನೂ ಗುರುತಿಸಿದೆವು. ಈ ಯೋಜನೆಯ ಬಗ್ಗೆ ವೈಕುಂಠರಾಜು ಅವರನ್ನೇ ಸಲಹೆಗಾಗಿ ಕೇಳಿದಾಗ ಅವರಂತೂ ಖುಷಿಯಾಗಿ ನಮಗಿಂತಲೂ ಹೆಚ್ಚು ಉತ್ಸಾಹ

ತೋರಿದರು. ಟಿ.ಎಸ್.ರಾಮಚಂದ್ರರಾವ್ ಕುರಿತಂತೆ ತಾವೇ ಒಂದು ವ್ಯಕ್ತಿಚಿತ್ರ ಬರೆಯುವುದಾಗಿ ಹೇಳಿದರು. ಆ ವೇಳೆಗೆ ಟಿ.ಎಸ್.ರಾಮಚಂದ್ರರಾವ್ ಕೆಲವು ಕಾಲ ಅಸ್ವಸ್ಥರಾಗಿ ವಿಧಿವಶರಾಗಿದ್ದರು. ಅವರ ಕುರಿತಾಗಿ ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ಚರ್ಚೆಗಳು ನಡೆಯುತ್ತಾ ಇದ್ದವು. ಆ ಸಂದರ್ಭದಲ್ಲಿ ಅವರ ಕುರಿತ ಕಿರು ಹೊತ್ತಿಗೆ ಪ್ರಕಟವಾದರೆ ಮಾರುಕಟ್ಟೆಯಲ್ಲಿಯೂ ಅನುಕೂಲ ಪರಿಸ್ಥಿತಿ ಎಂಬ ಲೆಕ್ಕಾಚಾರವೂ ನಮ್ಮದಾಗಿತ್ತು. ಶಾಂತವೇರಿ ಗೋಪಾಲಗೌಡರ ಕುರಿತಾದ ವ್ಯಕ್ತಿಪರಿಚಯವನ್ನು ಬರೆದು ಕೊಡುವಂತೆ ಅವರ ನಿಕಟವರ್ತಿ ಎಂದು ನಾವು ಭಾವಿಸಿದ್ದ ಯು.ಆರ್.ಅನಂತಮೂರ್ತಿ ಅವರಿಗೆ ಕ್ರಿಯಾ ಪ್ರಕಾಶನದ ಲೆಟರ್ ಹೆಡ್‌ನಲ್ಲಿ ಪತ್ರ ಬರೆದೆವು. ಆಗ ಅವರು ಮೈಸೂರಿನಲ್ಲಿದ್ದರು. ಅವರ ಮೈಸೂರು ವಿಳಾಸಕ್ಕೆ ಕಳಿಸಿದ ನಮ್ಮ ಮನವಿಗೆ ವಾರದಲ್ಲಿಯೇ ಅನಂತಮೂರ್ತಿಯವರ ಉತ್ತರ ಬಂದಿತು. 'ನನಗೆ ಅತ್ಯಂತ ಆಪ್ತರಾಗಿದ್ದ ಗೋಪಾಲಗೌಡರ ಬಗ್ಗೆ ಬರೆಯುವ ಆಸೆ ಇದೆ. ಆದರೆ ಸದ್ಯಕ್ಕೆ ಸಮಯವಿಲ್ಲ' ಎಂದು ಬರೆದಿದ್ದರು.

ಕ್ರಿಯಾ ಪ್ರಕಾಶನಕ್ಕೆ ಮೂಲ ಬಂಡವಾಳವಾಗಿ ನಾನೂ ಸ್ವಲ್ಪ ಹಣವನ್ನು ಹಾಕಬೇಕಿತ್ತು. ಲಿಂಗಯ್ಯನವರ ಆಪ್ತರಲ್ಲಿ ಒಬ್ಬರಾಗಿದ್ದು ಮಂಡ್ಯದ ಅಸಿಟೇಟ್ ಫ್ಯಾಕ್ಟರಿಯಲ್ಲಿ ಉದ್ಯೋಗದಲ್ಲಿದ್ದ ರಾಮಪ್ರಸಾದ್ ನಾನು ಪ್ರಕಟಣೆಯೊಂದರಲ್ಲಿ ಭಾಗಿಯಾಗುತ್ತಿರುವ ಸುದ್ದಿಯನ್ನು ತಿಳಿದು ಅವರಾಗಿಯೇ ಕಚೇರಿಗೆ ಬಂದು ಒಂದು ನೂರು ರೂಪಾಯಿ ಕೊಟ್ಟರು. ಇನ್ನಿಬ್ಬರು ಗೆಳೆಯರು ಅಷ್ಟೇ ಮೊತ್ತವನ್ನು ನನ್ನ ದುಸ್ಸಾಹಸಕ್ಕೆ ಒತ್ತಾಸೆಯಾಗಿ ನೀಡಿದರು. ಅಭಿವ್ಯಕ್ತಿ ವಿಚಾರ ವೇದಿಕೆಯ ಕಾರ್ಯಕ್ರಮ ಮತ್ತು ಕ್ರಿಯಾ ಪ್ರಕಾಶನದ ಕೆಲಸಕ್ಕಾಗಿ ನಾನು ಎರಡು ವಾರಗಳಿಗೆ ಒಮ್ಮೆ ಬೆಂಗಳೂರಿಗೆ ಹೋಗಿ ಬರಬೇಕಾಯಿತು. ಶನಿವಾರ ಸಂಜೆ ಹೊರಟು ರಾತ್ರಿ ಹೊತ್ತಿಗೆ ಬೆಂಗಳೂರು ಸೇರುತ್ತಿದ್ದೆ. ಅಲ್ಲಿ ಬಾಲಸುಬ್ರಹ್ಮಣ್ಯ ಅವರ ಕೋಣೆಯಲ್ಲಿ ಉಳಿದುಕೊಳ್ಳುತ್ತಿದ್ದೆ. ಅವರು ಸೀಮೆಎಣ್ಣೆ ಸ್ಟವ್‌ನಲ್ಲಿ ಅನ್ನ ಮಾಡಿ ಹೋಟಲಿನಿಂದ ಸಾಂಬಾರ್ ತರುತ್ತಿದ್ದರು. ಅದೇ ಊಟದಲ್ಲಿ ನಾನೂ ಪಾಲುದಾರನಾಗುತ್ತಿದ್ದೆ. ನಮಗೆ ಒತ್ತಾಸೆಯಾಗಿದ್ದ ವೈಕುಂಠರಾಜು ಕೆಲವೇ ದಿನಗಳಲ್ಲಿ ಟಿ.ಎಸ್.ರಾಮಚಂದ್ರರಾವ್ ಅವರ ವ್ಯಕ್ತಿಚಿತ್ರದ ಹಸ್ತಪ್ರತಿಯನ್ನು ಸಿದ್ಧಪಡಿಸಿ ಕೊಟ್ಟರು. ನಮ್ಮ ಕ್ರಿಯಾ ಪ್ರಕಾಶನದ ಸಾಹಸವನ್ನು ಗಮನಿಸುತ್ತಿದ್ದ ಎಚ್.ಎಸ್.ವೆಂಕಟೇಶಮೂರ್ತಿ ತಮ್ಮ ಗೆಳೆಯರಾದ ಈಶ್ವರಚಂದ್ರ ಅವರ ಮೂಲಕ ಪರಿಚಯಿಸಿದ ನೇತ್ರಾ ಪ್ರಿಂಟರ್ಸ್‌ನ ಮುನಿಧರ್ಮಯ್ಯ ನಮ್ಮ ಮಹತ್ವಾಕಾಂಕ್ಷೆಯ ಮೊದಲ ಪುಸ್ತಕವನ್ನು ಮುದ್ರಿಸಲು ಒಪ್ಪಿಕೊಂಡರು. ಈಶ್ವರಚಂದ್ರ ಆ ವೇಳೆಗೆ ಒಳ್ಳೆಯ ಕತೆಗಾರರಾಗಿಯೂ ನಮ್ಮ ಪರಿಚಯದ ವಲಯದಲ್ಲಿದ್ದರು. ಅವರ 'ತೀರ' ಕಥಾ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂದಿತ್ತು. ಕಲಾವಿದ ಚಂದ್ರನಾಥ್ ಆಕರ್ಷಕ ಮುಖಚಿತ್ರವನ್ನು ಬರೆದುಕೊಟ್ಟರು. 'ಟೀಯೆಸ್ಸಾರ್' ಹೆಸರು ಹೊತ್ತ ಕ್ರಿಯಾ ಪ್ರಕಾಶನದ ಮೊದಲ ಕೃತಿ ತುಂಬ ಚೆನ್ನಾಗಿ ಮುದ್ರಣಗೊಂಡು ನಮ್ಮ ಕೈ ಸೇರಿತು. ಮಂಡ್ಯದಲ್ಲಿ ಇದ್ದ ಕಾರಣ ಅದರ ಮಾರಾಟ ವ್ಯವಸ್ಥೆಯಲ್ಲಿ ನಾನು ಪಾಲುಗೊಳ್ಳಲಾಗಲಿಲ್ಲ. ಅದರ ಪ್ರಕಟಣೆಗಾಗಿ ಸ್ವಲ್ಪ ವೆಚ್ಚ ಭರಿಸಿದ್ದ ವೈಕುಂಠರಾಜು ಆ ಮೊತ್ತಕ್ಕೆ ಸಮನಾದ ಮೌಲ್ಯದ ಪುಸ್ತಕಗಳನ್ನು ಪಡೆದರು. ಬಾಲಸುಬ್ರಹ್ಮಣ್ಯ ಅವರೇ ತಮ್ಮ ಗೆಳೆಯರ ಬಳಗ ಮತ್ತು ವಿದ್ಯಾರ್ಥಿ ಬಳಗದ ನೆರವಿನಿಂದ 'ಟೀಯೆಸ್ಸಾರ್' ಕೃತಿಯ ಮಾರಾಟ ವ್ಯವಸ್ಥೆ ನೋಡಿಕೊಂಡರು.

'ಉದಯರವಿ' ಪತ್ರಿಕೆಯನ್ನು ಪ್ರಾರಂಭಿಸಿದ್ದ ಲಿಂಗಯ್ಯನವರಿಗೆ ಅದನ್ನು ತಮ್ಮ ವರ್ಚಸ್ಸನ್ನು ಹೆಚ್ಚಿಸುವ ಮಾಧ್ಯಮವನ್ನಾಗಿ ಬೆಳೆಸುವುದಕ್ಕೆ ಹೆಚ್ಚಿನ ಸಮಯ ಕೊಡಲು ಪುರುಸೊತ್ತಿರಲಿಲ್ಲ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷರಾಗಿ ಅವರು ಸಕ್ರಿಯರಾಗಿದ್ದರು. ಅಧಿಕಾರ ವಹಿಸಿಕೊಂಡ ಕೆಲವೇ ತಿಂಗಳಲ್ಲಿ ಅವರ ಬಗ್ಗೆ

ಟಿ.ಎಸ್.ರಾಮಚಂದ್ರರಾವ್ ತಮ್ಮ ಮೆಚ್ಚಿನ ‘ಛೂಬಾಣ’ ಅಂಕಣದಲ್ಲಿ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದರು. ಅದು ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮಹತ್ವದ ಸಂಗತಿಯೇ ಆಗಿತ್ತು. ಪತ್ರಿಕೆಯಲ್ಲಿ ಮೆಚ್ಚಿಗೆಯ ಮಾತುಗಳು ಬರುವಷ್ಟು ದಕ್ಷತೆಯನ್ನು ಲಿಂಗಯ್ಯನವರು ತೋರಿಸಿದ್ದು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಗಮನಕ್ಕೂ ಬಂದು ಆ ಬಗ್ಗೆ ದೇವರಾಜ ಅರಸರಲ್ಲಿ ವಿಚಾರಿಸಿದರಂತೆ ಎಂದು ಲಿಂಗಯ್ಯನವರ ಆಪ್ತರು ನಾನು ಉದಯರವಿ ಕಚೇರಿಯಲ್ಲಿ ಇದ್ದಾಗ ಹೇಳಿಕೊಳ್ಳುತ್ತಿದ್ದರು. ವಾರಪತ್ರಿಕೆಯಲ್ಲಿ ಇದ್ದ ನನಗೆ ಮಂಡ್ಯದಲ್ಲಿ ನಡೆಯುತ್ತಿದ್ದ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಪೂರ್ವ ಸೂಚನೆಗಳೇನೂ ವಾರ್ತಾ ಇಲಾಖೆಯಿಂದ ಬರುತ್ತಿರಲಿಲ್ಲ. ನಮ್ಮ ಪತ್ರಿಕೆ ವಾರ್ತಾ ಇಲಾಖೆಯ ಪಟ್ಟಿಯಲ್ಲಿ ಇತ್ತು. ಸರ್ಕಾರದ ಸಾಧನೆಗಳ ವಿವರಗಳ ಪ್ರಕಟಣೆಗಳು ಆಗಾಗ ಬರುತ್ತಿದ್ದವು. ವರುಣಾ ನಾಲೆ ವಿರೋಧದ ಚಳವಳಿ ಮುಂದುವರಿದಿತ್ತು. ಮಂಡ್ಯದಲ್ಲಿ ಸಂಚರಿಸುತ್ತಿದ್ದ ಎಲ್ಲ ಬಸ್ಸುಗಳಲ್ಲಿ ವರುಣಾ ನಾಲೆ ವಿರೋಧಿ ಘೋಷಣೆಗಳು. ಸರ್ಕಾರದ ಜೊತೆಗೆ ರೈತ ಮುಖಂಡರು ನಡೆಸುತ್ತಿದ್ದ ಸಂಧಾನದ ಮಾತುಕತೆಗಳಿಂದ ಸದ್ಯಕ್ಕೆ ಪರಿಹಾರ ಕಾಣುವಂಥ ಸ್ಥಿತಿ ಇರಲಿಲ್ಲ. ದೇವರಾಜ ಅರಸು ಸಂಪುಟದಿಂದ ಎಸ್.ಎಂ.ಕೃಷ್ಣ ಅವರಲ್ಲದೆ, ಇನ್ನೂ ಕೆಲವರು ಹೊರಬಂದು ಅವರಿಗೆ ಬಿಕ್ಕಟ್ಟು ತಂದಿದ್ದರು. ಅದನ್ನು ಎದುರಿಸುತ್ತಲೇ ತಮ್ಮ ಕಾರ್ಯಕ್ರಮಗಳನ್ನು ಅರಸರು ಮುಂದುವರಿಸಿದ್ದರು. ಹಾವನೂರು ವರದಿ ಆಧರಿಸಿ ಅದೇ ಮೊದಲ ಸಲಕ್ಕೆ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ತಂದರು. ತುರ್ತು ಪರಿಸ್ಥಿತಿ ಜಾರಿಯ(1975) ಮೊದಲೇ ಭೂ ಸುಧಾರಣೆ ತಿದ್ದುಪಡಿ ಕಾನೂನು ತಂದು (1974ರಲ್ಲಿ) ಉಳುವವನೇ ಹೊಲದೊಡೆಯ ಬೇಡಿಕೆಯನ್ನು ಈಡೇರಿಸಿದ್ದರು. ನಮ್ಮ ಜಿಲ್ಲೆಯಲ್ಲೂ ಪ್ರತಿ ತಾಲ್ಲೂಕಿಗೆ ಭೂ ನ್ಯಾಯಮಂಡಲಿಗಳಿದ್ದು ನನ್ನ ಅನೇಕ ಬಂಧುಗಳು ತಾವು ಗೇಣಿ ಮಾಡುತ್ತಿದ್ದ ಜಮೀನಿಗೆ ಒಡೆಯರಾಗಿದ್ದರು.

**ಮಂಡ್ಯದ ಮಿತ್ರ ಬಳಗ**

ಪತ್ರಿಕೆಯಲ್ಲಿದ್ದರೂ, ಲಿಂಗಯ್ಯನವರು ದೇವರಾಜ ಅರಸರ ನಿಷ್ಠಾವಂತರಾಗಿದ್ದರೂ, ಆ ದಿನಗಳಲ್ಲಿ ಅರಸು ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುತ್ತಿರಲಿಲ್ಲ. ನಾನು ಸೆಂಟ್ರಲ್ ಕಾಲೇಜು ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಎರಡು ವರ್ಷ ದೇವರಾಜ ಅರಸರು ಪ್ರಾರಂಭಿಸಿದ್ದ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಫಲಾನುಭವಿಯಾಗಿದ್ದೆ. ಆದರೂ ಆಗ ಪ್ರಜಾವಾಣಿ ಮತ್ತು ಕನ್ನಡ ಪ್ರಭ ಪತ್ರಿಕೆಗಳಲ್ಲಿ ಬರುತ್ತಿದ್ದ ವರದಿಗಳು ಅರಸರನ್ನು ಕೆಟ್ಟದಾಗಿ ಭಾವಿಸುವಂತೆ ಮಾಡುತ್ತಿದ್ದವು. ವಿದ್ಯಾವಂತ ಯುವಕರಿಗಾಗಿ ಅರಸರು ತಮ್ಮ ಅನೇಕ ಸಾರ್ವಜನಿಕ ಭಾಷಣಗಳಲ್ಲಿ ಏನೇನೋ ಕಾರ್ಯಕ್ರಮಗಳ ಮಾತು ಹೇಳುತ್ತಿದ್ದರೂ ಸಬ್‌ಇನ್ಸ್‌ಪೆಕ್ಟರ್ ಹುದ್ದೆ ಪಡೆಯುವುದಕ್ಕೆ ಹಣ ಕೊಡಬೇಕಂತೆ, ವರ್ಗಾವಣೆಗೆ ಹಣ ಕೊಡಬೇಕಂತೆ ಎಂಬಂಥ ವದಂತಿಗಳು ನಮ್ಮ ವಾರಗೆಯವರನ್ನು ನಂಬಿಸಿದ್ದವು. ಕನ್ನಡದಲ್ಲಿ ಎಂ.ಎ.ಪದವಿ ಪಡೆದಿದ್ದರೂ ನನಗೆ ಯಾವ ಕೆಲಸವೂ ಸಿಕ್ಕಿರಲಿಲ್ಲ ಎಂಬುದು ನನ್ನ ಒಳಗುದಿಯಾಗಿ ವ್ಯವಸ್ಥೆಯ ವಿರುದ್ಧದ ಬಂಡಾಯ ಮನಃಸ್ಥಿತಿ ಹರಳುಗಟ್ಟುತ್ತಿತ್ತು. ಆಗಿದ್ದ ಪರಿಸ್ಥಿತಿಯಲ್ಲಿ ಲಿಂಗಯ್ಯನವರ ಪತ್ರಿಕೆಯಲ್ಲಿ ದಿನಗಳನ್ನು ತಳ್ಳುವುದರ ವಿನಾ ಹೆಚ್ಚಿನ ಭರವಸೆಯ ಸುಳಿವು ಗೋಚರಿಸುತ್ತಿರಲಿಲ್ಲ. ಬೆಂಗಳೂರಿಗೆ ಭೇಟಿ ನೀಡಿದಾಗಲೆಲ್ಲ ಎಂ.ಬಿ.ಸಿಂಗ್, ವೈಕುಂಠರಾಜು ಅವರನ್ನು ನೋಡಿ ಒಳ್ಳೆಯ ಕೆಲಸದ ಬೇಟೆಯಲ್ಲಿರುವುದನ್ನು ನೆನಪು ಮಾಡುತ್ತಿದ್ದೆ. ಸಿಂಗ್, ಪುಣ್ಯಾತ್ಮ, ಒಮ್ಮೆಯೂ ನನ್ನ ಫೋನ್ ಕರೆಗಾಗಲೀ, ಅನವಶ್ಯಕವಾಗಿದ್ದ ಭೇಟಿಗಾಗಲೀ ಅಸಮಾಧಾನಪಟ್ಟುಕೊಂಡಿರಲಿಲ್ಲ. ಏನೋ ಒಂದು

ಭರವಸೆಯ ಮಾತು ಹೇಳುತ್ತಿದ್ದರು. ಆಗ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಿಸಿಕೊಳ್ಳುವ ಸುದ್ದಿ ಹರಿದಾಡಿತ್ತು. ಲಿಂಗಯ್ಯನವರ ಮನುಷ್ಯನಾಗಿ ಕಚೇರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಬೋರಯ್ಯನವರು ನನಗೆ ಅರ್ಜಿ ಹಾಕಲು ಹೇಳಿದ್ದರು. 'ಸಾಹೇಬರು ಇಲ್ಲೇ ಎಲ್ಲಾದರೂ ಶಾಲೆಗೆ ಹಾಕಿಸಿಕೊಡುತ್ತಾರೆ. ಒಳ್ಳೆಯ ಸಂಬಳ ಬರುತ್ತದೆ, ಪತ್ರಿಕೆಯ ಕೆಲಸಕ್ಕೂ ಅನುಕೂಲವಾಗುತ್ತದೆ' ಎಂದು ನನ್ನನ್ನು ಮಂಡ್ಯದಲ್ಲಿಯೇ ಉಳಿಸಿಕೊಳ್ಳುವ ಮಾತು ಹೇಳುತ್ತಿದ್ದರು. ಎಂ.ಎ ಮಾಡಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳುವ ಅನಿವಾರ್ಯತೆಯನ್ನು ಮಾನಸಿಕವಾಗಿ ಒಪ್ಪಿಕೊಳ್ಳಲು ಸಂಕಟವಾಗುತ್ತಿತ್ತು.

ಪತ್ರಿಕೆಯ ಎಂಟು ಪುಟಗಳನ್ನು ತುಂಬಿಸುವುದು ಕಷ್ಟ ಎನಿಸುತ್ತಿರಲಿಲ್ಲ. ಮಂಚಯ್ಯ, ಬೋರೇಗೌಡ, ಅಬ್ರಹಾಂ ಎಂಬ ಕೆಲಸಗಾರರು ಇದ್ದರು. ಗುರುಲಿಂಗಯ್ಯ ಎಂಬವರು ಪುಟಗಳನ್ನು ಕಟ್ಟುವುದರಲ್ಲಿಯೂ ಮುದ್ರಿಸುವುದರಲ್ಲಿಯೂ ತಜ್ಞರಿದ್ದರು. ಅವರನ್ನು ನನಗೆ ಕೊಡುತ್ತಾ ಇದ್ದುದಕ್ಕಿಂತಲೂ ಹೆಚ್ಚಿನ ಸಂಬಳಕ್ಕೆ ಗೊತ್ತು ಮಾಡಿದ್ದರಿಂದ ಮುದ್ರಣದ ಇನ್ನಿತರ ಕೆಲಸಗಳಿಗೂ ಅವರನ್ನು ಬಳಸಿಕೊಳ್ಳಲಾಗುತ್ತಿತ್ತು. ಬಿಲ್ಲುಗಳು, ಲಗ್ನಪತ್ರಿಕೆ, ಕರ ಪತ್ರ ಮತ್ತಿತರ ಮುದ್ರಣ ಕಾರ್ಯಗಳನ್ನು ಪ್ರೆಸ್‌ನಲ್ಲಿ ತೆಗೆದುಕೊಂಡು ಮುದ್ರಣಾಲಯವನ್ನು ಸದಾ ಕೆಲಸದಲ್ಲಿ ತೊಡಗಿಸಲು ಬೋರಯ್ಯನವರು ಇಚ್ಛಿಸಿದ್ದಂತೆ ತೋರುತ್ತಿತ್ತು. ಮುದ್ರಣಾಲಯದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದರೆ ನಾನು ಅದರಲ್ಲಿಯೇ ಯಾವುದಾದರೂ ಒಂದು ಕೆಲಸವನ್ನು ಕಲಿತು ಮುದ್ರಣಾಲಯದ ನೌಕರನಾಗಿ ಉಳಿದುಬಿಡುವ ಸಂಭಾವ್ಯತೆಯೂ ಭಯ ಮೂಡಿಸುತ್ತಿತ್ತು. ಪತ್ರಕರ್ತನಾಗಿ ನನಗೆ ವರುಣಾ ನಾಲೆ ವಿರುದ್ಧದ ಮಂಡ್ಯ ರೈತರ ಹೋರಾಟದ ಬಗ್ಗೆ ಸಮಾಧಾನ ಇರಲಿಲ್ಲ. ಅದನ್ನು ಬಾಯಿ ಬಿಟ್ಟು ಹೇಳಿಕೊಳ್ಳುವಂತೆಯೂ ಇರಲಿಲ್ಲ. ಕಾವೇರಿಯ ನೀರನ್ನು ಪಕ್ಕದ ಜಿಲ್ಲೆಯ ಜನ ಕುಡಿಯುವ ಸಲುವಾಗಿ ಕೇಳಿದರೆ ಅದನ್ನು ಮಂಡ್ಯದ ರೈತರೇಕೆ ವಿರೋಧಿಸಬೇಕು ಎಂಬ ನನ್ನ ಪ್ರಶ್ನೆಯನ್ನು ಯಾರಲ್ಲಿಯೂ ಕೇಳುವಂತಿರಲಿಲ್ಲ. 'ಪೌರವಾಣಿ' ಎಂಬ ಪತ್ರಿಕೆಯಲ್ಲಿ ಒಮ್ಮೆ ಸ್ಥಳೀಯ ಮುಖಂಡರ ಬಗ್ಗೆ ಟೀಕೆಯೊಂದು ಪ್ರಕಟವಾಗಿದ್ದಕ್ಕೆ ಮುಖಂಡರ ಕಡೆಯವರು ಪತ್ರಿಕೆಯ ಸಂಪಾದಕರನ್ನು ಎತ್ತಿಕೊಂಡು ಹೋಗಿ ಯಾವುದೋ ನಾಲೆಯಲ್ಲಿ ಎರಡು ಮೂರು ಸಲ ಮುಳುಗಿಸಿ ಎತ್ತಿದ್ದರಂತೆ ಎಂಬೊಂದು ವದಂತಿಯನ್ನು ನನ್ನೊಂದಿಗೆ ಸಂಜೆ ಹೊತ್ತಿಗೆ ಸಿಗುತ್ತಿದ್ದ ತೈಲೂರು ವೆಂಕಟಕೃಷ್ಣ ಮಾತಿನ ಮಧ್ಯೆ ಹೇಳಿದ್ದರು. ಮೇಲುನೋಟಕ್ಕೆ ಸಜ್ಜನರಂತೆ ವರ್ತಿಸುತ್ತಿದ್ದರೂ ಸಂದರ್ಭ ಬಂದಾಗ ದೈಹಿಕ ಹಲ್ಲೆಗೂ ಮುಂದಾಗಬಹುದೆಂಬ ಪರಿಸ್ಥಿತಿಯೇ ನನ್ನ ವೈಯಕ್ತಿಕ ಅನಿಸಿಕೆಗಳನ್ನು ನಿರ್ಬಂಧಿಸುತ್ತಿತ್ತು. ಪತ್ರಿಕೆಗಾಗಿ ನಾನು ಇಡೀ ದಿನ ಕೆಲಸ ಮಾಡುವ ಅವಶ್ಯಕತೆ ಇರುತ್ತಿರಲಿಲ್ಲ. ಆದರೆ ಕಚೇರಿಯಲ್ಲಿ ಇರುವುದು ಅನಿವಾರ್ಯ ಎನಿಸಿತ್ತು. ಗೆಳೆಯರು ಹುಡುಕಿಕೊಂಡು ಬಂದಾಗ ಅವರೊಟ್ಟಿಗೆ ಅದೇ ಕಟ್ಟಡದಲ್ಲಿದ್ದ ಹೋಟೆಲಿಗೆ ಕರೆದೊಯ್ದು ಉಪಚರಿಸುವುದು ಆ ದಿನಗಳಲ್ಲಿ ನನಗೆ ಬಿಡುಗಡೆಯ ಕ್ಷಣದಂತೆ ನಿರಾಳವೆನಿಸುತ್ತಿತ್ತು. ವೆಂಕಟಕೃಷ್ಣರ ಜೊತೆಗೆ 'ನುಡಿಭಾರತಿ' ಎಂಬ ವಾರಪತ್ರಿಕೆ ಹೊರಡಿಸುತ್ತಿದ್ದ ಬಸವೇಗೌಡರು, ಕಥೆ ಬರೆಯುವ ಆಸಕ್ತಿ ಪ್ರಕಟಿಸುತ್ತಿದ್ದ ಶಂಭೂನಹಳ್ಳಿಯ ಕೃಷ್ಣೇಗೌಡರು, ಮಂಡ್ಯದಲ್ಲಿ ಯಾವುದೋ ಹೋಟಲಿನಲ್ಲಿ ಕೆಲಸ ಮಾಡುತ್ತಿದ್ದ, ಆದರೆ ಬರವಣಿಗೆಯಲ್ಲಿ ಆಸಕ್ತಿ ತಾಳಿದ್ದ ಯ.ಕೃ.ನರಸಿಂಹ ಎಂಬುವರೂ ನನ್ನೊಂದಿಗೆ ಮಾತನಾಡಲು ಆಗಾಗ ಬರುತ್ತಿದ್ದರು. ಅವರೊಂದಿಗೆ ಪ್ರಚಲಿತ ಸಾಹಿತ್ಯದ ಬಗ್ಗೆ, ರಾಜಕೀಯ ಬೆಳವಣಿಗೆಗಳ ಬಗ್ಗೆ ಮಾತನಾಡುವುದು ಇಷ್ಟದ ಸಂಗತಿಯಾಗಿತ್ತು.

ವರುಣಾ ನಾಲೆಯ ವಿರುದ್ಧ ಹೋರಾಟ ನಡೆಯುತ್ತಿದ್ದಾಗ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ್ದ ಎಸ್.ಎಂ.ಕೃಷ್ಣ ಅವರೊಂದಿಗೆ ಕೆ.ಎಚ್.ಪಾಟೀಲರು, ಹುಚ್ಚಮಾಸ್ತಿಗೌಡರು ಸೇರಿದಂತೆ ಹತ್ತೋ ಹನ್ನೊಂದು ಮಂದಿ ಹಿರಿಯರು ಸಂಪುಟ ತ್ಯಜಿಸಿ ದೇವರಾಜ ಅರಸರ ಸರ್ಕಾರಕ್ಕೆ ಬಿಕ್ಕಟ್ಟನ್ನು ಸೃಷ್ಟಿಸಿದ್ದು ನಮ್ಮ ಮಾತುಕತೆಯಲ್ಲಿ ಪ್ರಸ್ತಾಪವಾಗುತ್ತಿತ್ತು. 'ಹಿಡಾ ಮಾಡ್ದಂಗೆ ಆಗುತ್ತೆ ನೋಡಿ ಈಗ..' ಎಂದು ಅರಸರ ಸ್ಥಿತಿಯನ್ನು ಬಸವೇಗೌಡರು ಬಣ್ಣಿಸುತ್ತಿದ್ದರು. (ಹಿಡಾ ಎಂಬುದು ಇಡಾ ಎಂಬುದರ ಪ್ರಾದೇಶಿಕ ಉಚ್ಚಾರದ ರೂಪ ಎಂದು ಮಂಡ್ಯದಲ್ಲಿ ಕೆಲವು ತಿಂಗಳಿಂದ ಇದ್ದ ನನಗೆ ಅನುಭವಕ್ಕೆ ಬಂದಿತ್ತು). ಆಗ ನಮಗೆ ಚರ್ಚೆಗೆ ಸಿಗುತ್ತಾ ಇದ್ದುದು ಪ್ರಜಾವಾಣಿಯಲ್ಲಿ ಪ್ರಕಟವಾಗುತ್ತಿದ್ದ ರಾಜಕೀಯ ಸುದ್ದಿಗಳು. ಸಿ.ವಿ.ರಾಜಗೋಪಾಲ ಎಂಬುವರ ಹೆಸರಿನಲ್ಲಿ ರಾಜ್ಯದ ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆ ಇರುತ್ತಿತ್ತು. ದೆಹಲಿಯಿಂದ ಬರುತ್ತಿದ್ದ ರಾಜಕೀಯ ಸುದ್ದಿಗಳು ನಾರಾಯಣಸ್ವಾಮಿ ಎಂಬುವರ ಹೆಸರಿನಲ್ಲಿ ಪ್ರಕಟವಾಗುತ್ತಿದ್ದವು. ಆ ದಿನಗಳಲ್ಲಿ ಪ್ರಜಾವಾಣಿಯ ಗುರುವಾರ ಮತ್ತು ಭಾನುವಾರದ ಪತ್ರಿಕೆಗಳಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ದೊಡ್ಡ ಕಾರ್ಟೂನು ಪ್ರಕಟವಾಗುತ್ತಿತ್ತು. ಮೂರ್ತಿ ಎಂಬ ಹೆಸರು ಕಾರ್ಟೂನಿನ ಕೆಳಗೆ ಇಂಗ್ಲಿಷಿನಲ್ಲಿ ತುಂಬಾ ಕಲಾತ್ಮಕವಾಗಿರುತ್ತಿತ್ತು (ಮುಂದೆ ಬಿ.ವಿ.ರಾಮಮೂರ್ತಿ ಎಂಬ ಪೂರ್ಣ ಹೆಸರನ್ನು ಬರೆಯುತ್ತಿದ್ದರು). ರಾಜಕೀಯ ಬೆಳವಣಿಗೆಯ ಅರ್ಥಪೂರ್ಣ ವ್ಯಾಖ್ಯಾನದಂತೆ ಒಂದು ದೊಡ್ಡ ಕಾರ್ಟೂನ್ ಇರುತ್ತಿತ್ತು. ಹಿರಿಯ ಸಚಿವರ ರಾಜೀನಾಮೆಯಿಂದ ಉಂಟಾದ ಬಿಕ್ಕಟ್ಟನ್ನು ದೇವರಾಜ ಅರಸರು ಹೇಗೆ ನಿರ್ವಹಿಸಿದರು ಎಂಬ ವಿವರಗಳು ನಮಗೆ ಗೊತ್ತಾಗುವಂತಿರಲಿಲ್ಲ. ಆದರೆ ಅವರ ಸರ್ಕಾರಕ್ಕೆ ತೊಂದರೆ ಆಗಲಿಲ್ಲ. ಅವರನ್ನು ಅಧಿಕಾರದಿಂದ ಇಳಿಸುವುದಕ್ಕೆ ಅವರದೇ ಪಕ್ಷದ ಹಿರಿಯ ನಾಯಕರು ನಡೆಸುತ್ತಿದ್ದ ಪ್ರಯತ್ನಗಳಿಗೆ ಮೇಲಿನಿಂದ, ಅಂದರೆ ಹೈಕಮಾಂಡಿನಿಂದ ಬೆಂಬಲ ಸಿಗುತ್ತಿರಲಿಲ್ಲವೆಂದು ತೋರುತ್ತದೆ. ಅರಸರು ಸಂಪುಟಕ್ಕೆ ಹೊಸಬರನ್ನು ನೇಮಕ ಮಾಡಿಕೊಂಡು ಸರ್ಕಾರವನ್ನು ಸ್ಥಿರಗೊಳಿಸಿದ್ದರು. (ಅವರಲ್ಲಿ ಆಗ ಪ್ರತಿಪಕ್ಷದ ಉಪನಾಯಕರಾಗಿದ್ದ ಎಚ್.ಟಿ.ಕೃಷ್ಣಪ್ಪ ಅವರು ಒಬ್ಬರಾಗಿದ್ದರು. ಆಡಳಿತ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಕೃಷ್ಣಪ್ಪನವರಿಗೆ ಅರಸರು ರೇಷ್ಮೆ ಖಾತೆ ನೀಡಿದ್ದರು).

ಆಗ ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿಯನ್ನು 1977ರ ಜನವರಿ 18 ರಂದು ಪ್ರಧಾನಿ ಇಂದಿರಾ ಗಾಂಧಿಯವರು ಸಡಿಲಗೊಳಿಸಿ ಲೋಕಸಭೆಗೆ ಚುನಾವಣೆ ಘೋಷಿಸಿದರು. ಅದುವರೆಗೆ ಉಸಿರು ಬಿಗಿ ಹಿಡಿದು ಇಟ್ಟುಕೊಂಡವರಂತಿದ್ದ ವಿರೋಧ ಪಕ್ಷಗಳ ಮುಖಂಡರು, ರಾಜಕೀಯ ಕಾರ್ಯಕರ್ತರು ನಿರಾಳವಾದರು. ಹದಿನೆಂಟು ತಿಂಗಳ ಕಾಲ ಜೈಲು ಪಾಲಾಗಿದ್ದ ವಿರೋಧ ಪಕ್ಷಗಳ ಮುಖಂಡರೆಲ್ಲ ಬಿಡುಗಡೆಯಾಗಿ ಲೋಕಸಭೆ ಚುನಾವಣೆಗೆ ಸಿದ್ಧತೆ ಪ್ರಾರಂಭಿಸಿದರು. ರಾಷ್ಟ್ರಮಟ್ಟದ ನಾಯಕರು, ಇಂದಿರಾ ಗಾಂಧಿ ಅವರ ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಿದ್ದ ವಿವಿಧ ವಿರೋಧ ಪಕ್ಷಗಳೆಲ್ಲ ಜನತಾ ಪಕ್ಷದ ಹೆಸರಿನಲ್ಲಿ ಒಗ್ಗಟ್ಟಾಗಿ ಚುನಾವಣೆ ಎದುರಿಸಲು ಸಿದ್ಧರಾದರು. ತುರ್ತು ಪರಿಸ್ಥಿತಿಯನ್ನು ಸಡಿಲಗೊಳಿಸುತ್ತಲೇ ಅದುವರೆಗೆ ಇಂದಿರಾ ಗಾಂಧಿಯವರ ಸಂಪುಟದಲ್ಲಿ ಕೃಷಿ, ರಕ್ಷಣಾ ಖಾತೆಯಂತಹ ಪ್ರಮುಖ ಖಾತೆಗಳನ್ನು ನಿರ್ವಹಿಸುತ್ತಿದ್ದ ಜಗಜೀವನರಾಮ್, ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದು ಹೆಸರು ಮಾಡಿದ್ದ ಎಚ್.ಎನ್.ಬಹುಗುಣ ಇಬ್ಬರೂ ಇಂದಿರಾ ಪಾಳೆಯದಿಂದ ಹೊರಬಂದು ಕಾಂಗ್ರೆಸ್ ಫಾರ್ ಡೆಮಾಕ್ರಸಿ (ಸಿಎಫ್‌ಡಿ) ಎಂಬ ಪಕ್ಷವನ್ನು ರಚಿಸಿ ಜನತಾ ಪಕ್ಷದ ಜೊತೆ ಚುನಾವಣೆಗೆ ಹೋಗುವುದಾಗಿ ಪ್ರಕಟಿಸಿದರು. ಸ್ಥಾನಬದ್ಧತೆಯಲ್ಲಿದ್ದ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರನ್ನು ತುರ್ತು ಪರಿಸ್ಥಿತಿ ಜಾರಿಯಲ್ಲಿ

ಇದ್ದಾಗಲೇ ಪೆರೋಲ್ ಮೇಲೆ ಬಿಡುಗಡೆ ಮಾಡಿದ್ದರಿಂದ ಅವರು ಕಾಂಗ್ರೆಸ್ ವಿರೋಧಿ ಪಕ್ಷಗಳನ್ನೆಲ್ಲ ಜನತಾ ಪಕ್ಷದ ಅಡಿಯಲ್ಲಿ ಸೇರಿಸಲು ಶ್ರಮಿಸುತ್ತಿದ್ದರು. ಈ ಬೆಳವಣಿಗೆಗಳೆಲ್ಲ ಪತ್ರಕರ್ತನಾಗಿದ್ದ ನನ್ನಲ್ಲಿ ಹೆಚ್ಚಿನ ರಾಜಕೀಯ ಆಸಕ್ತಿಯನ್ನು ಮೂಡಿಸಿದ್ದವು. ನಾವು ಗೆಳೆಯರೆಲ್ಲ ಒಟ್ಟಿಗೆ ಸೇರಿದಾಗ ಜನಸಂಘ, ಸಮಾಜವಾದಿ ಪಕ್ಷ, ಲೋಕದಳ, ಅಕಾಲಿ ದಳ ಇತ್ಯಾದಿ ಎಲ್ಲ ವಿರೋಧ ಪಕ್ಷಗಳ ಮುಖಂಡರನ್ನು ಅಭಿಮಾನದಿಂದ ನೋಡುತ್ತಾ ಹೊಸದೊಂದು ರಾಜಕೀಯ ಬದಲಾವಣೆಯ ನಿರೀಕ್ಷೆ ಇಟ್ಟುಕೊಂಡಿದ್ದೆವು.

ರಾಜ್ಯದಲ್ಲಿಯೂ ಚುನಾವಣೆಯ ಸಿದ್ಧತೆ ಬಿರುಸಾಗಿ ನಡೆಯುತ್ತಿತ್ತು. ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆಯುತ್ತಿದ್ದ ಚುನಾವಣೆ ಪ್ರಚಾರ ಸಭೆಗಳಿಗೆ ವರುಣಾ ನಾಲೆ ವಿರೋಧಿ ಸಭೆಗಳಿಗೆ ಸೇರುತ್ತಾ ಇದ್ದುದಕ್ಕಿಂತಲೂ ಹೆಚ್ಚಿನ ಜನ ಸೇರುತ್ತಿದ್ದರು. ಅದರ ಒಂದು ಸಭೆಗೆ ಬಂದಿದ್ದ ಸಿ.ಎಂ. ಇಬ್ರಾಹಿಂ ಎಂಬ ಯುವಕ ಅಸ್ಖಲಿತವಾಗಿ ಮಾತನಾಡಿ ಜನರನ್ನು ರಂಜಿಸಿದ್ದ. ಭಾಷಣದ ಮಧ್ಯೆ ಆತ ಹೇಳುತ್ತಿದ್ದ ಬಸವಣ್ಣನ ವಚನಗಳು ಜನರಿಗೆ ಇಷ್ಟವಾಗಿದ್ದವು. ಸಾಬರ ಹುಡುಗನ ಬಾಯಲ್ಲಿ ಸಂಸ್ಕೃತ, ಕನ್ನಡ ವಚನಗಳು ಬರುತ್ತಾ ಇದ್ದುದು ಆಕರ್ಷಕವಾಗಿತ್ತು. ಆತನ ಭಾಷಣವನ್ನು ಉತ್ಸಾಹದಿಂದ ನಾನು ಉದಯರವಿಯಲ್ಲಿ ವರದಿ ಮಾಡಿದ್ದೆ. ನಮ್ಮದು ಕಾಂಗ್ರೆಸ್ ಮುಖಂಡ ಎಂ.ಲಿಂಗಯ್ಯನವರ ಪತ್ರಿಕೆಯಾಗಿದ್ದರೂ ಕಾಂಗ್ರೆಸ್ ವಿರೋಧಿ ಚುನಾವಣಾ ಪ್ರಚಾರದ ವರದಿಯನ್ನು ಮಾಡಿದ್ದರ ಬಗ್ಗೆ ನನಗೆ ಅಳುಕು ಇತ್ತು. ಆದರೆ ನಗರದಲ್ಲಿ ನಡೆದ ವಿದ್ಯಮಾನ ಎಂದು ಅದನ್ನು ಲಿಂಗಯ್ಯನವರ ಮನುಷ್ಯ ಬೋರಯ್ಯನವರ ಎದುರು ಸಮರ್ಥನೆ ಮಾಡಿಕೊಂಡಿದ್ದೆ. ಆತ ಕೂಡ ಆಕ್ಷೇಪಿಸಿರಲಿಲ್ಲ.

ಆ ಚುನಾವಣೆಯಲ್ಲಿ ಲೋಕಸಭೆಗೆ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಲು ನನ್ನ ಸಂಪಾದಕರಾಗಿದ್ದ ಎಂ.ಲಿಂಗಯ್ಯನವರೂ ಆಸಕ್ತರಾಗಿದ್ದರು. ಟಿಕೇಟ್ ಪಡೆಯಲು ಅವರು ತೀವ್ರ ಪ್ರಯತ್ನ ನಡೆಸುತ್ತಿದ್ದಾರೆ ಎಂದು ನಮ್ಮ ಕಚೇರಿಗೆ ಬಂದು ಹರಟೆ ಹೊಡೆಯುತ್ತಿದ್ದ ಅವರ ಕೆಲವು ಅಭಿಮಾನಿಗಳು ಹೇಳುತ್ತಿದ್ದರು. ಆದರೆ, ಚಿಕ್ಕಲಿಂಗಯ್ಯ ಎಂಬುವರಿಗೆ ಟಿಕೇಟ್ ಸಿಕ್ಕಿತು. ತುಂಬ ಬಿರುಸಾಗಿ ವಿರೋಧ ಪಕ್ಷಗಳ ಪ್ರಚಾರ ನಡೆದರೂ ಆ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರ ಕಾಂಗ್ರೆಸ್ಸಿನಿಂದ ಇಪ್ಪತ್ತಾರು ಜನ ಆಯ್ಕೆಯಾದರು. ಎರಡು ಸ್ಥಾನಗಳು ಜನತಾ ಪಕ್ಷದ ಪಾಲಾಯಿತು. ರಾಜ್ಯದಲ್ಲಿ ಇಂದಿರಾ ಗಾಂಧಿ ಪರವಾಗಿ ಅಷ್ಟೊಂದು ಜನ ಬೆಂಬಲ ವ್ಯಕ್ತವಾಗಿದ್ದರೂ ಕೇಂದ್ರದಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿತ್ತು. ಸ್ವತಃ ಇಂದಿರಾ ಗಾಂಧಿಯವರು ಸೋತಿದ್ದರು. ಅವರು ಬೆಳೆಸುತ್ತಿದ್ದ ಸಂಜಯ್ ಗಾಂಧಿ ಇನ್ನೂ ಹೆಚ್ಚಿನ ಮತಗಳ ಅಂತರದಿಂದ ಸೋತಿದ್ದರು. ಇಲ್ಲಿ ಜನತಾ ಪಕ್ಷವಾಗಿ ಅಸ್ತಿತ್ವಕ್ಕೆ ಬಂದಿದ್ದ ಹಿಂದಿನ ಸಂಸ್ಥಾ ಕಾಂಗ್ರೆಸ್, ಸಮಾಜವಾದಿ ಪಕ್ಷ, ಜನಸಂಘ ಮತ್ತಿತರ ಪಕ್ಷಗಳ ಮುಖಂಡರು ಕೇಂದ್ರದಲ್ಲಿ ಅಧಿಕಾರ ಪಡೆದ ಹುಮ್ಮಸ್ಸಿನಲ್ಲಿ ಉತ್ಸಾಹದಿಂದ ಇದ್ದರು. ತುರ್ತು ಪರಿಸ್ಥಿತಿ ರದ್ದಾಗಿದ್ದ ಕಾರಣ ಪತ್ರಿಕೆಗಳಲ್ಲಿಯೂ ಹೊಸ ಹುರುಪು ಕಾಣುತ್ತಿತ್ತು. ಚುನಾವಣೆಯಲ್ಲಿ ಇಂದಿರಾ ಗಾಂಧಿ ಮತ್ತು ಸಂಜಯ್ ಗಾಂಧಿ ಅವರು ಪರಾಭವಗೊಂಡಿದ್ದನ್ನು ಪ್ರಜಾವಾಣಿಯ ತಮ್ಮ 'ಛೂ ಬಾಣ' ಅಂಕಣದಲ್ಲಿ ಟಿ.ಎಸ್.ರಾಮಚಂದ್ರರಾವ್ ಸಂಭ್ರಮದಿಂದ ಬಣ್ಣಿಸಿದ್ದರು. ಪ್ರಾಯಶಃ ಅದೇ ಅವರ ಕೊನೆಯ ಅಂಕಣ ಇರಬೇಕು. 1977ರ ಏಪ್ರಿಲ್ ತಿಂಗಳಲ್ಲಿ ಟಿಯೆಸ್ಸಾರ್ ನಿಧನದ ಸುದ್ದಿ ಪ್ರಜಾವಾಣಿಯ ಮುಖಪುಟದಲ್ಲಿ ಅವರ ಚಿತ್ರದ ಸಹಿತ ಪ್ರಕಟವಾಯಿತು. ಪ್ರಜಾವಾಣಿಯಲ್ಲಿ ಪತ್ರಕರ್ತನಾಗಲು ಪ್ರಯತ್ನ ನಡೆಸುತ್ತಿದ್ದ ನನಗೆ ಅದರಲ್ಲಿನ ವಿದ್ಯಮಾನಗಳು ಆಸಕ್ತಿಯ ಸಂಗತಿಯಾಗಿದ್ದವು.

1977ರ ಮಾರ್ಚ್ 23 ರಂದು ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರ ಮೊರಾರ್ಜಿ ದೇಸಾಯಿ ಅವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ದೇವರಾಜ ಅರಸರ ಸರ್ಕಾರದ ವಿರುದ್ಧ ಜನತಾ ಪಕ್ಷದ ಮುಖಂಡರ ವಿರೋಧ ತೀವ್ರವಾಯಿತು. ಅರಸರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ವಿರೋಧ ಪಕ್ಷದ ನಾಯಕರಾಗಿದ್ದ ಎಚ್.ಡಿ.ದೇವೇಗೌಡರು ವಿಧಾನಸಭೆಯಲ್ಲಿ ಮಾಡುತ್ತಿದ್ದರು. ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿ ಪ್ರಧಾನಿ ಆಗುತ್ತಲೇ ಇಲ್ಲಿ ಎಸ್.ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ಎ.ಕೆ.ಸುಬ್ಬಯ್ಯ ಮೊದಲಾದವರೆಲ್ಲ ವಿರೋಧವನ್ನು ತೀವ್ರಗೊಳಿಸಿದರು. ವಿರೋಧ ಪಕ್ಷಗಳ ನಾಯಕರ ಆರೋಪಗಳು ತೀವ್ರಗೊಂಡಾಗ ದೇವರಾಜ ಅರಸರೇ ತಮ್ಮ ಸರ್ಕಾರದ ವಿರುದ್ಧ ಕೇಳಿಬರುತ್ತಿದ್ದ ಆರೋಪಗಳನ್ನು ತನಿಖೆ ಮಾಡುವುದಕ್ಕೆ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಇಕ್ಬಾಲ್ ಹುಸೇನ್ ನೇತೃತ್ವದ ಆಯೋಗವನ್ನು ನೇಮಿಸಿದರು. ಅದರಿಂದ ಸಮಾಧಾನಗೊಳ್ಳದ ಜನತಾ ಪಕ್ಷದ ಮುಖಂಡರು ತಮ್ಮದೇ ಕೇಂದ್ರ ಸರ್ಕಾರದ ಮೇಲೆ ಸತತ ಒತ್ತಡ ತಂದು ಗ್ರೋವರ್ ಆಯೋಗ ನೇಮಕ ಮಾಡಿಸುವುದರಲ್ಲಿ ಯಶಸ್ವಿಯಾದರು. ಗ್ರೋವರ್ ಆಯೋಗದ ವಿಚಾರಣೆ ಬಹಿರಂಗವಾಗಿ ನಡೆಯುತ್ತಿತ್ತು. ಅದರ ವಿವರಗಳು ಮರುದಿನದ ಪತ್ರಿಕೆಗಳಲ್ಲಿ ವಿವರವಾಗಿ ಬರುತ್ತಿದ್ದವು. 1972ರಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ನಡೆದಿತ್ತು. ಐದು ವರ್ಷದ ಅವಧಿ 1977ಕ್ಕೆ ಮುಗಿದಿದ್ದರೂ ಇಂದಿರಾ ಗಾಂಧಿಯವರು 1975ರ ಜೂನ್ 26ರಂದು ವಿಧಿಸಿದ್ದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೆಲವು ವಿಧಾನ ಸಭೆಗಳ ಅವಧಿಯನ್ನು ಆರು ವರ್ಷಕ್ಕೆ ವಿಸ್ತರಿಸಿದ್ದರಿಂದ ರಾಜ್ಯದ ವಿಧಾನಸಭೆಗೆ 1978ರಲ್ಲಿ ಚುನಾವಣೆ ನಡೆಯಬೇಕಿತ್ತು. ಆಗಿನ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಸರ್ಕಾರ ಬದಲಾಗಿದ್ದರೂ, ರಾಜ್ಯದ ಜನತೆ ಕಾಂಗ್ರೆಸ್ಸಿನ ಪರವಾಗಿ ಇದ್ದುದನ್ನು ಮನಗಂಡಿದ್ದ ಜನತಾ ಪಕ್ಷದ ಮುಖಂಡರು ಅರಸು ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತದ ಅವಧಿಯಲ್ಲಿ ಚುನಾವಣೆ ನಡೆದರೆ ಮಾತ್ರ ಗೆಲ್ಲುವುದಕ್ಕೆ ಸಾಧ್ಯ ಎಂದು ಹೇಳುತ್ತಿದ್ದರು.

**ಬಿರುಸಾಗಿದ್ದ ಚುನಾವಣೆ ರಾಜಕಾರಣ**

ಬಿರುಸಾಗಿ ನಡೆಯುತ್ತಿದ್ದ ರಾಜಕೀಯ ಚಟುವಟಿಕೆಗಳನ್ನು ನಾನು ಗಮನಿಸುತ್ತಿದ್ದೆ. 1977ರ ಡಿಸೆಂಬರ್ 31ರಂದು ಮಧ್ಯರಾತ್ರಿ ದೇವರಾಜ ಅರಸರ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಧಿಸಲಾಯಿತು. ಅದರೊಂದಿಗೆ ರಾಜ್ಯದ ವಿಧಾನಸಭೆಗೆ ಚುನಾವಣೆಯ ಘೋಷಣೆಯೂ ಆಯಿತು. ಇಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ನಿರೀಕ್ಷೆಯೇ ಬಲವಾಗಿತ್ತು. ಆಗ ಕೇಂದ್ರ ಸರ್ಕಾರದಲ್ಲಿ ಪ್ರಭಾವಿಯಾಗಿದ್ದ ಸಚಿವರೆಲ್ಲ ಕರ್ನಾಟಕದ ವಿಧಾನಸಭೆ ಚುನಾವಣಾ ಪ್ರಚಾರಕ್ಕೆ ಬರುತ್ತಿದ್ದರು. 1971ರ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರ ವಿರುದ್ಧ ಸ್ಪರ್ಧಿಸಿ ಸೋತು ನಂತರ ಅಲಹಾಬಾದ್ ಹೈಕೋರ್ಟ್ ಪೀಠದಿಂದ ಇಂದಿರಾ ಗಾಂಧಿಯವರ ಆಯ್ಕೆಯನ್ನು ರದ್ದುಪಡಿಸಲು ಹೋರಾಟ ನಡೆಸಿದ್ದ ಸಮಾಜವಾದಿ ಮುಖಂಡ ರಾಜ್ ನಾರಾಯಣ್ ಮಂಡ್ಯಕ್ಕೆ ಪ್ರಚಾರಕ್ಕೆ ಬಂದಿದ್ದರು. ಅವರು ಕೇಂದ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದರು. ತುರ್ತು ಪರಿಸ್ಥಿತಿಯಲ್ಲಿ ನಡೆದ ಅತಿರೇಕಗಳಲ್ಲಿ ಕುಟುಂಬ ಯೋಜನೆಯನ್ನು ಬಲವಂತವಾಗಿ ಅನುಷ್ಠಾನಗೊಳಿಸಿದ್ದ ಕುಖ್ಯಾತಿ ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆಗೆ ಸಂದಿತ್ತು. ಆ ಕುಖ್ಯಾತಿಯನ್ನು ಮರೆ ಮಾಚಲೆಂದು ಸಚಿವ ಖಾತೆಯ ಹೆಸರನ್ನು ಕುಟುಂಬ ಯೋಜನೆಯಿಂದ ಕುಟುಂಬ ಕಲ್ಯಾಣ ಎಂದು ಬದಲಾಯಿಸಲು ಇದೇ ರಾಜ್‌ನಾರಾಯಣ್

ಕಾರಣರಾಗಿದ್ದರು. ಅವರದು ವಿಚಿತ್ರ ಎನಿಸುವ ವೇಷ. ಹಸಿರು ಚೌಕವನ್ನು ತಲೆಗೆ ಸುತ್ತಿಕೊಂಡಿರುತ್ತಿದ್ದರು. ಜನತಾ ಪಕ್ಷದ ಆಕರ್ಷಣೆಗೆ ಒಳಗಾಗಿದ್ದ ಯುವಕರು ಅದೇ ರೀತಿಯಲ್ಲಿ ತಮ್ಮ ತಲೆಗೂ ಚೌಕವನ್ನು ಸುತ್ತಿಕೊಳ್ಳುವುದು ಫ್ಯಾಷನ್ ಆಗಿತ್ತು. ರಾಜ್ ನಾರಾಯಣ್ ಅವರು ಚುನಾವಣೆ ಪ್ರಚಾರಕ್ಕೆ ಬಂದಿದ್ದರೂ ಮಂಡ್ಯದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವ ಕಾರ್ಯಕ್ರಮ ಇರಲಿಲ್ಲ. ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಮಾರ್ಗದಲ್ಲಿ ಮಂಡ್ಯದಲ್ಲಿ ಜನತಾ ಪಕ್ಷದ ಚುನಾವಣೆ ಪ್ರಚಾರದ ಕಚೇರಿಗೆ ಭೇಟಿ ನೀಡಿ ಅಲ್ಲಿದ್ದವರೊಂದಿಗೆ ಹಿಂದಿಯಲ್ಲಿ ಮಾತಾಡಿದ್ದರು. ಆ ಸಂದರ್ಭದಲ್ಲಿ ನಾನೂ ಅಲ್ಲಿ ಇದ್ದುದರಿಂದ ರಾಜ್ ನಾರಾಯಣ್ ಅವರನ್ನು ತುಂಬ ಸಮೀಪದಿಂದ ನೋಡಲು ಸಾಧ್ಯವಾಗಿತ್ತು. ಚುನಾವಣೆಯ ಭರಾಟೆ ನಡೆದಿದ್ದರೂ ನನ್ನ ದಿನಚರಿಯಲ್ಲಿ ಹೆಚ್ಚಿನ ವ್ಯತ್ಯಾಸಗಳಿರಲಿಲ್ಲ. ಎಂ.ಲಿಂಗಯ್ಯನವರು ಚುನಾವಣೆ ಪ್ರಚಾರದಲ್ಲಿ ನಿರತರಾಗಿದ್ದರಿಂದ ನಾನು ಎಂದಿನಂತೆ 'ಉದಯರವಿ'ಯ ಪುಟಗಳನ್ನು ತುಂಬಿಸಿ ಕಾಯಂ ಕೆಲಸ ಹುಡುಕುವ ಪ್ರಯತ್ನವನ್ನು ಮುಂದುವರಿಸಿದ್ದೆ.

ವಾರಪತ್ರಿಕೆಗೆ ಕೆಲಸ ಮಾಡುತ್ತಿದ್ದರೂ ವಿದ್ಯಾರ್ಥಿ ದೆಸೆಯಲ್ಲಿ ಆರಂಭಿಸಿದ್ದ ಸೃಜನಶೀಲ ಬರವಣಿಗೆಯನ್ನು ನಿಲ್ಲಿಸಿರಲಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಕನಿಷ್ಠ ಕೂಲಿಯ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಲಾಗುತ್ತಿತ್ತು. ಇಂದಿರಾ ಗಾಂಧಿಯವರು ಪ್ರಕಟಿಸಿದ್ದ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಪ್ರಚಾರ ಪತ್ರಿಕೆಗಳಲ್ಲಿ ಎದ್ದು ಕಾಣುತ್ತಿತ್ತು. ಆ ಕಾರ್ಯಕ್ರಮಗಳಲ್ಲಿ ಜೀತ ವಿಮುಕ್ತಿ ಎಂಬುದೂ ಒಂದಾಗಿತ್ತು. ಕನಿಷ್ಠ ಕೂಲಿಯನ್ನು ಪರಿಷ್ಕರಿಸಿ ಸರ್ಕಾರ ಹೊರಡಿಸಿದ ಕಾಯ್ದೆ ಕೃಷಿ ಕಾರ್ಮಿಕರ ಬದುಕಿನಲ್ಲಿ ಎಂಥ ಪರಿಣಾಮ ಬೀರುತ್ತದೆ ಎಂಬುದನ್ನು ಕೇಂದ್ರವಾಗಿರಿಸಿಕೊಂಡು 'ಜೀತ' ಎಂಬ ಶೀರ್ಷಿಕೆಯ ಸಣ್ಣಕತೆಯನ್ನು ಬರೆದು 'ಸುಧಾ' ಪತ್ರಿಕೆಗೆ ಕಳಿಸಿದೆ. ತುರ್ತು ಪರಿಸ್ಥಿತಿ ಜಾರಿಯಲ್ಲಿ ಇದ್ದಾಗ ಅದನ್ನು ಪರೋಕ್ಷವಾಗಿ ಕೂಡ ವಿರೋಧಿಸುವಂಥ ಬರಹಗಳಿಗೆ ಪತ್ರಿಕೆಗಳಲ್ಲಿ ಅವಕಾಶ ಇರಲಿಲ್ಲ. ಪ್ರಜಾವಾಣಿ ಪತ್ರಿಕೆಯಲ್ಲಿ ನಾಗರಿಕ ಸೌಲಭ್ಯಗಳ ಕೊರತೆಯನ್ನು ಪ್ರಮುಖವಾಗಿ ಎತ್ತಿ ತೋರಿಸುವಂಥ ಅಭಿವೃದ್ಧಿ ಪತ್ರಿಕೋದ್ಯಮದಂತಹ ಮಾದರಿ ಆಗ ಆರಂಭವಾಗಿತ್ತು. ಸರ್ಕಾರದ ಲೋಪವನ್ನು ಪರೋಕ್ಷವಾಗಿ ಬಯಲಿಗೆ ಎಳೆಯುವ ತಂತ್ರವನ್ನು ಪ್ರಜಾವಾಣಿ ಆರಂಭಿಸಿತ್ತು. ಅಂಥದ್ದೇ ಧ್ವನಿ ಇರುವ ನನ್ನ ಕತೆ ಸುಧಾ ಪತ್ರಿಕೆಯಲ್ಲಿ ಚಿತ್ರ ಸಹಿತ ಪ್ರಕಟವಾಯಿತು. ಕತೆ ಪ್ರಕಟವಾದ ಒಂದು ವಾರದ ನಂತರ ಬೆಂಗಳೂರಿಗೆ ಹೋದೆ. ಎಂದಿನಂತೆ ಬಾಲಸುಬ್ರಹ್ಮಣ್ಯ ಅವರ ಕೋಣೆಯಲ್ಲಿ ಉಳಿದುಕೊಂಡು ಸೋಮವಾರ ಬೆಳಗ್ಗೆ ಜಯನಗರದಲ್ಲಿದ್ದ ಹನುಮಂತಯ್ಯ ಅವರ ಮನೆಗೆ ಹೋದೆ. ನನಗೆ ಪ್ರಜಾವಾಣಿಯಲ್ಲಿ ಕೆಲಸ ಕೊಡಿಸುವುದಕ್ಕೆ ಮೊದಲಿನಿಂದ ಪ್ರಯತ್ನ ನಡೆಸುತ್ತಿದ್ದ ಅವರು ನನ್ನನ್ನು ನೋಡಿದವರೇ ಸುಧಾದಲ್ಲಿ ಪ್ರಕಟವಾಗಿದ್ದ ಕತೆಯ ಬಗ್ಗೆ ಪ್ರಸ್ತಾಪಿಸಿದರು. 'ಚೆನ್ನಾಗಿದೆ ಕತೆ, ಆ ಕತೆಯ ಪ್ರಕಾರ ತುರ್ತು ಪರಿಸ್ಥಿತಿಯಿಂದ ಜನರಿಗೆ ಒಳ್ಳೆಯದೇನೂ ಆಗಿಲ್ಲ ಅನ್ನಿಸುತ್ತೆ ಅಲ್ಲವೇ..? ಎಂದರು. 'ಹಾಗೇನೂ ತೀರ್ಪು ಕೊಟ್ಟಿಲ್ಲ ಸರ್, ಒಂದು ಘಟನೆಯಷ್ಟನ್ನೇ ಕತೆಯ ರೂಪದಲ್ಲಿ ಬರೆದೆ... ಅದು ಕತೆ ಅಷ್ಟೆ' ಅಂದೆ. ನನ್ನ ಸ್ಥಿತಿಯ ಅರಿವಿದ್ದ ಅವರು ನನ್ನಿಂದ ವಿಶೇಷ ಪೀಠಿಕೆಯನ್ನೇನೂ ನಿರೀಕ್ಷೆ ಮಾಡದೆ 'ಪ್ರಜಾವಾಣಿಯಲ್ಲಿ ಒಂದಿಷ್ಟು ಬೆಳವಣಿಗೆ ಆಗಿದೆ. ಗುರುಸ್ವಾಮಿಯವರು ದಿಟ್ಟ ಕ್ರಮ ತೆಗೆದುಕೊಂಡಿದ್ದಾರೆ. ಸಂಸ್ಥೆಯಲ್ಲಿ ನೆಟ್ಟಕಲ್ಲಪ್ಪನವರ ಮಗ ಬಂದಿದ್ದಾರೆ. ಅವರಲ್ಲಿ ಮಾತಾಡಿದ್ದೇನೆ. ನೀವು ಹೋಗಿ ಭೇಟಿ ಮಾಡಿ...' ಎಂದರು.

'ಟಿಎಸ್‌ಆರ್ ಇದ್ರಲ್ಲ, ಅವರು ಹೋದ ಮೇಲೆ ವೈಎನ್‌ಕೆ ಅಂತ ಈಗ ಸಂಪಾದಕರಾಗಿದ್ದಾರೆ. ನಮ್ಮ ಸಿದ್ದಲಿಂಗಪ್ಪ ಅವರಿಗೆ ಅದು ಸಿಗಬೇಕಿತ್ತು...' ಎಂದು ಹನುಮಂತಯ್ಯನವರು ಸ್ವಗತದಲ್ಲಿ ಎಂಬಂತೆ ಹೇಳಿಕೊಂಡರು.

ಏನೋ ಭರವಸೆಯ ಬೆಳಕು ಮೂಡಿದಂತೆ ತೋರಿತು. ಹನುಮಂತಯ್ಯ ಅವರಿಗ ನಮಸ್ಕರಿಸಿ ತಕ್ಷಣವೇ ಅಲ್ಲಿಂದ ಹೊರಟು ಪ್ರಜಾವಾಣಿ ಕಚೇರಿಗೆ ಬಂದೆ. ಎಂದಿನಂತೆ ಸಂಪಾದಕೀಯ ವಿಭಾಗಕ್ಕೆ ಹೋಗಲಿಲ್ಲ. ಗುಬ್ಬಿಯ ಕೃಷ್ಣಪ್ಪ ಇರುವ ಸುಧಾ ಕರಡು ತಿದ್ದುವ ವಿಭಾಗಕ್ಕೆ ಹೋದೆ. ನನ್ನ ಹಾಸ್ಟಲ್ ದಿನಗಳಲ್ಲಿ ಒಂದು ವರ್ಷ ನಾವಿಬ್ಬರೂ ಒಂದೇ ಕೋಣೆಯ ವಾಸಿಗಳು. ಅಲ್ಲಿಗೆ ರಾಮಕೃಷ್ಣಮೂರ್ತಿ ಕೂಡ ಬಂದರು. ಅವರು ಆಗ ಡೆಕನ್ ಹೆರಾಲ್ಡ್ ಪತ್ರಿಕೆಯ ಕರಡು ತಿದ್ದುವ ವಿಭಾಗದಲ್ಲಿದ್ದರು. ಇಬ್ಬರು ಮಿತ್ರರಿಗೂ ನಾನು ಅರೆ ಉದ್ಯೋಗದಲ್ಲಿದ್ದ ಸಂಗತಿ ತಿಳಿದಿತ್ತು. ಅವರಿಬ್ಬರನ್ನೂ ಹನುಮಂತಯ್ಯನವರೇ ಪ್ರಜಾವಾಣಿ ಬಳಗಕ್ಕೆ ಸೇರಿಸಿದ್ದರು. ನಾನು ಅವರಲ್ಲಿ ಹನುಮಂತಯ್ಯನವರನ್ನು ಭೇಟಿ ಮಾಡಿ ಬಂದ ವಿಷಯ ತಿಳಿಸಿ ಮುಂದಿನ ಹೆಜ್ಜೆಯ ಬಗ್ಗೆ ಮಾರ್ಗದರ್ಶನ ಕೋರಿದೆ. ರಾಮಕೃಷ್ಣಮೂರ್ತಿ 'ಅದಕ್ಯಾಕೆ ಯೋಚನೆ. ಬೆಳಗ್ಗೆ ಬಂದು ನೋಡು. ಒಂಬತ್ತೂವರೆ ಹತ್ತಕ್ಕೆಲ್ಲ ಬರುತ್ತಾರೆ. ಆಫೀಸು ಸಮಯದಲ್ಲಿ ಅವರನ್ನೇ ನೋಡು' ಎಂದ. ಅವರಿಬ್ಬರ ಜೊತೆ ಮಧ್ಯಾಹ್ನದ ಊಟ ಮಾಡಿ ಬಾಲಸುಬ್ರಹ್ಮಣ್ಯ ಅವರ ಕೋಣೆಗೆ ಬಂದೆ. ಅವರಲ್ಲಿ ಮಾತಾಡುವಾಗಲೂ ನನ್ನ ಅರೆ ಉದ್ಯೋಗದ ಚಿಂತೆ ಬಾಧಿಸುತ್ತಲೇ ಇರುತ್ತಿತ್ತು. ಅದನ್ನು ಮರೆ ಮಾಚುವುದಕ್ಕೆ ಕ್ರಿಯಾ ಪ್ರಕಾಶನದ ಮುಂದಿನ ಯೋಜನೆ, ಅಭಿವ್ಯಕ್ತಿ ವಿಚಾರ ವೇದಿಕೆಯ ಮುಂದಿನ ಕಾರ್ಯಕ್ರಮ ಇತ್ಯಾದಿ ಸಂಗತಿಗಳನ್ನು ಮಾತನಾಡುತ್ತಾ ಅವತ್ತಿನ ರಾತ್ರಿಯನ್ನು ಕಳೆದೆ.

ಬಾಲಸುಬ್ರಹ್ಮಣ್ಯ ಇದ್ದುದು ಶೇಷಾದ್ರಿಪುರಂ ಪ್ರದೇಶದ ಸ್ವಸ್ತಿಕ್ ಸರ್ಕಲ್‌ಗೆ ಹತ್ತಿರವಿದ್ದ ಅಡ್ಡ ರಸ್ತೆಯೊಂದರ ಒಳಗಿದ್ದ ವಠಾರದ ಕೋಣೆಯಲ್ಲಿ. ಅದನ್ನು ಮುಟ್ಟಲು ಸಣ್ಣದೊಂದು ಓಣಿಯಲ್ಲಿ ಮೂವತ್ತು ನಲವತ್ತು ಅಡಿಯಷ್ಟು ದೂರ ಸಾಗಬೇಕಿತ್ತು. ಅವರ ಕೋಣೆ ಇಬ್ಬರು ವ್ಯಕ್ತಿಗಳು ಹೊಂದಿಕೊಂಡು ಇರಬಹುದಾದಷ್ಟು ಚಿಕ್ಕದು. ಎರಡು ಚಾಪೆಗಳನ್ನು ಹಾಕಿದರೆ ಒಂದು ಮೂಲೆಯಲ್ಲಿ ಚಪ್ಪಲಿಗಳನ್ನು ಬಿಟ್ಟು ಇನ್ನೊಂದು ಮೂಲೆಯಲ್ಲಿ ನೀರಿನ ಬಕೆಟು, ಅನ್ನ ಮಾಡಿಕೊಳ್ಳುವ ಸ್ಟವ್, ತಟ್ಟೆ ಇತ್ಯಾದಿ ಕನಿಷ್ಠ ಪರಿಕರಗಳನ್ನು ಇಟ್ಟುಕೊಳ್ಳುವಷ್ಟು ಜಾಗ. ಹಂಚಿನ ಮಾಡು. ಸ್ವಲ್ಪ ನೆಗೆದು ಚಿಮ್ಮಿದರೆ ಪಕಾಸಿಯನ್ನು ಮುಟ್ಟಬಹುದಿತ್ತು. ಒಗೆದ ಬಟ್ಟೆಗಳನ್ನು ಒಣ ಹಾಕುವ ವ್ಯವಸ್ಥೆಯನ್ನೂ ಅದೇ ಕೋಣೆಯಲ್ಲಿ ಮಾಡಿಕೊಳ್ಳಲಾಗಿತ್ತು.

ಬೆಳಗ್ಗೆ ಹೊರಗಡೆ ನಲ್ಲಿಯಿಂದ ಸುರಿಯುತ್ತಿದ್ದ ನೀರಿನ ರಭಸದ ಸದ್ದಿನಿಂದ ನಿದ್ದೆ ಹಾರಿ ಹೋಯಿತು. ಕಣ್ಣುಜ್ಜಿಕೊಂಡು ಎದ್ದು ಕುಳಿತವನಿಗೆ ಆಗಲೇ ಬಾಲಸುಬ್ರಹ್ಮಣ್ಯ ಎದ್ದು ಚಾಪೆಯನ್ನು ಮಡಿಚಿಟ್ಟು ಚಿಕ್ಕದೊಂದು ಕನ್ನಡಿಯನ್ನು ಎಡಗೈಯಲ್ಲಿ ಹಿಡಿದುಕೊಂಡು ಮುಖಕ್ಷೌರ ಮಾಡಿಕೊಳ್ಳುತ್ತಿರುವುದು ಕಂಡಿತು. 'ತುಂಬ ಲೇಟಾಯಿತಲ್ಲ' ಎಂದು ಗೊಣಗುತ್ತ ಚಾಪೆಯನ್ನು ಮಡಿಚಿಟ್ಟವನಿಗೆ ಹೊರಗಡೆಯಿಂದ ಕೇಳಿ ಬರುತ್ತಿದ್ದ ಮಾತುಕತೆಗಳಿಂದ ತುಂಬ ಜನ ನಲ್ಲಿಯ ಬಳಿ ಸೇರಿರುವಂತೆ ಅನಿಸಿತು. ಕೋಣೆಯ ಬಾಗಿಲನ್ನು ಸ್ವಲ್ಪ ಓರೆ ಮಾಡಿ ನೋಡಿದಾಗ ನಲ್ಲಿಯಿಂದ ಸುರಿಯುತ್ತಿದ್ದ ನೀರನ್ನು ಸರದಿಯ ಮೇಲೆ ಹಿಡಿದುಕೊಳ್ಳುತ್ತಿರುವ ಕೆಲವು ಹೆಂಗಸರು, ಒಂದಿಬ್ಬರು ಹುಡುಗರು ಕಂಡರು. ಅದನ್ನು ನೋಡುತ್ತ ಕೋಣೆಯೊಳಕ್ಕೆ ಸರಿದವನನ್ನು ಬಾಲಸುಬ್ರಹ್ಮಣ್ಯ 'ಚೆನ್ನಾಗಿ ನಿದ್ದೆ ಮಾಡಿದಿರಿ. ಬೆಳಗಿನ ಜಾವ ಎಚ್ಚರವಾದಾಗ ಜೋರು ಗೊರಕೆ

ಹೊಡೆಯುತ್ತಿದ್ದಿರಿ. ನಾನು ಸ್ನಾನ ಮುಗಿಸಿ ಬಂದು ಬಿಡ್ತೇನೆ. ನೀವೂ ಮುಖ ತೊಳೆದುಕೊಂಡು ಬಿಡಿ. ಒಟ್ಟಿಗೆ ಹೋಟಲಿನಲ್ಲಿ ತಿಂಡಿ ತಿಂದು ಬಿಡೋಣ..' ಎಂದು ಟವಲ್ಲನ್ನು ಹೆಗಲ ಮೇಲೆ ಹಾಕಿಕೊಂಡು ಬಕೆಟ್ ಹಿಡಿದು ಕೋಣೆಯಿಂದ ಹೊರಟರು.

ಅವರು ಸ್ನಾನ ಮುಗಿಸಿ ಬಂದ ಮೇಲೆ ನಲ್ಲಿಯ ಬಳಿ ಹೋಗಿ ಮಗ್‌ನಿಂದ ನೀರನ್ನು ಮೊಗೆದುಕೊಂಡು ಹಲ್ಲುಜ್ಜುವ ಕ್ರಿಯೆ ಮುಗಿಸಿದೆ. ನಲ್ಲಿಯಲ್ಲಿ ಸುರಿಯುತ್ತಿದ್ದ ನೀರು ನಿಲ್ಲಿಸುವ ಅಗತ್ಯವೇ ಬೀಳದಂತೆ ಒಂದಾದ ಮೇಲೆ ಒಂದರಂತೆ ಬಗೆ ಬಗೆಯ ಬಣ್ಣದ ಬಕೆಟುಗಳು ನಲ್ಲಿಯ ಅಡಿ ಬರುತ್ತಿದ್ದವು. ವಠಾರದಲ್ಲಿ ಎಷ್ಟು ಮನೆಗಳಿದ್ದವೋ ಅಂದಾಜಿಗೆ ಸಿಗದಂತೆ ನೀರು ಹಿಡಿಯುವ ಭರಾಟೆ. ದೊಡ್ಡ ಬಕೆಟ್‌ನಿಂದ ನೀರನ್ನು ತುಂಬಿಕೊಂಡು ಒಂದು ಬದಿ ಸಾಲಾಗಿದ್ದ ಸ್ನಾನದ ಮನೆಗಳಿಗೆ ಹೋಗಿ ಕಲ್ನಾರು ಶೀಟಿನ ಬಾಗಿಲು ಮುಚ್ಚಿಕೊಂಡು ಏನಾದರೂ ಹಾಡು ಹೇಳುತ್ತ ನೀರು ಹಾಕಿಕೊಳ್ಳುತ್ತಿದ್ದ ದೃಶ್ಯವನ್ನು ನೋಡುತ್ತ ಕೋಣೆಗೆ ವಾಪಸಾದೆ.

'ಶೌಚಕ್ಕೆ ಹೋಗಿಲ್ಲವೇ? ಆ ಕಡೆ ಸಾಲು ನೋಡಿದಿರಲ್ಲ. ಅವೇ ಇಡೀ ವಠಾರದ ತ್ಯಾಜ್ಯ ಸಂಗ್ರಹ ಕೇಂದ್ರಗಳು. ಹೋಗುವಾಗ ಟವೆಲ್ ಒಯ್ಯಬೇಕು. ಹೊರಗಡೆ ಅದು ಕಾಣುತ್ತಿದ್ದರೆ ಒಳಗಡೆ ಇದ್ದಾರೆ ಅಂತ ಅರ್ಥ' ಎಂದು ಬಾಲಸುಬ್ರಹ್ಮಣ್ಯ ಹೇಳಿದರು. ಹಲ್ಲುಜ್ಜಿ ಮುಖ ತೊಳೆದುಕೊಂಡು ಬರಲು ನಲ್ಲಿಯ ಬಳಿ ಹೋಗಿದ್ದಾಗಲೇ ವಠಾರದ ಪರಿಚಯ ಸ್ಥೂಲವಾಗಿ ಆಗಿತ್ತು. ಕೆಲವು ಸಂಸಾರಗಳೂ, ಅವಿವಾಹಿತರೂ ಅಲ್ಲಿ ಬಾಡಿಗೆಗೆ ಇರುವಂತೆ ತೋರಿತು. ಕೋಣೆಗೆ ಬರುವ ಓಣಿಯ ಎರಡೂ ಬದಿಯೂ ಸಣ್ಣ ಸಣ್ಣ ಸಂಸಾರಗಳು. ಹಿಂಬದಿಯೂ ಸಂಸಾರಗಳು. ಎಲ್ಲರ ಬಳಕೆಗೆ ಒಂದು ನಲ್ಲಿ. ನಲ್ಲಿಗೆ ಅನತಿ ದೂರದಲ್ಲಿ ಸಾಲಾಗಿದ್ದ ಸ್ನಾನಗೃಹಗಳು ಅವುಗಳಿಗೆ ಹೊಂದಿಕೊಂಡಿದ್ದಂತೆ ಕಂಡ ಶೌಚಾಲಯಗಳು. ಹಿಂದಿನ ಸಾಲುಮನೆಗಳಿಗೆ ಕೆಲವೇ ಅಡಿಗಳ ಅಂತರಕ್ಕೆ ಎತ್ತರದ ಪೌಳಿ ಗೋಡೆ. ಅದನ್ನು ಏರಿ ಬರದಂತೆ ಗಾಜಿನ ಚೂರುಗಳನ್ನು ಹುದುಗಿಸಿದ ಭದ್ರತಾ ವ್ಯವಸ್ಥೆ.

ತಕ್ಷಣವೇ ಶೌಚಕ್ಕೆ ಹೋಗಬೇಕೆನಿಸಿತು. ಶೌಚಕ್ಕೆ ಹೋಗುವಾಗ ಬಕೆಟ್ ಜೊತೆಗೆ ಟವೆಲ್ ಒಯ್ಯಬೇಕು ಎಂದು ಬಾಲಸುಬ್ರಹ್ಮಣ್ಯ ನೀಡಿದ್ದ ಸೂಚನೆ ನೆನಪಿಗೆ ಬಂದು ತಂದಿದ್ದ ಚಿಕ್ಕ ಟವೆಲ್‌ಅನ್ನು ಹೆಗಲ ಮೇಲೆ ಹಾಕಿಕೊಂಡು ಬಕೆಟ್ ಹಿಡಿದು ಹೊರಬಂದೆ. ಹೊರಡುತ್ತಿದ್ದಾಗ 'ನಾನು ಶೌಚ ಮುಗಿಸಿ ಸ್ನಾನ ಮಾಡಿ ಬರುವುದು ತಡವಾಗಬಹುದು. ನೀವು ಹೊರಡಿ. ನನಗೆ ಕಾಯಬೇಡಿ' ಎಂದು ಹೇಳಿದೆ. 'ಹಾಗಿದ್ದರೆ ಇನ್ನೊಂದು ಕೀ ಇಟ್ಟುಕೊಳ್ಳಿ. ನಾನು ಬೀಗ ಹಾಕಿಕೊಂಡು ಹೋಗುತ್ತೇನೆ' ಎಂದು ಹೇಳಿ ಬಿಡಿಯಾಗಿದ್ದ ಒಂದು ಕೀಯನ್ನು ಕೊಟ್ಟರು. ಚಪ್ಪಲಿ ಮೆಟ್ಟಿಕೊಂಡು ನಲ್ಲಿಯ ಬಳಿ ಬಂದೆ. ಅಲ್ಲಿ ಇನ್ನೂ ನೀರು ಹಿಡಿಯುವ ಚಟುವಟಿಕೆ ಮುಂದುವರಿದಿತ್ತು. ನಲ್ಲಿಯ ಬಳಿ ಹೋದಾಗ ನೀರು ಹಿಡಿದುಕೊಳ್ಳುತ್ತಿದ್ದ ಮಹಿಳೆಯೊಬ್ಬರು ನನಗೆ ದಾರಿ ಬಿಡುವಂತೆ ತನ್ನ ಬಕೆಟ್‌ಅನ್ನು ಪಕ್ಕಕ್ಕೆ ಸರಿಸಿಕೊಂಡರು. ನಲ್ಲಿಯಿಂದ ನೀರನ್ನು ಹಿಡಿದು ಶೌಚಾಲಯದತ್ತ ಸಾಗಿದೆ. ಬಕೆಟ್ ಅನ್ನು ಬಾಗಿಲ ಬಳಿ ಇರಿಸಿ ಖಾಲಿ ಇದ್ದ ಶೌಚಾಲಯದ ಒಳಗೆ ಇಣುಕಿದವನಿಗೆ ಮುಖ ಕಿವಿಚುವಂತಾಯಿತು. ಉದ್ದನೆಯ ಕಣಿವೆಯಂಥ ಶೌಚಾಲಯದಲ್ಲಿ ಸಂಗ್ರಹವಾಗಿದ್ದ ವಠಾರದ ಘನತ್ಯಾಜ್ಯ. ಕಾಲಿಟ್ಟುಕೊಳ್ಳುವ ಸಿಮೆಂಟ್ ಕಟ್ಟೆಯ ಆಜುಬಾಜಿನಲ್ಲಿಯೂ ತುಣುಕುಗಳಂಥ ಅವಶೇಷಗಳು. ಬೇಗ ಬೇಗ ಒತ್ತಡ ನಿವಾರಿಸಬೇಕೆಂದು ಒಳ ಪ್ರವೇಶಿಸಿ ಅಲ್ಲಿ ಮೂಲೆಯಲ್ಲಿಟ್ಟದ್ದ ತಗಡಿನ ಡಬ್ಬಕ್ಕೆ ಬಕೆಟ್‌ನಿಂದ ನೀರು ತುಂಬಿಕೊಂಡೆ. ಒಳಗೆ ಸೇರಿಕೊಂಡ ಸುರಕ್ಷತಾ ಭಾವದಲ್ಲಿ ಬಾಗಿಲು ಮುಚ್ಚಲು

ನೋಡಿದರೆ ಅಲ್ಲಿ ಬಾಗಿಲೇ ಇರಲಿಲ್ಲ. ಮೂರುಕಡೆ ಆರೇಳು ಅಡಿಯಷ್ಟು ಎತ್ತರವಿದ್ದ ಗೋಡೆಯೇ ನನ್ನ ಖಾಸಗಿತನವನ್ನು ಮುಚ್ಚಿಕೊಳ್ಳುವ ರಕ್ಷಾ ಕವಚವಾಗಿತ್ತು. ಬಾಲಸುಬ್ರಹ್ಮಣ್ಯ ಟವೆಲ್ ಒಯ್ಯಲು ಹೇಳಿದ್ದು ಏಕೆಂದು ಈಗ ಅರ್ಥವಾಯಿತು. ಹೆಗಲ ಮೇಲಿದ್ದ ಟವೆಲ್ ಅನ್ನು ಮುಂಭಾಗಕ್ಕೆ ತೆರೆಯಂತೆ ಅಡ್ಡಲಾಗಿ ಸಿಕ್ಕಿಸಬೇಕೆಂದು ಗೊತ್ತಾಯಿತು. ಅಲ್ಲಿ ಟವೆಲ್ ಸಿಗಿಸುವ ಯಾವ ಅನುಕೂಲತೆಗಳೂ ಕಾಣಲಿಲ್ಲ. ಸಿಮೆಂಟ್ ಕಟ್ಟೆಯ ಮೇಲೆ ನಿಂತುಕೊಂಡು ಮುಂದೇನು ಎಂದು ಚಿಂತಿಸುತ್ತಿದ್ದಾಗ ವಠಾರದ ಇನ್ನೊಬ್ಬ ನಿವಾಸಿ ಚಿಕ್ಕದೊಂದು ಡಬ್ಬದಲ್ಲಿ ನೀರು ತುಂಬಿಕೊಂಡು ಸರದಿಗಾಗಿ ಕಾಯುತ್ತಿರುವವನಂತೆ ಮುಖ ತೋರಿಸಿ ಹಿಂದೆ ಸರಿದದ್ದು ನೋಡಿ ತುರ್ತಾಗಿ ಒತ್ತಡ ನಿವಾರಿಸಿಕೊಳ್ಳುವುದು ಅನಿವಾರ್ಯ ಎನಿಸಿತು. ಊರಲ್ಲಿದ್ದಾಗ ಚೊಚ್ಚಿಲ ಬಸಿರಿಯೊಬ್ಬಳು ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆ ದಾಖಲಾದಾಗ ಸೂಲಗಿತ್ತಿಯ ಕ್ರೂರ ನುಡಿಗಳನ್ನು ಸಹಿಸಿಕೊಳ್ಳಲಾಗದೆ ಹೇಳಿದ್ದ 'ಕೂಸು ಬಂದಾಗ ನಾಚಿಕೆ ಇಲ್ಲ' ಎಂಬ ಮಾತು ನೆನಪಿಗೆ ಬಂತು. ಇನ್ನು ತಡಮಾಡಿದರೆ ಹೊರಗೆ ಕಾಯುತ್ತಿರುವ ವ್ಯಕ್ತಿ ಒಳನುಗ್ಗಬಹುದೆನ್ನಿಸಿ ಕಣ್ಣುಮುಚ್ಚಿ ಕುಳಿತುಕೊಂಡೆ.

ಒತ್ತಡ ನಿವಾರಿಸಿಕೊಂಡ ಮೇಲೆ ತಗಡಿನ ಡಬ್ಬಕ್ಕೆ ಕೈಹಾಕಿದರೆ ಅದರಲ್ಲಿ ಅರ್ಧದಷ್ಟು ನೀರು ಮಾತ್ರ ಉಳಿದುಕೊಂಡಿತ್ತು. ಬಕೆಟ್‌ನಿಂದ ನೀರು ತುಂಬಿಸಿಕೊಳ್ಳುವಾಗ ಅದು ಸಣ್ಣಗೆ ಸೋರುತ್ತಿದ್ದುದು ಗಮನಕ್ಕೆ ಬಂದಿರಲಿಲ್ಲ. ಇದ್ದ ಸ್ವಲ್ಪ ನೀರಿನಲ್ಲಿಯೇ ಶೌಚಕಾರ್ಯ ಮುಗಿಸಿ ಹೊರಗೆ ಬರುವಷ್ಟರಲ್ಲಿ ಉದ್ವೇಗದಿಂದ ಹಣೆ, ಕೆನ್ನೆ, ಗಂಟಲೆಲ್ಲ ಬೆವರಿನಿಂದ ತೊಯ್ದು ಹೋಗಿತ್ತು.

ಶೌಚಾಲಯದ ಅವಸ್ಥೆಯನ್ನು ಅನುಭವಿಸಿದವನಿಗೆ ಸ್ನಾನದ ಮನೆಯನ್ನು ಪ್ರವೇಶಿಸುವ ಧೈರ್ಯ ಬರಲಿಲ್ಲ. ಆದರೆ ಶೌಚಕಾರ್ಯದಲ್ಲಿ ಅಲ್ಪಪ್ರಮಾಣದ ನೀರಷ್ಟೆ ಸ್ವಚ್ಛತೆಗೆ ಲಭ್ಯವಿದ್ದ ಕಾರಣ ಇನ್ನಷ್ಟು ನೀರನ್ನು ಬಳಸುವುದು ಅವಶ್ಯಕವೆನಿಸಿತು. ಬಕೆಟ್ ತುಂಬ ನೀರು ಹಿಡಿದು ಖಾಲಿಯಾದ ಸ್ನಾನಗೃಹದ ಬಾಗಿಲ ಹೊರಗಡೆ ಇಟ್ಟು ಕೋಣೆಗೆ ಬಂದು ಸಾಬೂನನ್ನು ಎತ್ತಿಕೊಂಡು ಬಂದೆ. ಸ್ನಾನಗೃಹದ ಒಳಗೆ ಸೇರಿಕೊಂಡ ನಂತರ ಇನ್ನೊಂದು ಸಮಸ್ಯೆ ಎದುರಾಯಿತು. ಬಾಗಿಲನ್ನು ಮುಚ್ಚಿ ಭದ್ರಪಡಿಸುವ ಚಿಲಕವೇ ಇರಲಿಲ್ಲ. ಹಾಗೆಯೇ ಮುಂದಕ್ಕೆ ತಳ್ಳಿ ಯಾರಾದರೂ ಹೊರಗಿನಿಂದ ನೂಕಿದರೆ ತೆರೆದುಕೊಳ್ಳದಂತೆ ಒಂದು ಕಾಲನ್ನು ಅಡ್ಡ ಇರಿಸಿಕೊಂಡೇ ಸರ್ಕಸ್ ಕಲಾವಿದನಂತೆ ಸ್ನಾನದ ವಿಧಿಯನ್ನು ಪೂರೈಸಬೇಕಾಯಿತು. ಸ್ನಾನದ ಮನೆಯಿಂದ ಹೊರಬಂದಾಗ ವಿಸರ್ಜನೆ ಕಾಲದ ಕಿರಿಕಿರಿಯನ್ನು ಸ್ವಚ್ಛಗೊಳಿಸಿದ ಸಮಾಧಾನವೊಂದೇ ಉಳಿದುಕೊಂಡಿತ್ತು. ಬಕೆಟ್‌ನಲ್ಲಿ ನೀರು ಹಿಡಿದುಕೊಂಡು ಕೋಣೆಗೆ ಬಂದಾಗ ಕಂಟಕದಿಂದ ಪಾರಾಗಿ ಸುರಕ್ಷಿತವಾಗಿ ಹೊರಬಂದಂತಾಯಿತು.

**ಹರಿಕುಮಾರ್ ಭೇಟಿ**

ಬಟ್ಟೆ ಹಾಕಿಕೊಂಡು ಸಿದ್ಧನಾದೆ. ಆಗಲೇ ಗಂಟೆ ಎಂಟೂ ಮುಕ್ಕಾಲು ಆಗಿತ್ತು. ಶೇಷಾದ್ರಿಪುರದಿಂದ ಮಹಾತ್ಮ ಗಾಂಧಿ ರಸ್ತೆಗೆ ನಡೆದು ಹೋಗಲು ಒಂದು ಗಂಟೆಯಾದರೂ ಬೇಕು ಎಂಬುದು ನನ್ನ ಅನುಭವವಾಗಿತ್ತು. ಮಾರ್ಗಮಧ್ಯೆ ಹೋಟಲಿನಲ್ಲಿ ಏನಾದರೂ ತಿನ್ನಬಹುದು ಎಂದುಕೊಂಡೆ. ನನ್ನ ವಿದ್ಯಾರ್ಹತೆ ಮತ್ತು ಬರವಣಿಗೆಯ ದಾಖಲೆಗಳನ್ನು ಜೊತೆಗೆ ಇಟ್ಟುಕೊಂಡಿದ್ದೆ. ಬಾಗಿಲಿಗೆ ಬೀಗ ಹಾಕಿ ಸ್ವಸ್ತಿಕ್ ಸರ್ಕಲ್ ತಲುಪಿದೆ. ಬಸ್ ಹಿಡಿದು ಹೋಗುವ ಪರಿಪಾಠ ಕಾಲೇಜು ದಿನಗಳಿಂದಲೂ ಇರಲಿಲ್ಲ. ನೆಹರೂ ಸರ್ಕಲ್, ಶಿವಾನಂದ ಸರ್ಕಲ್ ದಾಟಿ ರೇಸ್ ಕೋರ್ಸ್ ರಸ್ತೆಯ ಮೂಲಕ ಚಾಲುಕ್ಯ ಸರ್ಕಲ್ ತಲುಪಿದೆ.

ಲೋಕಸೇವಾ ಆಯೋಗದ ಕಟ್ಟಡದ ಮುಂದೆ ಸಾಗಿದರೆ ವಿಧಾನಸೌಧಕ್ಕೆ ಪಶ್ಚಿಮ ಭಾಗದಲ್ಲಿ ಹಾದು ಹೋದ ರಸ್ತೆಯ ಮೂಲಕ ಕಬ್ಬನ್ ಪಾರ್ಕ್ ತಲುಪಬಹುದಿತ್ತು. ಆಗಿನ್ನೂ ವಿಕಾಸ ಸೌಧದ ನಿರ್ಮಾಣ ಆಗಿರಲಿಲ್ಲ. ಸುದರ್ಶನ ಗೆಸ್ಟ್ ಹೌಸ್ ಬದಿಯ ರಸ್ತೆಯಲ್ಲಿ ನಗರ ಸಾರಿಗೆ ಬಸ್ಸುಗಳು ಹಾಯ್ದು ಹೋಗುತ್ತಿದ್ದವು. ಅಲ್ಲಿ ಉದ್ದನೆಯ ಬಸ್ ನಿಲ್ದಾಣವೂ ಇತ್ತು. ಅದರಲ್ಲಿ ಸಾಗಿ ಗೋಪಾಲಗೌಡ ವೃತ್ತದ ಬಳಿ ಬಂದೆ. ಅಲ್ಲಿಂದ ಕಬ್ಬನ್ ಪಾರ್ಕ್ ಒಳಗಿಂದ ಹೈಕೋರ್ಟ್ ಪಕ್ಕದಲ್ಲಿ ಸಾಗಿ ಟೆನ್ನಿಸ್ ಕೋರ್ಟ್ ಬದಿಯ ರಸ್ತೆಯಿಂದ ಮಹಾತ್ಮ ಗಾಂಧಿ ಪ್ರತಿಮೆ ಇರುವ ಸರ್ಕಲ್ ಸೇರಿದೆ. ಹತ್ತು ಗಂಟೆಯಾಗಿತ್ತು. ಅಲ್ಲಿಂದ ಪ್ರಜಾವಾಣಿ ಕಚೇರಿಗೆ ಹದಿನೈದು ನಿಮಿಷದ ಹಾದಿ. ನೆಟ್ಟಕಲ್ಲಪ್ಪನವರ ಪುತ್ರ ಹರಿಕುಮಾರ್ ಅವರನ್ನು ಹನುಮಂತಯ್ಯ ಅವರ ಸಲಹೆಯಂತೆ ಖುದ್ದಾಗಿ ಭೇಟಿ ಮಾಡಿ ಕೆಲಸಕ್ಕೆ ಮನವಿ ಮಾಡಿಕೊಳ್ಳುವ ಸಂದರ್ಭಕ್ಕೆ ರಾತ್ರಿಯಿಂದಲೇ ತಯಾರಿ ನಡೆಸುತ್ತಿದ್ದೆ. ಮನಸ್ಸಿನಲ್ಲಿಯೇ ತಾಲೀಮು ಮಾಡಿದ್ದು ಎಷ್ಟನೆಯ ಸಲವೋ. ಈಗಾಗಲೇ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಉಪಸಂಪಾದಕನ ಕೆಲಸಕ್ಕಾಗಿ ಲಿಖಿತ ಪರೀಕ್ಷೆ ಬರೆದು ಎಂ.ವೈ.ಘೋರ್ಪಡೆ, ಖಾದ್ರಿ ಶಾಮಣ್ಣ, ಜಯಶೀಲರಾವ್, ಜನಾರ್ದನ್ ಅವರನ್ನು ಸಂದರ್ಶನದಲ್ಲಿ ಎದುರಿಸಿದ ಅನುಭವ ಆಗಿತ್ತು. ಅಲ್ಲಿ ಕೆಲಸ ಸಿಗುವ ಭರವಸೆ ಮರೀಚಿಕೆಯಾಗಿತ್ತು. ಈ ಸಲದ್ದು ಮಾಡು ಇಲ್ಲವೇ ಮಡಿ ಎನ್ನುವ ಕೊನೆಯ ಪ್ರಯತ್ನ. ಅದೇ ಉದ್ವೇಗದಲ್ಲಿ ಪ್ರಜಾವಾಣಿಯ ಕಚೇರಿ ಪ್ರವೇಶಿಸಿದೆ. ಭದ್ರತಾ ಸಿಬ್ಬಂದಿ ಇದ್ದರೂ ಸ್ವಾಗತಕಾರರಾಗಿ ಗುರುತಿನ ಪುಟ್ಟನಾಯ್ಕರು ಇದ್ದರು. ಪುಟ್ಟನಾಯ್ಕರು ನನ್ನ ಎಸ್ಸೆಸ್ಸೆಲ್ಸಿ ಸಹಪಾಠಿ. ರಿಪ್ಪನ್‌ಪೇಟೆಯಲ್ಲಿ ನನ್ನೊಂದಿಗೆ ಇದ್ದವರು. ಆ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ನಾನು ಪಿಯುಸಿಗಾಗಿ ಬೆಂಗಳೂರಿಗೆ ಬಂದಿದ್ದೆ. ಆದರೆ, ಪುಟ್ಟನಾಯ್ಕರು ಒಂದು ವರ್ಷ ಊರಲ್ಲಿಯೇ ಇದ್ದು ನಂತರ ಹನುಮಂತಯ್ಯ ಅವರನ್ನು ಸಂಪರ್ಕಿಸಿ ಪ್ರಜಾವಾಣಿಯಲ್ಲಿ ಟೆಲಿಫೋನ್ ಆಪರೇಟರ್ ಕೆಲಸ ಪಡೆದಿದ್ದರು. ಅವರೇ ಕೆಲವೊಮ್ಮೆ ಸ್ವಾಗತಕಾರರಾಗಿಯೂ ಇರುತ್ತಿದ್ದರೆಂಬುದು ನನಗೆ ಅದೇ ಮೊದಲ ಸಲಕ್ಕೆ ಗೊತ್ತಾಯಿತು.

ನಾನು ಪ್ರಜಾವಾಣಿಯ ಸಂಪಾದಕೀಯ ವಿಭಾಗಕ್ಕೆ ಹೋಗಿ ವೈಕುಂಠರಾಜು ಅವರನ್ನು ನೋಡುತ್ತಾ ಇದ್ದುದು ಅವರಿಗೂ ಗೊತ್ತಿತ್ತು. ನಾನು ಎದುರಾಗುತ್ತಲೂ ಮಲೆನಾಡಿನವರ ಪದ್ಧತಿಯಂತೆ ಕುಶಲ ವಿಚಾರಿಸಿ 'ವೈಕುಂಠರಾಜು ಇಷ್ಟು ಬೇಗ ಬಂದಿದಾರೋ ಇಲ್ಲವೋ, ವೈಎನ್ಕೆ ಬಂದಿದ್ದಾರೆ' ಎಂದು ಹೇಳಿದರು. ಸ್ವಾಗತಕಾರರಿಂದ ಒಳಪ್ರವೇಶಕ್ಕೆ ಅನುಮತಿ ಪತ್ರ ಪಡೆದುಕೊಳ್ಳುವಂಥ ಸನ್ನಿವೇಶ ಇನ್ನೂ ಅಲ್ಲಿ ಜಾರಿಯಾಗಿರಲಿಲ್ಲ. ಕಚೇರಿಯ ಒಳಗೆ ಪ್ರವೇಶಿಸಿ ಮೊದಲ ಮಹಡಿಯಲ್ಲಿ ಇದ್ದ ಹರಿಕುಮಾರ್ ಅವರ ಕೋಣೆಯ ಹೊರಗಡೆ ನಿಂತುಕೊಂಡೆ. ಅವರ ಕೋಣೆಯ ಎದುರಿಗೆ ಅವರ ಆಪ್ತ ಸಹಾಯಕರ ಕೋಣೆ. ನಾನು ಅಲ್ಲಿ ಬಂದು ನಿಂತದ್ದನ್ನು ನೋಡಿ ಅವರ ಸಹಾಯಕ ಬಲಗೈಯಲ್ಲಿ ಏನೆಂದು ಸಂಜ್ಞೆ ಮಾಡಿದ. ಅವನ ಬಳಿ ಸಾರಿ 'ಹನುಮಂತಯ್ಯ ಅವರು ಕಳಿಸಿದ್ದಾರೆ, ಹರಿಕುಮಾರ್ ಅವರನ್ನು ಭೇಟಿ ಮಾಡಬೇಕು' ಎಂದು ಮೆಲ್ಲಗೆ ಹೇಳಿದೆ. ಒಂದು ಚೀಟಿಯಲ್ಲಿ ಬರೆಸಿಕೊಂಡು ನನಗೆ ಅಲ್ಲಿ ಹಾಕಿದ್ದ ಬೆಂಚಿನ ಮೇಲೆ ಕುಳಿತುಕೊಳ್ಳಲು ಹೇಳಿದ. ನಾನು ಬರೆದುಕೊಟ್ಟಿದ್ದ ಚೀಟಿಯನ್ನು ಒಳಗೆ ಒಯ್ದ. ಉದ್ವೇಗ, ಆತಂಕದಿಂದ ಚಡಪಡಿಸುತ್ತ ಕುಳಿತು ಅಲ್ಲಿ ಹಾಕಿದ್ದ ಅವತ್ತಿನ ಪ್ರಜಾವಾಣಿ ಡೆಕನ್ ಹೆರಾಲ್ಡ್ ಪತ್ರಿಕೆಗಳನ್ನು ನೋಡತೊಡಗಿದೆ. ಒಳಗೆ ಹೋಗಿದ್ದ ಸಹಾಯಕ ಕೆಲವೇ ನಿಮಿಷದ ನಂತರ ಹೊರಗೆ ಬಂದು ಒಳಗೆ ಹೋಗಲು ಸಂಜ್ಞೆ ಮಾಡಿದ. ಎದೆ ಬಡಿತವನ್ನು ಸ್ಥಿಮಿತಕ್ಕೆ ತಂದುಕೊಂಡು ನಿಧಾನವಾಗಿ ಉಸಿರೆಳೆದುಕೊಂಡು ಹರಿಕುಮಾರ್ ಅವರ ಕೋಣೆಯನ್ನು ಪ್ರವೇಶಿಸಿದೆ. ಇಪ್ಪತ್ತುನಾಲ್ಕು ಇಪ್ಪತ್ತೈದರ, ದಟ್ಟವಾದ ಕುರುಚಲು ಗಡ್ಡದ, ಕನ್ನಡಕ

ಧರಿಸಿದ್ದ ಹರಿಕುಮಾರ್ ಅವರನ್ನು ಅದೇ ನೋಡಿ ವಿನೀತನಾಗಿ ಕೈಮುಗಿದು ನನ್ನ ಹೆಸರು ಹೇಳಿ ಹನುಮಂತಯ್ಯನವರು ಕಳಿಸಿದ್ದನ್ನು ನೆನಪಿಸಿದೆ. ಪರಿಚಯ ಹೇಳಿಕೊಳ್ಳುತ್ತಲೇ ಜೊತೆಗೆ ಸಿದ್ಧಪಡಿಸಿ ಒಯ್ದಿದ್ದ ಒಂದು ಪುಟದ ಅರ್ಜಿಯನ್ನು ಅವರಿಗೆ ಸಲ್ಲಿಸಿ ಅರ್ಜಿಗೆ ಪೂರಕವಾಗಿ ನನ್ನ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನೂ, ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ನನ್ನ ಬರಹಗಳ ಪ್ರತಿಗಳನ್ನೂ ಮುಂದೆ ಸಲ್ಲಿಸಿದೆ. ಅರ್ಜಿಯನ್ನು ನೋಡಿ ಕಣ್ಣಾಡಿಸುತ್ತಲೇ 'ಡಿ.ಆರ್.ನಾಗರಾಜ್ ಗೊತ್ತೇನ್ರೀ' ಎಂದು ಕೇಳಿದರು. ಅವರಿಂದ ಆ ಪ್ರಶ್ನೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಒಂದು ಕ್ಷಣ ತಡೆದು 'ಗೊತ್ತು ಸರ್, ಎಂ ಎ ಮಾಡುವಾಗ ಅವರು ನನ್ನ ಸಹಪಾಠಿ, ಗೆಳೆಯರು' ಎಂದೆ. ನನ್ನ ಪ್ರಮಾಣ ಪತ್ರಗಳನ್ನೂ, ಬರಹಗಳ ಪ್ರತಿಗಳನ್ನು ನೋಡುತ್ತಾ ತಮ್ಮ ಮೇಜಿನ ಮೇಲಿದ್ದ ಫೋನ್ ಎತ್ತಿಕೊಂಡು ಎರಡೋ ಮೂರೋ ನಂಬರು ತಿರುಗಿಸಿ ಆ ಕಡೆಯಿಂದ ಎತ್ತಿಕೊಂಡ ಸೂಚನೆ ಬರುತ್ತಲೇ 'ವೈಎನ್ಕೆ, ಲಕ್ಷ್ಮಣ ಕೊಡಸೆ ಅಂತ ಕಳಿಸ್ತಾ ಇದೀನಿ. ಅವರಿಗೆ ಒಂದು ಟೆಸ್ಟ್ ಕೊಡಿ' ಎಂದು ಇಂಗ್ಲಿಷಿನಲ್ಲಿ ಹೇಳಿದರು. ನನ್ನ ಬರಹಗಳ ಕಟ್ಟನ್ನು ಹಿಂತಿರುಗಿಸಿ 'ಪ್ರಜಾವಾಣಿಗೆ ಹೋಗಿ ವೈಎನ್ಕೆ ನೋಡಿ' ಎಂದರು. 'ಥ್ಯಾಂಕ್ಯು ಸರ್' ಎಂದು ಹೇಳಿ ಅವರ ಕೋಣೆಯಿಂದ ಹೊರಬಂದೆ.

ಆಗಲೇ ಹನ್ನೊಂದು ಗಂಟೆಯಾಗಿತ್ತು. ಪ್ರಜಾವಾಣಿ ಸಂಪಾದಕೀಯ ವಿಭಾಗಕ್ಕೆ ಹೋಗಿ ಪ್ರತ್ಯೇಕ ಕೋಣೆಯಲ್ಲಿದ್ದ ವೈಎನ್ಕೆ ಅವರನ್ನು ನೋಡಿದೆ. ನನ್ನ ಮುಖ ಪರಿಚಯವಿತ್ತು. ಕುಳಿತುಕೊಳ್ಳಲು ಹೇಳಿದರು. ಅವರು ಬೆಲ್ ಮಾಡಿದಾಗ ಒಳಗೆ ಬಂದ ಸಹಾಯಕನಿಗೆ 'ನಾಭೂ ಕಳಿಸು' ಎಂದರು. ನನ್ನೊಂದಿಗೆ 'ಎಲ್ಲಿದ್ದೀರಿ...' ಎಂದಷ್ಟೇ ಕೇಳಿ ಉತ್ತರ ಪಡೆದಿದ್ದರು. ಅವರು ಮೇಜಿನ ಮೇಲೆ ಜೋಡಿಸಿಟ್ಟಿದ್ದ ಪತ್ರಿಕೆಗಳಲ್ಲಿ ಕಣ್ಣಾಡಿಸುತ್ತಿದ್ದಂತೆ ಹಿರಿಯ ವ್ಯಕ್ತಿಯೊಬ್ಬರು ಒಳಬಂದರು. 'ನಾಭೂ, ಇವರಿಗೆ ಟೆಸ್ಟ್ ಕೊಡಿ' ಎಂದು ಹೇಳಿ ಪತ್ರಿಕೆಯಲ್ಲಿ ಮುಳುಗಿದರು.

ನಾಭೂ ಅವರ ಜೊತೆ ಹೊರ ಬಂದೆ. ಸ್ನೇಹದಿಂದ ಮಾತಾಡಿಸಿದ ನಾಭೂ ನನ್ನನ್ನು ಒಂದು ಮೂಲೆಯಲ್ಲಿ ಕುಳಿತುಕೊಳ್ಳಲು ಹೇಳಿದರು. ಟೆಲಿಪ್ರಿಂಟರ್‌ನಲ್ಲಿ ಬಂದಿದ್ದ ಐದು ಸುದ್ದಿಯ ತುಣುಕುಗಳನ್ನು ಸೇರಿಸಿ ಕನ್ನಡದಲ್ಲಿ ಅನುವಾದಿಸಿ ಬರೆಯಲು ಹೇಳಿದರು. ಗ್ರಾಮಾಂತರ ವಿಭಾಗದಿಂದ ಬಂದಿದ್ದ ಇಂಗ್ಲಿಷ್ ಲಿಪಿಯಲ್ಲಿದ್ದ ವರದಿಯನ್ನು ಕನ್ನಡಿಸಲು ತಿಳಿಸಿದರು. ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ಮೂರು ವಿಷಯಗಳನ್ನು ಕೊಟ್ಟು ಅವುಗಳ ಬಗ್ಗೆ ವಿವರಣೆ ನೀಡಲು ಸೂಚಿಸಿದರು. 'ಮತದಾನದ ಪಾವಿತ್ರ್ಯ' ಎಂಬ ವಿಷಯದ ಮೇಲೆ ಟಿಪ್ಪಣಿಗೆ ಹೇಳಿದರು. ಇಂಗ್ಲಿಷ್ ನಿಂದ ಕನ್ನಡಕ್ಕೆ ಅನುವಾದಿಸುವ ರೀತಿಯನ್ನು ಜನಪ್ರಗತಿಯಲ್ಲಿದ್ದಾಗ ತಿಳಿದಿದ್ದೆ. ಪ್ರಜಾವಾಣಿ ನನ್ನ ನಿತ್ಯದ ಓದಿನ ಸಂಗಾತಿ ಆಗಿದ್ದರಿಂದ ಅದರ ಭಾಷೆ ನನಗೆ ಪರಿಚಿತವಾಗಿತ್ತು. ಸುದ್ದಿಯ ತುಣುಕುಗಳನ್ನು ಅನುವಾದಿಸುವುದಲ್ಲದೆ ಅವುಗಳಿಗೆ ಎರಡು, ಮೂರು, ಇಲ್ಲವೇ ಒಂದು ಸಾಲಿನ ಶೀರ್ಷಿಕೆಗಳನ್ನೂ ನೀಡಿದೆ. ಉದಯರವಿ ಪತ್ರಿಕೆಯಲ್ಲಿ ಕೆಲಸ ಮಾಡುತ್ತಾ ಇದ್ದ ಅನುಭವದಿಂದ ವಿವರಣೆ ಕೇಳಿದ್ದ ಮೂರು ವಿಷಯಗಳಿಗೂ ಪತ್ರಿಕೆಯ ಧಾಟಿಯಲ್ಲಿಯೇ ವಿಸ್ತಾರವಾಗಿ ವಿವರಣೆ ಬರೆದೆ. 'ಮತದಾನದ ಪಾವಿತ್ರ್ಯ' ವಿಷಯ ಸಂಪಾದಕೀಯದ ಧಾಟಿಯಲ್ಲಿ ಇರಬೇಕು ಎಂದು ಅದಕ್ಕೆ ಸಂಬಂಧಿಸಿ ಸಮತೋಲನದ ವ್ಯಾಖ್ಯಾನಕ್ಕೆ ಪ್ರಯತ್ನಿಸಿದೆ. ಎಲ್ಲ ಮುಗಿಸಿ ನಿಟ್ಟುಸಿರು ಬಿಡುವಾಗ ಬೆಳಗ್ಗೆಯಿಂದ ಏನನ್ನೂ ತಿನ್ನದೆ ಇರುವುದು ಗಮನಕ್ಕೆ ಬಂತು. ನಾಭೂ ಎಂದು ಅದುವರೆಗೆ ಪರಿಚಿತರಾಗಿದ್ದ ವ್ಯಕ್ತಿ ನಾಗಭೂಷಣಂ ಎಂದು ಆ ವೇಳೆಗಾಗಲೇ ಗೊತ್ತಾಗಿತ್ತು. ಎಲ್ಲ ಬರೆದು ಮುಗಿಸಿ ಅವರ ಕೈಗಿತ್ತೆ. ಆ

ವೇಳೆಗೆ ಒಂದು ಗಂಟೆಯ ಮೇಲಾಗಿತ್ತು. ಪರಿಚಿತರಾಗಿದ್ದ ವೈಕುಂಠರಾಜು, ಜಿ.ಎಸ್.ಸದಾಶಿವ ಸಂಪಾದಕೀಯ ವಿಭಾಗದ ಪಕ್ಕದಲ್ಲಿದ್ದ ಚೇಂಬರ್ ಒಳಗೆ ಇದ್ದರು. ಅವರನ್ನು ನೋಡಲು ಹೋದೆ. ಮುಖ ನೋಡುತ್ತಲೇ 'ಟೆಸ್ಟ್ ಆಯ್ತೇನೋ?' ಎಂದರು.

ಬೆಳಗ್ಗೆ ಹರಿಕುಮಾರ್ ಅವರನ್ನು ಭೇಟಿ ಮಾಡಿದ್ದನ್ನು ತಿಳಿಸಿದೆ. 'ಅವರ ಸೂಚನೆಯಂತೆ ಟೆಸ್ಟ್ ಆಯಿತು' ಎಂದೆ. 'ಒಳ್ಳೇದಾಯ್ತು.. ಒಳ್ಳೇದಾಯ್ತು... ಬಿಡು' ಎಂದರು. ಅವರಿಗೂ, ಜೊತೆ ಇದ್ದ ಸದಾಶಿವ ಅವರಿಗೂ ವಂದಿಸಿ 'ಮಂಡ್ಯಕ್ಕೆ ಹೋಗಬೇಕು ಸರ್' ಎಂದು ಹೇಳಿ ನಿರ್ಗಮಿಸಿದೆ.

ಮಂಡ್ಯಕ್ಕೆ ಬಂದು ನಿತ್ಯದ ಕೆಲಸಗಳಲ್ಲಿ ತೊಡಗಿಕೊಂಡೆ. ಪ್ರಜಾವಾಣಿಯಲ್ಲಿ ಲಿಖಿತ ಪರೀಕ್ಷೆ ಎದುರಿಸಿ ಬಂದ ಸಂಗತಿಯನ್ನು ಯಾರಲ್ಲಿಯೂ ಹೇಳಿಕೊಳ್ಳುವಂತಿರಲಿಲ್ಲ. ಬೆಂಗಳೂರಿನಲ್ಲಿ ನನ್ನ ಸಹಪಾಠಿ ಜಯಮ್ಮನವರ ಮನೆಯ ವಿಳಾಸವನ್ನು ಪ್ರಜಾವಾಣಿಗೆ ಸಲ್ಲಿಸಿದ ಅರ್ಜಿಯಲ್ಲಿ ಬರೆದಿದ್ದೆ. ಹಿಂದೆ ಸಂಯುಕ್ತ ಕರ್ನಾಟಕಕ್ಕೆ ಸಂದರ್ಶನಕ್ಕೆ ಹೋದಾಗಲೂ ಅದೇ ವಿಳಾಸ ನೀಡಿದ್ದೆ. ನನ್ನ ಬೆಂಗಳೂರು ಸಂಪರ್ಕಕ್ಕೆ ಅದೇ ವಿಳಾಸವಾಗಿತ್ತು. ಜಯಮ್ಮ ಅವರ ಮನೆ ಆನರ್ಸ್ ಮತ್ತು ಎಂ.ಎ ಓದಿದ ಐದೂ ವರ್ಷಗಳಲ್ಲಿ ನಮ್ಮ ಗೆಳೆಯರ ಗುಂಪಿಗೆ ಆಶ್ರಯತಾಣದಂತೆ ಇತ್ತು. ಬಿಡುವಾದಾಗಲೆಲ್ಲ ಅವರ ಮನೆಗೆ ಹೋಗಿ ನಿರುದ್ಯೋಗದ ಬವಣೆಯನ್ನು ಹಂಚಿಕೊಳ್ಳುತ್ತಿದ್ದೆ. ಜಯಮ್ಮನವರು ಅವರ ತಂದೆಯವರ ಸಂಪರ್ಕದಲ್ಲಿ ಮೊದಲು ಒಂದು ಸ್ವಯಂ ಸೇವಾ ಸಂಸ್ಥೆಯಲ್ಲಿ ಸೇರಿದ್ದರು. ಕೆಲವೇ ತಿಂಗಳಲ್ಲಿ ಸರ್ಕಾರದ ಸಹಕಾರ ಇಲಾಖೆಯಲ್ಲಿ ಲೆಕ್ಕಪತ್ರ ತಪಾಸಣೆಯ ಸಿಬ್ಬಂದಿಯಾಗಿ ಆಯ್ಕೆಯಾಗಿದ್ದರು. ಅಲ್ಲಿ ಕೆಲವು ತಿಂಗಳಿದ್ದು ಯೂನಿಯನ್ ಬ್ಯಾಂಕ್ ನಲ್ಲಿ ಗುಮಾಸ್ತೆಯ ಹುದ್ದೆಗೆ ಆಯ್ಕೆಯಾಗಿ ಸೇರಿಕೊಂಡಿದ್ದರು. ಬೆಂಗಳೂರಿಗೆ ಭೇಟಿ ನೀಡಿದಾಗ ಬಾಲಸುಬ್ರಹ್ಮಣ್ಯ ಅವರ ಕೋಣೆಯಲ್ಲಿ ಆಶ್ರಯ ಪಡೆಯುತ್ತಿದ್ದಾಗಲೂ ಜಯಮ್ಮನವರ ಮನೆಗೆ ಭೇಟಿ ನೀಡುವುದು ಪರಿಪಾಠವಾಗಿತ್ತು.

ಎರಡು ವಾರಗಳ ನಂತರ ಬೆಂಗಳೂರಿಗೆ ಹೋದೆ. ಎಂದಿನಂತೆ ಬಾಲಸುಬ್ರಹ್ಮಣ್ಯ ಅವರ ಕೋಣೆಗೆ ಹೋಗಿ ನನ್ನ ಕೈ ಚೀಲವನ್ನು ಇರಿಸಿದೆ. ಜಯಮ್ಮನವರು ಬ್ಯಾಂಕ್ ಕೆಲಸ ಮುಗಿಸಿ ಬರುವುದು ಸಂಜೆಯಾಗಿದ್ದರಿಂದ ಆ ಹೊತ್ತಿಗೆ ಅವರ ಮನೆಗೆ ಹೋದೆ. ಕುಶಲೋಪರಿಯ ನಂತರ 'ನಿಮಗೊಂದು ಪತ್ರ ಬಂದಿದೆ. ನೋಡಿ. ಪ್ರಜಾವಾಣಿಯಿಂದ ಬಂದಿದ್ದು' ಎಂದು ಕೊಟ್ಟರು. ಅದು ಇನ್‌ಲ್ಯಾಂಡ್ ಲೆಟರ್ ಮಾದರಿಯ ಪತ್ರ. ನನ್ನ ಲಿಖಿತ ಪರೀಕ್ಷೆಯನ್ನು ಉಲ್ಲೇಖಿಸಿ ಅದರ ನಂತರದ ಸಂದರ್ಶನಕ್ಕಾಗಿ ಆಹ್ವಾನಿಸಿದ ಪತ್ರ. ದಿನಾಂಕ ನೋಡಿದೆ. ಒಂದು ವಾರದ ಹಿಂದಿನ ದಿನಾಂಕ ಇತ್ತು. ನನಗೆ ಒಮ್ಮೆಗೇ ಕುಸಿದು ಹೋದ ಅನುಭವ ಆಯಿತು. ನಾನು ಲಿಖಿತ ಪರೀಕ್ಷೆ ಎದುರಿಸಿ ಬಂದ ಮರುದಿನವೇ ಆ ಪತ್ರವನ್ನು ಕಳಿಸಿದ್ದರು. ನನ್ನನ್ನು ಸಂಪರ್ಕಿಸಲು ಜಯಮ್ಮನವರಿಗೆ ಮಂಡ್ಯದ ವಿಳಾಸ ಕೊಟ್ಟಿರಲಿಲ್ಲ. ಛೇ.. ಎಂಥ ಅನಾಹುತವಾಯಿತು ಎಂದು ತಲೆಯ ಮೇಲೆ ಕೈಹೊತ್ತು ಕುಳಿತೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದು ಪೇಚಾಡುತ್ತಾ ಅಲ್ಲಿಂದ ಕಾಲೆಳೆದುಕೊಂಡು ಶೇಷಾದ್ರಿಪುರಕ್ಕೆ ಬಾಲಸುಬ್ರಹ್ಮಣ್ಯ ಅವರ ಕೋಣೆಗೆ ವಾಪಸಾದೆ. ರಾತ್ರಿ ಅವರೊಂದಿಗೆ ಊಟ ಮಾಡುತ್ತಿದ್ದಾಗ ನನ್ನ ಅದೃಷ್ಟವನ್ನು ಬೈದುಕೊಂಡು 'ನೋಡಿ ಹೀಗೆ ಹೀಗೆ ಆಗಿದೆ. ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರಂತೆ' ಎಂದು ಹತಾಶೆಯಿಂದ ಹೇಳಿದೆ.

ಮರುದಿನ ಎಂದಿನಂತೆ ನಿತ್ಯ ಕರ್ಮಗಳನ್ನು ತೀರಿಸಿಕೊಂಡು ಮತ್ತೆ ಪ್ರಜಾವಾಣಿಯ ಕಡೆ ಹೆಜ್ಜೆ ಹಾಕಿದೆ. ಹರಿಕುಮಾರ್ ಅವರನ್ನೇ ನೋಡುವುದು... ಸಕಾಲದಲ್ಲಿ ಪೋಸ್ಟ್ ಸಿಗಲಿಲ್ಲ ಎಂದು

ಪ್ರಾರ್ಥಿಸುವುದು... ಎಂದು ನನ್ನಷ್ಟಕ್ಕೆ ಸಮಾಧಾನಪಡಿಸಿಕೊಳ್ಳುತ್ತ ಸಾಗಿದೆ. ಅವತ್ತು ಕೂಡ ಸ್ವಾಗತಕಾರರ ಜಾಗದಲ್ಲಿ ಪುಟ್ಟನಾಯ್ಕರೇ ಇದ್ದರು. ಅವರನ್ನು ಕೇಳಿಕೊಂಡು ಹರಿಕುಮಾರ್ ಅವರ ಕಚೇರಿಯ ಬಳಿ ಸಾರಿದೆ. ಅವರ ಸಹಾಯಕನಲ್ಲಿ ನನಗೆ ಬಂದಿದ್ದ ಸಂದರ್ಶನದ ಪತ್ರವನ್ನು ನೀಡಿದೆ. ಅವನು ಕುಳಿತುಕೊಳ್ಳಲು ಹೇಳಿ ಅದನ್ನು ಒಳಕ್ಕೆ ಒಯ್ದ. ಅಲ್ಲಿ ಹಾಕಿದ್ದ ಬೆತ್ತದ ಸೋಫಾದಲ್ಲಿ ನನ್ನಂತೆಯೇ ಇನ್ನೊಬ್ಬ ಯುವಕರು ಕುಳಿತಿದ್ದರು. ಎದುರಿಗೆ ಇದ್ದ ಪತ್ರಿಕೆಯನ್ನು ಅವರು ಹರಡಿಕೊಂಡು ನೋಡುತ್ತಿದ್ದರು.

ಸ್ವಲ್ಪ ಹೊತ್ತಿಗೆ ನನಗೆ ಕರೆ ಬಂತು. ಉಸಿರನ್ನು ಸಮಸ್ಥಿತಿಗೆ ತಂದುಕೊಂಡು ಹರಿಕುಮಾರ್ ಚೇಂಬರ್ ಪ್ರವೇಶಿಸಿದೆ. 'ನಮಸ್ಕಾರ' ಹೇಳಿದವನೇ ಅಪರಾಧಿ ಭಾವದಲ್ಲಿ 'ಪೋಸ್ಟ್ ಸಿಗುವುದು ತಡವಾಯಿತು ಸರ್...' ಎಂದು ರಾಗ ಎಳೆಯುತ್ತಿದ್ದಂತೆ ಕೈಯಲ್ಲಿ ಒಂದು ಕಡತ ಹಿಡಿದುಕೊಂಡು ನನ್ನನ್ನು ಕರೆದುಕೊಂಡು ಅವರ ಚೇಂಬರ್ ಪಕ್ಕದಲ್ಲಿದ್ದ ಇನ್ನೊಂದು ಭವ್ಯವಾದ ಕೋಣೆಗೆ ಕರೆದೊಯ್ದರು. ಅಲ್ಲಿ ನೋಡಿದರೆ ಕೆ.ಎನ್.ಗುರುಸ್ವಾಮಿಯವರು! ನಮಸ್ಕರಿಸಿ ನಿಂತುಕೊಂಡೆ. ಅವರ ಎದುರು ತಾವು ತಂದಿದ್ದ ಕಡತವನ್ನು ಇಟ್ಟು ತೆಲುಗಿನಲ್ಲಿ 'ಹನುಮಂತಯ್ಯ ಕಳಿಸಿದ್ದು..' ಎಂದೇನೋ ಹರಿಕುಮಾರ್ ಹೇಳಿದರು. ಗುರುಸ್ವಾಮಿಯವರು ತೆಲುಗಿನಲ್ಲಿ ಏನನ್ನೋ ಕೇಳಿದಂತೆ ಆಯಿತು. ಅದಕ್ಕೆ ಹರಿಕುಮಾರ್ ತೆಲುಗಿನಲ್ಲಿ ಪ್ರತಿಯಾಗಿ ಹೇಳಿದರು. ನನ್ನತ್ತ ನೋಡಿ ತಮ್ಮೆದುರು ಇಟ್ಟ ಕಡತದಲ್ಲಿ ಸಹಿ ಹಾಕಿದರು ಗುರುಸ್ವಾಮಿಯವರು. ಅವರಿಂದ ಸಹಿ ಪಡೆಯುತ್ತಲೇ ಹರಿಕುಮಾರ್ ಅವರು ಹೊರಬಂದು ತಮ್ಮ ಕೋಣೆಗೆ ಹೋದರು. ನಾನು ಅವರನ್ನು ಹಿಂಬಾಲಿಸಿ ಬಂದವನು ಸಂದರ್ಶನದ ಕೋಣೆಯಲ್ಲಿ ನಿಂತುಕೊಂಡೆ. ಅವರ ಸಹಾಯಕ ನನಗೆ ಸೂಚಿಸಿದಾಗ ಹರಿಕುಮಾರ್ ಅವರ ಚೇಂಬರ್‌ಗೆ ಹೋದೆ. ಅವರು ನನಗೆ ಒಂದು ಪತ್ರ ಕೊಡುತ್ತಾ 'ನಿಮ್ಮನ್ನು ನೇಮಕ ಮಾಡಿಕೊಂಡಿದ್ದೇವೆ..' ಎಂದು ಇಂಗ್ಲಿಷಿನಲ್ಲಿ ಹೇಳಿದರು. ಒಂದು ಕ್ಷಣ ನನಗೆ ನಂಬಿಕೆಯೇ ಬರಲಿಲ್ಲ. ನೇಮಕ ಪತ್ರದ ಇನ್ನೊಂದು ಪ್ರತಿಗೆ ಸಹಿ ಹಾಕಿ ಕೊಟ್ಟು ಹೊರಬಂದೆ. ಸಂದರ್ಶನದ ಕೋಣೆಯಲ್ಲಿ ಮೊದಲು ಕುಳಿತಿದ್ದ ವ್ಯಕ್ತಿ ತಮ್ಮನ್ನು ಪರಿಚಯಿಸಿಕೊಂಡು 'ನಾನು ಶಿವಾಜಿ ಗಣೇಶನ್' ಅಂತ ಹೇಳಿದರು. ನಾನೂ ನನ್ನ ಹೆಸರು ಹೇಳಿ ಅವರ ಕೈಕುಲುಕಿ ತಕ್ಷಣವೇ ಪ್ರಜಾವಾಣಿ ಸಂಪಾದಕೀಯ ವಿಭಾಗದತ್ತ ನಡೆದೆ. ವೈಕುಂಠರಾಜು ಅವರಿಗೆ ಸುದ್ದಿಯನ್ನು ತಿಳಿಸಬೇಕಿತ್ತು.

**'ಪ್ರಜಾವಾಣಿಗೆ ಸ್ವಾಗತ'**

ಇಡೀ ಪ್ರಜಾವಾಣಿ ಸಂಪಾದಕೀಯ ಕಚೇರಿಯೇ ಹೊಸದಾಗಿ ಕಂಡಿತು. ವೈಕುಂಠರಾಜು ನನ್ನನ್ನು ನೋಡುತ್ತಲೇ 'ಎಲ್ಲಿಗೆ ಹೋಗಿದ್ದೆಯೋ? ಹೋದ ವಾರವೇ ಬರಬೇಕಿತ್ತಲ್ಲ ನೀನು?' ಎಂದು ತರಾಟೆಗೆ ತೆಗೆದುಕೊಳ್ಳುವ ಧಾಟಿಯಲ್ಲಿ ಹೇಳಿದರು. ಅವರ ಪಕ್ಕದಲ್ಲಿ ಕುಳಿತಿದ್ದ ಜಿ.ಎಸ್. ಸದಾಶಿವ ಎದ್ದು ನಿಂತು 'ಕಂಗ್ರಾಜುಲೇಶನ್ಸ್, ಪ್ರಜಾವಾಣಿಗೆ ಸ್ವಾಗತ' ಎಂದು ಕೈಕುಲುಕಿದರು. ವೈಕುಂಠರಾಜು ಅವರಿಗೂ ಕೈ ಕುಲುಕಿದೆ. ಆಗಷ್ಟೇ ಪಡೆದಿದ್ದ ನೇಮಕ ಪತ್ರವನ್ನು ನೀಡಿದೆ. ಅದರ ಮೇಲೆ ಕಣ್ಣಾಡಿಸಿ 'ಗುಡ್.. ಗುಡ್.. ಅಂತೂ ಬೆಂಗಳೂರಿಗೆ ಬಂದೆ' ಎಂದರು. ಕುಳಿತುಕೊಳ್ಳಲು ಹೇಳಿದರು. 'ನಿನ್ನ ಆಯ್ಕೆ ಹೋದ ವಾರವೇ ಫೈನಲ್ ಆಗಿತ್ತು...' ಎಂದರು. ನನ್ನೊಂದಿಗೆ ಇನ್ನೂ ಐದು ಜನರನ್ನು ಒಟ್ಟಿಗೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂಬ ಸಂಗತಿಯನ್ನೂ ಅವರು ಹೇಳಿದರು. ಅವರು ತರಿಸಿದ್ದ ಕಾಫಿ ಕುಡಿದು ಖುಷಿಯಿಂದ ಹೊರಬಂದೆ. ನನಗೆ ನೇಮಕದ ಪತ್ರ ಸಿಕ್ಕಿದ್ದು 1978ರ ಫೆಬ್ರುವರಿ 18ಕ್ಕೆ. ಮಾರ್ಚ್ ಒಂದರಂದು ಕೆಲಸಕ್ಕೆ ಹಾಜರಾಗುವಂತೆ

ತಿಳಿಸಲಾಗಿತ್ತು.

1978ರ ಮಾರ್ಚ್ ಒಂದರಂದು ನನ್ನೊಂದಿಗೆ ಡಿ.ವಿ.ರಾಜಶೇಖರ್, ಶಿವಾಜಿ ಗಣೇಶನ್, ಇಂದೂಧರ ಹೊನ್ನಾಪುರ, ಇ.ವಿ.ಸತ್ಯನಾರಾಯಣ ಮತ್ತು ಚೌಡೇಗೌಡ ಬೀಡನಹಳ್ಳಿ ಪ್ರಜಾವಾಣಿಯ ಉಪಸಂಪಾದಕ, ವರದಿಗಾರರಾಗಿ ಕೆಲಸಕ್ಕೆ ಹಾಜರಾದೆವು.

ಒಂದು ಗೌರವದ ಕೆಲಸ ಪಡೆಯುವುದು ನನಗೆ ಆಗ ಅತ್ಯಂತ ಅವಶ್ಯಕವಾಗಿತ್ತು. ನಾನು ಅತಂತ್ರ ಸ್ಥಿತಿಯಲ್ಲಿದ್ದೆ. ನನ್ನ ಬಿಎ (ಆನರ್ಸ್) ಮತ್ತು ಎಂ.ಎ ಸಹಪಾಠಿಯಾಗಿದ್ದು ನಿರುದ್ಯೋಗದ ದಿನಗಳಲ್ಲಿ ಆಪ್ತರಾಗಿದ್ದ ಸ್ವರ್ಣಾಂಬ ಅವರನ್ನು ಮದುವೆ ಆದಾಗ 'ಉದಯರವಿ'ಯಲ್ಲಿ ಸಿಗುತ್ತಿದ್ದ ಇನ್ನೂರೈವತ್ತು ರೂಪಾಯಿ ಸಂಬಳವೇ ನಮಗೆ ಆಧಾರವಾಗಿತ್ತು. ಆದರೆ ಮದುವೆಯಾದ ಒಂದೂವರೆ ತಿಂಗಳಲ್ಲಿ ಅವರಿಗೆ ಕೆನರಾ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿ ಕೊಂಚ ನಿರಾಳವಾಯಿತು. ಅಂತರಜಾತಿ ಮದುವೆ ಆಗಿದ್ದರಿಂದ ಎಲ್ಲದಕ್ಕೂ ನಾವು ನಾವೇ ಹೊಣೆಗಾರರಾಗಿದ್ದೆವು. ಆದ್ದರಿಂದ ಒಂದು ಕಾಯಂ ಸ್ವರೂಪದ ಕೆಲಸ ಪಡೆಯುವುದು ನನಗೆ ಬದುಕಿನ ಪ್ರಶ್ನೆಯೇ ಆಗಿತ್ತು. 1978ರ ಕಾಲದಲ್ಲಿ ಪ್ರಜಾವಾಣಿಯಲ್ಲಿ ಉಪಸಂಪಾದಕನ ಕೆಲಸ ಸರ್ಕಾರದ ಯಾವುದೇ ಇಲಾಖೆಯಲ್ಲಿ ಪಡೆಯುವ ಕೆಲಸದಷ್ಟೇ ಮಹತ್ವದ್ದಾಗಿತ್ತು.

ನಾವು ಒಟ್ಟು ಆರು ಮಂದಿ ಏಕಕಾಲದಲ್ಲಿ ಪ್ರಜಾವಾಣಿಯಲ್ಲಿ ಪತ್ರಕರ್ತರಾಗಿ ಕೆಲಸಕ್ಕೆ ಸೇರಿದ ಸಂದರ್ಭ ವಿಶಿಷ್ಟವಾಗಿತ್ತು. ಆಗ ರಾಜ್ಯದಲ್ಲಿ ಪ್ರಜಾವಾಣಿ ಪತ್ರಿಕೆ ಮುಂಚೂಣಿಯಲ್ಲಿತ್ತು. ಪ್ರಸಾರ ಸಂಖ್ಯೆ 85 ಸಾವಿರದಿಂದ 90 ಸಾವಿರದಷ್ಟಿತ್ತು. ನಾಡಿನ ಅತ್ಯಂತ ಹಳೆಯ ದಿನಪತ್ರಿಕೆಯಾಗಿದ್ದ ಸಂಯುಕ್ತ ಕರ್ನಾಟಕ (ಪ್ರಾರಂಭ 1927) ಬೆಂಗಳೂರಿನ ಆವೃತ್ತಿಯನ್ನು 1959ರ ಜನವರಿ 26 ರಂದು ಪ್ರಾರಂಭಿಸಿದ್ದು ಪ್ರಜಾವಾಣಿಯ ನಂತರದ ಸ್ಥಾನದಲ್ಲಿತ್ತು. 1967ರ ನವೆಂಬರ್ 4 ರಂದು ಬೆಂಗಳೂರಿನಲ್ಲಿ ಪ್ರಾರಂಭವಾಗಿದ್ದ ಕನ್ನಡ ಪ್ರಭ ಕೂಡ ಎರಡನೆಯ ಸ್ಥಾನಕ್ಕೆ ಪೈಪೋಟಿ ನಡೆಸುವಂತಿತ್ತು. ಜಾಹೀರಾತುದಾರರಿಗೆ ಪ್ರಜಾವಾಣಿ ಮತ್ತು ಡೆಕನ್ ಹೆರಾಲ್ಡ್ ಆದ್ಯತೆಯ ಪತ್ರಿಕೆಗಳಾಗಿದ್ದವು. ಕನ್ನಡ ಪತ್ರಿಕೋದ್ಯಮಕ್ಕೆ ಸಂಬಂಧಿಸಿ ಪ್ರಜಾವಾಣಿಯಲ್ಲಿ ಅವಕಾಶ ಪಡೆಯುವುದು ಯಾವುದೇ ಪತ್ರಕರ್ತರಿಗೆ ಅಂತಿಮ ಗುರಿಯಾಗಿತ್ತು. ಅಲ್ಲಿ ಕೆಲಸ ಪಡೆಯುವುದೆಂದರೆ ಸರ್ಕಾರದಲ್ಲಿ ಕೆಲಸ ಪಡೆದಂತೆ ಎಂಬ ಸುರಕ್ಷತಾ ಭಾವ. ಅಂಥ ವ್ಯವಸ್ಥಿತವಾದ, ಆರ್ಥಿಕ ಶಿಸ್ತಿನ ಪತ್ರಿಕಾ ಬಳಗವಾಗಿತ್ತು.

1978ರ ಮಾರ್ಚ್ ಒಂದರಂದು ಮಹಾತ್ಮ ಗಾಂಧಿ ರಸ್ತೆಯ ಪ್ರಜಾವಾಣಿ ಕಚೇರಿಯಲ್ಲಿ ಐತಿಹಾಸಿಕ ಸಂದರ್ಭ. ಅದೇ ಮೊದಲ ಸಲ ಕನ್ನಡ ಪತ್ರಿಕೋದ್ಯಮ ಕ್ಷೇತ್ರದ ಮುಖ್ಯವಾಹಿನಿಗೆ ದಲಿತರಿಬ್ಬರ ಪ್ರವೇಶದ ದಿನ ಅದು. ಅದಕ್ಕೂ ಮೊದಲು ರಾಜ್ಯದಲ್ಲಿ ಪತ್ರಿಕಾ ಕ್ಷೇತ್ರವನ್ನು ದಲಿತರು, ಹಿಂದುಳಿದವರು ಪ್ರವೇಶಿಸಿದವರು ಇರಲಿಲ್ಲವೆಂದಲ್ಲ. ಆದರೆ, ಹಾಗೆ ಮುಖ್ಯವಾಹಿನಿಯ ಪ್ರಮುಖ ಪತ್ರಿಕೆಯಲ್ಲಿ ಏಕಕಾಲಕ್ಕೆ ಇಬ್ಬರು ದಲಿತರು ಪ್ರವೇಶ ಪಡೆದದ್ದು ಅದೇ ಮೊದಲು. ಇಬ್ಬರು ದಲಿತರಷ್ಟೇ ಅಲ್ಲ, ಇನ್ನೂ ನಾಲ್ಕು ಮಂದಿ ಹಿಂದುಳಿದ ವರ್ಗಕ್ಕೆ ಸೇರಿದವರು ಅದೇ ದಿನ ಅಂದಿನ ನಂ. 66 ಮಹಾತ್ಮ ಗಾಂಧಿ ರಸ್ತೆಯ ಪ್ರಜಾವಾಣಿ ಕಚೇರಿಗೆ ಅಧಿಕೃತ ಸಿಬ್ಬಂದಿಯಾಗಿ ಕಾಲಿಟ್ಟರು. ಆದ್ದರಿಂದ ಪತ್ರಿಕಾ ಕ್ಷೇತ್ರದಲ್ಲಿ ಕುತೂಹಲ ಮೂಡಿತ್ತು.

ಪ್ರಜಾವಾಣಿ ಆಡಳಿತ ವರ್ಗಕ್ಕೆ ಸಂಸ್ಥೆಯ ಕಾರ್ಯದರ್ಶಿಯಾಗಿ ಕಾಲಿರಿಸಿದ ಕೆ.ಎನ್.ಹರಿಕುಮಾರ್ ಅವರು ಕೈಗೊಂಡಿದ್ದ ದಿಟ್ಟ ನಿರ್ಧಾರದ ಫಲ ಅದು. ಒಟ್ಟಿಗೆ ಆರು ಮಂದಿ ದಲಿತ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದವರನ್ನು ಪತ್ರಿಕಾ ರಂಗದಂತಹ ಪ್ರತಿಷ್ಠಿತ ಕ್ಷೇತ್ರಕ್ಕೆ ಸೇರಿಸಿಕೊಳ್ಳುವುದರಿಂದ ಅದರ ಪಾವಿತ್ರ್ಯಕ್ಕೆ

ಭಂಗ ಬರುತ್ತದೆ, ಅದು ಮಲಿನಗೊಳ್ಳುತ್ತದೆ, ಗುಣಮಟ್ಟದಲ್ಲಿ ಕಳಪೆಯಾಗುತ್ತದೆ ಎಂದು ಭೀತರಾದ, ಪ್ರಜಾವಾಣಿ ಪತ್ರಿಕೆಯಲ್ಲಿ ಸಹಾಯಕ ಸಂಪಾದಕ– ಮುಖ್ಯ ಉಪಸಂಪಾದಕ ಹುದ್ದೆಗಳಲ್ಲಿ ಇದ್ದಂಥ ಕೆಲವು ಹಿರಿಯರು, ಪ್ರಿಂಟರ್ಸ್ ಸಂಸ್ಥೆಯ ಯಜಮಾನ ಕೆ.ಎನ್. ಗುರುಸ್ವಾಮಿ ಅವರಿಗೆ ನಿಯೋಗದಲ್ಲಿ ತೆರಳಿ ದೂರು ನೀಡಿದರಂತೆ. ನಿಯೋಗದ ನೇತೃತ್ವವನ್ನು ವಹಿಸಿದವರು, ಕ್ರೀಡಾ ಚಟುವಟಿಕೆಯೂ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದ ಅಗತ್ಯವನ್ನು ಪ್ರತಿಪಾದಿಸಿ ಕನ್ನಡದಲ್ಲಿ ಕ್ರೀಡಾ ಪತ್ರಿಕೋದ್ಯಮಕ್ಕೆ ಬುನಾದಿ ಹಾಕಿದವರಲ್ಲಿ ಒಬ್ಬರಾದ ಹಿರಿಯರು. ಪ್ರಜಾವಾಣಿಗೆ ಹೆಚ್ಚು ಕಾಲ ಸಂಪಾದಕರಾಗಿದ್ದ ಟಿ.ಎಸ್.ರಾಮಚಂದ್ರರಾವ್ ಅವರ ಸಂಬಂಧಿ. ಟಿ.ಎಸ್.ರಾಮಚಂದ್ರರಾವ್ ಅವರ ವಿದ್ಯಾರ್ಹತೆಯ ಬಗ್ಗೆ ಇರುವ ಅನುಮಾನ ಕ್ರೀಡಾ ಪತ್ರಕರ್ತರ ಬಗ್ಗೆಯೂ ಇರುವಂಥದ್ದೇ. 1978ರ ಮಾರ್ಚ್ ಒಂದರಂದು ಒಟ್ಟಿಗೆ ಪ್ರಜಾವಾಣಿ ಸೇರಿದ ಆರು ಮಂದಿಯೂ ಸ್ನಾತಕೋತ್ತರ ಪದವೀಧರರು. ಆದರೆ ಆ ವೇಳೆಗೆ ಪ್ರಜಾವಾಣಿಯಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಕೇವಲ ಮೂವರಷ್ಟೆ. ಆಗಿನ ಸುಮಾರು ನಲವತ್ತರಷ್ಟಿದ್ದ ಪತ್ರಕರ್ತರಲ್ಲಿ ಎಂ. ಗೋಪಾಲ ಕಣ್ಣನ್, ಬಿ.ವಿ.ವೈಕುಂಠರಾಜು, ಜಿ.ಎಸ್.ಸದಾಶಿವ ಅವರಷ್ಟೆ ಸ್ನಾತಕೋತ್ತರ ಪದವಿ ಪಡೆದಿದ್ದರು. ಪತ್ರಿಕೋದ್ಯಮ ಪದವಿ ಪಡೆದವರು ಕೇವಲ ಇಬ್ಬರು (ಡಿ.ಪಿ.ಪರಮೇಶ್ವರ ಮತ್ತು ಆರ್.ಪಿ.ಜಗದೀಶ), ಉಳಿದವರಲ್ಲಿ ಹೆಚ್ಚಿನವರು ಕಾಲೇಜು ಮುಟ್ಟಲು ಹತ್ತಿದ್ದರು. ಸಾಮಾನ್ಯ ಪದವಿ ಪಡೆದವರಲ್ಲಿ ಶ್ರೀಧರ ಆಚಾರ್, ರಾಜಾ ಶೈಲೇಶಚಂದ್ರ ಗುಪ್ತ, ವಿ.ಆರ್. ಗಿರಿಧರ್ ಅವರಷ್ಟೆ. ಒಂದೇ ಸಲಕ್ಕೆ ತಮಗಿಂತಲೂ ಹೆಚ್ಚಿನ ಶೈಕ್ಷಣಿಕ ಅರ್ಹತೆ ಪಡೆದ ಕೆಳವರ್ಗದ (ಅವರ ದೃಷ್ಟಿಯಲ್ಲಿ) ಆರು ಮಂದಿ ಪತ್ರಿಕಾರಂಗ ಪ್ರವೇಶಿಸಿದರೆ ಅದರ ಗುಣಮಟ್ಟ ಎಕ್ಕುಟ್ಟಿ ಹೋಗಲಾರದೇ ಎಂಬ ದುಗುಡದ ಮುಖ ಹೊತ್ತು ಗುರುಸ್ವಾಮಿ ಅವರಲ್ಲಿ ದೂರು ನೀಡಿದರಂತೆ. ಆ ವೇಳೆಗೆ ಪತ್ರಿಕಾರಂಗದ ಲೆಕ್ಕಾಚಾರದ ಅನುಭವ ಇದ್ದ ಮುತ್ಸದ್ಧಿಯೂ ಆಗಿದ್ದ ಯಜಮಾನರು ಎಲ್ಲರ ಮುಖವನ್ನು ಸುಮ್ಮನೆ ನೋಡಿದರಂತೆ. ಬೆಂಗಳೂರು ರೇಸ್ ಕ್ಲಬ್ಬಿನ ಸ್ಟೀವರ್ಡ್ ಆಗಿ ಬಹುಕಾಲ ಇದ್ದವರು ಅವರು. ಕುದುರೆಗಳ ನಾಗಾಲೋಟವನ್ನೂ ಬಲ್ಲವರು. ತಮ್ಮನ್ನು ಭೇಟಿ ಮಾಡಿದ ನಿಯೋಗಕ್ಕೆ ಸಮಷ್ಟಿ ರೂಪದಲ್ಲಿ ಹೇಳಿದರಂತೆ: 'ನೀವೂ ಒಂದು ಕಾಲದಲ್ಲಿ ಕತ್ತೆಗಳಂತೆಯೇ ಇದ್ದಿರಿ. ಈಗ ಕುದುರೆಗಳಾಗಿದ್ದೀರಿ. ಅವರು ಈಗಷ್ಟೆ ಬಂದಿದ್ದಾರೆ. ಸ್ವಲ್ಪ ಕಾಲ ಬಿಟ್ಟರೆ ಅವರೂ ರೇಸ್ ಕುದುರೆಗಳಂತೆ ಆಗುತ್ತಾರೆ..' ಗುರುಸ್ವಾಮಿ ಅವರು ಮಿತಭಾಷಿ. ಸಾಮಾನ್ಯವಾಗಿ ಅವರು ಯಾರೊಂದಿಗೂ ಸಂಭಾಷಣೆ ನಡೆಸಿದ್ದನ್ನು ಕಂಡವರೇ ಇಲ್ಲ, ಅವರ ಕುಟುಂಬದವರನ್ನು ಬಿಟ್ಟು. ಅವರದು ಗುಡುಗಿನಂಥ ಧ್ವನಿ. ಸಿಂಹಗರ್ಜನೆಯಂಥ ಯಜಮಾನರ ಮಾತನ್ನು ಕೇಳಿದ 'ಪತ್ರಿಕೋದ್ಯಮದಲ್ಲಿ ಶ್ರೇಷ್ಠತೆಯ ವ್ಯಸನಿ'ಗಳಾಗಿದ್ದ ಹಿರಿಯರು ಅಕ್ಷರಶಃ ಬಾಲಮುದುರಿಕೊಂಡು ವಾಪಸಾದರಂತೆ. ಇವೆಲ್ಲ ನಮಗೆ ನಂತರದ ದಿನಗಳಲ್ಲಿ ಪತ್ರಿಕೆಯ ಕಚೇರಿಯ ಒಳಗಿನಿಂದ ಕೇಳಿಬಂದ ಸಂಗತಿ.

ಮೊದಲ ದಿನದ ಅನುಭವವೇ ವಿಶೇಷ ರೀತಿಯದು. ಸುದ್ದಿಸಂಪಾದಕರಾಗಿದ್ದ ಬಸರಾಳು ಸಿದ್ಧಲಿಂಗಪ್ಪನವರಿಗೆ ಆರು ಮಂದಿ ಹೊಸಬರನ್ನು ಏಕಕಾಲಕ್ಕೆ ಬರಮಾಡಿಕೊಳ್ಳುವ ಸಂಭ್ರಮ. ಶ್ರೇಷ್ಠತೆಯ ವ್ಯಸನದ ಕರಾಳ ಸ್ವರೂಪಕ್ಕೆ ಬಲಿಯಾದವರಲ್ಲಿ ಅವರೂ ಒಬ್ಬರಾಗಿದ್ದರು. ರಾಜ್ಯದಲ್ಲಿ ಬಲಿಷ್ಠ ಸಮುದಾಯ ಎನಿಸಿದ ಲಿಂಗಾಯತರಾಗಿದ್ದರೂ ಪತ್ರಿಕಾ ಕ್ಷೇತ್ರದಲ್ಲಿ ಅವರು ಅಸ್ಪೃಶ್ಯರಂತೆಯೇ ತುಳಿತಕ್ಕೆ ಒಳಗಾಗಿದ್ದವರು. ಹೇಮದಳ ರಾಮದಾಸ್, ಕೃಷ್ಣಾರೆಡ್ಡಿ, ಟಿ.ನಾಗರಾಜು ಅವರೆಲ್ಲರಿಗೆ ತಮ್ಮೊಂದಿಗೆ ನೋವು ಹಂಚಿಕೊಳ್ಳಲು ಇನ್ನೂ ಆರು ಮಂದಿ ಬಂದಿದ್ದಾರೆ ಎಂಬ ಸಮಾಧಾನ. ಪತ್ರಿಕೋದ್ಯಮ ಪದವಿ ಗಳಿಸಿಕೊಂಡು ಬಂದಿದ್ದರೂ

'ವೃತ್ತಿ ಅಸ್ಪೃಶ್ಯತೆ' ಆರ್.ಪಿ. ಜಗದೀಶ, ಡಿ.ಪಿ. ಪರಮೇಶ್ವರ ಅವರನ್ನೂ ಬಿಟ್ಟಿರಲಿಲ್ಲ. ಕೆಲಸಕ್ಕೆ ಸೇರಿಕೊಳ್ಳುವ ಔಪಚಾರಿಕ ವಿಧಿಗಳನ್ನು ಸ್ನೇಹದಿಂದ ಪೂರೈಸಿದ ಸುದ್ದಿ ಸಂಪಾದಕ ಸಿದ್ದಲಿಂಗಪ್ಪ ಅವರು ಎಲ್ಲರಿಗೂ ಕಾಫಿ ತರಿಸಿ ಉಪಚರಿಸಿ ಕೆಲಸದ ವಿಭಾಗಗಳನ್ನು ಪರಿಚಯಿಸಿಕೊಳ್ಳಲು ಬಿಟ್ಟರು. ಬೆಳಗಿನ ಹೊತ್ತಿಗೆ ಕಚೇರಿಗೆ ಬಂದಿದ್ದ ಎನ್.ಅರ್ಜುನದೇವ, ಆರ್.ಪಿ. ಜಗದೀಶ, ಡಿ.ಪಿ. ಪರಮೇಶ್ವರ, ವಿ.ಆರ್. ಗಿರಿಧರ್ ಅವರು ತಮ್ಮ ವರದಿಗಾರ ವಿಭಾಗಕ್ಕೆ ಎಲ್ಲರನ್ನೂ ಕರೆಸಿಕೊಂಡು ಇನ್ನೊಮ್ಮೆ ಕಾಫಿ ತರಿಸಿಕೊಟ್ಟು ವೃತ್ತಿಗೆ ಸ್ವಾಗತ ಕೋರಿದರು.

**34 ವರ್ಷಗಳ ಪ್ರಯಾಣ**

ಅಲ್ಲಿಂದ ಸತತ 34 ವರ್ಷ ಪ್ರಜಾವಾಣಿ ಬಳಗದ ಸದಸ್ಯನಾಗಿದ್ದೆ. ಅದೇ ಮೊದಲ ಸಲಕ್ಕೆ ನಮ್ಮ ಪದನಾಮ ಉಪ ಸಂಪಾದಕ/ ವರದಿಗಾರ ಎಂದಿತ್ತು. ಇವೆರಡೂ ಒಂದೇ ದರ್ಜೆಯಾಗಿದ್ದರೂ ಅದುವರೆಗೆ ಹಾಗೆ ಪರಿಗಣಿತವಾಗಿರಲಿಲ್ಲ. ಉಪಸಂಪಾದಕನಾಗಿ ಸೇರಿದವನು ಅದೇ ಹಾದಿಯಲ್ಲಿ ಮುಂದುವರಿದು ಮುಖ್ಯ ಉಪಸಂಪಾದಕ, ಸುದ್ದಿ ಸಂಪಾದಕ, ಸಹಾಯಕ ಸಂಪಾದಕ, ಸಂಪಾದಕ ಹುದ್ದೆಗಳ ಶ್ರೇಣಿಯನ್ನು ಕ್ರಮಿಸುತ್ತಿದ್ದರು. ಈ ಹುದ್ದೆಗಳೆಲ್ಲ ಕಚೇರಿಯ ಒಳಗೆ ಕುಳಿತು ಕೆಲಸ ನಿರ್ವಹಿಸುವಂಥ ಸ್ಥಾನಗಳು. ಸಾರ್ವಜನಿಕವಾಗಿ ಸಭೆ ಸಮಾರಂಭಗಳನ್ನು ವರದಿ ಮಾಡುವ, ಮಂತ್ರಿಗಳನ್ನು ಪ್ರಶ್ನೆ ಮಾಡುವ, ಪ್ರಧಾನಿ, ರಾಷ್ಟ್ರಪತಿಗಳ ಸಭೆಗಳನ್ನು ವರದಿ ಮಾಡುವ, ವಿಧಾನಸಭೆ, ವಿಧಾನಪರಿಷತ್ತುಗಳ ಕಲಾಪಗಳನ್ನು ಸಮೀಕ್ಷೆ ನಡೆಸುವ, ವಿಧಾನಸೌಧ ಸೇರಿದಂತೆ ಸರ್ಕಾರಿ ಕಚೇರಿಗಳನ್ನು ಮುಕ್ತವಾಗಿ ಪ್ರವೇಶಿಸಿ ಮಾಹಿತಿಗಳನ್ನು ಕಲೆ ಹಾಕಿ ವಿಶೇಷ ವರದಿಗಳನ್ನು ತಮ್ಮ ಹೆಸರಿನಲ್ಲಿ ಪ್ರಕಟಿಸಿ ಸರ್ಕಾರದ, ಸಾರ್ವಜನಿಕರಲ್ಲಿ ತಮ್ಮ ಬರವಣಿಗೆಯ ಛಾಪನ್ನು ಮೂಡಿಸುವ ಮಾಧ್ಯಮದ ಕೆಲಸ ವರದಿಗಾರ ಎಂಬ ಪದನಾಮಕ್ಕೆ ತೆರೆದಿಟ್ಟ ಅವಕಾಶವಾಗಿತ್ತು. ನವದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ಯೂನಿವರ್ಸಿಟಿಯಲ್ಲಿ ಅಧ್ಯಯನ ನಡೆಸಿ ಚೆನ್ನೈನ 'ಹಿಂದೂ' ಪತ್ರಿಕೆಯಲ್ಲಿ ತರಬೇತಿ ಪಡೆದು ಬಂದಿದ್ದ ಕೆ.ಎನ್.ಹರಿಕುಮಾರ್ ಅವರು ಪತ್ರಿಕಾ ಸಂಸ್ಥೆಯ ಕಾರ್ಯದರ್ಶಿ ಸ್ಥಾನಕ್ಕೆ ಬಂದ ಮೇಲೆ ಪತ್ರಕರ್ತನಾದವನಿಗೆ ಕಚೇರಿಯ ಒಳಗೆ ಮಾತ್ರವಲ್ಲ, ಹೊರಗಡೆಯೂ ಸಮಾಜದಲ್ಲಿ ಬೆರೆತು ಕೆಲಸ ನಿರ್ವಹಿಸುವ ಅವಕಾಶ ಇರಬೇಕು ಎಂದು ಪರಿಭಾವಿಸಿ ಪ್ರವೇಶದ ಹಂತದಲ್ಲಿಯೇ ಉಪ ಸಂಪಾದಕ/ವರದಿಗಾರ ಎಂದು ನೇಮಕ ಪತ್ರವನ್ನು ನೀಡಿದ್ದರು. ಅಷ್ಟೇ ಅಲ್ಲ, ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದವರು ಜಿಲ್ಲಾ ಕೇಂದ್ರಗಳಲ್ಲಿಯೂ ಕೆಲಸ ಮಾಡಿ ಅನುಭವ ಪಡೆಯಬೇಕು ಎಂಬ ವಿಶಾಲದೃಷ್ಟಿಯ ವರ್ಗಾವಣೆ ನೀತಿಯನ್ನು ರೂಪಿಸಿದರು. ಈ ನೀತಿಯ ಪರಿಣಾಮದಿಂದಲೇ ನಾನು ಪ್ರಾರಂಭದ ಹತ್ತು ವರ್ಷ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಉಪಸಂಪಾದಕನಾಗಿ ಅನುಭವ ಪಡೆದು ಹುಬ್ಬಳ್ಳಿಯಲ್ಲಿ ಪ್ರಾರಂಭವಾದ ಪ್ರಜಾವಾಣಿಯ ಆವೃತ್ತಿಯ ನಿರ್ವಹಣೆಗೆ ವರದಿಗಾರನಾಗಿ ಹುಬ್ಬಳ್ಳಿಗೆ ವರ್ಗವಾದೆ. ಅಲ್ಲಿ ಐದು ವರ್ಷ ವರದಿಗಾರ, ಹಿರಿಯ ವರದಿಗಾರನ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಮುಖ್ಯವರದಿಗಾರನಾಗಿ ಬಡ್ತಿ ಪಡೆದು ಮೈಸೂರಿಗೆ ವರ್ಗವಾದೆ. ಅಲ್ಲಿ ಎರಡು ವರ್ಷ ಕೆಲಸ ಮಾಡಿ ಮುಖ್ಯ ಉಪಸಂಪಾದಕನಾಗಿ ಮತ್ತೆ ಬೆಂಗಳೂರಿಗೆ ವರ್ಗವಾದೆ. ಬೆಂಗಳೂರಿನಲ್ಲಿ ನಾಲ್ಕು ವರ್ಷ ಮುಖ್ಯ ಉಪಸಂಪಾದಕನಾಗಿ ಕಾರ್ಯನಿರ್ವಹಿಸಿದವನನ್ನು ಮಂಗಳೂರಿನಲ್ಲಿ ಇನ್ನೊಂದು ಆವೃತ್ತಿಯ ಪ್ರಾರಂಭದ ಪೂರ್ವದಲ್ಲಿ ಮುಖ್ಯ ವರದಿಗಾರನಾಗಿ ವರ್ಗಾಯಿಸಲಾಯಿತು. ಅಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಸುದ್ದಿ ವಿಭಾಗದ ಮುಖ್ಯಸ್ಥನಾಗಿ ಬಡ್ತಿ ಪಡೆದೆ. ಆರು ವರ್ಷಗಳ ನಂತರ ಬೆಂಗಳೂರಿನ ಕೇಂದ್ರ ಕಚೇರಿಗೆ

ಸಹಾಯಕ ಸಂಪಾದಕ ಹುದ್ದೆಯಲ್ಲಿ ವರ್ಗಾವಣೆಯಾಗಿ ಏಕಕಾಲದಲ್ಲಿ ಭಾನುವಾರದ ಸಾಪ್ತಾಹಿಕ ಪುರವಣಿ, ಸೋಮವಾರದ ಶಿಕ್ಷಣ ಪುರವಣಿ, ಶುಕ್ರವಾರದ ಸಿನಿಮಾರಂಜನೆ, ಶನಿವಾರದ ಭೂಮಿಕಾ ಪುರವಣಿಗಳನ್ನು ನಿರ್ವಹಿಸುವ ಹೊಣೆಗಾರಿಕೆಗೆ ನಿಯೋಜಿತನಾದೆ. ನಿವೃತ್ತಿಪೂರ್ವದ ಎರಡು ವರ್ಷ ಸಂಪಾದಕೀಯ ಉಸ್ತುವಾರಿಯ ಸಹಾಯಕ ಸಂಪಾದಕನಾಗಿ ಪತ್ರಿಕೆಯ ಧ್ಯೇಯ ಧೋರಣೆಗಳನ್ನು ಸಾರ್ವಜನಿಕವಾಗಿ ದಾಖಲಿಸುವ ಸಂಪಾದಕೀಯ ಬರಹಗಾರನಾಗಿ ಕಾರ್ಯನಿರ್ವಹಿಸಿದೆ.

ಹರಿಕುಮಾರ್ ಅವರ ತಾಳಿದ್ದ ಪುರೋಗಾಮಿ ದೃಷ್ಟಿಯ ಕಾರಣ, ನಾಡಿನ ಎಲ್ಲ ಭಾಗಗಳ ಜನತೆಯ ಬದುಕನ್ನು ಹತ್ತಿರದಿಂದ ನೋಡುವ ಅವಕಾಶ ನನ್ನ ವೃತ್ತಿಯ ದಿನಗಳಲ್ಲಿ ಪ್ರಾಪ್ತವಾಯಿತು. ಬೆಂಗಳೂರಿನಲ್ಲಿ ಶಿಕ್ಷಣ ಮತ್ತು ಉದ್ಯೋಗದ ಸುಮಾರು ಇಪ್ಪತ್ತು ವರ್ಷಗಳನ್ನು ಕಳೆದ ನನಗೆ ಹುಬ್ಬಳ್ಳಿಯಲ್ಲಿ ಐದು ವರ್ಷಗಳ ಕಾಲ ನೆಲೆಸಿ ಉತ್ತರ ಕರ್ನಾಟಕ ಜಿಲ್ಲೆಗಳ ನಗರ ಹಾಗೂ ಗ್ರಾಮೀಣ ಬದುಕನ್ನು ಹತ್ತಿರದಿಂದ ನೋಡಲು ಸಾಧ್ಯವಾಯಿತು. ಮೈಸೂರಿನಲ್ಲಿ ಇದ್ದ ಎರಡು ವರ್ಷಗಳ ಅವಧಿಯಲ್ಲಿ ಕೊಡಗು, ಚಾಮರಾಜನಗರ, ಹಾಸನ ಜಿಲ್ಲೆಗಳನ್ನು ಹತ್ತಿರದಿಂದ ಕಾಣುವಂತಾಯಿತು. ಮಂಗಳೂರಿನಲ್ಲಿ ಕಳೆದ ಆರು ವರ್ಷಗಳ ಅವಧಿ ನನ್ನ ಸಾಮಾಜಿಕ ಬದುಕನ್ನು ನೋಡುವ ವಾಸ್ತವಿಕ ದೃಷ್ಟಿಯನ್ನು ಸುಧಾರಿಸಿತು. ಮೂರೂವರೆ ದಶಕಗಳ ವೃತ್ತಿ ಬದುಕಿನಲ್ಲಿ ಕರ್ನಾಟಕದ ಸಾಮಾಜಿಕ ಸಂರಚನೆಯನ್ನು ತಳಮಟ್ಟದಿಂದ ನೋಡುವುದಕ್ಕೆ ಸಾಧ್ಯವಾಗಿಸಿದ ಪತ್ರಿಕಾ ಬಳಗದ ಮಾಲೀಕರಾದ ಹರಿಕುಮಾರ್, ತಿಲಕ್‌ಕುಮಾರ್ ಮತ್ತು ಶಾಂತಕುಮಾರ್ ಅವರ ಪುರೋಗಾಮಿ ದೃಷ್ಟಿ, ಸಜ್ಜನಿಕೆಯ ಸಹೃದಯ ನಡವಳಿಕೆಗೆ ಸಾವಿರ ಸಾವಿರ ನಮನಗಳು (ಪತ್ರಿಕಾ ವೃತ್ತಿ ಬದುಕಿನ ಅನುಭವಗಳು ಪ್ರತ್ಯೇಕವಾಗಿಯೇ ದಾಖಲಿಸಬೇಕಾದವು. ಅವುಗಳಲ್ಲಿ ಪತ್ರಿಕಾ ವರದಿಗಾರಿಕೆ ಪರಿಭಾಷೆಯ ಆಫ್ ದಿ ರೆಕಾರ್ಡ್ ಮಾದರಿಯ ಸಂಗತಿಗಳು ನೂರಾರು ಇರುತ್ತವೆ...).

ನನ್ನ ವೃತ್ತಿಬದುಕು ಸಾಗುತ್ತಿರುವಾಗ ನನಗಿಂತಲೂ ಐದು ವರ್ಷ ಮೊದಲೇ ಬ್ಯಾಂಕಿಗೆ ಸೇರಿಕೊಂಡ ತಿಮ್ಮಪ್ಪನ ಬದುಕು ಮತ್ತೊಂದು ದಿಕ್ಕಿನಲ್ಲಿ ಸಾಗುತ್ತಿತ್ತು. ನನ್ನ ಪ್ರಾರಂಭದ ಹತ್ತು ವರ್ಷಗಳ ಅವಧಿ ಯಾವುದೇ ಕಾರ್ಖಾನೆಯ ಕಾರ್ಮಿಕ ಬಂಧುವಂತೆ ಆಗಿತ್ತು. ದಿನಪತ್ರಿಕೆಯಲ್ಲಿ ಸುದ್ದಿಪ್ರಜ್ಞಾಕೇಂದ್ರವಾಗಿದ್ದ ಜನರಲ್ ಡೆಸ್ಕ್ ನನ್ನ ಕಾರ್ಯಕ್ಷೇತ್ರ. ಆ ದಿನಗಳಲ್ಲಿ ಮಾನೋಟೈಪ್ ತಂತ್ರಜ್ಞಾನವಿದ್ದರೂ ಮುದ್ರಣ ತಾಂತ್ರಿಕತೆ ಸಾಂಪ್ರದಾಯಿಕವಾಗಿತ್ತು. ವರದಿಗಳೆಲ್ಲ ಕರಗಿಸಿದ ಸೀಸ ಬಳಸಿ ಸಾಲು ಸಾಲುಗಳಲ್ಲಿ ಕಂಪೋಸ್ ಆಗುತ್ತಿದ್ದರೂ ಸುದ್ದಿಯ ಶೀರ್ಷಿಕೆಗಳನ್ನು ಕೈಯಲ್ಲಿ ಸ್ಟಿಕ್ ಹಿಡಿದು ಬಿಡಿ ಅಕ್ಷರಗಳನ್ನು ಹೆಕ್ಕಿ ಕಂಪೋಸ್ ಮಾಡಬೇಕಿತ್ತು. ಉಪಸಂಪಾದಕರಿಗೆ ನಿತ್ಯ ಆರು ಗಂಟೆಗಳ ಕೆಲಸ ಅಂತ ಇದ್ದರೂ ಜನರಲ್ ಡೆಸ್ಕ್ ವಿಭಾಗದಲ್ಲಿ ಪತ್ರಿಕೆಯ ಮುದ್ರಣದ ಹೊಣೆ ಇದ್ದ ಕಾರಣ ಅದು ಏಳೂವರೆ ಎಂಟು ಗಂಟೆಗೆ ವಿಸ್ತಾರವಾಗುತ್ತಿತ್ತು. ಬಜೆಟ್ ಮಂಡನೆ, ಚುನಾವಣೆ ಫಲಿತಾಂಶ ಇಂತಹ ಮಹತ್ವದ ದಿನಗಳಲ್ಲಿ ಒಂಬತ್ತು ಹತ್ತು ಗಂಟೆಯವರೆಗೂ ಮೀರುತ್ತಿತ್ತು. ಜನರಲ್ ಡೆಸ್ಕ್ ಕಾರ್ಯ ಮೂರು ಪಾಳಿಗಳಲ್ಲಿ ನಡೆಯುತ್ತಿತ್ತು. ಬೆಳಗ್ಗೆ ಹನ್ನೊಂದರಿಂದ ಸಂಜೆ ಐದರವರೆಗೆ ಮೊದಲ ಪಾಳಿ. ಮಧ್ಯಾಹ್ನ ಮೂರರಿಂದ ರಾತ್ರಿ ಒಂಬತ್ತರವರೆಗೆ ಎರಡನೇ ಪಾಳಿ. ರಾತ್ರಿ ಎಂಟೂವರೆಯಿಂದ ಮಧ್ಯರಾತ್ರಿ ಒಂದೂವರೆಯ ವರೆಗೆ ಮೂರನೆಯ ಅಥವಾ ರಾತ್ರಿ ಪಾಳಿ. ಮಧ್ಯಾಹ್ನದ ಪಾಳಿ ಮತ್ತು ರಾತ್ರಿಯ ಪಾಳಿಗಳಲ್ಲಿ ಸಕಾಲದಲ್ಲಿ ಮುದ್ರಣಗಳನ್ನು ಸಿದ್ಧಪಡಿಸಿಕೊಡುವ ಹೊಣೆಗಾರಿಕೆ. ಕೆಲಸದ ಒತ್ತಡ ಜಾಸ್ತಿ. ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಪುಟಗಳನ್ನು ಸಿದ್ಧಪಡಿಸಿ ಮುದ್ರಣಕ್ಕೆ ಸಲ್ಲಿಸುವ ಒತ್ತಡ. ಗುಣಮಟ್ಟದ ಕೆಲಸ ಆಗಬೇಕು. ಅದು ಸಕಾಲದಲ್ಲಿ ಮುಗಿಯಬೇಕು. ಡೆಡ್ ಲೈನ್ ಅಂತ ಹೆಸರಿನ ಒತ್ತಡ. ಬಹುಮುಖ್ಯವಾದ

ಘಟನೆಯೊಂದು ರಾತ್ರಿ ಒಂದೂವರೆಯ ಸುಮಾರಿಗೆ ಘಟಿಸುತ್ತದೆ ಎಂದರೆ ಅದು ಮರುದಿನದ ಪತ್ರಿಕೆಯಲ್ಲಿ ಎಲ್ಲ ವಿವರಗಳೊಂದಿಗೆ ಪ್ರಕಟವಾಗಬೇಕು. ಪೂರ್ಣ ವಿವರಗಳಿಗೆ ಕಾದು ಅದನ್ನು ಮುದ್ರಣದ ಸಮಯಕ್ಕೆ ವಿಳಂಬವಾಗದಂತೆ ಸಿದ್ಧಪಡಿಸುವ ಒತ್ತಡ. ಹೀಗೆ ಕೆಲಸ ಮಾಡಿ ರಾತ್ರಿ ಪಾಳಿ ಮುಗಿಸಿ ಮನೆ ಸೇರುವ ಹೊತ್ತಿಗೆ ಬೆಳಗಿನ ಜಾವ ನಾಲ್ಕು ಗಂಟೆ. ಆಗ ಮಲಗಿದರೆ ಎಷ್ಟು ಹೊತ್ತಿಗೆ ಎಚ್ಚರವಾಗುತ್ತದೆಯೋ.. ನಿದ್ದೆಗೆ ತೊಂದರೆ. ಮನೆಯ ಕೆಲಸಗಳಲ್ಲಿ ನೆರವಾಗುವುದು ಸಾಧ್ಯವಾಗದ ಸ್ಥಿತಿ. ಇಂಥ ಸನ್ನಿವೇಶ ಆರೋಗ್ಯದ ಮೇಲೆಯೂ ಪರಿಣಾಮ ಬೀರುವುದು ಸಹಜ. ಸೂರ್ಯೋದಯ, ಸೂರ್ಯಾಸ್ತಗಳನ್ನು ನೋಡಲಾಗದ ಸ್ಥಿತಿಗೆ ಬಂದಿರುವ ಡೆಸ್ಕ್ ಜರ್ನಲಿಸ್ಟ್ ವಾರದ ರಜೆ ಸಿಕ್ಕರೆ ನಿಜವಾದ ಸ್ವಾತಂತ್ರ್ಯ ಪಡೆದಂತೆ ಒಂದು ದಿನದ ಮಟ್ಟಿಗೆ ಮುಕ್ತವಾಗುತ್ತಾನೆ. ವೃತ್ತಿಯಲ್ಲಿ ಏಕತಾನತೆ ಮುಂದುವರಿದು ಮಾನಸಿಕವಾಗಿ ಕುಗ್ಗಿಹೋಗುತ್ತಾನೆ. ನಾನಾ ಬಗೆಯ ದೈಹಿಕ ಕ್ಲೇಶಗಳಿಗೆ ಗುರಿಯಾಗುತ್ತಾನೆ. ನಮ್ಮ ಹಣೆಬರೆಹವೇ ಇಷ್ಟು ಎಂಬ ಖಿನ್ನತೆಗೂ ಒಳಗಾಗುತ್ತಾನೆ. ಅಂಥ ಅವಸ್ಥೆಗೆ ಬರುವುದರಲ್ಲಿದ್ದಾಗ ಹುಬ್ಬಳ್ಳಿಗೆ ವರ್ಗವಾಗಿ ನಾನು ವೃತ್ತಿಯ ಏಕತಾನತೆಯಿಂದ ಬಿಡುಗಡೆ ಪಡೆದೆ. (ವರದಿಗಾರನಿಗೆ ನಿತ್ಯ ಆರು ಗಂಟೆಗಳ ಕೆಲಸದ ಅವಧಿ ಕಾಯ್ದೆಯಂತೆ ನಿಗದಿಯಾಗಿದ್ದರೂ ವರದಿಗಾರಿಕೆಯ ಸ್ವರೂಪಕ್ಕೆ ಅದು ಪ್ರಾಯೋಗಿಕವಲ್ಲ. ಅಲ್ಲಿನ ಕೆಲಸದ ಒತ್ತಡ ಬೇರೆ ಸ್ವರೂಪದ್ದು. ಕಚೇರಿಯ ಹೊರಗಡೆ ನಗರದಲ್ಲಿ ಸುದ್ದಿಯನ್ನು ಅರಸಿ ತಿರುಗಾಡುವ ಅವಕಾಶ ಇರುವುದರಿಂದ ಅದರಲ್ಲಿ ಕೆಲಸ ಮಾಡುವುದು ಜನರಲ್ ಡೆಸ್ಕ್‌ನಲ್ಲಿ ಕೆಲಸ ಮಾಡುವಷ್ಟು ನೀರಸವಲ್ಲ).

**ಬಲಗೊಂಡ ಬಾಂಧವ್ಯ**

ನಾನು ಬೆಂಗಳೂರಿನಲ್ಲಿ ಬಾಡಿಗೆ ಮನೆ ಹಿಡಿದು ಸಂಸಾರವಂದಿಗನಾದಾಗ ತಿಮ್ಮಪ್ಪ ಮಂಡ್ಯದಿಂದ ಭೇಟಿ ನೀಡಿ ಒಂದು ರಾತ್ರಿ ಉಳಿದು ಹೋಗಿದ್ದ. ಒಬ್ಬಟ್ಟಿನ ಊಟ, ನಮ್ಮಿಬ್ಬರೊಂದಿಗೆ ಆಗ ಬಿಡುಗಡೆಯಾಗಿದ್ದ 'ಖಟ್ಟಾ ಮೀಠ' ಹಿಂದಿ ಚಿತ್ರವನ್ನು ನೋಡಿ ಸಂಭ್ರಮಿಸಿದ್ದ. ಅವನ ಬ್ಯಾಂಕಿನ ಸಹೋದ್ಯೋಗಿ ನಾರಾಯಣ ಮೊಯಿಲಿ ನಮ್ಮ ಕುಟುಂಬಕ್ಕೆ ಅತ್ಯಂತ ಆಪ್ತರಾಗಿ ಸ್ಪಂದಿಸುತ್ತಿದ್ದರು. ಬ್ಯಾಂಕಿನಿಂದ ನಡೆಸುವ ತರಬೇತಿ, ಕಾರ್ಯಾಗಾರ ಬೆಂಗಳೂರಿನಲ್ಲಿ ನಡೆದಿದ್ದಾಗ ತಿಮ್ಮಪ್ಪನ ದರ್ಶನ ನಮಗೆ ಸಿಗುತ್ತಿತ್ತು. ಊರಲ್ಲಿ ರಜೆ ದಿನಗಳಲ್ಲಿ ಭೇಟಿ ಆಗುತ್ತಿದ್ದಾಗ ನಡೆಯುತ್ತಿದ್ದ ಮಾತುಕತೆಗಳೇ ಬೆಂಗಳೂರಿನಲ್ಲಿ ಜೊತೆಯಾದಾಗಲೂ ಮುಂದುವರಿಯುತ್ತಿದ್ದವು. ಸಮಕಾಲೀನ ವಿದ್ಯಮಾನಗಳು, ಸಮಾನ ಅಭಿರುಚಿಯ ಸಾಮಾಜಿಕ ಸಂಗತಿಗಳು, ಸಾಹಿತ್ಯವಷ್ಟೇ ಅಲ್ಲದೆ, ನಮ್ಮ ಹಿರಿಯರು ನಡೆಸುತ್ತಿದ್ದ ಜೀವನ ವಿಧಾನವೂ ನಮ್ಮ ಮಾತಿನ ವಸ್ತುಗಳಾಗಿದ್ದವು. ಆ ದಿನಗಳಲ್ಲಿಯೇ ಪೋಲಿಯೊ ಕಾರಣ ಶಕ್ತಿಕುಂದಿದ್ದ ಒಂದು ಕಾಲಿಗೆ ಆಗ ಸೇನೆಯಲ್ಲಿದ್ದು ನಿವೃತ್ತನಾಗಿ ಅಂಥ ಚಿಕಿತ್ಸೆಯನ್ನು ನೀಡುತ್ತಿದ್ದ ಜಾದವ್ ಎಂಬ ನಿವೃತ್ತ ಸೈನಿಕನಲ್ಲಿ ಚಿಕಿತ್ಸೆ ಪಡೆಯುವ ಸಲುವಾಗಿ ಎಲ್ಲ ಸಿದ್ಧತೆ ಮಾಡಿಕೊಂಡು ಬಂದಿದ್ದ. ಜಾದವ್ ಅವರ ಚಿಕಿತ್ಸೆಯ ಬಗ್ಗೆ ಪತ್ರಿಕೆಗಳಲ್ಲಿ ಬಂದಿದ್ದ ಹೆಚ್ಚಿನ ಪ್ರಚಾರವೂ ಅವನ ನಿರ್ಧಾರಕ್ಕೆ ಪ್ರೇರಕವಾಗಿತ್ತು. ಈ ನೆಪದಲ್ಲಿ ನಮ್ಮ ಮನೆಯಲ್ಲಿ ಕೆಲವು ತಿಂಗಳು ಇರುತ್ತಾನೆ ಎಂದು ನಾವು ಸಂಭ್ರಮದಲ್ಲಿದ್ದಾಗ ಜಾದವ್ ಅವರಲ್ಲಿ ಮೊದಲ ದಿನದ ಚಿಕಿತ್ಸೆ ಪಡೆಯಲು ನಮ್ಮ ಕಚೇರಿ ಎದುರಿನ ಪೆರೇಡ್ ಗ್ರೌಂಡಿಗೆ ಹೋಗಿದ್ದ. ಊನವಾಗಿದ್ದ ಕಾಲಿಗೆ ಹಂದಿಯ ನೆಣವನ್ನು ತಿಕ್ಕಿ ಮಾಲೀಷು ಮಾಡುವ ಜಾದವ್ ಅವರ ಚಿಕಿತ್ಸಾ ವಿಧಾನ ಮೊದಲ ದಿನಕ್ಕೆ ಅವನನ್ನು ಸುಸ್ತು ಮಾಡಿತ್ತು. ಮರುದಿನವೇ ಅವನು ಚಿಕಿತ್ಸೆಯನ್ನು ನಿರಾಕರಿಸಿ ಮಂಡ್ಯಕ್ಕೆ ವಾಪಸಾದ.

ನಮ್ಮಿಬ್ಬರ ಮಧ್ಯೆ ಪತ್ರ ವ್ಯವಹಾರ ಎಂದಿನಂತೆ ಮುಂದುವರಿದಿತ್ತು. ಕಾಲೇಜು ವಿದ್ಯಾರ್ಥಿಗಳಾಗಿದ್ದಾಗ ಇದ್ದ ಗಾತ್ರ, ಪ್ರಮಾಣದಲ್ಲಿ ಪತ್ರಗಳು ಇರುತ್ತಿರಲಿಲ್ಲ. ಅವುಗಳಲ್ಲಿಯೂ ನಾವು ಒಟ್ಟಿಗೆ ಸೇರಿದ್ದಾಗ ನಡೆಯುತ್ತಿದ್ದ ಮಾತುಕತೆಗಳ ಮುಂದುವರಿಕೆ ಇರುತ್ತಿತ್ತು. ನಾನು ಬೆಂಗಳೂರಿನಲ್ಲಿ ಇದ್ದಾಗ ಅವನಿಗೆ ಸಾಗರಕ್ಕೆ ವರ್ಗವಾಯಿತು. ಅವನು ಸಾಗರದಲ್ಲಿ ಇದ್ದಾಗ ನನಗೆ ಹುಬ್ಬಳ್ಳಿಗೆ ವರ್ಗವಾಯಿತು. ಐದು ವರ್ಷಗಳ ನಂತರ ನಾನು ಮೈಸೂರಿಗೆ ವರ್ಗವಾದೆ. ಅವನು ಸಾಗರದಿಂದ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ದ್ವೀಪ ಪ್ರದೇಶ ತುಮರಿಗೆ ವರ್ಗವಾದ. ನಾನು ಮತ್ತೆ ಬೆಂಗಳೂರಿಗೆ ಬಂದಾಗ ಅವನು ತುಮರಿಯಲ್ಲಿಯೇ ಇದ್ದ. ನನಗೆ ಮಂಗಳೂರಿಗೆ ವರ್ಗವಾದಾಗ ಅವನು ತೀರ್ಥಹಳ್ಳಿಗೆ ಬಂದಿದ್ದ. ಅವನ ವೃತ್ತಿಬದುಕಿನಲ್ಲಿ ಬಡ್ತಿಗಳಾಗಿದ್ದವು. ಆಫೀಸರ್ ಆಗಿದ್ದ. ಮೇನೇಜರ್ ಸ್ಥಾನಕ್ಕೆ ಬಡ್ತಿ ಪಡೆದ. ಮಂಗಳೂರಿನಿಂದ ನಾನು ಬೆಂಗಳೂರಿಗೆ ಬಂದಾಗ ಅವನು ಚಿತ್ರದುರ್ಗಕ್ಕೆ ವರ್ಗವಾಗಿದ್ದ. ಅಲ್ಲಿ ಕೆಲವು ವರ್ಷ ಕಳೆದು ಶಿವಮೊಗ್ಗಕ್ಕೆ ಬಂದು ನಿವೃತ್ತನಾದ. ನಾನು ಬೆಂಗಳೂರಿನಲ್ಲಿ ನಿವೃತ್ತನಾಗಿ ಅಲ್ಲಿಯೇ ನೆಲೆಸಿದೆ. ಅವನು ಸಾಗರದಲ್ಲಿದ್ದಾಗ ಅಲ್ಲಿ ಒಂದು ಮನೆಯನ್ನು ಕಟ್ಟಿದ್ದರೂ ಅದನ್ನು ಬಾಡಿಗೆಗೆ ಕೊಟ್ಟಿದ್ದ. ಶಿವಮೊಗ್ಗದಲ್ಲಿ ನಿವೃತ್ತನಾದ ನಂತರ ಸ್ವಂತ ಮನೆಗೆ ಹೋಗಲಿಲ್ಲ. ಶಿವಮೊಗ್ಗದಲ್ಲಿ ಒಂದು ಬಾಡಿಗೆ ಮನೆಯಲ್ಲಿ ನೆಲೆಸಿದ.

ನಮ್ಮ ಮಾತುಕತೆಗಳು ಸಾಮಾಜಿಕ ವಿದ್ಯಮಾನಗಳಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ನಮ್ಮ ಹೈಸ್ಕೂಲು ದಿನಗಳಿಂದ ಬಿಡುಗಡೆಯಾಗುತ್ತಿದ್ದ ಸಿನಿಮಾಗಳು, ಕಾಲೇಜು ದಿನಗಳಲ್ಲಿ ಎದುರಾಗುತ್ತಿದ್ದ ನಾಟಕಗಳು, ಹೊಸ ಅಲೆಯ ಚಿತ್ರಗಳು, ಪ್ರಯೋಗಾತ್ಮಕ ಚಿತ್ರಗಳು, ಕನ್ನಡ ಚಿತ್ರನಟರು, ಅವರನ್ನು ಸುತ್ತುವರಿದಿದ್ದ ದಂತಕತೆಗಳು, ಹಿಂದಿ, ಇಂಗ್ಲಿಷ್ ಚಿತ್ರಗಳು, ಅವುಗಳ ನಾಯಕರು, ನಾಯಕಿಯರು, ಹಾಸ್ಯಗಾರರು, ಪತ್ತೇದಾರಿ ಕಾದಂಬರಿಗಳಂತೆಯೇ ಬಾಂಡ್ ಶೈಲಿಯ ಚಿತ್ರಗಳ ವೀಕ್ಷಣೆ ಮತ್ತು ಅವುಗಳಿಗೆ ಸಂಬಂಧಿಸಿದ ವಿವರಣೆಗಳನ್ನೂ ಒಳಗೊಳ್ಳುತ್ತಿದ್ದವು. ದಿನಪತ್ರಿಕೆಗಳೂ, ವಾರಪತ್ರಿಕೆಗಳೂ (ಪ್ರಜಾಮತದಲ್ಲಿ ಬರುತ್ತಿದ್ದ ಗುಪ್ತ ಸಮಾಲೋಚನೆ ಅಂಕಣವೂ ಸೇರಿದಂತೆ), ಲಂಕೇಶ್ ಪತ್ರಿಕೆಯ ಆರಂಭದಿಂದ ಪ್ರಕಟವಾಗುತ್ತಿದ್ದ ವೈವಿಧ್ಯಮಯ ಬರಹಗಳೂ ಚರ್ಚೆಯ ವಸ್ತುಗಳಾಗಿರುತ್ತಿದ್ದವು.

ಮಾಧ್ಯಮಿಕ ಶಾಲೆಯಲ್ಲಿದ್ದಾಗ ಪತ್ರಿಕೆಗಳ ಪರಿಚಯವೇ ಆಗಿರಲಿಲ್ಲ. ಹೈಸ್ಕೂಲಿಗೆ ಬಂದಾಗ ಓದಲು ಸಿಗುತ್ತಿದ್ದವು. ಆಗ ಇದ್ದ ಪ್ರಮುಖ ದಿನಪತ್ರಿಕೆಗಳಲ್ಲಿ ಚಿತ್ರರಂಗದ ಚಟುವಟಿಕೆಗಳಿಗೆ ಜಾಗವೇ ಇರಲಿಲ್ಲ. ಭಾನುವಾರದ ಪುರವಣಿಗಳಲ್ಲಿ ಚಿತ್ರಗಳಿಗೆ ಸಂಬಂಧಿಸಿ ಚಿತ್ರಗಳ ಸಹಿತ ವರದಿಗಳು ಪ್ರಕಟವಾಗುತ್ತಿದ್ದವು. ಮೊದಲು ಚಿತ್ರರಂಗದ ಚಟುವಟಿಕೆಗಳನ್ನು ಪ್ರಕಟಿಸಲು ಕನ್ನಡಪ್ರಭ ಪ್ರತಿ ಶುಕ್ರವಾರ ಚಿತ್ರಪ್ರಭ ಹೆಸರಿನಲ್ಲಿ ಒಂದು ಪುಟವನ್ನು ಮೀಸಲಿರಿಸಿತು. ಅದನ್ನು ಅನುಸರಿಸಿ ಪ್ರಜಾವಾಣಿಯೂ ಮೊದಲು ಒಂದು ಪುಟವನ್ನು ಇಟ್ಟು ನಂತರ ನಾಲ್ಕು ಪುಟಗಳ ಪುರವಣಿಯನ್ನು ಆರಂಭಿಸಿತು. ಎರಡೂ ಪತ್ರಿಕೆಗಳಲ್ಲಿ ಚಿತ್ರರಂಗದ ಸುದ್ದಿಗಳಿಗೆ ಸ್ಥಳಾವಕಾಶ ಇರುವುದನ್ನು ಗಮನಿಸಿದ ಸಂಯುಕ್ತ ಕರ್ನಾಟಕ ತಾನು ಕೂಡ ಚಿತ್ರರಂಗದ ಚಟುವಟಿಕೆಗಳನ್ನು ನಿರ್ಲಕ್ಷಿಸಲಿಲ್ಲ. ಚಿತ್ರ ನಿರ್ಮಾಣದ ವಿವಿಧ ಹಂತಗಳನ್ನು ಕಾಲಕಾಲಕ್ಕೆ ಉಚಿತವಾಗಿ ಪ್ರಕಟಿಸುವ ಮೂಲಕ ಓದುಗರನ್ನು ಸೆಳೆದುಕೊಳ್ಳುವ ತಂತ್ರ ಇದು. ಚಿತ್ರಪ್ರಭ ಕನ್ನಡ ಚಿತ್ರಗಳಿಗೆ ಸಂಬಂಧಪಟ್ಟ ಸುದ್ದಿ ಮತ್ತು ಚಿತ್ರಗಳನ್ನು ನೀಡುತ್ತಿದ್ದರೂ ಅವುಗಳಲ್ಲಿ ರಾಜ್‌ಕುಮಾರ್ ಬಗೆಗೆ ತುಂಬ ಪಕ್ಷಪಾತದ ಧೋರಣೆ ಇರುತ್ತಿತ್ತು. ಪ್ರಜಾವಾಣಿಯ ಸಿನಿಮಾರಂಜನೆ ಕನ್ನಡ ಚಿತ್ರರಂಗದ ಹೊಸ ಅಲೆಯನ್ನು ಬಿಂಬಿಸಲು ಆದ್ಯತೆ

ನೀಡಿದ್ದರಿಂದ ರಾಜ್‌ಕುಮಾರ್ ಅವರಿಗೆ ಸಂಬಂಧಿಸಿದ ಸುದ್ದಿ ಚಿತ್ರಗಳು ಅಪರೂಪವಾಗಿದ್ದವು. ಆದರೆ ಹೊಸ ಚಿತ್ರಗಳು ಬಿಡುಗಡೆಯಾದಾಗ ಚಿತ್ರ ವಿಮರ್ಶೆಯ ಹೆಸರಿನಲ್ಲಿ ಟೀಕೆ, ವಿಡಂಬನೆ ಧಾರಾಳವಾಗಿ ಪ್ರಕಟವಾಗುತ್ತಿದ್ದವು.

**ರಾಜ್ ನಿವೃತ್ತಿಯ ಮಾತು**

ಪತ್ರಿಕೆಗಳಲ್ಲಿ ರಾಜ್‌ಕುಮಾರ್ ಬಗೆಗಿನ ಪಕ್ಷಪಾತದ ಧೋರಣೆ ವ್ಯಕ್ತವಾಗುತ್ತ ಇದ್ದುದು ನಮಗೆ ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ದಿನದಿಂದ ಗಮನಕ್ಕೆ ಬರುತ್ತಿತ್ತು. ಕಾಲೇಜು ವ್ಯಾಸಂಗಕ್ಕಾಗಿ ನಾನು ಉಚಿತ ವಿದ್ಯಾರ್ಥಿನಿಲಯದ ಆಶ್ರಯ ಪಡೆದು ಬೆಂಗಳೂರಿಗೆ ಬಂದ ಮೇಲೆ ಚಿತ್ರಗಳನ್ನು ಖುದ್ದಾಗಿ ನೋಡುವ ಮತ್ತು ಅವುಗಳ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿದ್ದ ವರದಿ– ವಿಶ್ಲೇಷಣೆಗಳನ್ನು ಗಮನಿಸುವ ಅವಕಾಶ ಸಿಗತೊಡಗಿತು. ರಾಜ್ ಅಭಿನಯದ ಚಿತ್ರಗಳನ್ನು ನೋಡಿ ನಾವು ಆನಂದಿಸಿದ್ದರೆ ಆ ಚಿತ್ರದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವಿಮರ್ಶೆ ಬೇರೊಂದು ಅಭಿಪ್ರಾಯ ಮೂಡಿಸುತ್ತಿತ್ತು. ನಮಗೆ ಇಷ್ಟವಾಗಿದ್ದ ಚಿತ್ರ ಪತ್ರಿಕೆಗಳ ಚಿತ್ರ ವಿಮರ್ಶಕರಿಗೆ ಯಾಕೆ ಇಷ್ಟವಾಗುತ್ತಿರಲಿಲ್ಲ ಎಂಬ ಬಗ್ಗೆ ನಮ್ಮಲ್ಲಿ ಜಿಜ್ಞಾಸೆಯಾಗುತ್ತಿತ್ತು. ಪತ್ರಿಕೆಗಳಲ್ಲಿ ಘನ ವಿದ್ವಾಂಸರಿರುತ್ತಾರೆ, ಆದ್ದರಿಂದ ಅವರ ಅಭಿಪ್ರಾಯಗಳನ್ನು ಆಧರಿಸಿಯೇ ನೋಡುವ ಚಿತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಅಭಿಪ್ರಾಯ ನಮ್ಮ ವಾರಿಗೆಯವರಲ್ಲಿ ಮೂಡತೊಡಗಿತ್ತು. ಪತ್ರಿಕೆಗಳಲ್ಲಿ ಬರುತ್ತಿರುವುದು ಅದನ್ನು ನೋಡಿದ ವ್ಯಕ್ತಿಯೊಬ್ಬರ ಅನಿಸಿಕೆ. ಅದನ್ನು ನಾವೇಕೆ ಒಪ್ಪಬೇಕು ಎಂದು ತಿಮ್ಮಪ್ಪ ಹೇಳುತ್ತಿದ್ದ.

ಕಾಲೇಜು ವಿದ್ಯಾರ್ಥಿಯಾಗಿದ್ದ ಎಪ್ಪತ್ತರ ದಶಕದ ಪೂರ್ವಾರ್ಧದಲ್ಲಿ ಪ್ರತಿ ಶುಕ್ರವಾರ ಚಿತ್ರರಂಗಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಓದುವ ಕುತೂಹಲ ಇರುತ್ತಿತ್ತು. ನಿರ್ಮಾಣ ಹಂತದಲ್ಲಿರುವ ಚಿತ್ರಗಳ ವಿವರಗಳು, ಕೆಲವು ಸನ್ನಿವೇಶಗಳ ಚಿತ್ರಗಳು ವಿದ್ಯಾರ್ಥಿಗಳಾಗಿದ್ದ ನಮಗೆ ಚಿತ್ರಗಳ ಬಿಡುಗಡೆಯ ದಿನವನ್ನು ಕಾತರದಿಂದ ನಿರೀಕ್ಷಿಸುವಂತೆ ಮಾಡುತ್ತಿದ್ದವು. ಆಗ ಕನ್ನಡ ಚಿತ್ರ ನಿರ್ಮಾಣದ ಚಟುವಟಿಕೆಗಳು ಚೆನ್ನೈಯಲ್ಲಿಯೇ ನಡೆಯುತ್ತ ಇದ್ದುದರಿಂದ ನಮ್ಮ ಕುತೂಹಲ ಜಾಸ್ತಿಯೇ ಇರುತ್ತಿತ್ತು. ಭರದಲ್ಲಿ ತಯಾರಾಗುತ್ತಿದೆ.. ಶೀಘ್ರದಲ್ಲಿಯೇ ಬಿಡುಗಡೆ ಎಂಬ ಪ್ರಕಟಣೆಗಳು ಚಿತ್ರಗಳನ್ನು ಎದುರು ನೋಡುವಂತೆ ಮಾಡುತ್ತಿದ್ದವು. ಚಿತ್ರಪ್ರಭದಲ್ಲಿ ಪ್ರಕಟವಾಗುವ ಸಿನಿಮಾ ಸಂಗತಿಗಳಲ್ಲಿ ಅಪರೂಪಕ್ಕೆ ರಾಜ್‌ಕುಮಾರ್ ಅವರಿಗೆ ಸಂಬಂಧಪಟ್ಟ ಸುದ್ದಿಗಳು ಕಾಣುತ್ತಿದ್ದವು. ಚೆನ್ನೈನಲ್ಲಿ ಇಲ್ಲವೇ ಮೈಸೂರಿನಲ್ಲಿ ರಾಜ್‌ಕುಮಾರ್ ಅವರನ್ನು ಭೇಟಿ ಮಾಡುತ್ತಿದ್ದ ಆಗಿನ ಕನ್ನಡ ಪತ್ರಕರ್ತರು ಪ್ರತಿ ಸಲವೂ 'ನಿಮ್ಮ ನಿವೃತ್ತಿ ಯಾವಾಗ?' ಎಂಬ ಪ್ರಶ್ನೆಯನ್ನು ಕೇಳುತ್ತಾ ಇದ್ದುದು ನಮಗೆ ಎದ್ದು ತೋರುತ್ತಿತ್ತು. 'ನನ್ನನ್ನು ಅವಲಂಬಿಸಿದ ಬಂಧುಗಳಿದ್ದಾರೆ, ಆದ್ದರಿಂದ ನಿವೃತ್ತಿಯ ಬಗ್ಗೆ ನಾನು ಯೋಚಿಸಲಾರೆ' ಎಂದು ರಾಜ್‌ಕುಮಾರ್ ಅವರು ಪ್ರತಿಸಲವೂ ವಿನಯದಿಂದ ಹೇಳುತ್ತಿರುವ ಸಂಗತಿಯೂ ಆಗ ಪ್ರಕಟವಾಗುತ್ತಿದ್ದವು.

ರಾಜ್‌ಕುಮಾರ್ ಅವರು ನೂರು ಚಿತ್ರಗಳನ್ನು ಮುಗಿಸಿದಾಗ 'ನಟಸಾರ್ವಭೌಮ' ಎಂಬ ಒಂದು ವಿಶೇಷ ಚಿತ್ರ ನಿರ್ಮಾಣವಾಗಿತ್ತು. ಅದು ರಾಜ್‌ಕುಮಾರ್ ಅವರ ಚಿತ್ರ ಜೀವನ ಸಾಗಿ ಬಂದುದರ ದಾಖಲೆಯಾಗಿ ಕುತೂಹಲ ಹುಟ್ಟಿಸುವಂತಿತ್ತು. ಆಗಲೂ ಕನ್ನಡ ಪತ್ರಿಕೆಗಳಲ್ಲಿ ಅವರ ನಿವೃತ್ತಿಯ ಪ್ರಶ್ನೆಯ ಪ್ರಸ್ತಾಪ. ನೂರೈವತ್ತು ಚಿತ್ರಗಳಾದ ಸಂದರ್ಭದಲ್ಲೂ ಅದೇ ಪ್ರಶ್ನೆಯನ್ನು ಪ್ರಮುಖ ಪತ್ರಿಕೆಗಳು ಎತ್ತಿದ್ದವು. ಎಲ್ಲ

ಸಂದರ್ಭಗಳಲ್ಲೂ ರಾಜ್‌ಕುಮಾರ್ ತಮ್ಮ ಮೊದಲಿನ ಉತ್ತರವನ್ನೇ ನೀಡುತ್ತಿದ್ದರು. ರಾಜ್‌ಕುಮಾರ್ ಅವರ ಜೊತೆಗೆ ಕನ್ನಡ ಚಿತ್ರರಂಗ ಪ್ರವೇಶಿಸಿದ ಇತರ ಯಾವ ನಾಯಕ ನಟನ ಬಗ್ಗೆಯೂ ಕನ್ನಡ ಪತ್ರಿಕಾ ಲೋಕದ ವಿದ್ವಜ್ಜನರು ನಿವೃತ್ತಿಯ ಪ್ರಶ್ನೆಯನ್ನು ಎತ್ತಿದ್ದು ನಮ್ಮ ಗಮನಕ್ಕೆ ಬರುತ್ತಿರಲಿಲ್ಲ.

ನಾನು ಪತ್ರಿಕಾವೃತ್ತಿಯನ್ನು ಪ್ರವೇಶಿಸಿದ ಮೇಲೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳು ಮಾತ್ರವಲ್ಲದೆ, ಚಲನಚಿತ್ರ, ನಾಟಕ ರಂಗವೂ ಸೇರಿದಂತೆ ಸಮಾಜದ ಎಲ್ಲ ಕ್ಷೇತ್ರಗಳನ್ನು ಹತ್ತಿರದಿಂದ ನೋಡುವ ಅವಕಾಶ ಒದಗಿ ಬಂದಿತು. ನಾನು ಚಿತ್ರರಂಗಕ್ಕೆ ಸಂಬಂಧಿಸಿ ವೃತ್ತಿ ಸಂಬಂಧ ಸಂಪರ್ಕ ಪಡೆಯುವ ಹೊತ್ತಿಗೆ ರಾಜ್‌ಕುಮಾರ್ ಅಭಿನಯದಿಂದ ದೂರ ಉಳಿದಿದ್ದರು. ಅವರು ಪ್ರಬುದ್ಧ ಅಭಿನಯದ ಉನ್ನತ ಸ್ಥಿತಿಯಲ್ಲಿದ್ದಾಗ ನಿವೃತ್ತಿಯ ಪ್ರಶ್ನೆ ಕೇಳುತ್ತಿದ್ದ ಅನೇಕ ಹಿರಿಯ ಪತ್ರಕರ್ತರು ಈ ಲೋಕದಿಂದಲೇ ನಿವೃತ್ತರಾಗಿದ್ದರು. ಅರವತ್ತು ಎಪ್ಪತ್ತರ ದಶಕ ರಾಜ್‌ಕುಮಾರ್ ವೃತ್ತಿಬದುಕಿನಲ್ಲಿ ಮಹೋನ್ನತವಾಗಿದ್ದ ಕಾಲ. ಕನ್ನಡ ಚಿತ್ರರಂಗದಲ್ಲಿ ಸದಭಿರುಚಿಯ ಚಿತ್ರಗಳನ್ನು ಪಟ್ಟಿ ಮಾಡಿದರೆ ಅದರಲ್ಲಿ ಈ ಅವಧಿಯಲ್ಲಿ ರಾಜ್ ನಾಯಕನಟನಾಗಿ ಅಭಿನಯಿಸಿದ ಚಿತ್ರಗಳೇ ದೊಡ್ಡ ಪಾಲನ್ನು ಪಡೆಯುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ರಾಜ್ ಅಭಿನಯದ ಚಿತ್ರಗಳೆಂದರೆ ನೂರು ದಿನ, ಇಪ್ಪತ್ತೈದು ವಾರ ಎಂಬುದು ಸಹಜ ಪ್ರಕ್ರಿಯೆ ಎನ್ನುವಂತೆ ಜನತೆ ಬೆಂಬಲ ನೀಡುತ್ತಿದ್ದರು. ಇಪ್ಪತ್ತೈದು ವಾರ ನಡೆದ ಚಿತ್ರಗಳ ಬಗ್ಗೆಯೂ ಪತ್ರಿಕೆಗಳಿಂದ ಸಿಗುತ್ತಿದ್ದ ವಿಮರ್ಶೆ ವ್ಯಂಗ್ಯ, ಅಪಹಾಸ್ಯದಿಂದಲೇ ಕೂಡಿರುತ್ತಿದ್ದುದನ್ನು ತಿಮ್ಮಪ್ಪ ಗುರುತಿಸಿ ಹೇಳುತ್ತಿದ್ದ.

ಎಂಬತ್ತರ ದಶಕದಲ್ಲಿ ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಅಲೆಯ ಸಂಚಲನವನ್ನು ಉಂಟುಮಾಡಿದ ಲಂಕೇಶ್ ಪತ್ರಿಕೆ ರಾಜ್‌ಕುಮಾರ್ ಅವರ ವಿಶೇಷ ಸಂದರ್ಶನವನ್ನು ಪ್ರಕಟಿಸಿತ್ತು. ಪತ್ರಿಕೆಯ ವರದಿಗಾರರು ಸಂದರ್ಶನಕ್ಕೆ ಚೆನ್ನೈಗೆ ತೆರಳುವ ಮೊದಲು ಆಗಷ್ಟೆ ಬಿಡುಗಡೆಯಾಗಿದ್ದ ರಾಜ್ ಅಭಿನಯದ 'ಹಾಲುಜೇನು' ಚಿತ್ರದ ಬಗ್ಗೆ ಸಹೃದಯ ವಿಮರ್ಶೆಯನ್ನು ಪತ್ರಿಕೆ ಪ್ರಕಟಿಸಿತ್ತು. ಚಿತ್ರದಲ್ಲಿನ ಉತ್ತಮ ಸಂದೇಶವನ್ನು ಗುರುತಿಸುವ ಪ್ರಯತ್ನ ನಡೆಸಿತ್ತು. ತಮ್ಮ ಚಿತ್ರಗಳಿಗೆ ಕನ್ನಡ ಪತ್ರಿಕೆಗಳಿಂದ ಒಂದಲ್ಲ ಒಂದು ಕೊರತೆಯನ್ನು ಎತ್ತಿ ತೋರಿಸುತ್ತಿದ್ದ ವಿಮರ್ಶೆಗಳನ್ನಷ್ಟೇ ನೋಡಿರುತ್ತಿದ್ದ ರಾಜ್ ಚಿತ್ರ ತಂಡ, ಆ ವಿಮರ್ಶೆಯನ್ನು ತುಂಬ ಮೆಚ್ಚಿಕೊಂಡಿತ್ತು. ತಮ್ಮ ಬಗ್ಗೆ ಬರುತ್ತಿದ್ದ ಟೀಕೆ ಟಿಪ್ಪಣಿಗಳಿಗೆ ಯಾವ ಭಾವನೆಯನ್ನೂ ವ್ಯಕ್ತಪಡಿಸಲಾಗದ ಸಮಚಿತ್ತವನ್ನು ಆ ವೇಳೆಗೆ ರಾಜ್‌ಕುಮಾರ್ ರೂಢಿಸಿಕೊಂಡಿದ್ದರು.

ಎಂಬತ್ತರ ದಶಕದಲ್ಲಿ ನಾಡಿನಲ್ಲಿ ಆದ ಬೆಳವಣಿಗೆಗಳು ಅದುವರೆಗೆ ಚಿತ್ರರಂಗದಲ್ಲಷ್ಟೆ ಕ್ರಿಯಾಶೀಲರಾಗಿದ್ದ ರಾಜ್‌ಕುಮಾರ್ ನಾಡಿನ ಸಾಮಾನ್ಯ ಜನತೆಯ ಅಂತಃಸ್ಸಾಕ್ಷಿಯನ್ನು ಜಾಗ್ರತಗೊಳಿಸುವ ಚೇತನವಾಗಿ ರೂಪುಗೊಂಡರು. ನಾಡಿನಲ್ಲಿ ಕನ್ನಡ ಭಾಷೆಗೆ ಪಾರಮ್ಯ ಸಿಗುವುದಕ್ಕೆ ಪಟ್ಟಭದ್ರಹಿತಾಸಕ್ತಿಗಳು ಅಡ್ಡಿಪಡಿಸಿದಾಗ ಬೀದಿಗಿಳಿದು ಹೋರಾಟಕ್ಕೆ ಧುಮುಕಿದರು. ಕನ್ನಡಕ್ಕೆ, ಕನ್ನಡ ನೆಲಕ್ಕೆ ಜಲಕ್ಕೆ ಅಪಾಯ ಒದಗಿದಾಗ ಜನಶಕ್ತಿಯನ್ನು ಸಂಘಟಿಸುವ ಪ್ರೇರಕಶಕ್ತಿಯಾಗಿ ರಾಜ್ ಪರಿಣಮಿಸಿದರು. ಇದನ್ನು ಪತ್ರಿಕೆಗಳು ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ. ರಾಜ್ ಕನ್ನಡ ಮನಸ್ಸುಗಳನ್ನು ಆವರಿಸಿದ ಚೈತನ್ಯಸ್ವರೂಪಿ ಸಂಕೇತವಾಗಿರುವುದನ್ನು ಒಪ್ಪಿಕೊಳ್ಳಲೇಬೇಕಾಯಿತು.

**ಸತತ ಸಂಪರ್ಕ**

ಮೂರು ದಶಕಗಳಿಗೂ ಹೆಚ್ಚಿನ ವೃತ್ತಿಜೀವನದಲ್ಲಿ ಪರಸ್ಪರ ಭೇಟಿಯಾದ ಸಂದರ್ಭಗಳು ನಾವು

ಕಾಲೇಜಿನಲ್ಲಿದ್ದಾಗ ಇದ್ದಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಆದರೆ, ಸತತ ಸಂಪರ್ಕದಲ್ಲಿ ಇದ್ದ ಕಾರಣ ಭೇಟಿ ಮಾಡದೆ ಎಷ್ಟೋ ವರ್ಷಗಳಾಗಿದ್ದರೂ ಅದರ ಅಂತರ ಅನುಭವಕ್ಕೆ ಬರುತ್ತಿರಲಿಲ್ಲ. ಅವನು ಮಂಡ್ಯದಿಂದ ಸಾಗರಕ್ಕೆ ವರ್ಗವಾದ ಮೇಲೆ ನಾನು ಹುಬ್ಬಳ್ಳಿ, ಮೈಸೂರು ತಿರುಗಾಟ ನಡೆಸಿ ಮತ್ತೆ ಬೆಂಗಳೂರಿಗೆ ಬರುವಾಗ ಹತ್ತು ಹನ್ನೆರಡು ವರ್ಷಗಳಾಗಿದ್ದರೂ ಅದು ನಮ್ಮಿಬ್ಬರಲ್ಲಿ ಸಂಪರ್ಕದ ಕೊರತೆಯ ಭಾವವನ್ನು ಮೂಡಿಸುತ್ತಿರಲಿಲ್ಲ. ನಮ್ಮ ಯೋಚನೆಗಳ ಲಹರಿಯಲ್ಲಿಯೂ ಬದಲಾವಣೆಗಳು ಗೋಚರವಾಗುತ್ತಿರಲಿಲ್ಲ. ನಮ್ಮ ಹಿಂದಿನವರ ಬದುಕಿನ ವಿಶೇಷಗಳನ್ನು ನೆನಪು ಮಾಡಿಕೊಳ್ಳುತ್ತಾ ಅವರ ನಂಬಿಕೆ, ವಿಶ್ವಾಸಗಳನ್ನು ವಿಶ್ಲೇಷಣೆ ನಡೆಸುತ್ತಾ ನಮ್ಮ ಚೈತನ್ಯವನ್ನು ಚುರುಕುಗೊಳಿಸಿಕೊಳ್ಳುತ್ತಿದ್ದೆವು. ನಮ್ಮ ಹಿಂದಿನವರು ಎಂದರೆ ಒಂದು ಕಡೆ ಅಪ್ಪನೂ ಇನ್ನೊಂದು ಕಡೆ ತಿಮ್ಮಪ್ಪನ ತಂದೆ ಬರುವೆ ಬಡಿಯನಾಯ್ಕರೂ ಇದ್ದರು. ನಮ್ಮಿಬ್ಬರ ಮಾತುಗಳಲ್ಲಿ ಅವರೇ ಹೆಚ್ಚಿನ ಪಾತ್ರ ವಹಿಸುತ್ತಿದ್ದರು. ಅವರೇ ಕೇಂದ್ರವಾಗಿರುತ್ತಿದ್ದರು. ಅವರ ನಡವಳಿಕೆ, ವ್ಯವಹಾರಗಳು ನಮ್ಮ ಕಣ್ಣಮುಂದೆ ಇದ್ದವು. ಏನೂ ಇಲ್ಲದ ಕಾಲದಲ್ಲಿ ಎಲ್ಲವನ್ನೂ ತಮ್ಮ ಸ್ವಂತ ಪರಿಶ್ರಮದಲ್ಲಿ ಮಾಡಿಕೊಂಡ ಅವರಿಂದ ನಾವು ಕಲಿಯಬೇಕಾದಷ್ಟು ಕಲಿಯಲಿಲ್ಲ ಎಂಬ ಹಳಹಳಿಕೆಯಲ್ಲಿ ಮಾತಿಗೆ ವಿರಾಮ ಹಾಕುತ್ತಿದ್ದೆವು.

ದೀಪಾವಳಿ ಹಬ್ಬದ ಸಡಗರದಲ್ಲಿ ನೋನಿ ಎಂಬುದು ಹೆಚ್ಚು ಸಂಭ್ರಮದ ಹಬ್ಬ. ಬೂರೆ ಹಬ್ಬದ ದಿನವೇ ಊರಿನ ಎಲ್ಲಾ ದೈವಗಳಿಗೆ ಎಡೆ ಇಟ್ಟು ಪೂಜೆ ಸಲ್ಲಿಸುವ ಸಂದರ್ಭ. ನಮ್ಮೂರಲ್ಲಿ ಇದ್ದ ಮನೆಗಳೇ ಹತ್ತು ಹನ್ನೊಂದು. ಎಲ್ಲರೂ ಒಂದೇ ಕುಟುಂಬದಿಂದ ಬೇರೆ ಬೇರೆಯಾಗಿ ಮನೆಗಳನ್ನು ಕಟ್ಟಿಕೊಂಡವರು. ನಮ್ಮೂರಿಗೆ ಪ್ರಧಾನವಾಗಿದ್ದ ದೈವಕ್ಕೆ ಗಾಮ ಎಂದೇ ಹೆಸರಿನಿಂದ ಕರೆಯುತ್ತಿದ್ದರು. ಅದು ಗ್ರಾಮದ ಮುಖ್ಯ ದೇವರು ಎಂಬುದರ ತದ್ಭವ ರೂಪ ಇರಬೇಕು. ನಮ್ಮ ಕೊಡಸೆಯ ಅವಳಿ ಹಳ್ಳಿ ಎನ್ನಬಹುದಾದ ಗಿಣಿಸೆಯಲ್ಲೂ ನೋನಿ ಹಬ್ಬದ ಸಡಗರ ಇರುತ್ತಿತ್ತು. ನಾನು ಕೆಲವು ವರ್ಷ ಆಶ್ರಯ ಪಡೆದಿದ್ದ ಹುಳುಗದ್ದೆಯಲ್ಲೂ ನೋನಿಯ ದಿನ ಗಾಮದ ಪೂಜೆ ಇರುತ್ತಿತ್ತು. ನಮ್ಮೂರಲ್ಲಿ ಅದು ನಮ್ಮದೇ ಕುಟುಂಬದ ಹಬ್ಬ ಎಂದಿದ್ದರೆ ಹುಳುಗದ್ದೆಯಲ್ಲಿ ಸುತ್ತಮುತ್ತಲ ಹಲವು ಹಳ್ಳಿಗಳ ಊರೊಟ್ಟಿನ ಹಬ್ಬವಾಗಿತ್ತು. ಬರುವೆಯಲ್ಲೂ ಊರೊಟ್ಟಿನ ಹಬ್ಬದಂತೆ ವಿವಿಧ ಜಾತಿ ಪಂಗಡಗಳ ಪಾಲುದಾರಿಕೆಯಿಂದ ನಡೆಯಬೇಕಾಗಿದ್ದ ಹಬ್ಬವಾಗಿತ್ತು. ನಮ್ಮ ಊರಲ್ಲಿ ಮನೆಗೆ ಒಬ್ಬರಂತೆ ಗಾಮದ ಪೂಜೆಗೆ ಸಜ್ಜಾಗಿ ಬರುತ್ತಿದ್ದರು. ಊರಿನ ಹಿರಿಯ ವ್ಯಕ್ತಿಯೇ ಪೂಜೆಯ ನೇತೃತ್ವ ವಹಿಸುತ್ತಿದ್ದ. ಊರಿನ ಹಿರಿಯ ಅವತ್ತು ಬರದಿದ್ದರೆ ಬಂದವರಲ್ಲಿ ಹಿರಿಯನಿಗೆ ಪೂಜೆಯ ನೇತೃತ್ವ ನೀಡಲಾಗುತ್ತಿತ್ತು. ಮೊದಲು ಗಾಮನಿಗೆ ಪೂಜೆ. ಗಾಮ ಎಂದರೆ ಅಲ್ಲಿ ಯಾವ ಮೂರ್ತಿಯೂ ಇರುತ್ತಿರಲಿಲ್ಲ. ಮರದ ಬುಡದಲ್ಲಿ ಹುಗಿದಿಟ್ಟ ಕಬ್ಬಿಣದ ಶೂಲದಂತಹ ಆಕೃತಿ. ಗಾಮನಿಗೆ ಮೊದಲ ಪೂಜೆಯಾದ ನಂತರ ಊರಿನ ಎಲ್ಲ ಮನೆಯಿಂದಲೂ ಹಣ್ಣು ಕಾಯಿಯ ನೈವೇದ್ಯವನ್ನು ಇಡಲಾಗುತ್ತಿತ್ತು. ಅದಾದ ನಂತರ ಊರಿನ ಉಳಿದೆಲ್ಲ ದೈವಗಳಿಗೂ ಅಲ್ಲಿಯೇ ಎಡೆ ಇಡುವ ಪದ್ಧತಿ. ಊರಿನ ಆಯಕಟ್ಟಿನ ಜಾಗದಲ್ಲಿ ನೆಲೆ ಹಾಕಿದ ಚೌಡಿ, ಭೂತ, ರಣ, ಯಕ್ಷಿ, ರಾಹು ಇತ್ಯಾದಿ ದೈವಗಳಿಗೆ ಎಡೆ ಇಟ್ಟು ಹಣ್ಣು ಕಾಯಿಗಳನ್ನು ಸಮರ್ಪಿಸಲಾಗುತ್ತಿತ್ತು. ಗಾಮಕ್ಕೆ ಪೂಜೆ ಸಲ್ಲಿಸಿ ಉಳಿದ ದೈವಗಳಿಗೆ ಎಡೆ ಹಾಕಿದ ನಂತರ ಊರೊಟ್ಟಿನ ಕೃತಜ್ಞತೆಯ ಕುರುಹಾಗಿ ಕುರಿಯ ಬಲಿ ನೀಡಲಾಗುತ್ತಿತ್ತು. ಆ ನಂತರವೇ ಉಳಿದೆಲ್ಲ ದೈವಗಳಿಗೆ ನೀಡಲಾಗಿದ್ದ ಎಡೆಗಳನ್ನು ಒಯ್ದು ಆಯಾಯ ದೈವಗಳ ಬನಗಳಲ್ಲಿ ಒಪ್ಪಿಸಿ ದೂಪ ಹಾಕಿ ಕೈಮುಗಿದು ಬರುವ ಪದ್ಧತಿ. ಊರಿನ ಆಯಕಟ್ಟಿನ ಜಾಗಗಳಲ್ಲಿ ನೆಲೆ ಹಾಕಿದ ದೈವಗಳಲ್ಲದೆ, ಕೆಲವು

ಮನೆಗಳವರು ತಮ್ಮ ಅಗತ್ಯಕ್ಕೆ ನೆಲೆ ಹಾಕಿದಂಥ ದೈವಗಳಿಗೂ ಪ್ರತ್ಯೇಕ ಎಡೆ ಇಟ್ಟು ಅದನ್ನು ಖುದ್ದಾಗಿ ಒಪ್ಪಿಸುವ ಸಂದರ್ಭದಲ್ಲಿ ತಮ್ಮ ಕೃತಜ್ಞತೆಯ ಕುರುಹಾಗಿ ಕೋಳಿಗಳನ್ನು ಒಪ್ಪಿಸುವುದೂ ಪದ್ಧತಿ. ನಮ್ಮ ಊರಲ್ಲಿ ಶಿಕಾರಿಯ ತಲುಬು ಇದ್ದವರು ತಮ್ಮ ಗದ್ದೆ ಹಕ್ಕಲಿನ ಆಯಕಟ್ಟಿನ ಜಾಗದಲ್ಲಿ ಶಿಕಾರಿಯ ಅಧಿದೇವತೆಯಾಗಿ ಬೇಟೆ ದೇವರನ್ನು ನೆಲೆಗೊಳಿಸಿದ್ದರು. ಅದಕ್ಕೆ 'ಬೇಟೆ ದೇವರು' ಎಂಬ ಹೆಸರು. ಅದಕ್ಕೆ ವರ್ಷಕ್ಕೆ ಒಮ್ಮೆ ಹೀಗೆ ಎಡೆ ಇಟ್ಟು ಕೋಳಿಯ ಹರಕೆ ಒಪ್ಪಿಸಿದರೆ ವರ್ಷವಿಡೀ ತಮ್ಮ ಹೊಲಸಿನ ಪಾತ್ರೆಗಳಿಗೆ ಕಾಡುಪ್ರಾಣಿಗಳ ಖಾದ್ಯಗಳನ್ನು ಬೇಯಿಸುವ ಅವಕಾಶ ಪ್ರಾಪ್ತವಾಗುತ್ತದೆ ಎಂಬ ಪ್ರಬಲ ನಂಬಿಕೆ.

ನೋನಿ ಎಂಬ ಪದ ನಿಷ್ಪತ್ತಿ ನೋಂಪಿಯಿಂದ ಬಂದಿರಬಹುದೇ ಎಂಬ ಊಹೆ. ನಮ್ಮೂರಿಗೆ ಹತ್ತಿರದಲ್ಲಿರುವ ಜೈನಕ್ಷೇತ್ರ ಹೊಂಬುಜ. ಅದು ಸ್ಥಳೀಯರ ಮಾತಿನಲ್ಲಿ ಹುಮುಚ ಅಥವಾ ಹುಂಚ. ಅಲ್ಲಿ ಕೆಲವು ನೂರು ವರ್ಷ ಸಾಂತರರೆಂಬ ದೊರೆಗಳು ಆಳುತ್ತಿದ್ದರಂತೆ. 'ಭರತೇಶ ವೈಭವ'ದ ಕವಿ ರತ್ನಾಕರವರ್ಣಿ ಮೂಡುಬಿದಿರೆ ಕಡೆಯಿಂದ ತಪ್ಪಿಸಿಕೊಂಡು ಬಂದು ಹೊಂಬುಜದಲ್ಲಿ ಕೆಲವು ಕಾಲ ಆಶ್ರಯ ಪಡೆದಿದ್ದನಂತೆ. ಜೈನರ ಆಳ್ವಿಕೆಯ ಪ್ರಭಾವ ಮಲೆನಾಡಿನ ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಕೆಲವು ಆಚರಣೆಗಳಲ್ಲಿ ಈಗಲೂ ಪಳೆಯುಳಿಕೆಯಾಗಿ ಉಳಿದುಬಂದಿರಬೇಕು. ಇದನ್ನು ಕುವೆಂಪು ಅವರೂ ತಮ್ಮ ಆತ್ಮಕಥೆ 'ನೆನಪಿನ ದೋಣಿಯಲ್ಲಿ' ಜೈನೆಡೆ ಎಂಬ ಪದ್ಧತಿ ಕುರಿತಾಗಿ ವಿವರಣೆ ನೀಡಿದ್ದಾರೆ. ಮಲೆನಾಡಿನ ಶೂದ್ರ ಸಮುದಾಯದಲ್ಲಿ ಈಗಲೂ ಮಾಂಸಾಹಾರ ಬೇಯಿಸಲು ಪ್ರತ್ಯೇಕ ಪಾತ್ರೆ, ಪ್ರತ್ಯೇಕ ಒಲೆ ಇರುವುದನ್ನು ಈಚಿನವರೆಗೂ ಕಾಣಬಹುದಿತ್ತು. ಮೀನು, ಮಾಂಸಗಳ ಖಾದ್ಯಗಳು ಅತ್ಯಂತ ಸ್ವಾದಿಷ್ಟವಾಗಿದ್ದರೂ ಅವನ್ನು ಹೀನ ಅರ್ಥದಲ್ಲಿ ಹೊಲಸು ಎಂದೇ ಕರೆಯುವುದು ಪದ್ಧತಿ. ಹೊಲಸಿನ ಪಾತ್ರೆ, ಹೊಲಸಿನ ಒಲೆ ಎಂಬ ಪದಗಳ ಬಳಕೆ ಇತ್ತು. ಭಾವದಲ್ಲಿ ಹೊಲಸಿನ ಪಲ್ಯ ಎಂದರೆ ಅದರ ಶಬ್ದಕ್ಕೆ ಉದ್ದೇಶಿತವಾದ ಜುಗುಪ್ಸೆಯ ಭಾವ ನಮಗೆ ಎಂದೂ ಬರುತ್ತಿರಲಿಲ್ಲ. ಏನಾದರೂ ಹೊಲಸಿನ ಅಡುಗೆ ಇದೆ ಎಂದರೆ ಬಾಯಲ್ಲಿ ರುಚಿಮೊಗ್ಗುಗಳನ್ನು ಉದ್ರೇಕಿಸಿ ಲಾಲಾರಸ ದ್ರವಿಸುವಂಥ ಪೂರ್ವಾನುಭವ. ದೈವಗಳನ್ನೂ ಪೂಜಿಸುವ 'ನೋಂಪಿ'ಯ ಪದ್ಧತಿ ತದ್ಭವರೂಪದಲ್ಲಿ ನೋನಿ ಆಗಿರಬಹುದೇ ಎಂಬ ಊಹೆ. ಸಾಂಸ್ಕೃತಿಕ ಇತಿಹಾಸಕಾರರು ಈ ಬಗ್ಗೆ ಬೆಳಕು ಚೆಲ್ಲಬಹುದು.

ಎಲ್ಲೆಲ್ಲಿ ಶಿಕಾರಿದಾರರು ಇರುತ್ತಾರೋ ಅಲ್ಲೆಲ್ಲ 'ಬೇಟೆ ದೇವರ'ನ್ನು ನೆಲೆ ಹಾಕುತ್ತಿದ್ದರು ಎನಿಸುತ್ತದೆ. ನಮ್ಮ ಹಿರಿಯರು ತಮ್ಮ ತಮ್ಮ ಗದ್ದೆ ತೋಟಗಳ ಎಡೆಯಲ್ಲಿ ಚೌಡಿ, ಭೂತ, ರಣ. ಯಕ್ಷಿ ಮೊದಲಾದ ದೈವಗಳನ್ನು ನೆಲೆ ಹಾಕಿರುವುದನ್ನು ನೋಡಿದರೆ ತಾವು ಇದ್ದಲ್ಲಿ, ತಮ್ಮ ಬದುಕು ರೂಪುಗೊಳ್ಳುತ್ತಿದ್ದ ಭಾಗದಲ್ಲಿ ದೇವರನ್ನು ಕಾಣುತ್ತಿದ್ದರು ಎನಿಸುತ್ತದೆ. ಕೊಡಸೆಯಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನ ಇದೆ, ಬರುವೆಯಲ್ಲಿ ಈಶ್ವರ ದೇವಸ್ಥಾನ ಇದೆ. ಇವುಗಳಿಗೆ ವಾರಕ್ಕೆ ಒಮ್ಮೆ ಪೂಜೆ ಮಾಡುವ ವ್ಯವಸ್ಥೆಯೂ ಇದೆ. ಆದರೆ, ನೋನಿಯ ಸಂದರ್ಭದಲ್ಲಿ ನಡೆದುಕೊಳ್ಳುವ ನಾನಾ ದೈವಗಳಿಗೆ ತೋರುವ ಶ್ರದ್ಧಾಭಕ್ತಿಗಳೇ ಬೇರೆ. ವರ್ಷಕ್ಕೆ ಒಂದು ಸಲ ಪೂಜೆ ಸಲ್ಲಿಸುವುದಿದ್ದರೂ ಅದಕ್ಕೆ ಮನೆಯ ಹಿರಿಯರು ತೋರುತ್ತಿದ್ದ ಗೌರವ, ಉಪವಾಸ, ಮಡಿ, ಮನೆಯನ್ನು ಸ್ವಚ್ಛಮಾಡಿ ನಡೆಸುವ ಹಬ್ಬದ ಸಡಗರವೇ ವಿಶಿಷ್ಟವಾದುದು. ಇವುಗಳ ಜೊತೆಗೆ ಪ್ರತಿ ಮನೆಗೂ ಮನೆದೇವರುಗಳು ಬೇರೆ. ಧರ್ಮಸ್ಥಳ, ತಿರುಪತಿ, ಶಿಕಾರಿಪುರ, ಮಂದರ್ತಿ, ಮಣಿಕಲ್ಲು ಮೊದಲಾದ ಪುಣ್ಯಕ್ಷೇತ್ರಗಳ ದೇವರುಗಳು. ಶ್ರಾವಣ ಮಾಸದಲ್ಲಿ ಒಂದು ದಿನ ಮನೆಯನ್ನೆಲ್ಲ ಸಾರಿಸಿ ಎಲ್ಲರೂ ಮಿಂದು ಮನೆದೇವರುಗಳನ್ನು ಪೂಜಿಸಿ ತಮ್ಮ ಭಕ್ತಿಯ ದ್ಯೋತಕವಾಗಿ ಒಂದಿಷ್ಟು ಹಣವನ್ನು ಮುಡಿಪಾಗಿ

ಇರಿಸುವುದು. ಹರಕೆಯ ಹಣವನ್ನು ಆಯಾ ಸ್ಥಳಗಳಿಗೆ ಯಾತ್ರೆ ಹೋದಾಗ ಒಯ್ದು ಸಲ್ಲಿಸುವುದನ್ನು ನಮ್ಮೆರಡೂ ಕುಟುಂಬಗಳಲ್ಲಿ ಮಾಡುತ್ತಾ ಇದ್ದುದನ್ನು ನಾವು ಗಮನಿಸಿದ್ದೆವು. ದೇವರಿಗೆ ದುಡ್ಡು ಹಾಕುವ ಹಬ್ಬವನ್ನು ಪ್ರತಿ ಶ್ರಾವಣ ಮಾಸದಲ್ಲಿ ಒಂದು ಶನಿವಾರ ಆಚರಿಸುತ್ತಾ ಇದ್ದುದು ಹೈಸ್ಕೂಲು ದಿನಗಳಲ್ಲಿ ನಮ್ಮಲ್ಲಿ ಚರ್ಚೆಗೆ ಬಂದಿತ್ತು. ಹಿಂದಿನ ಕಾಲದಲ್ಲಿ ಮನೆದೇವರ ಕ್ಷೇತ್ರಗಳಿಗೆ ಕಾಣಿಕೆ ಸಲ್ಲಿಸುವುದಕ್ಕೆ ಈಗ ಇರುವಂಥ ಸಾರಿಗೆ ವ್ಯವಸ್ಥೆಗಳೇ ಇರಲಿಲ್ಲ. ಎತ್ತಿನ ಗಾಡಿಯೇ ಆಗ ಇದ್ದ ಐಷಾರಾಮಿ ಸಾರಿಗೆ ಸೌಲಭ್ಯ. ಮನೆದೇವರ ಕ್ಷೇತ್ರಗಳಿಗೆ ಯಾತ್ರೆ ಹೋಗುವುದೆಂದರೆ ಅದನ್ನು 'ದೇವರಿಗೆ ಹೋಗುವುದು' ಎಂದು ಬಣ್ಣಿಸುತ್ತಿದ್ದರು. ನೆಂಟರು ಇಷ್ಟರಿಗೆ ತಿಳಿಸಿ ತಮ್ಮಂತೆ ದೇವರಿಗೆ ಹೋಗುವ ಇತರ ಬಂಧುಗಳನ್ನು ಕರೆದುಕೊಂಡು ಗುಂಪಾಗಿ ಗಾಡಿಗಳನ್ನು ಕಟ್ಟಿಕೊಂಡು ಹೋಗುತ್ತಿದ್ದರು. 'ಈಗ ಅಂಚೆ ಮೂಲಕ ಹಣವನ್ನು ಮನಿ ಆರ್ಡರ್ ಮಾಡಬಹುದಲ್ಲ, ದೇವರಿಗೆ ದುಡ್ಡು ಹಾಕುವ ಹಬ್ಬ? ಅದಕ್ಕಾಗಿ ಮುಡಿಪು ಕಟ್ಟಿ ಇಡುವುದೇಕೆ?' ಎಂಬ ಪ್ರಶ್ನೆ ನಮಗೆ ಬಂದಿದ್ದರೂ ಅದನ್ನು ಹಿರಿಯರ ಜೊತೆ ಹೇಳಲು ಸಾಧ್ಯವಾಗಿರಲಿಲ್ಲ.

ಅಪ್ಪನಾಗಲೀ, ಬಡಿಯನಾಯ್ಕರಾಗಲೀ ದೇವರು, ಪೂಜೆ, ಮಡಿ ಇತ್ಯಾದಿಗಳನ್ನು ಪಾಲಿಸುತ್ತಿದ್ದ ಮಾತ್ರಕ್ಕೆ ಅವುಗಳ ಅಂಧಾನುಕರಣೆಯನ್ನು ಒಪ್ಪಿದವರಲ್ಲ. ಅವರದು ವಾಸ್ತವ ದೃಷ್ಟಿ ಆಗಿತ್ತು. ಒಮ್ಮೆ ನಮ್ಮ ಮನೆಗೆ ಸತ್ಯನಾರಾಯಣ ಪೂಜೆಗೆ ಬೆಳಗ್ಗೆ ಹನ್ನೊಂದು ಗಂಟೆಗೆ ಮುಹೂರ್ತ ಇಟ್ಟುಕೊಟ್ಟಿದ್ದರು ಅರಸಾಳಿನ ಭಟ್ಟರು. ವರ್ಷದಲ್ಲಿ ಒಂದು ಸಲ ಮಾಡಿಸುವ ಸತ್ಯನಾರಾಯಣ ವ್ರತ. ಮನೆ ಮಾಡನ್ನೆಲ್ಲ ತೊಳೆದು ಚೊಕ್ಕ ಮಾಡಿ, ಮನೆಯ ಎಲ್ಲರೂ ಮಿಂದು ವ್ರತಕ್ಕಾಗಿ ಕಾದಿದ್ದರು. ಮಧ್ಯಾಹ್ನದ ಊಟಕ್ಕೆ ಪಾಯಸ, ಚಿತ್ರಾನ್ನ, ಪಚಡಿ, ಅನ್ನ, ತಿಳಿಸಾರು ಇತ್ಯಾದಿ ಸಿದ್ಧಪಡಿಸುವಲ್ಲಿ ಮನೆಯ ಹೆಂಗಸರು ತೊಡಗಿದ್ದರು. ಹನ್ನೊಂದು ಗಂಟೆಗೆ ಮುಹೂರ್ತ ಇಟ್ಟು ಒಂದು ಗಂಟೆ ಮೊದಲೇ ಬರುವುದಾಗಿ ಹೇಳಿದ್ದ ಭಟ್ಟರು, ಹನ್ನೆರಡಾದರೂ ಬರಲಿಲ್ಲ. ಒಂದು ಗಂಟೆಯೂ ಆಗಿ, ಜಗುಲಿಯಲ್ಲಿದ್ದ ಗೋಡೆ ಗಡಿಯಾರ ಎರಡು ಗಂಟೆಯನ್ನೂ ಬಾರಿಸಿದಾಗ ಅಪ್ಪ 'ಇನ್ನು ಭಟ್ಟರು ಎಷ್ಟು ಹೊತ್ತಿಗಾದರೂ ಬರಲಿ, ಹಸಿದ ಮಕ್ಕಳು ಊಟ ಮಾಡಲಿ' ಎಂದು ಹೊಟ್ಟೆ ಹಸಿವಿನಿಂದ ಬಳಲಿದ್ದ ಮಕ್ಕಳಿಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದ. ಮೂರು ಗಂಟೆ ಮೀರಿದರೂ ಭಟ್ಟರ ಸುಳಿವಿಲ್ಲದಾಗ ಎಲ್ಲರಿಗೂ ಊಟ ಮುಗಿಸಲು ಹೇಳಿದ. ಭಟ್ಟರು ಬಂದಾಗ ನಾಲ್ಕು ಗಂಟೆಯಾಗಿತ್ತು. ಬರುವಾಗಲೇ ಏನೇನೋ ನೆಪಗಳನ್ನು ಪಟ್ಟಿ ಮಾಡಿಕೊಂಡಿದ್ದರು. ಅದನ್ನೆಲ್ಲ ಶುರು ಮಾಡಿದಾಗ 'ಹೋಗಲಿ ಬಿಡಿ. ಈಗ ಬಂದ್ರಲ್ಲ. ಇನ್ನು ಪೂಜೆ ಶುರು ಮಾಡಿ' ಎಂದು ಉದಾಸೀನದಿಂದ ಹೇಳಿದ. ಅಪ್ಪನ ತಣ್ಣನೆಯ ಪ್ರತಿಕ್ರಿಯೆ ಗಮನಿಸಿದರೂ ಭಟ್ಟರು 'ಆಪದ್ಧರ್ಮ ಅಂತ ಇರುತ್ತದೆಯೋ ಯಜಮಾನ' ಎಂದು ತಮ್ಮ ಅಡಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಭಂಡತನ ಪ್ರದರ್ಶಿಸಿದ್ದರು. ಬಡಿಯನಾಯ್ಕರಂತೂ ಬರುವೆ ಊರಿನ ನೋನಿಯ ಸಂದರ್ಭದಲ್ಲಿ ತೋರಿದ ಸಾತ್ವಿಕ ಕೋಪಕ್ಕೆ ಅರ್ಚಕರು ಕಂಗಾಲಾಗಿ ಕಾಲು ಹಿಡಿಯಲು ಬಂದಿದ್ದಕ್ಕೆ 'ಇದು ದೇವರಿಗೆ ಇರಲಿ' ಎಂದು ಸಿಟ್ಟಿನಿಂದ ನಿರ್ಗಮಿಸಿದ್ದರಂತೆ. 'ಬ್ರಾಹ್ಮಣರಿಂದ ಕಾಲು ಹಿಡಿಸಿದ್ದುಕೊಂಡದ್ದು ಅಶ್ರೇಯಸ್ಸು, ಯಾವುದೋ ಕಂಟಕದ ಮುನ್ಸೂಚನೆ, ಇನ್ನು ಆರು ತಿಂಗಳಲ್ಲಿ ಬಡಿಯಣ್ಣನಿಗೆ ಕಂಟಕ' ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದರಂತೆ. ಹಾಗೆ ಹೇಳಿದವರು, ಕಾಲು ಹಿಡಿಯಲು ಬಂದ ಅರ್ಚಕರು ಎಲ್ಲರೂ ದೇವರ ಪಾದ ಸೇರಿದ ನಂತರವೂ ಬಡಿಯನಾಯ್ಕರು ಅನೇಕ ವರ್ಷ ಆರೋಗ್ಯಕರವಾಗಿ ಇದ್ದರು.

ತಮಗೆ ಬಾಲ್ಯದಲ್ಲಿ ಸಿಗದ ವಿದ್ಯೆ ಮುಂದಿನವರಿಗೆ ಸಿಗಲಿ ಎಂಬ ಬಗ್ಗೆ ಅಪ್ಪನಿಗೂ ಅವನ ವಾರಿಗೆಯ

ಬಡಿಯನಾಯ್ಕರಲ್ಲಿಯೂ ಇದ್ದುದನ್ನು ನಾವು ಗಮನಿಸಿದ್ದೆವು. ನಾನು ಮಾಧ್ಯಮಿಕ ಶಾಲೆಯ ಓದಿಗೆ ಹುಳುಗದ್ದೆಯ ಸೋದರ ಮಾವನ ಮನೆಯಲ್ಲಿ ಇದ್ದಾಗ ದೂರದ ಸಂಬಂಧದ ಎಳೆ ಹಿಡಿದು ನಾಲ್ಕು ಮಂದಿ ಹುಡುಗರು ಮಾವನ ಮನೆಯಲ್ಲಿ ಓದಲು ಇದ್ದರು. ಆಗಷ್ಟೇ ಪೇಟೆಯಲ್ಲಿ ಹೈಸ್ಕೂಲು ಪ್ರಾರಂಭವಾಗಿತ್ತು. ಪೇಟೆಯಲ್ಲಿ ಬೇರೆ ವ್ಯವಸ್ಥೆ ಆಗುವವರೆಗೆ ಮಾವನ ಮನೆಯಲ್ಲಿದ್ದರು. ಬೆಳಗ್ಗೆ ತಿಂಡಿ ತಿಂದು ಹೊರಡುತ್ತಿದ್ದರು. ಸಂಜೆ ಶಾಲೆ ಮುಗಿಸಿ ವಾಪಸಾಗುತ್ತಿದ್ದರು. ಮನೆಯವರಂತೆಯೇ ಅವರಿಗೂ ಊಟ ಉಪಚಾರ. ಒಂದೆರಡು ತಿಂಗಳಲ್ಲಿ ಪೇಟೆಯಲ್ಲಿ ಹಾಸ್ಟಲು ಪ್ರಾರಂಭವಾಗಿ ಅಲ್ಲಿ ಪ್ರವೇಶ ಪಡೆದು ಅವರೆಲ್ಲ ನಿರ್ಗಮಿಸಿದ್ದರು. ಇದನ್ನು ತಿಮ್ಮಪ್ಪನಲ್ಲಿ ಹೇಳಿದಾಗ ಅವರ ಮನೆಯಲ್ಲಿ ಲಾಗಾಯ್ತಿನಿಂದಲೂ ಓದಿಕೊಳ್ಳುವುದಕ್ಕೆ ಸಂಬಂಧಿಕರ ಮಕ್ಕಳು ಇರುತ್ತಿದ್ದರೆಂದು ವಿವರ ನೀಡಿದ್ದ. ಪೇಟೆಗೆ ಎರಡು- ಮೂರು ಕಿಲೋಮೀಟರ್ ಹತ್ತಿರವಿದ್ದ ಅನುಕೂಲವಂತರ ಮನೆಗಳಲ್ಲಿ ಹೀಗೆ ಮಕ್ಕಳನ್ನು ಓದಲು ಬಿಡುವುದಕ್ಕೆ ತಮ್ಮ ಊರಿನ ಹತ್ತಿರ ಶಾಲೆಯ ಅನುಕೂಲ ಇಲ್ಲದ ಹಿಂದಿನ ತಲೆಮಾರಿನ ಹಿರಿಯರು ಬಯಸುತ್ತಿದ್ದರು. ಆದರೆ ನಮಗೆ ಗೊತ್ತಿದ್ದಂತೆ ಬರುವೆ ಮತ್ತು ಹುಳುಗದ್ದೆಯ ಮನೆಗಳಲ್ಲಿ ಮಾತ್ರ ಓದುವ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದರು.

ಬಡಿಯನಾಯ್ಕರ ಶಿಕಾರಿಯ ಸಾಹಸಗಳ ಬಗ್ಗೆ ತಿಮ್ಮಪ್ಪ ಆಗಾಗ ಪ್ರಸ್ತಾಪಿಸುತ್ತಿದ್ದ. ಬೈನೆ ಮರದಿಂದ ಕಳ್ಳು ಇಳಿಸಲು ಹೋದಾಗ ಕೆಳಗೆ ನೋಡಿದರೆ ತುಸು ದೂರದಲ್ಲಿದ್ದ ಕೆಂಜಿಗೆ ಮಟ್ಟಿನಲ್ಲಿ ಎರಡು ಮರಿಗಳೊಂದಿಗೆ ತಾಯಿ ಹುಲಿ ವಿಶ್ರಮಿಸುತ್ತಾ ಇದ್ದುದನ್ನು ನೋಡಿ ಕ್ಷಣ ಹೊತ್ತು ಗಲಿಬಿಲಿಯಾದರೂ ನಿಧಾನವಾಗಿ ಇಳಿದು ಹುಲಿಗೆ ಮುಖಮಾಡಿಕೊಂಡು ಹಿಮ್ಮುಖವಾಗಿ ಮೆಲ್ಲಗೆ ಹೆಜ್ಜೆ ಹಾಕುತ್ತಾ ಪಾರಾಗಿ ಬಂದ ಒಂದು ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದ. 'ಬ್ರಿಟಿಷ್ ಶಿಕಾರಿದಾರರು ಬಂದಾಗ ಅವರ ಜೊತೆಗೂ ಹೋಗಿದ್ದನಂತೆ. ಶೇಷತ್ತೆ ಹೇಳುತ್ತಿದ್ದಳು' ಎಂದು ಇನ್ನೊಂದು ಸಂದರ್ಭದಲ್ಲಿ ಹೇಳಿದಾಗ ಕುತೂಹಲವಾಯಿತು. ನರಭಕ್ಷಕ ಹುಲಿಗಳನ್ನು ಪತ್ತೆ ಮಾಡಿ ಕೊಲ್ಲಲು ಕೆನೆತ್ ಆಂಡರ್‌ಸನ್ ನಮ್ಮ ಶಿವಮೊಗ್ಗ ಜಿಲ್ಲೆಯ ಕಡೆ ಬಂದಿದ್ದು ಅವನ ಬೇಟೆಯ ನೆನಪುಗಳಲ್ಲಿ ದಾಖಲಾಗಿದೆ. ಹಾರನಹಳ್ಳಿ, ಕುಂಸಿ, ಚೋರಡಿ, ಅಂಬಲಿಗೊಳ ಮೊದಲಾದ ಪ್ರದೇಶಗಳಲ್ಲಿ ಅವನು ಸುತ್ತಾಡಿದ್ದ ವಿವರಗಳಿವೆ. ಈ ಜಾಗಗಳು ನಮ್ಮ ಊರುಗಳಿಗೆ ಹದಿನೈದರಿಂದ ಇಪ್ಪತ್ತೈದು ಮೂವತ್ತು ಮೈಲುಗಳ ಫಾಸಲೆಯಲ್ಲಿ ಇರುವಂಥವು. ಅವೆಲ್ಲ ಸ್ವಾತಂತ್ರ್ಯ ಪೂರ್ವದ ದಿನಗಳು. ಅವನ ಬರಹಗಳಲ್ಲಿ ಎಲ್ಲಾದರೂ ಬಡಿಯನಾಯ್ಕರ ಹೆಸರು ಪ್ರಸ್ತಾಪವಾಗಿದೆಯೇ ಎಂದು ನೋಡಿದೆ. ತಿಮ್ಮಪ್ಪನೂ ಬೇಟೆ ಸಾಹಸದ ಕೃತಿಗಳನ್ನು ಓದಿದವನೇ. ಆಂಡರ್ ಸನ್ ಬರಹಗಳಲ್ಲಿ ಅವನಿಗೆ ಬೇಟೆಯ ಕಾಲದಲ್ಲಿ ನೆರವಿಗೆ ಬಂದಿದ್ದ ಎಷ್ಟು ಜನರ ಹೆಸರು ಬಿಟ್ಟು ಹೋಗಿದೆಯೋ ಎಂದು ಸಮಾಧಾನಪಟ್ಟುಕೊಂಡೆವು. ಅಷ್ಟಕ್ಕೂ ಅವನ ಬರಹಗಳಲ್ಲಿ ನಮ್ಮವರ ಯಾವುದಾದರೂ ಹೆಸರು ಬರದಿದ್ದರೆ ಅದು ತಲೆಕೆಡಿಸಿಕೊಳ್ಳುವ ವಿಷಯ ಅಲ್ಲ ಎಂಬುದೂ ನಮಗೆ ತಿಳಿದಿತ್ತು.

ನಮ್ಮ ಹಳ್ಳಿಯ ಹುಡುಗ ಹುಡುಗಿಯರಿಗೆ ಓದು ಮುಖ್ಯ ಎಂದು ಮೊದಲಿನಿಂದ ಹೇಳುತ್ತಿದ್ದ ಅಪ್ಪನಿಗೆ ನಾನು ಬೆಂಗಳೂರಿನಲ್ಲಿ ಸಮಾಜದವರು ಕಟ್ಟಿದ ಉಚಿತ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆದ ಮೇಲೆ ಅಲ್ಲಿನ ಸಂಘಟನೆಯ ಬಗ್ಗೆ ನಾನು ರಜೆಗೆ ಬಂದಾಗ ವಿಚಾರಿಸುತ್ತಿದ್ದ. ಅವನಿಗೆ ಕೆ.ಎನ್.ಗುರುಸ್ವಾಮಿ, ಕೆ.ವೆಂಕಟಸ್ವಾಮಿ ಎಂಬ ಹೆಸರುಗಳು ನೆನಪಿನಲ್ಲಿ ಉಳಿದಿದ್ದವು. 1958ರಲ್ಲಿ ಸಮಾಜದ ಒಂದು ಸಮಾವೇಶ ಬೆಂಗಳೂರಿನಲ್ಲಿ ನಡೆದಾಗ ನಮ್ಮ ಕಡೆಯ ಎಲ್ಲ ಯಜಮಾನರುಗಳಿಗೆ ಅಂದಿನ ಸಂಘಟನಾ ಕಾರ್ಯದರ್ಶಿ

ಟಿ.ವಿ.ವೆಂಕಟಸ್ವಾಮಿ ವೈಯಕ್ತಿಕ ಪತ್ರ ಬರೆದು ಆಹ್ವಾನಿಸಿದ್ದರಂತೆ. 1969ರ ಜುಲೈ ತಿಂಗಳಲ್ಲಿ ನಾನು ಮತ್ತು ಉಮಾಕಾಂತ, ಬಿದರಳ್ಳಿ ಪುರುಷೋತ್ತಮ ಅವರ ಜೊತೆಗೆ ಬೆಂಗಳೂರಿನ ಸದಾಶಿವನಗರದಲ್ಲಿದ್ದ ಅವರ ಮನೆಗೆ ನಮಗೆ ಹಾಸ್ಟಲ್ ಸೀಟು ಕೇಳಲು ಹೋದ ಸಂದರ್ಭದಲ್ಲಿ ಟಿ.ವಿ.ವೆಂಕಟಸ್ವಾಮಿಯವರು ನಮ್ಮ ಕಡೆಯ ಅನೇಕ ಯಜಮಾನರುಗಳ ಹೆಸರುಗಳನ್ನು ನೆನಪಿಸಿಕೊಂಡಿದ್ದರು. 1958ರ ನವೆಂಬರ್ 9 ಮತ್ತು 10 ರಂದು ಎರಡು ದಿನ ಬೆಂಗಳೂರಿನಲ್ಲಿ ನಡೆದ ದೊಡ್ಡ ಸಮಾವೇಶಕ್ಕೆ ನಮ್ಮ ಕಡೆಯಿಂದ ಅನೇಕ ಯಜಮಾನರುಗಳ ಜೊತೆ ಅಪ್ಪನೂ ಹೋಗಿದ್ದ. ಆಗ ಕುಲಕಸುಬನ್ನು ಮಾಡುತ್ತಿದ್ದ ಎಲ್ಲ ಜಾತಿಗಳವರೂ ಒಂದೇ ಹೆಸರಿನಲ್ಲಿ ಸಂಘಟಿತರಾದರೆ ನಮ್ಮ ಬಲ ಹೆಚ್ಚುತ್ತದೆ ಎಂದು ನಿರ್ಣಯ ಮಾಡಿದ್ದರಂತೆ. ಬೆಂಗಳೂರಿನಿಂದ ಬಂದ ಅಪ್ಪ ಅಲ್ಲಿನ ಅನುಭವಗಳನ್ನು ಮನೆಯಲ್ಲಿ ಹೇಳುತ್ತಾ ಇದ್ದುದು ನನಗೆ ಮಸುಕಾಗಿ ನೆನಪಿನಲ್ಲಿದೆ. ಏನು ಹೇಳಿದ್ದ ಎಂಬುದು ನೆನಪಿನಲ್ಲಿ ಉಳಿದಿಲ್ಲ. ಅದಾಗಿ ಮೂರು ವರ್ಷಕ್ಕೆ, 1961ರಲ್ಲಿ ಅಂಥದ್ದೇ ಇನ್ನೊಂದು ಸಮಾವೇಶ ಮೈಸೂರಿನಲ್ಲಿ ನಡೆದಿತ್ತು. ಅದಕ್ಕೂ ಅಪ್ಪ ಹೋಗಿದ್ದ. ಈ ಸಮಾವೇಶಕ್ಕೆ ತಿಮ್ಮಪ್ಪನ ಅಣ್ಣ ಚುಂಗಣ್ಣನೂ ಪ್ರತಿನಿಧಿಯಾಗಿ ಹೋಗಿದ್ದರಂತೆ. ಹೆಂಡ ಇಳಿಸುವ ಕುಲಕಸುಬನ್ನು ತೆಗೆದುಹಾಕಿದರೆ ಅದನ್ನೇ ನಂಬಿಕೊಂಡು ಬಂದವರೆಲ್ಲ ಬೀದಿ ಪಾಲಾಗುವುದರಿಂದ ಅದನ್ನು ತೆಗೆಯಬಾರದು ಎಂದು ದೊಡ್ಡ ಮೆರವಣಿಗೆ ಮಾಡಿ ಸರ್ಕಾರಕ್ಕೆ ಒತ್ತಾಯಿಸಿದ್ದರಂತೆ. ಆ ಸಮಾವೇಶದಿಂದ ವಾಪಸಾದ ಅಪ್ಪ ಅದರ ಬಗ್ಗೆ ಮನೆಯಲ್ಲಿ ಹೇಳುವಾಗ ನಾನು ಪ್ರಾಥಮಿಕ ಶಾಲೆಯಲ್ಲಿ ಮೂರನೇ ತರಗತಿಯ ವಿದ್ಯಾರ್ಥಿ. ದೊಡ್ಡವರು ಮಾತಾಡಿದ್ದು ಸ್ವಲ್ಪಮಟ್ಟಿಗೆ ಅರ್ಥವಾಗುತ್ತಿತ್ತು. ಕೇರಳದಿಂದ ಬಂದಿದ್ದ ಮಂತ್ರಿಯೊಬ್ಬರು ಇಂಗ್ಲಿಷಿನಲ್ಲಿ ಮಾತಾಡಿದ್ದನ್ನು ಕನ್ನಡದಲ್ಲಿ ಯಾರೋ ತಿಳಿಸುತ್ತಿದ್ದರಂತೆ. ನಾರಾಯಣಗುರು ಎಂಬ ದೊಡ್ಡ ಗುರುಗಳು ಅಲ್ಲಿ ದೇವಸ್ಥಾನಗಳನ್ನು ಕಟ್ಟಿಸಿದ್ದಾರಂತೆ. ಮೈಸೂರು ಸಂಸ್ಥಾನದಲ್ಲಿ ದೊಡ್ಡ ಡಾಕ್ಟರಾಗಿದ್ದ ಪಲ್ಲಪ್ಪ ಎಂಬುವರು ಗುರುಗಳ ಜೊತೆಗೆ ಇದ್ದು ನಮ್ಮವರು ಉದ್ಧಾರವಾಗಲು ಸಹಾಯ ಮಾಡಿದ್ದರಂತೆ ಎಂದು ಹೇಳಿದ್ದ. ಮುಂದೆ ಕೆಲವು ವರ್ಷಗಳ ನಂತರ ತಿಮ್ಮಪ್ಪನ ಗೆಳೆತನವಾಗಿ ಅವನ ಮನೆಗೆ ಹೋಗಿದ್ದಾಗ ಪ್ರಾಸಂಗಿಕವಾಗಿ ಮೈಸೂರಿನ ಸಮಾವೇಶದ ವಿಷಯ ಬಂದಿತ್ತು. ಆಗ ಚುಂಗಣ್ಣ 'ಕೇರಳದಿಂದ ಬಂದಿದ್ದವರು ನಾರಾಯಣಗುರುಗಳ ಶಿಷ್ಯರಂತೆ. ಅಲ್ಲಿ ಮುಖ್ಯಮಂತ್ರಿ ಆಗಿದ್ದರಂತೆ' ಎಂದು ನೆನಪು ಮಾಡಿಕೊಂಡಿದ್ದರು.

**'ಪಲ್ಲಪ್ಪನೇ ಪಲ್ಪು ಇರಬಹುದೇ?'**

ಈ ನೆನಪುಗಳು ನನ್ನ ಹುಡುಕಾಟಕ್ಕೆ ಪ್ರೇರಕವಾದವು. ಕೇರಳದ ನಾರಾಯಣಗುರುಗಳು (ಜನನ 18.9.1854, ಮಹಾಸಮಾಧಿ 20.9.1928) ಮೈಸೂರು ಸಂಸ್ಥಾನಕ್ಕೆ ಬಂದು ಹೋಗಿದ್ದ ವಿವರಗಳು ಅಲ್ಲಲ್ಲಿ ಸಿಕ್ಕವು. ಅವರು ಪರಿವ್ರಾಜಕರಾಗಿ ಕಾಡು ಮೇಡುಗಳಲ್ಲಿ ಸುತ್ತಾಡಿ ತಪಸ್ಸಿನಿಂದ ಸಿದ್ಧಿಪಡೆದು 1888ರಲ್ಲಿ ಅರವಿಪುರದಲ್ಲಿ ಶೂದ್ರರಿಗಾಗಿ ಶಿವ ದೇವಾಲಯ ನಿರ್ಮಿಸುವ ಮೂಲಕ ಕೇರಳದ ತಳಸಮುದಾಯದಲ್ಲಿ ಸಂಚಲನ ಉಂಟುಮಾಡಿದ್ದರು. ಅವರ ಸಾಮಾಜಿಕ ಜಾಗೃತಿಯ ಕೆಲಸಗಳಿಂದ ಆಕರ್ಷಿತರಾಗಿ ಜೊತೆಯಾದವರು ಮೈಸೂರು ಸಂಸ್ಥಾನದಲ್ಲಿ ವೈದ್ಯಾಧಿಕಾರಿಯಾಗಿದ್ದ ಡಾ. ಪಲ್ಪು. ತಿರುವನಂತಪುರ (ಆಗಿನ ತಿರುವಾಂಕೂರು) ಸಂಸ್ಥಾನದವರೇ ಆಗಿದ್ದ ಪಲ್ಪು ಅವರು ಮದ್ರಾಸ್ ನಲ್ಲಿ ವೈದ್ಯಕೀಯ ಶಿಕ್ಷಣ ಪಡೆದರೂ ಕೇರಳದಲ್ಲಿ ನೌಕರಿ ಪಡೆಯಲಾಗದೆ ಮೈಸೂರು ಸಂಸ್ಥಾನದಲ್ಲಿ ಉದ್ಯೋಗ ಪಡೆದಿದ್ದರು. ಇಲ್ಲಿ ಉದ್ಯೋಗದಲ್ಲಿದ್ದು ರಜೆ ಹಾಕಿ ಕೇರಳಕ್ಕೆ ಹೋಗಿ ಗುರುಗಳೊಂದಿಗೆ ಸಮಾಜದ ಅಭಿವೃದ್ಧಿಗೆ ಹಲವು

ಯೋಜನೆಗಳನ್ನು ರೂಪಿಸಿದ್ದರು. ಮೈಸೂರು ಸಂಸ್ಥಾನದಲ್ಲಿ ಅನೇಕ ಕಡೆ ವೈದ್ಯರಾಗಿ ಸೇವೆ ಸಲ್ಲಿಸಿದ್ದ ಅವರು 1911ರಲ್ಲಿ ಶಿವಮೊಗ್ಗ ಜಿಲ್ಲಾ ವೈದ್ಯಾಧಿಕಾರಿಯಾಗಿ ಕೆಲಸ ಮಾಡಿದ್ದರು. ಪಲ್ಪು ಎಂಬ ಹೆಸರು ಸ್ಥಳೀಯರ ಬಾಯಲ್ಲಿ ಪಲ್ಲಪ್ಪ ಎಂದು ತಮ್ಮ ತೂಕದ ಮಾನಕದಂತೆ ಬಳಕೆಗೆ ಬಂದಿತ್ತು. ಚಿಕ್ಕವನಾಗಿದ್ದಾಗ ಶಿವಮೊಗ್ಗಕ್ಕೆ ಆಸ್ಪತ್ರೆಗೆ ಹೋಗಿದ್ದ ಅಪ್ಪ ದೊಡ್ಡವನಾದ ಮೇಲೆ ನೆನಪು ಮಾಡಿಕೊಂಡಿದ್ದ ಪಲ್ಲಪ್ಪ ಎಂಬ ಡಾಕ್ಟರು ಇದೇ ಡಾ. ಪಲ್ಪು ಆಗಿರಬಹುದೇ ಎಂದು ಊಹಿಸಿದೆ. ನನ್ನ ಊಹೆ ನಿಜವಾಗಿದ್ದರೆ ಮಲೆನಾಡಿನ ಕುಗ್ರಾಮವೊಂದರಲ್ಲಿ ಬದುಕಿದ್ದ ಅನಾಮಿಕ ಹಳ್ಳಿಗನೊಬ್ಬ ಸಮಕಾಲೀನ ಇತಿಹಾಸದಲ್ಲಿ ಮಹತ್ವದ ಕೊಡುಗೆ ನೀಡಿದ್ದ ಸಮಾಜ ಸುಧಾರಕ ನಾರಾಯಣಗುರುಗಳ ಅನುಯಾಯಿ ಡಾ.ಪಲ್ಪು ಅವರನ್ನು ತನ್ನ ಬಾಲ್ಯದ ದಿನಗಳಲ್ಲಿ ಪ್ರತ್ಯಕ್ಷ ಕಂಡಿರುವುದು ಪವಾಡಸದೃಶ ಘಟನೆ ಎನಿಸುವುದು. (ಅನುಬಂಧದಲ್ಲಿ ಹೆಚ್ಚಿನ ವಿವರಗಳಿವೆ).

ನಾವಿಬ್ಬರೂ ನಮ್ಮ ನಮ್ಮ ವೃತ್ತಿಗಳನ್ನು ಪೂರೈಸಿ ನಿವೃತ್ತರಾಗುವ ವೇಳೆಗೆ ನಮ್ಮ ಸಾಮಾಜಿಕ ಜವಾಬ್ದಾರಿಗಳು, ಅಂದರೆ ಮಕ್ಕಳ ವಿದ್ಯಾಭ್ಯಾಸ, ಮದುವೆ, ಸ್ವಂತ ಮನೆ ನಿರ್ಮಾಣ ಇತ್ಯಾದಿಗಳನ್ನು ನಿರ್ವಹಿಸಿದ ಸಮಾಧಾನ ಸ್ಥಿತಿಗೆ ಬಂದಿದ್ದೆವು. ಬಾಲ್ಯದಿಂದಲೂ ನಮ್ಮಿಬ್ಬರದು ಸ್ವತಂತ್ರ ಪ್ರವೃತ್ತಿ. ಮನೆಯಲ್ಲಿ ದುಡಿಮೆಯೇ ನಿತ್ಯದ ವ್ರತದಂತೆ ಮುಂದುವರಿಯುತ್ತಿದ್ದರೂ ವಾರದಲ್ಲಿ ಒಂದು ದಿನ ವ್ರತವನ್ನು ನಡೆಸುತ್ತಿದ್ದರು. ನಮ್ಮ ಊರಿನ ಹಾಗೂ ಹತ್ತಿರದ ಬಂಧುಗಳಲ್ಲಿ ಶನಿವಾರ ಇಲ್ಲವೇ ಸೋಮವಾರ ವ್ರತ ಇಟ್ಟುಕೊಂಡವರಿದ್ದರು. ವ್ರತವೆಂದರೆ ಹೆಚ್ಚಿನ ಸಂಭ್ರಮವೇನೂ ಇಲ್ಲ. ಎಂದಿನಂತೆ ಬೇಸಾಯದ ಹಂಗಾಮಿನ ಕೆಲಸಗಳು ನಡೆಯುತ್ತಿದ್ದವು. ಮನೆಯ ಯಜಮಾನರದೇ ಪೂಜೆ. ಅವರಿಗೆ ಬೆಳಗ್ಗೆ ಅಕ್ಕಿ ಹಿಟ್ಟಿನಿಂದ ಮಾಡಿದ ರೊಟ್ಟಿಯ ಉಪಾಹಾರ. ಉಳಿದವರಿಗೆ ರೊಟ್ಟಿ ಮಾಡುವಾಗ ಹಿಂದಿನ ರಾತ್ರಿ ಉಳಿದಿದ್ದ ಅನ್ನವನ್ನು ಹಿಟ್ಟಿಗೆ ಸೇರಿಸುತ್ತಿದ್ದರು. ಪೂಜೆಗೆ ನಿಯೋಜಿತರಾದವರಿಗೆ ಮಾಡುವ ರೊಟ್ಟಿಗೆ ಅನ್ನ ಸೇರಿಸುತ್ತಿರಲಿಲ್ಲ. ಅದಕ್ಕೆ ಹಿಟ್ಟಿನ ರೊಟ್ಟಿ ಎಂದೇ ಹೆಸರು. ಕೆಲಸದ ಒತ್ತಡ ನೋಡಿ ಮಧ್ಯಾಹ್ನಕ್ಕೋ, ರಾತ್ರಿಗೋ ಪೂಜೆ. ಅಕ್ಕಿ ಹಿಟ್ಟಿನ ರೊಟ್ಟಿ ತಿಂದು ನಿತ್ಯದ ಕೆಲಸದಲ್ಲಿ ನಿರತರಾಗಿದ್ದ ಯಜಮಾನ ಮಧ್ಯೆ ಏನನ್ನೂ ತಿನ್ನದೆ ಸ್ನಾನ ಮುಗಿಸಿ ಪೂಜೆಗೆ ಕುಳಿತು ಮಡಿಯಿಂದ ಮಾಡಿದ ಅನ್ನ, ಪಾಯಸ ಇತ್ಯಾದಿಯನ್ನು ಬಾಳೆ ಎಲೆಯಲ್ಲಿ ನೈವೇದ್ಯ ನೀಡಿ ಅದನ್ನು ಅಗ್ನಿಗೆ ಸಮರ್ಪಿಸುತ್ತಿದ್ದರು. ನಂತರ ಅವರ ಊಟ. ಅವರೊಂದಿಗೆ ಉಳಿದವರೂ ಕುಳಿತು ಊಟ ಮುಗಿಸುತ್ತಿದ್ದರು. ಅವತ್ತು ಮಾತ್ರ ಮಾಂಸ, ಮೀನಿನ ಖಾದ್ಯಗಳಿಗೆ ವಿನಾಯಿತಿ. ಆದರೆ ಅವತ್ತು ಶಿಕಾರಿಯಾದರೆ, ಗದ್ದೆಗೆ ಹಾಕಿದ ಕೂಣಿಗಳಲ್ಲಿ ಮೀನು ಸಿಕ್ಕರೆ, ಪೂಜೆ ಮಾಡಿದವರಷ್ಟೇ ಅದನ್ನು ಸೇವಿಸುತ್ತಿರಲಿಲ್ಲ. ಉಳಿದವರಿಗೆ ಅದು ವರ್ಜ್ಯವಾಗಿರಲಿಲ್ಲ. ವಿಶೇಷ ಆಕರ್ಷಣೆಯ ಮಾಂಸಾಹಾರದ ಖಾದ್ಯಗಳಿದ್ದರೆ, ರಾತ್ರಿ ಹನ್ನೆರಡರ ನಂತರ ಸೇವಿಸಬಹುದೆಂಬ ವಿನಾಯಿತಿಯನ್ನೂ ಪೂಜೆ ಮಾಡಿದವರೂ ಕಂಡುಕೊಳ್ಳುತ್ತಾ ಇದ್ದ ನಿದರ್ಶನಗಳೆಷ್ಟೋ.

ಈ ಕೌಟುಂಬಿಕ ಹಿನ್ನೆಲೆ ಇಬ್ಬರಿಗೂ ಇದ್ದರೂ ನಾವು ಸ್ವಂತವಾಗಿ ನಮ್ಮ ಕುಟುಂಬಗಳನ್ನು ನೆಲೆಗೊಳಿಸಿದಾಗ ಮನೆಯ ಈ ಧಾರ್ಮಿಕ ಪದ್ಧತಿಯನ್ನು ಅಳವಡಿಸಿಕೊಳ್ಳಲಿಲ್ಲ. ಶನಿವಾರದ ವ್ರತ ಇಲ್ಲವೇ ಸೋಮವಾರದ ವ್ರತವನ್ನು ಯಾವತ್ತೂ ಮಾಡಲಿಲ್ಲ. ಮನೆಯ ಹಬ್ಬಗಳಾದ ಚೌಡಿ ಹರಕೆ, ಆರಿದ್ರಾ ಮಳೆ ಹಬ್ಬ, ಕೂರಿಗೆ ಹಬ್ಬ, ಕಣದ ಹಬ್ಬ, ಸತ್ಯನಾರಾಯಣ ವ್ರತ ಇತ್ಯಾದಿಗಳನ್ನೂ ಮಾಡಲಿಲ್ಲ. ಅಷ್ಟೇ ಏಕೆ, ನಮ್ಮ ಮಕ್ಕಳ ಹುಟ್ಟುಕೂದಲನ್ನೂ ದೈವಸ್ಥಾನಗಳಲ್ಲೋ, ಪುಣ್ಯಕ್ಷೇತ್ರಗಳಲ್ಲೋ ತೆಗೆಸಲಿಲ್ಲ. ನನ್ನ ಮಕ್ಕಳ ಹುಟ್ಟು

ಕೂದಲು ಅವರಿಗೆ ತೊಂದರೆ ಆಗುವಷ್ಟು ಬೆಳೆದಾಗ ನಾನೇ ಎಚ್ಚರಿಕೆಯಿಂದ ಕತ್ತರಿಸಿದ್ದೆ. ತಿಮ್ಮಪ್ಪನೂ ಅದೇ ರೀತಿ ತನ್ನಿಬ್ಬರು ಮಕ್ಕಳ ಹುಟ್ಟುಕೂದಲನ್ನೂ ಮೊದಲ ಸಲಕ್ಕೆ ಕತ್ತರಿಸಿದ್ದ. ನನ್ನ ಹಾದಿಯನ್ನೇ ನನ್ನ ಹಿರಿಯ ಮಗನೂ ಅನುಸರಿಸಿ ಅವನ ಮಗಳ ಹುಟ್ಟುಕೂದಲನ್ನು ಅವನೇ ಮೊಟ್ಟಮೊದಲಿಗೆ ಕತ್ತರಿಸಿ ಕುಟುಂಬ ಪದ್ಧತಿಯನ್ನು ಪಾಲಿಸಿದ.

ನಿವೃತ್ತಿಯ ಬದುಕನ್ನು ನಮಗೆ ಇಷ್ಟಬಂದಂತೆ ಕಳೆಯುವ ಅವಕಾಶ ಮುಕ್ತವಾಗಿ ಅದು ನಮ್ಮಿಬ್ಬರ ಜೀವನ ದೃಷ್ಟಿಗೆ ಅನುಗುಣವಾಗಿದೆ. ಬೆಂಗಳೂರಿನಲ್ಲಿ ನಾನು, ಶಿವಮೊಗ್ಗದಲ್ಲಿ ತಿಮ್ಮಪ್ಪ ನಿತ್ಯದ ದಿನಚರಿಯನ್ನು ನಮಗೆ ಅನುಕೂಲವಾಗುವಂತೆ ರೂಪಿಸಿಕೊಂಡಿದ್ದೇವೆ. ಕೆಲವೊಮ್ಮೆ ದಿನದಲ್ಲಿ ಎರಡು ಮೂರು ಸಲ ಮೊಬೈಲ್‌ನಲ್ಲಿ ಮಾತಾಡುತ್ತೇವೆ. ಹೊತ್ತುಗೊತ್ತಿಲ್ಲದಂತೆ ನಡೆಯುವ ನಮ್ಮ ಮಾತುಕತೆ ನಮ್ಮ ನಮ್ಮ ಮನೆಯಲ್ಲಿ ಕೆಲವೊಮ್ಮೆ ಮನೆಯ ಉಳಿದವರಿಗೆ ಕಿರಿಕಿರಿ ಎನಿಸಿರಬಹುದು. ಆದರೆ ಮಾನಸಿಕ ನೆಮ್ಮದಿಯನ್ನು ಉಳಿಸಿಕೊಳ್ಳಲು ಇಬ್ಬರೂ ಪ್ರಯತ್ನ ನಡೆಸುವುದು ಅನಿವಾರ್ಯವಾಗಿದೆ. ಸುತ್ತಲಿನ ಯಾವತ್ತೂ ವಿದ್ಯಮಾನಗಳಿಗೆ ಕಿವುಡಾಗದೆ, ಕುರುಡಾಗದೆ, ಸ್ವತಂತ್ರ ಭಾರತದ ಹೊಣೆಗಾರ ಪ್ರಜೆಯಾಗಿ ನಿರ್ವಹಿಸುವ ಕರ್ತವ್ಯಗಳನ್ನು ಮಾಡುತ್ತಾ ಸಾಮಾಜಿಕ ಬದುಕನ್ನು ಅನುಭವಿಸಲು ಸಾಧ್ಯವಾಗಿರುವುದು ನಮ್ಮ ಹಿರಿಯರು ಮಾಡಿದ ಪುಣ್ಯದ ಫಲವೆಂಬ ಧನ್ಯತೆ ಉಳಿದಿದೆ.

ಈಚೆಗೆ ಮಾತನಾಡುತ್ತಿದ್ದಾಗ ಯಮಧರ್ಮನ ಆಸ್ಥಾನದ ವಿಷಯ ಪ್ರಸ್ತಾಪಕ್ಕೆ ಬಂದಿತು. ಅವನ ಕಚೇರಿಯ ಅಧೀಕ್ಷಕ ಚಿತ್ರಗುಪ್ತ ಭೂಲೋಕದ ಸಕಲ ನರ ಜೀವಿಗಳಿಗೆ ಸಂಬಂಧಿಸಿ ಪ್ರತ್ಯೇಕ ಪ್ರತ್ಯೇಕ ಕಡತಗಳನ್ನು ಸಿದ್ಧಪಡಿಸಿಕೊಳ್ಳುತ್ತಾನಲ್ಲ, ಅವುಗಳನ್ನೆಲ್ಲ ಅವನೇ ಸಿದ್ಧಪಡಿಸುತ್ತಾನೋ ಅಥವಾ ಇಲ್ಲಿನವರಂತೆ ಔಟ್ ಸೋರ್ಸ್ ಮಾಡಿರುತ್ತಾನೋ ಎಂಬ ಜಿಜ್ಞಾಸೆ ಬಂದಿತು. ಅವರವರ ಪುಣ್ಯ ಪಾಪಗಳ ಜಮಾ–ಖರ್ಚು ಲೆಕ್ಕ ಬರೆಯುತ್ತಾ ಅವನ್ನೆಲ್ಲ ಕಾಲಕಾಲಕ್ಕೆ ಹೋಲಿಸುತ್ತಾ ಆಡಿಟ್‌ನಂತೆ ಲೆಕ್ಕ ಪರಿಶೋಧನೆ ನಡೆಸಿ ಅವೆಲ್ಲ ಟ್ಯಾಲಿಯಾದರೆ ಆ ಕಡತವನ್ನು ನ್ಯಾಯಮೂರ್ತಿಯಾದ ಯಮಧರ್ಮನಲ್ಲಿ ಮಂಡಿಸಿ ಅಂತಿಮ ಗಡುವಿನ ಆದೇಶ ಹೊರಡಿಸಿ ಅವುಗಳನ್ನು ಜಾರಿಗೊಳಿಸಲು ಯಮದೂತರಿಗೆ ಆಜ್ಞಾಪಿಸುವ ಪದ್ಧತಿ ಅನುಸರಿಸುತ್ತಿರಬೇಕು. ಅದೇ ಅಧೀಕ್ಷಕ ಚಿತ್ರಗುಪ್ತ ಈಚೆಗೆ ನಮ್ಮಿಬ್ಬರ ಕಡತಗಳನ್ನು ಎಲ್ಲೋ ಇಟ್ಟು ಕಳೆದುಕೊಂಡಿದ್ದಾನೆ. ಎಲ್ಲಿ ಇಟ್ಟಿದ್ದೇನೆ ಎಂಬುದನ್ನು ಮರೆತೂ ಬಿಟ್ಟಿದ್ದಾನೆ ಎಂಬುದರಲ್ಲಿಗೆ ನಮ್ಮ ಮಾತುಕತೆಗೆ ಅಲ್ಪವಿರಾಮ..

* * *

## ಅನುಬಂಧ

# ದೀನಬಂಧು ಡಾ. ಪದ್ಮನಾಭನ್ ಪಲ್ಪು

ಡಿವಿಜಿ ಅವರ 'ನೆನಪಿನ ಚಿತ್ರಗಳ ಮಾಲಿಕೆ'ಯ ಮೊದಲ ಸಂಪುಟದ ಪ್ರಾರಂಭ ಹೀಗಿದೆ: '1906 ಅಥವಾ 1907ರಲ್ಲಿ ಬೆಂಗಳೂರಿಗೆ ಅಭೇದಾನಂದ ಸ್ವಾಮಿಗಳವರು ದಯಮಾಡಿಸಿದರು. ಅವರು ಭಗವಾನ್ ರಾಮಕೃಷ್ಣ ಪರಮಹಂಸರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರು. ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ಹಿಂದೂಮತದ ಕೀರ್ತಿಜ್ಯೋತಿಯನ್ನು ಬೆಳಗಿಸಿದ, ನಮ್ಮ ದೇಶಕ್ಕೆ ಪಾಶ್ಚಾತ್ಯ ಪ್ರಪಂಚದಲ್ಲಿ ಅಪೂರ್ವವಾದ ಗಣ್ಯತೆಯನ್ನು ಸಂಪಾದಿಸಿಕೊಟ್ಟು ಸ್ವದೇಶಕ್ಕೆ ಹಿಂತಿರುಗಿದ ಬಳಿಕ, ಅಮೆರಿಕದಲ್ಲಿ ಅವರು ಪ್ರಾರಂಭಿಸಿದ್ದ ಕಾರ್ಯವನ್ನು ಅಲ್ಲಿ ನಿಂತು ಯಶಸ್ಕರವಾದ ರೀತಿಯಲ್ಲಿ ಮುಂಬರಿಸಿದ್ದವರು ಅಭೇದಾನಂದಸ್ವಾಮಿಗಳು. ಅಂಥ ಮಹನೀಯರು ನಮ್ಮೂರಿಗೆ ಬರುವುದೆಂದರೆ ಅದೊಂದು ಅತಿಶಯಭಾಗ್ಯವೆಂಬಂತೆ ನಮ್ಮ ಮಹಾಜನರು ಭಾವಿಸಿದ್ದು ಸ್ವಾಭಾವಿಕವೇ ಅಲ್ಲವೇ? ಅಭೇದಾನಂದರಿಗೆ ಸ್ವಾಗತ ನೀಡುವುದಕ್ಕಾಗಿ ವಿಶೇಷವಾದ ಏರ್ಪಾಟುಗಳು ನಡೆಯುತ್ತಿದ್ದವು. ಯುವರಾಜರ ವಿದ್ಯಾಗುರುಗಳಾಗಿದ್ದು ಕಡೆಗೆ ಶ್ರೀನಿವಾಸಾನಂದ ನಾಮಧೇಯದಿಂದ ಯತ್ಯಾಶ್ರಮ ಗ್ರಹಣ ಮಾಡಿದ್ದ ಎಂ.ಎ.ನಾರಾಯಣಯ್ಯಂಗಾರ್ಯರೂ, ಹಲಸೂರಿನ ಡಾ. ವೆಂಕಟರಂಗಂ ಅವರೂ, ಆಗ ಸ್ಯಾನಿಟರಿ ಕಮೀಷನರಾಗಿದ್ದ ಡಾ. ಪಲ್ಪು ಅವರೂ, ಅಂದಿನ ಸಮಾಜ ಪ್ರಮುಖರು ಇನ್ನೂ ಅನೇಕರೂ ಆ ಸ್ವಾಗತ ಸಮಾರಂಭದಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಆ ಉತ್ಸಾಹದ ಗಾಳಿ ನನ್ನನ್ನೂ ಸೋಕಿತು...'

'ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ (ಡಿವಿಜಿ, 1887–1975) ಕನ್ನಡ ನಾಡಿನ ಮಹಾ ಪ್ರತಿಭಾವಂತರಲ್ಲಿ ಒಬ್ಬರು. ಅವರು ಪ್ರಭಾವಶೀಲರು. ಅವರು ಆಧುನಿಕ ಭಾರತೀಯ ಸಾಹಿತ್ಯದ ಒಂದು ಅಶ್ವತ್ಥವೃಕ್ಷ. ಬಹುಶ್ರುತರಾದ ಗುಂಡಪ್ಪನವರು ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಅನನ್ಯವಾದದ್ದು. ಪೂರ್ಣ ಪುರುಷರೆನ್ನಿಸಿದ್ದ ಗುಂಡಪ್ಪನವರು ವಿದ್ವತ್ತು ಮತ್ತು ರಸಿಕತೆಗಳ ಅಪೂರ್ವ ಸಂಗಮವಾಗಿದ್ದರು. ಅವರ ಸಾಹಿತ್ಯ ಬಾಳಿಗೊಂದು ನಂಬಿಕೆಯನ್ನೂ ಭರವಸೆಯನ್ನೂ ಕೊಡುವಂಥದು; ಸಂಸ್ಕೃತಿ ಸಂಪನ್ನವಾದದ್ದು. ಅದು ಮೌಲ್ಯಪ್ರಜ್ಞೆಯನ್ನು ಬೆಳೆಸಿ ಕನ್ನಡಿಗರ ಬದುಕಿಗೆ ರುಚಿಯನ್ನೂ ಕೊಟ್ಟಿದೆ...' ಎಂದು ಡಾ. ಹಾ. ಮಾ. ನಾಯಕರು 'ಡಿವಿಜಿ ಸಮಗ್ರಕೃತಿ ಶ್ರೇಣಿ'ಯ ಸಂಪಾದಕರಾಗಿ ಡಿವಿಜಿ ಅವರ ವ್ಯಕ್ತಿತ್ವವನ್ನು ಬಣ್ಣಿಸಿದ್ದಾರೆ.

ಡಿವಿಜಿ ಅವರು ಬಾಲ್ಯದ ಶಿಕ್ಷಣವನ್ನು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಪಡೆದರು. ಅಲ್ಲಿ ಎಸ್‌ಎಸ್‌ಎಲ್‌ಸಿ ವರೆಗೆ ಓದಿದರು. ಆದರೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಅದುವರೆಗೆ ಸಿಕ್ಕಿದ ಸಂಸ್ಕೃತ, ಕನ್ನಡ ಮತ್ತು ಸಂಸ್ಕೃತ ಅಧ್ಯಯನದ ಬಲದಿಂದ ಸ್ವಂತ ಬದುಕನ್ನು ಕಟ್ಟಿಕೊಳ್ಳಲು 1905 ರ ಸುಮಾರಿಗೆ ಬೆಂಗಳೂರಿಗೆ ಬಂದರು. ಪತ್ರಿಕೋದ್ಯಮ ವೃತ್ತಿಯನ್ನು ಹಿಡಿದರು. ಅದರಿಂದಾಗಿ ಸಾರ್ವಜನಿಕ ಬದುಕಿಗೂ ಪ್ರವೇಶ ಪಡೆದರು. ಸುಸಂಸ್ಕೃತ ವೃತ್ತಿ, ಸಂಪರ್ಕ ಮತ್ತು ಪ್ರಾಮಾಣಿಕ ನಡವಳಿಕೆಗಳಿಂದ ಆಡಳಿತಗಾರರ ಗಮನವನ್ನೂ ಸೆಳೆದರು. ಸಾಹಿತ್ಯ ರಚನೆ, ಪತ್ರಿಕೋದ್ಯಮ ವೃತ್ತಿಯಿಂದಾಗಿ ಅವರ ಸಂಪರ್ಕ ಕ್ಷೇತ್ರಗಳು ವಿಸ್ತಾರವಾದವು. ಬೆಂಗಳೂರಿನ ಗಣ್ಯರಲ್ಲಿ ಒಬ್ಬರಾಗಿ ಬೆಳೆದ ಡಿವಿಜಿ ಅವರು ಆಧುನಿಕ ನವೋದಯ ಸಾಹಿತ್ಯದ ಆರಂಭಿಕ ಕೃಷಿಕರಲ್ಲಿ ಮಹತ್ವದ ಪಾತ್ರ ವಹಿಸಿದರು. ಅಂದಿನ ದಿವಾನರು, ಸಾರ್ವಜನಿಕರು, ಸಮಾಜ ಸೇವಕರನ್ನು ಹತ್ತಿರದಿಂದ ಕಂಡಿದ್ದ ಅವರು ಮುಂದೆ ತಮ್ಮ ಒಡನಾಟದ ಅನುಭವಗಳನ್ನು 'ಜ್ಞಾಪಕ ಚಿತ್ರಶಾಲೆ'ಯ ಹೆಸರಿನಲ್ಲಿ ದಾಖಲಿಸಿದ್ದಾರೆ. ಅಂದಿನ ದಿನಗಳ ಸಾಮಾಜಿಕ, ಸಾರ್ವಜನಿಕ ಸನ್ನಿವೇಶಗಳ ಬಗ್ಗೆ ಆಸಕ್ತಿ ಇರುವವರಿಗೆ ಅವರ ನೆನಪುಗಳು ಉಪಯುಕ್ತ ಆಕರಗಳಾಗಿವೆ.

ವಿವೇಕಾನಂದರ ನಿಕಟವರ್ತಿ ಅಭೇದಾನಂದರ ಬೆಂಗಳೂರಿನ ಭೇಟಿಗಾಗಿ ಸಿದ್ಧತೆ ನಡೆಸುತ್ತಿದ್ದ ಬಗ್ಗೆ ನೀಡಿದ ವಿವರಗಳಲ್ಲಿ ಮೈಸೂರು ಸಂಸ್ಥಾನದ ಅಂದಿನ ಸ್ಯಾನಿಟರಿ ಕಮೀಷನರಾಗಿದ್ದ ಡಾ. ಪಲ್ಪು ಅವರೂ ಅಲ್ಲಿ ಉತ್ಸಾಹದಿಂದ ಕೆಲಸ ಮಾಡುತ್ತಿರುವುದು ಪ್ರಸ್ತಾಪವಾಗಿದೆ. ಬ್ರಿಟಿಷರ ಚಕ್ರಾಧಿಪತ್ಯಕ್ಕೆ ಒಳಪಟ್ಟು ಆಡಳಿತ ನಡೆಸುತ್ತಿದ್ದ ಮೈಸೂರು ಸಂಸ್ಥಾನದಲ್ಲಿ 1891ರಿಂದ 1920ರವರೆಗೆ ವೈದ್ಯಕೀಯ ಹಾಗೂ ಆಡಳಿತ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ ಡಾ. ಪಲ್ಪು ಅವರ ಸೇವೆಯನ್ನು ಈಗಿನ ಸಂಶೋಧಕರು ಕಲೆ ಹಾಕಿದ್ದಾರೆ. ಮೈಸೂರು ಸಂಸ್ಥಾನದ ವಿವಿಧ ಕಡೆಗಳಲ್ಲಿ ಡಾ.ಪಲ್ಪು ಅವರು ಕೈಗೊಂಡ ಸಾರ್ಥಕ ಕೆಲಸಗಳನ್ನು ಸ್ಮರಿಸಿಕೊಂಡಿದ್ದಾರೆ.

**ಮಲೆಯಾಳಿ ಕನ್ನಡಿಗ**

ಪಲ್ಪು ಅವರ ಪೂರ್ಣ ಹೆಸರು ಪದ್ಮನಾಭನ್ ಪಲ್ಪು. ತಿರುವಾಂಕೂರು ಸಂಸ್ಥಾನದಿಂದ ಬದುಕನ್ನು ಅರಸಿ ಮೈಸೂರು ಸಂಸ್ಥಾನಕ್ಕೆ ಬಂದ ಮಲೆಯಾಳಿ. 1891ರಲ್ಲಿ ಬ್ಯಾಕ್ಟೀರಿಯಾಲಜಿಸ್ಟ್ (ಸೂಕ್ಷ್ಮಾಣುಜೀವಿ ಶಾಸ್ತ್ರಜ್ಞ) ಹುದ್ದೆಗೆ ನೇಮಕಗೊಂಡು 29 ವರ್ಷ ಮೈಸೂರು ಸಂಸ್ಥಾನದಲ್ಲಿ ಸೇವೆ ಸಲ್ಲಿಸಿದವರು. ಸಿಡುಬು ನಿವಾರಕ ಲಸಿಕೆ ವಿಭಾಗದ ನಿರ್ದೇಶಕ ಹುದ್ದೆಯವರೆಗೆ ಪದೋನ್ನತಿ ಪಡೆದು ಅದೇ ಹುದ್ದೆಯಲ್ಲಿದ್ದಾಗ 1921ರಲ್ಲಿ ನಿವೃತ್ತರಾದರು. ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು, ಮೈಸೂರು, ಕೋಲಾರ, ಶಿವಮೊಗ್ಗ ಮತ್ತಿತರ ಕಡೆ ವಿವಿಧ ಅಧಿಕಾರ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದ ಪಲ್ಪು ಮಲೆಯಾಳಿ ಕನ್ನಡಿಗ. ಅವರ ಮಕ್ಕಳ ಬಾಲ್ಯ ಬೆಂಗಳೂರಿನಲ್ಲಿ ಕಳೆದಿತ್ತು. ಮುಂದೆ ನಾರಾಯಣಗುರುಗಳ (ಜನನ 18.9.1854, ಮಹಾಸಮಾಧಿ 20.9.1928) ನಿಕಟ ಶಿಷ್ಯರಲ್ಲಿ ಒಬ್ಬರಾದ ನಟರಾಜ, ಪಲ್ಪು ಅವರ ಪುತ್ರ. ಆ ದಿನಗಳಲ್ಲಿ ಒಮ್ಮೆ ನಾರಾಯಣಗುರುಗಳು ತಿರುವನಂತಪುರದ ಪಲ್ಪು ಅವರ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಲಕನಾಗಿದ್ದ ನಟರಾಜ ತನ್ನ ಪಾಠದ ಬಗ್ಗೆ ಹೇಳುವಾಗ ಕನ್ನಡದ ಪದ್ಯಗಳನ್ನು ಹೇಳಿ ಗುರುಗಳನ್ನು ಬೆರಗುಗೊಳಿಸಿದ್ದನಂತೆ (ಉಲ್ಲೇಖ: 'ಶ್ರೀ ನಾರಾಯಣಗುರು ವಿಜಯದರ್ಶನ', ಲೇಖಕ: ಬಾಬು ಶಿವ ಪೂಜಾರಿ).

ಹತ್ತೊಂಬತ್ತನೆಯ ಶತಮಾನದಲ್ಲಿ ತಿರುವಾಂಕೂರು ಸಂಸ್ಥಾನ ಬ್ರಿಟಿಷರ ಸಾಮಂತ ರಾಜ್ಯವಾಗಿದ್ದರೂ ಅಲ್ಲಿನ ಶೂದ್ರರು ಮತ್ತು ದಲಿತರ ಬದುಕಿನಲ್ಲಿ ಮಧ್ಯಯುಗದಲ್ಲಿದ್ದ ಪಾಳೇಗಾರಿಕೆ ಕ್ರೌರ್ಯವೇ ವಿಜೃಂಭಿಸಿತ್ತು. ಅಲ್ಲಿ ಜಾತಿ ಚೌಕಟ್ಟಿನಲ್ಲಿ ಮಾನವ ಶೋಷಣೆಯು ಅತಿರೇಕದ ಪರಮಾವಧಿಯನ್ನು ಮುಟ್ಟಿತ್ತು. ಜಾತಿಕಟ್ಟುಗಳ ಅಸ್ಪೃಶ್ಯತೆಯ ಭ್ರಮೆಯಿಂದ ಹುಚ್ಚಾಗಿದ್ದ ಸಂಸ್ಥಾನದ ಸಮಾಜದಲ್ಲಿ ನಂಬೂದಿರಿಗಳಿಂದ ನಾಯರ್ 16 ಹೆಜ್ಜೆ, ಈಳವ 36 ಹೆಜ್ಜೆ, ಪುಲಯ್ಯ 54 ಹೆಜ್ಜೆ, ಪರಯ್ಯ 64 ಹೆಜ್ಜೆಗಳ ಅಂತರದಲ್ಲಿ ಸರಿದು ನಿಲ್ಲಬೇಕಿತ್ತು. ಈ ಸಂಪ್ರದಾಯವನ್ನು ಮೀರಿದವರು ಘೋರ ಶಿಕ್ಷೆಗೆ ಗುರಿಯಾಗುತ್ತಿದ್ದರು.

ಈ ಅತಿರೇಕ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ನಂಬೂದಿರಿ ಬ್ರಾಹ್ಮಣನನ್ನು ತಮಿಳು ಬ್ರಾಹ್ಮಣ ಮುಟ್ಟಿದರೂ ನಂಬೂದಿರಿಗೆ ಮೈಲಿಗೆ ಆಗುತ್ತಿತ್ತಂತೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಪೃಶ್ಯರಾಗಿರುವ ಈಳವರು (ಬಿಲ್ಲವರು) ಅಲ್ಲಿ, ಕೇರಳದಲ್ಲಿ, ಅಸ್ಪೃಶ್ಯರಾಗಿದ್ದರು. ಅವರನ್ನು ಅವರ್ಣರು ಎಂಬ ಗುಂಪಿಗೆ ಸೇರಿಸಲಾಗಿತ್ತು. ನಂಬೂದಿರಿಗಳು, ನಾಯರ್‌ಗಳಲ್ಲದೆ ಉಳಿದ ಯಾವತ್ತೂ ಕೆಳವರ್ಗದವರನ್ನು ಮೇಲು ಜಾತಿಯವರಾಗಲೀ, ಅವರ ಸರ್ಕಾರವಾಗಲೀ ಮನುಷ್ಯರು ಎಂದೇ ಪರಿಗಣಿಸಿರಲಿಲ್ಲ. ಅವರು ದಾರಿಯಲ್ಲಿ ನಡೆಯುತ್ತಿದ್ದರೆ

ಅವರ್ಣರು ಅವರ 'ಹೇ...ಹೇ..' ಕೂಗನ್ನು ಕೇಳಿದಾಕ್ಷಣ ದಾರಿಯಿಂದ ಹೆಜ್ಜೆಗಳ ಲೆಕ್ಕದಂತೆ ದೂರ ಸರಿದು ಕುಕ್ಕುರುಗಾಲಿನಲ್ಲಿ ಕುಳಿತುಕೊಳ್ಳಬೇಕಿತ್ತು. ಇಂಥ ಕಟ್ಟಳೆಗಳನ್ನು ಮುರಿದ ಸಂದರ್ಭಗಳಲ್ಲಿ ಕೆಳವರ್ಗದವರನ್ನು ಶಿಕ್ಷಿಸಲು ಮೇಲ್ವರ್ಗದವರಿಗೆ ಎಲ್ಲ ಅಧಿಕಾರವೂ ಇತ್ತು. ಇದಕ್ಕೆ ಸಾಕ್ಷಿಯಾಗಲೀ, ನ್ಯಾಯಾಧೀಶರಾಗಲೀ ಅಗತ್ಯವಿರಲಿಲ್ಲ. ಅವರ್ಣರು ಮೇಲು ಜಾತಿಯವರನ್ನು ಎದುರಾದರೆ, ಗಂಡಸಾಗಲೀ, ಹೆಂಗಸಾಗಲೀ ತಮ್ಮ ಶರೀರದ ಮೇಲ್ಭಾಗದ ವಸ್ತ್ರವನ್ನು ತೆಗೆದು ಅರೆಬೆತ್ತಲೆಯಾಗಿ ತಾನು ಅವರ್ಣರೆಂದು ತೋರಿಸಬೇಕಿತ್ತು. ಅವರ್ಣರಿಗೆ ಕೊಡೆ, ಚಪ್ಪಲಿ, ಒಳ್ಳೆಯ ಬಟ್ಟೆ ಮತ್ತು ಮೊಣಕಾಲಿಗಿಂತ ಕೆಳಗಿನ ತನಕ ಮತ್ತು ಮೇಲ್ಜಾತಿಯವರ ಎದುರು ಎದೆಯ ಮೇಲ್ಭಾಗದಲ್ಲಿ ವಸ್ತ್ರ ಧರಿಸುವ, ಚಿನ್ನದ ಆಭರಣಗಳನ್ನು ಹಾಕಿಕೊಳ್ಳುವ ಹಕ್ಕು ಇರಲಿಲ್ಲ. ದೇವಸ್ಥಾನದ ಕೆರೆ, ಅಷ್ಟೇಕೆ, ಮೇಲುಜಾತಿಯವರ ಮನೆಗಳನ್ನು ಮುಟ್ಟಿದರೆ ಅವು ಮೈಲಿಗೆಯಾಗುತ್ತಿದ್ದವು. ಅಂಥವುಗಳನ್ನು ಶುದ್ಧಿ ಮಾಡುವ ಅಧಿಕಾರಿ ಕೇವಲ ನಂಬೂದಿರಿ ಬ್ರಾಹ್ಮಣರಿಗೆ ಇರುತ್ತಿತ್ತು. ಇದನ್ನು 'ಪುಣ್ಯಾವಹ' ಎಂದು ಕರೆಯುತ್ತಿದ್ದರಂತೆ. ಈ ಪುಣ್ಯಾವಹದ ಖರ್ಚುವೆಚ್ಚಗಳನ್ನು ಮೈಲಿಗೆ ಮಾಡಿದವರು ತೆರ ಬೇಕಾಗಿತ್ತು. ಖರ್ಚು ಕೊಡದಿದ್ದರೆ ಉಗ್ರವಾಗಿ ಶಿಕ್ಷೆಗೆ ಗುರಿಯಾಗುತ್ತಿದ್ದರು.

ಅವರ್ಣರ ಮೇಲೆ ಅಂದಿನ ಸರ್ಕಾರ ವಿಧಿಸುತ್ತಿದ್ದ ತೆರಿಗೆಗಳಂತೂ ಯಾವುದೇ ನಾಗರಿಕ ಆಡಳಿತದಲ್ಲಿ ಊಹೆಗೆ ನಿಲುಕುವಂತಿರಲಿಲ್ಲ. ಜಾತಿಯ ಕರ, ಉದ್ಯೋಗ ಕರ, ಮದುವೆಯ ಕರ, ಅಂಗಾಂಗಗಳ ಮೇಲೆ ಕರ, ಹದಿನಾರರಿಂದ ಅರವತ್ತು ವರ್ಷದೊಳಗಿನ ಗಂಡಸರಿಗೆ ತಲೆ ಕರ, ಆಭರಣಗಳನ್ನು ಧರಿಸಲು ಕರ. ತೆರಿಗೆ ಕೊಟ್ಟರೂ ಕೆಲವೊಮ್ಮೆ ಅವರ್ಣರು ಚಿನ್ನ ಬೆಳ್ಳಿಯ ಆಭರಣ ಧರಿಸುವುದು ಧರ್ಮನಿಷೇಧವಾಗಿತ್ತು. ಸರ್ಕಾರಕ್ಕೆ ಹೆಣ ತೆರಿಗೆಯನ್ನು ಪಾವತಿ ಮಾಡಿದ ನಂತರವೇ ಅಂತ್ಯಕ್ರಿಯೆಗೆ ಅವಕಾಶ. ಮಗುವಿಗೆ ಹಾಲು ಕುಡಿಸಲು ಸ್ತನ ತೆರಿಗೆ. ಅದನ್ನು ನಿರ್ಧರಿಸಲು ಸ್ತನಗಳನ್ನು ಅಳತೆ ಮಾಡಿ ಅವುಗಳ ಗಾತ್ರಕ್ಕೆ ಅನುಗುಣವಾಗಿ ತೆರಿಗೆ ನಿರ್ಧಾರದ ಪದ್ಧತಿ. ವಸ್ತ್ರಧಾರಣೆಯ ಕರ ಕೊಟ್ಟರೂ ಅವರ್ಣ ಹೆಂಗಸರು ಮೇಲುಜಾತಿಯ ಹೆಂಗಸರಂತೆ ಬಟ್ಟೆ ಧರಿಸುವಂತಿರಲಿಲ್ಲ. ಅವರ್ಣ ಹೆಂಗಸರು ಮೊಣಕಾಲಿಗಿಂತ ಸೀರೆ ಉಡುವುದು ಮತ್ತು ರವಿಕೆಯನ್ನು ತೊಡುವುದು ಶಾಸ್ತ್ರವಿರುದ್ಧವಾಗಿತ್ತು. ಅವರ್ಣ ಸ್ತ್ರೀಯರು ಸ್ತನಗಳನ್ನು ಮುಚ್ಚಿಕೊಳ್ಳಕೂಡದು ಎಂಬುದೂ ಕಾಯ್ದೆಯಾಗಿತ್ತು. ದಕ್ಷಿಣ ತಿರುವಾಂಕೂರಿನ ನಾಡವರ ಹೆಂಗಸರು ರವಿಕೆಯನ್ನು ತೊಡುವ ಹಕ್ಕನ್ನು ಸರ್ಕಾರದಿಂದ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಯಿತು.

ತಿರುವಾಂಕೂರು ಬ್ರಿಟಿಷ್ ಸರ್ಕಾರದ ಅಧೀನಕ್ಕೆ ಒಳಪಟ್ಟ ಮೇಲೆ ಅದರ ಒತ್ತಾಯಕ್ಕೆ ಮಣಿದು 1865ರಲ್ಲಿ ಇಂಥ 105 ಕರಭಾರಗಳಿಂದ ಅವರ್ಣರನ್ನು ಮುಕ್ತಗೊಳಿಸಲಾಯಿತು. ಇದಕ್ಕೂ ಮೊದಲು ಸಂಸ್ಥಾನದಲ್ಲಿ ನಡೆಯುತ್ತಿದ್ದ ಗುಲಾಮರ ವ್ಯಾಪಾರವನ್ನು ಬ್ರಿಟಿಷ್ ಸರ್ಕಾರ ಕಾನೂನು ಮೂಲಕ ನಿಷೇಧಿಸಬೇಕಾಯಿತು. ಇಂಡಿಯನ್ ಪೀನಲ್ ಕೋಡ್ ಅಸ್ತಿತ್ವಕ್ಕೆ ಬಂದ 1862ರ ವರೆಗೂ ಕೇರಳದಲ್ಲಿ ಗುಲಾಮರ ವ್ಯಾಪಾರ ಅಬಾಧಿತವಾಗಿತ್ತು. ಕೇರಳದಲ್ಲಿ ಧಾರ್ಮಿಕ ಚಟುವಟಿಕೆ ನಡೆಸುತ್ತಿದ್ದ ಕ್ರೈಸ್ತ ಪಾದ್ರಿಗಳ ಪ್ರಯತ್ನದಿಂದ ಮನುಷ್ಯರ ಮಾರಾಟ ವಹಿವಾಟು ನಿಷೇಧಕ್ಕೊಳಗಾಯಿತು.

**ಜನನ**

ಪದ್ಮನಾಭನ್ ಪಲ್ಪು ತಿರುವನಂತಪುರ ಸಮೀಪದ ಪೇಟ್ಟಾಯಿಲ್‌ನ ನೆಡುಂದೋಡಿಯ ಅವಿಭಕ್ತ ಈಳವ ಕುಟುಂಬದಲ್ಲಿ 1863ರ ನವೆಂಬರ್ 2ರಂದು ಜನಿಸಿದರು (ಸ್ವಾಮಿ ವಿವೇಕಾನಂದರು ಜನಿಸಿದ್ದು 1863ರ ಜನವರಿ 12ರಂದು, ಪಲ್ಪು ಅವರಿಗಿಂತ ಹನ್ನೊಂದು ತಿಂಗಳು ಹಿರಿಯರು). ತಂದೆ ತಚ್ಚಕುಡಿ (ನೆಡುಂಗೊತ್ತು) ಎಂದು ಹೆಸರಾಗಿದ್ದ ಕೂಡು ಕುಟುಂಬದ ಮದಿಯಕುಟ್ಟಿ ಭಗವತಿ. ಟೊಪ್ಪಿಲ್ ಮಾತಾ ಪೆರುಮಾಳ್ ಎಂಬ ಮೂಲ ಹೆಸರಿನ ಪಪ್ಪಮ್ಮ ಅವರು ತಾಯಿ. ಈಳವರಿಗೆ ಸರ್ಕಾರದ ಶಾಲೆಗಳಲ್ಲಿ ಪ್ರವೇಶ ಇಲ್ಲದ ಕಾರಣ ಟಿ.ಪಿ. ಪಲ್ಪು (ಮದಿಯಕುಟ್ಟಿ ಭಗವತಿ) ಕ್ರಿಶ್ಚಿಯನ್ ಮಿಷನರಿಯೊಬ್ಬರ ಮನೆಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದ್ದರು. ಆ ಸಂದರ್ಭದಲ್ಲಿ ತಿರುವಾಂಕೂರು ಸರ್ಕಾರ ಕೋರ್ಟಿನಲ್ಲಿ ಪ್ಲೀಡರ್ ಹುದ್ದೆಗೆ ಇಂಗ್ಲಿಷ್ ಬಲ್ಲವರಿಂದ ಅರ್ಜಿಗಳನ್ನು ಆಹ್ವಾನಿಸಿತು. ಸೀನಿಯರ್ ಪಲ್ಪು (ಪದ್ಮನಾಭನ್ ಅವರ ತಂದೆ) ಆ ಪರೀಕ್ಷೆ ತೆಗೆದುಕೊಳ್ಳಲು ಪ್ರವೇಶ ಶುಲ್ಕ ಕಟ್ಟಿ ಪರೀಕ್ಷೆಗೆ ಅಣಿಯಾದರು. ಈಳವನೊಬ್ಬ ವಕೀಲಿ ವೃತ್ತಿಗೆ ಸಿದ್ಧನಾಗುತ್ತಿದ್ದಾನೆ ಎಂದು ತಿಳಿದ ನಂಬೂದಿರಿ ಮತ್ತು ನಾಯರ್‌ಗಳು ಸಂಚು ಮಾಡಿ ಪಲ್ಪು ಅವರಿಗೆ ಪರೀಕ್ಷೆ ತೆಗೆದುಕೊಳ್ಳದಂತೆ ಮಾಡಿದರು. ಸರ್ಕಾರ ಅವರಿಗೆ ಪರೀಕ್ಷೆಗೆ ಕೂರಲು ಅವಕಾಶ ನಿರಾಕರಿಸಿತು. ಗಾಯದ ಮೇಲೆ ಉಪ್ಪು ಸವರಿದಂತೆ ಪರೀಕ್ಷೆಗೆ ಕಟ್ಟಿದ್ದ ಶುಲ್ಕವನ್ನೂ ಮುಟ್ಟುಗೋಲು ಹಾಕಿಕೊಂಡಿತು. ಆದ್ದರಿಂದ ಪಲ್ಪು ತಮ್ಮ ಕುಟುಂಬ ನಿರ್ವಹಣೆಗಾಗಿ ಬಾವಿ, ಕಾಲುವೆ, ಕೆರೆ ತೋಡಿಸುವ ಮೇಸ್ತ್ರಿಯಾಗಿ ಕೆಲಸ ಮಾಡಬೇಕಾಯಿತು. ಈ ದಂಪತಿಗೆ ಏಳು ಮಕ್ಕಳು.

ಶಿಕ್ಷಣದ ಅಗತ್ಯವನ್ನು ಮನಗಂಡಿದ್ದ ಟಿ.ಪಿ. ಪಲ್ಪು ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಶ್ರಮಿಸುತ್ತಿದ್ದರು. ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದ ಇಂಗ್ಲಿಷ್ ಶಾಲೆಗಳು ಕ್ರಿಶ್ಚಿಯನ್ ಮಕ್ಕಳಿಗೆ ತೆರೆದಿರುತ್ತಿದ್ದವು. ಅಸ್ಪೃಶ್ಯರು, ಅವರ್ಣರು ಎಂದು ಅಂದಿನ ಕೇರಳ ಸಮಾಜದಲ್ಲಿ ಪರಿಗಣಿತರಾಗಿದ್ದ ಪಲ್ಪು ಅವರಿಗೆ ಶಿಕ್ಷಣ ಪಡೆಯುವುದು ಸುಲಭವಾಗಲಿಲ್ಲ. ಅವರ ಹಿರಿಯ ಪುತ್ರ ವೇಲಾಯುಧನ್ ತಿರುವನಂತಪುರದ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿದ್ದ. ಉಳಿದ ಮಕ್ಕಳಿಗೂ ಕಲಿಸುವ ಮನಸ್ಸು. ಆದರೆ ಹಣದ ಮುಗ್ಗಟ್ಟು. ಪಲ್ಪುವಿನ ಸೋದರ ಮಾವಂದಿರು ಅನುಕೂಲಸ್ಥರು. ಅವರಿಂದ ನೆರವು ಕೇಳಲು ಹಿರಿಯ ಪಲ್ಪುಗೆ ಹಿಂಜರಿಕೆ. ಪದ್ಮನಾಭನ್ ಪಲ್ಪುವಿಗೆ ಅಣ್ಣ ವೇಲಾಯುಧನ್‌ನಂತೆ ಇಂಗ್ಲಿಷ್ ಕಲಿಯುವ ಆಸೆ. ಆದರೆ ಸರ್ಕಾರಿ ಶಾಲೆಯಲ್ಲಿ ಪ್ರವೇಶ ಇಲ್ಲದ ಸ್ಥಿತಿ. ಬಾಲಕನ ಆಸೆಯನ್ನು ತಿಳಿದ ಎಸ್.ಜೆ. ಫರ್ನಾಂಡಿಸ್ ಎಂಬ ಪಾದ್ರಿ ತಮ್ಮ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಅವಕಾಶ ಕಲ್ಪಿಸಿದರು. ಮೂರು ವರ್ಷ ತಿರುವನಂತಪುರದ ಇಂಗ್ಲಿಷ್ ಶಾಲೆಯಲ್ಲಿ ಕಲಿತ ಪಲ್ಪು ನಂತರ ಅಲ್ಲಿನ ಸರ್ಕಾರಿ ಹೈಸ್ಕೂಲಿನಲ್ಲಿ ಮೆಟ್ರಿಕ್ ಮುಗಿಸಿದರು.

ಪಲ್ಪು 1883ರಲ್ಲಿ ಮೆಟ್ರಿಕ್ಯುಲೇಶನ್ ಉತ್ತೀರ್ಣನಾದನು. ಮುಂದಿನ ಇಂಟರ್ ಮೀಡಿಯೇಟ್ ಶಿಕ್ಷಣಕ್ಕಾಗಿ ಹಣ ಗಳಿಸಲು ವಿದ್ಯಾರ್ಥಿಗಳಿಗೆ ಪಾಠ ಹೇಳಲು ಆರಂಭಿಸಿದನು. ಮೂರು ತಿಂಗಳ ಕಾಲ ಪಾಠ ಹೇಳಿದರೂ ಕಾಲೇಜು ಪ್ರವೇಶ ಶುಲ್ಕಕ್ಕೆ ಅಗತ್ಯವಿರುವಷ್ಟು ಸಂಪಾದನೆ ಆಗಲಿಲ್ಲ. ಆದ್ದರಿಂದ ಆ ವರ್ಷ ವ್ಯರ್ಥವಾಯಿತು. ವಿದ್ಯಾರ್ಥಿಗಳಿಗೆ ಪಾಠ ಹೇಳುವುದನ್ನು ಮುಂದುವರಿಸಿ ಮುಂದಿನ ವರ್ಷಕ್ಕೆ ಕಾಲೇಜು ಸೇರಿದನು. ಕಾಲೇಜಿಗೆ ಹೋಗುತ್ತಿದ್ದಾಗಲೂ ಬೆಳಗ್ಗೆ ಮತ್ತು ಸಂಜೆ ವಿದ್ಯಾರ್ಥಿಗಳಿಗೆ ಪಾಠ ಹೇಳಿ ಕಾಲೇಜಿನ ಶುಲ್ಕ ಮತ್ತು ಮನೆಯ ಖರ್ಚನ್ನು ನೋಡಿಕೊಳ್ಳುತ್ತಿದ್ದನು.

ಪಲ್ಪುವಿನ ಇಂಟರ್‌ಮೀಡಿಯಟ್ ಶಿಕ್ಷಣ ನಡೆದಿದ್ದಾಗ ತಿರುವಾಂಕೂರು ಸರ್ಕಾರ ಅರ್ಹ ವಿದ್ಯಾರ್ಥಿಗಳ ಮೆಡಿಕಲ್ ಕಾಲೇಜು ಪ್ರವೇಶ ಪರೀಕ್ಷೆಯ ಅರ್ಜಿ ಸ್ವೀಕಾರಕ್ಕೆ ಪ್ರಕಟಣೆ ಹೊರಡಿಸಿತು. ಪಲ್ಪು

ಮೆಡಿಕಲ್ ಕಾಲೇಜು ಪ್ರವೇಶ ಪರೀಕ್ಷೆಯಲ್ಲಿ ಎರಡನೆಯ ರ್‍ಯಾಂಕ್ ಗಳಿಸಿದ್ದರು. ಆದರೆ ಪ್ರವೇಶ ಪರೀಕ್ಷೆಯ ನಂತರ ಪಲ್ಪು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ವಯಸ್ಸು ಹೆಚ್ಚಾಯಿತೆನ್ನುವ ನೆಪ ಒಡ್ಡಿ ತಿರಸ್ಕರಿಸಲಾಯಿತು. ವಯಸ್ಸು ಮೀರಿಲ್ಲ ಎಂಬುದಕ್ಕೆ ಜಾತಕವನ್ನು ಹಾಜರುಪಡಿಸಿದಾಗ ಕಾಲೇಜಿನ ಆಡಳಿತ ವರ್ಗ 'ನೀನು ಜಾತಿಯಲ್ಲಿ ಈಳವ. ವೈದ್ಯನಾದರೆ ರೋಗಿಗಳಿಗೆ ಕೊಡುವ ಔಷಧದ ಮಿಶ್ರಣದಲ್ಲಿ ನೀರನ್ನು ಸೇರಿಸಬೇಕಾಗುತ್ತದೆ. ಈಳವರ ಕೈಯಿಂದ ಸವರ್ಣರು ನೀರನ್ನು ಕುಡಿಯುವಂತಿಲ್ಲ. ಆದ್ದರಿಂದ ನಿನಗೆ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶವನ್ನು ಕೊಡುವಂತಿಲ್ಲ' ಎಂದು ಉತ್ತರಿಸಿ ಪ್ರವೇಶವನ್ನು ನಿರಾಕರಿಸಿತು (ಈ ಸಂಗತಿಯನ್ನು ಸಮಾಜ ವಿಜ್ಞಾನಿ ಎಸ್.ಎನ್. ಸದಾಶಿವಂ ತಮ್ಮ 'ಎ ಸೋಷಿಯಲ್ ಹಿಸ್ಟರಿ ಆಫ್ ಇಂಡಿಯಾ' ಕೃತಿಯಲ್ಲಿ ಬರೆದಿದ್ದಾರೆ).

**ವಂತಿಗೆ ಸಂಗ್ರಹಿಸಿ ಶಿಕ್ಷಣ ಶುಲ್ಕ**

ಪಲ್ಪು ಅಲ್ಲಿಂದ ಚೆನ್ನೈಗೆ ತೆರಳಿ (1885ರ ಅಕ್ಟೋಬರ್ 10ರಂದು) ಮದ್ರಾಸ್ ಮೆಡಿಕಲ್ ಕಾಲೇಜು ಸೇರಿದರು. ವರ್ಷಕ್ಕೆ ನೂರೈವತ್ತು ರೂಪಾಯಿ ಶುಲ್ಕ. ವಂತಿಗೆಯಿಂದ 75 ರೂಪಾಯಿ ಸಂಗ್ರಹಿಸಿದರು. ಉಳಿದ ಹಣಕ್ಕೆ ಅವರ ತಾಯಿ ಪಪ್ಪಮ್ಮ ತನ್ನ ಒಡವೆಯ ಚಿನ್ನ ಮಾರಿ ಕೊಟ್ಟರು. ಈಳವರು ಚಿನ್ನ ಧರಿಸುವುದು ತಿರುವಾಂಕೂರು ಸಂಸ್ಥಾನದಲ್ಲಿ ನಿಷಿದ್ಧವಾಗಿದ್ದರಿಂದ ಅವರು ತಮ್ಮ ಚಿನ್ನದ ಆಭರಣಗಳಿಗೆ ಬೆಳ್ಳಿಯ ಒಪ್ಪವನ್ನು ಹಾಕಿಸಿಕೊಂಡಿದ್ದರು. (ಮುಂದೆ ಎಸ್‌ಎನ್‌ಡಿಪಿ ಸಂಘಟಿಸಿದ ಮಹಿಳಾ ಸಮಾವೇಶದಲ್ಲಿ ಪಲ್ಪು ತಾಯಿಯ ಈ ತ್ಯಾಗವನ್ನು ಭಾವುಕರಾಗಿ ಸ್ಮರಿಸಿಕೊಂಡು 'ಸೋದರಿಯರೇ, ನಿಮ್ಮ ಆಭರಣಗಳನ್ನು ಮಾರಿಯಾದರೂ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿರಿ' ಎಂದು ಮನವಿ ಮಾಡಿದರು). ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಅಣ್ಣ ಪಿ. ವೇಲಾಯುಧನ್ ಸಣ್ಣ ಉದ್ಯೋಗದಲ್ಲಿದ್ದರು. ಅವರ ವೇತನ ಸೋದರರ ಊಟಕ್ಕೆ ಮಾತ್ರ ಸಾಕಾಗುತ್ತಿತ್ತು. ಮುಂದಿನ ವರ್ಷದ ಕಾಲೇಜು ಶುಲ್ಕಕ್ಕೆ ಮತ್ತೆ ತೊಂದರೆಯಾಯಿತು. ಶುಲ್ಕ ರಿಯಾಯಿತಿಗೆ ಕಾಲೇಜು ಪ್ರಿನ್ಸಿಪಾಲರಿಗೆ ಮಾಡಿದ ಮನವಿ ವ್ಯರ್ಥವಾಯಿತು. ರಾಮಕೃಷ್ಣ ಎನ್ನುವವರು 20 ರೂಪಾಯಿ ಮನಿಯಾರ್ಡರ್ ಕಳಿಸಿದ್ದರು. ಮಾಧವ ರಾವ್ 50 ರೂಪಾಯಿ ಕೊಟ್ಟರು. ಸರ್ ಭಾಷ್ಯಂ ಅಯ್ಯಂಗಾರ್ 10 ರೂಪಾಯಿಗಳನ್ನು ಕಳಿಸಿದರು. ಆ ಸಮಯದಲ್ಲಿ ಮದ್ರಾಸಿಗೆ ತಿರುವಾಂಕೂರು ಮಹಾರಾಜರು ಆಗಮಿಸಿದರು. ಅವರ ಭೇಟಿಗೆ ಪ್ರಯಾಸಪಟ್ಟು ಅವಕಾಶ ಪಡೆದುಕೊಂಡ ಪಲ್ಪು ಅವರಿಗೂ ಸಹಾಯಧನ ಕೋರಿ ಮನವಿ ಸಲ್ಲಿಸಿದರು. ಮಹಾರಾಜ ಶ್ರೀಮೂಲಂ ತಿರುನಾಳ್ ರಾಮವರ್ಮ (1885–1924) ಅವರು ಎರಡು ರೂಪಾಯಿಗಳನ್ನು ಸಹಾಯಧನವಾಗಿ ನೀಡಿದರು.

ತಿರುವಾಂಕೂರು ಸಂಸ್ಥಾನದ ಈಳವ ಸಮುದಾಯದಲ್ಲಿ ವೇಲಾಯುಧನ್ ಮೊಟ್ಟಮೊದಲ ಪದವೀಧರ. ಪದ್ಮನಾಭನ್ ಪಲ್ಪು ಮೊಟ್ಟ ಮೊದಲ ವೈದ್ಯ ಪದವೀಧರ. ಮದ್ರಾಸ್ ಮೆಡಿಕಲ್ ಕಾಲೇಜಿನಿಂದ ಎಲ್‌ಎಂ ಎಸ್ ಪದವಿಯನ್ನು (ಖಿಛಿಜಟಿಛಿಚಿಣಜ ುಟಿ ಟಜಜುಛಿಟಿಜ ಚಿಟಿಜ, ಣಡಿರಜಡಿಥಿ) 1889ರಲ್ಲಿ ಪಡೆದ ಪಲ್ಪು ತಿರುವಾಂಕೂರಿಗೆ ಮರಳಿದರು. ಈಳವರೆಂಬ ಜಾತಿಯ ನೆಪ ನೀಡಿ ಸರ್ಕಾರ ಉದ್ಯೋಗ ನೀಡಲು ನಿರಾಕರಿಸಿತು. ಅಲ್ಲಿ ಕೆಲಸಕ್ಕೆ ಸೇರಿಕೊಳ್ಳುವಂತಿದ್ದರೆ ನಾಲ್ಕನೇ ದರ್ಜೆಯ ಗುಮಾಸ್ತೆ ಕೆಲಸಕ್ಕೆ ಬರಬಹುದೆಂದು ಹೇಳಲಾಯಿತು. ತಿಂಗಳಿಗೆ ಐದು ರೂಪಾಯಿ ವೇತನ ನೀಡುವುದಾಗಿ ತಿಳಿಸಲಾಯಿತು. ಆದರೆ, ಮೆಡಿಕಲ್ ಪದವಿಯನ್ನು ಪೂರ್ಣಗೊಳಿಸದೆ ಅರ್ಧಕ್ಕೆ ನಿಲ್ಲಿಸಿ ಬಂದಿದ್ದ ಮೂವರು ಸವರ್ಣರನ್ನು

ಕೆಲಸಕ್ಕೆ ತೆಗೆದುಕೊಂಡಿತು. ಇದರಿಂದ ನೊಂದುಕೊಂಡ ಡಾ. ಪಲ್ಪು ಮದ್ರಾಸಿಗೆ ವಾಪಸು ಬಂದರು. ಅಲ್ಲಿ ನೌಕರಿಯಲ್ಲಿದ್ದ ಅಣ್ಣ ವೇಲಾಯುಧನ್ ಅವರ ಮನೆಯಲ್ಲಿ ತಂಗಿದರು. ಮದ್ರಾಸ್ ಸರ್ಕಾರದ ಸ್ಪೆಷಲ್ ವ್ಯಾಕ್ಸಿನೇಶನ್ ಇಲಾಖೆಯಲ್ಲಿ ವ್ಯಾಕ್ಸಿನ್ ಸೂಪರಿಂಟೆಂಡೆಂಟ್ ಹುದ್ದೆಯಲ್ಲಿ 70 ರೂಪಾಯಿ ವೇತನಕ್ಕೆ ನೇಮಕಗೊಂಡರು. ಯೂರೋಪಿಯನ್ ವೈದ್ಯರಾಗಿದ್ದ ಕರ್ನಲ್ ಕಿಂಗ್ ಅವರ ಜೊತೆಗಾರರಾಗಿ ಪಲ್ಪು ಕೆಲಸ ಮಾಡಬೇಕಿತ್ತು. ಪ್ರಾಮಾಣಿಕತೆ ಮತ್ತು ಅವಿಶ್ರಾಂತ ದುಡಿಮೆಗೆ ಒಗ್ಗಿಹೋಗಿದ್ದ ಪಲ್ಪು ಕಿಂಗ್ ಅವರ ಮೆಚ್ಚುಗೆ ಪಡೆದರು. ಅವರೊಂದಿಗೆ ಕೆಲಸ ಮಾಡುತ್ತಿದ್ದಾಗ ಸೀನಿಯರ್ ಸೂಪರಿಂಟೆಂಡೆಂಟ್ ಆದರು. ಈ ಇಲಾಖೆ ಬೆಂಗಳೂರಿಗೆ ಸ್ಥಳಾಂತರವಾದಾಗ ಅಲ್ಲಿಗೆ ಹೋದರು. ಆ ವೇಳೆಗೆ ಮೈಸೂರು ಸಂಸ್ಥಾನದ ಸರ್ಕಾರ ರೋಗಪ್ರತಿಬಂಧಕ ಇಂಜೆಕ್ಷನ್ (ದಾಕು ಹಾಕುವ) ಔಷಧ ಕಂಪೆನಿಯನ್ನು ಆರಂಭಿಸಿತು. ಇದು ಸಿಡುಬು ಮಹಾಮಾರಿಗೆ ರೋಗಪ್ರತಿಬಂಧಕ ಔಷಧಿ ತಯಾರಿಸುವ ಕಂಪೆನಿ. 1891ರಲ್ಲಿ ಮಾಸಿಕ ಒಂದು ನೂರು ರೂಪಾಯಿಗಳ ವೇತನ ಹಾಗೂ ಬಡ್ತಿಯೊಂದಿಗೆ ಮೈಸೂರು ಸಂಸ್ಥಾನದ ವ್ಯಾಕ್ಸಿನೇಶನ್ ಇಲಾಖೆಯ ಮುಖ್ಯಸ್ಥರಾಗಿ ಪಲ್ಪು ನೇಮಕವಾದರು.

ಪಲ್ಪು ಅವರ ನೇತೃತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ತಯಾರಾಗುತ್ತಿದ್ದ ಔಷಧವನ್ನು ಬರ್ಮಾ (ಈಗಿನ ಮ್ಯೆನ್ಮಾರ್), ಆಫ್ಘಾನಿಸ್ತಾನ, ದಕ್ಷಿಣ ಆಫ್ರಿಕ, ಪರ್ಶಿಯಾ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು.

ಮೈಸೂರಿನಲ್ಲಿ ಸೇವೆಗೆ ಸೇರಿಕೊಂಡ ಮೇಲೆ ಪಲ್ಪು ಅವರು ತಾಯ್ನಾಡಿನಲ್ಲಿ ತಮ್ಮವರ ಬವಣೆಯನ್ನು ಮರೆಯಲಿಲ್ಲ. ಮದ್ರಾಸಿನಲ್ಲಿ ಓದುತ್ತಿದ್ದಾಗಲೇ ಅವರು ತಮ್ಮವರು ತಿರುವಾಂಕೂರು ಸಂಸ್ಥಾನದಲ್ಲಿ ಅನುಭವಿಸುತ್ತಿದ್ದ ಅಸ್ಪೃಶ್ಯತೆ ಹಾಗೂ ತಾರತಮ್ಯದ ಚಿತ್ರಣವನ್ನು ಪತ್ರಿಕೆಗಳಿಗೆ ಬರೆಯುತ್ತಿದ್ದರು. ಮದ್ರಾಸಿನಿಂದ ಹೊರಡುತ್ತಿದ್ದ 'ಡೇಲಿ ಮೇಲ್' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ತಿರುವಾಂಕೂರು ಸಂಸ್ಥಾನದಲ್ಲಿ ಈಳವರು ಸೇರಿದಂತೆ ಎಲ್ಲ ಹಿಂದುಳಿದ ಹಾಗೂ ದಲಿತವರ್ಗದ ಜನ ಅನುಭವಿಸುತ್ತಿದ್ದ ಬವಣೆಯನ್ನು ದೇಶಕ್ಕೆ ಪರಿಚಯಿಸುತ್ತಿದ್ದವು. ಆಗ ಬರೆದ ಲೇಖನಗಳು ಮತ್ತು ಮೈಸೂರಿನಲ್ಲಿ ಉದ್ಯೋಗ ಪಡೆದ ನಂತರ ತಿರುವಾಂಕೂರು ಸಂಸ್ಥಾನಕ್ಕೆ ಸಲ್ಲಿಸಲು ಸಿದ್ಧಪಡಿಸಿದ ಸುದೀರ್ಘ ಮನವಿಯು ಒಳಗೊಂಡ ಪುಸ್ತಕವನ್ನು ಇಂಗ್ಲಿಷ್ ಮತ್ತು ಮಲೆಯಾಳಂನಲ್ಲಿ ಸಿದ್ಧಪಡಿಸಿ ಸ್ವಂತ ವೆಚ್ಚದಿಂದ ಪ್ರಕಟಿಸಿದರು (ತಿರುವಾಂಕೂರು ತೀಯರ ಗತಿ–ಸ್ಥಿತಿ). ಅಂದಿನ ಈಳವರ (ತೀಯರ) ದುರವಸ್ಥೆಯನ್ನು ಈ ಪುಸ್ತಕದಲ್ಲಿ ಬಣ್ಣಿಸಲಾಗಿತ್ತು.

ಆಗ ಮೈಸೂರು ಸಂಸ್ಥಾನದ ದಿವಾನರು ಕೆ.ಶೇಷಾದ್ರಿ ಅಯ್ಯರ್. ಅವರು ಪಾಲ್ಘಾಟ್ ಕಡೆಯವರು. ಪಲ್ಪು ಅವರ ಕಾರ್ಯದಕ್ಷತೆಯ ಬಗ್ಗೆ ದಿವಾನರಲ್ಲಿ ಮೆಚ್ಚುಗೆ ಇತ್ತು.

**ವಿವೇಕಾನಂದರ ಭೇಟಿ**

'1892ರಲ್ಲಿ ಸ್ವಾಮಿ ವಿವೇಕಾನಂದರು ದೇಶ ಪರ್ಯಟನೆ ಮಾಡುತ್ತಾ ಮೈಸೂರು ಸಂಸ್ಥಾನಕ್ಕೆ ಬಂದರು. ಮರ್ಮಗೋವಾದಿಂದ ಹೊರಟ ಸ್ವಾಮೀಜಿ ಧಾರವಾಡದ ಮೂಲಕ ನೇರವಾಗಿ ಬೆಂಗಳೂರಿಗೆ ಬಂದು ತಲುಪಿದರು. ಬೆಂಗಳೂರಿನಲ್ಲಿ ಅವರು ಸರ್ಕಾರಿ ವೈದ್ಯಾಧಿಕಾರಿಯಾಗಿದ್ದ ಡಾ. ಪಲ್ಪು ಅವರ ಅತಿಥಿಯಾಗಿ ಉಳಿದುಕೊಂಡರು. ಡಾ. ಪಲ್ಪು ಕಂಟೋನ್ಮೆಂಟ್ ಪ್ರದೇಶದಲ್ಲಿ ಮನೆ ಮಾಡಿಕೊಂಡಿದ್ದರು. ವಿವೇಕಾನಂದರು ತಮ್ಮಲ್ಲಿ ಉಳಿದುಕೊಂಡಿದ್ದನ್ನು ಪಲ್ಪು ದಿವಾನರ ಗಮನಕ್ಕೆ ತಂದರು.

ತಮ್ಮಲ್ಲಿ ಉಳಿದುಕೊಂಡಿದ್ದಾಗ ಪಲ್ಪು ತಿರುವಾಂಕೂರು ಸಂಸ್ಥಾನದಲ್ಲಿ ಕೆಳಜಾತಿಯವರು ಪಡುತ್ತಿದ್ದ ಬಾಧೆಯನ್ನು ವಿವೇಕಾನಂದರಲ್ಲಿ ವಿವರಿಸಿ ಅದಕ್ಕೆ ಪರಿಹಾರವನ್ನು ಕೋರಿದರು. ಈಗಿನ ಕೇರಳ ಆ ಕಾಲಕ್ಕೆ ಮೂರು ಭಾಗಗಳಾಗಿತ್ತು. ಕೊಚ್ಚಿ ಮತ್ತು ತಿರುವಾಂಕೂರು ರಾಜ್ಯಗಳಲ್ಲಿ ಸ್ಥಳೀಯ ಅರಸೊತ್ತಿಗೆಗಳು ಬ್ರಿಟಿಷರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಉತ್ತರದ ಮಲಬಾರ್ ಪ್ರದೇಶ ಮದ್ರಾಸ್ ಪ್ರಸಿಡೆನ್ಸಿಯ ಅಧೀನದಲ್ಲಿತ್ತು. ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳಲ್ಲಿ ಕೆಳಜಾತಿಯವರೆಲ್ಲ ಅವರ್ಣರೆಂದು ಪರಿಗಣಿತರಾಗಿದ್ದು ಮೇಲು ಜಾತಿಯವರಿಂದ ಅನುಭವಿಸುತ್ತಿರುವ ಅಸ್ಪೃಶ್ಯತೆ ಮತ್ತು ಸಂಸ್ಥಾನದ ತಾರತಮ್ಯ ಧೋರಣೆಯಿಂದ ಹೇಗೆ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ವಿವರಿಸಿದರು. ಹಿಂದೂ ವರ್ಣ ಭೇದಗಳ ಅವ್ಯವಸ್ಥೆಗಳನ್ನೂ, ಸಾಮಾನ್ಯ ಜನರ ಶೋಷಣೆ, ಬವಣೆ, ಮೂಢನಂಬಿಕೆಗಳ ಬಗೆಗೆ, ಇವುಗಳಿಂದ ಸಮಾಜ ಮುಕ್ತವಾಗುವ ಬಗೆಯನ್ನು ಚರ್ಚಿಸಿದರು. ತಿರುವಾಂಕೂರು ಸರ್ಕಾರ ಮತ್ತು ಅಲ್ಲಿನ ಮೇಲು ಜಾತಿಯವರು ಅವರ್ಣರನ್ನು, ಬಡವರನ್ನು, ಶೋಷಿಸುತ್ತಿರುವ ಪರಿಯನ್ನು ತಿಳಿಸಿದರು. ವಿವೇಕಾನಂದರು ಮೈಸೂರಿನಿಂದ ಕೇರಳಕ್ಕೆ ಹೊರಡುವ ಹಿಂದಿನ ದಿನ ಕೂಡ ಪಲ್ಪು ಅವರೊಂದಿಗೆ ಮೂರು ಗಂಟೆ ಚರ್ಚೆ ನಡೆಸಿದರು.

ವಿವೇಕಾನಂದರು ತಮ್ಮ ದೇಶಪರ್ಯಟನೆಯ ಮಾರ್ಗದಲ್ಲಿ ಬೆಂಗಳೂರಿನಿಂದ ಮದ್ರಾಸ್ ಮಾರ್ಗವಾಗಿ ರಾಮೇಶ್ವರ ತಲುಪುವ ಅಂದಾಜು ಮಾಡಿದ್ದರು. ಆಗಿನ ಸಾರಿಗೆ ವ್ಯವಸ್ಥೆಯಂತೆ ಬೆಂಗಳೂರಿನಿಂದ ರೈಲಿನಲ್ಲಿ ಮದ್ರಾಸ್ ತಲುಪಿ ಅಲ್ಲಿಂದ ರಾಮೇಶ್ವರಕ್ಕೆ ಹೋಗಬಹುದಿತ್ತು. ಕೇರಳ, ಇಲ್ಲವೇ ಕನ್ಯಾಕುಮಾರಿಯ ಭೇಟಿ ಅವರ ದೃಷ್ಟಿಯಲ್ಲಿರಲಿಲ್ಲ. ಆದರೆ ಪಲ್ಪು ಮಲಬಾರ್, ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನದ ಒಳಗಡೆ ಪ್ರವೇಶಿಸಿ ಅಲ್ಲಿನ ಸಾಮಾಜಿಕ ಅಸಮಾನತೆಯನ್ನು ಖುದ್ದಾಗಿ ನೋಡುವಂತೆ ವಿವೇಕಾನಂದರಲ್ಲಿ ಮನವಿ ಮಾಡಿದ್ದರಿಂದ ಅವರು ಮಲಬಾರ್ ಪ್ರದೇಶ, ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಭೇಟಿಗೆ ನಿರ್ಧರಿಸಿದರು.

ವಿವೇಕಾನಂದರು ತಿರುವಾಂಕೂರಿಗೆ ಭೇಟಿ ನೀಡಿದಾಗ ಪಲ್ಪು ಅವರು ತಮ್ಮೊಡನೆ ಹೇಳಿದ್ದ ವಿವರಗಳ ಪ್ರತ್ಯಕ್ಷ ಅನುಭವ ಪಡೆದರು. ತಿರುವಾಂಕೂರಿನ ಜಾತೀಯ ಅವ್ಯವಸ್ಥೆ, ಅಸ್ಪೃಶ್ಯತೆಯ ಅತಿರೇಕ, ಆಹಾರ ವಸ್ತುಗಳ ಮಡಿ ಮೈಲಿಗೆ ಮುಂತಾದ ದುರಾಚಾರಗಳನ್ನು ಕಂಡರು. ವಿವೇಕಾನಂದರು ಅಲ್ಲಿನ ಪ್ರವಾಸ ಮುಗಿಸಿ ಮೈಸೂರಿಗೆ ಬಂದಾಗ ಪಲ್ಪು ಮೈಸೂರಿನ ಹುಚ್ಚಾಸ್ಪತ್ರೆಯ ಮುಖ್ಯಾಧಿಕಾರಿಯಾಗಿದ್ದರು. ಆಸ್ಪತ್ರೆಯ ಅತಿಥಿಗೃಹದಲ್ಲಿ ವಿವೇಕಾನಂದರನ್ನು ಬರಮಾಡಿಕೊಂಡ ಪಲ್ಪು 'ಹೇಗಿದೆ ನಮ್ಮ ಕೇರಳ?' ಎಂದು ಕೇಳಿದರು. ಅದಕ್ಕೆ ವಿವೇಕಾನಂದರು 'ನಿಮ್ಮ ಕೇರಳ ಈ ಹುಚ್ಚಾಸ್ಪತ್ರೆಯಂತಿದೆ' ಎಂದು ವಿಷಾದದಿಂದ ನುಡಿದರು. ಮತ್ತೊಮ್ಮೆ ಇಬ್ಬರೂ ಕೇರಳದಲ್ಲಿನ ಅನಾಚಾರಗಳನ್ನು ಚರ್ಚಿಸಿದರು. ಬಾಲ್ಯದಿಂದಲೂ ಅಸ್ಪೃಶ್ಯತೆ, ಅನಾದರ, ತಾರತಮ್ಯ, ಶೋಷಣೆಯಿಂದ ನಲುಗಿ ಹಿಂದೂ ಧರ್ಮದ ಬಗ್ಗೆಯೇ ವಿಶ್ವಾಸ ಕಳೆದುಕೊಂಡಿದ್ದ ಪಲ್ಪು ಅವರಲ್ಲಿ ಧರ್ಮದ ಬಗ್ಗೆ ಗೌರವ ಬರುವಂತೆ ಸ್ವಾಮೀಜಿ ಪ್ರಯತ್ನಿಸಿದರು. ಈ ಸಮಸ್ಯೆಗೆ ತಮ್ಮದೇ ಆದ ಒಂದು ಪರಿಹಾರವನ್ನು ಸೂಚಿಸಿದರು. 'ಸಾಮಾಜಿಕ ಪರಿವರ್ತನೆಗಳು ಧಾರ್ಮಿಕ ತಳಹದಿಯ ಮೇಲೆ ನಡೆಯಬೇಕು. ನೀವೆಲ್ಲ ಬ್ರಾಹ್ಮಣರ ಹಿಂದೆ ಅಂಗಲಾಚಿಕೊಂಡು ಹೋಗುವುದೇಕೆ? ನಿಮ್ಮಲ್ಲೇ ಉನ್ನತಮಟ್ಟದ ಯೋಗ್ಯ ವ್ಯಕ್ತಿಯೊಬ್ಬರನ್ನು ನಾಯಕನನ್ನಾಗಿ ಮಾಡಿಕೊಂಡು ಅವನನ್ನು ಅನುಸರಿಸಿ. ಆಗ ನಿಮ್ಮ ಎಷ್ಟೋ ಸಮಸ್ಯೆಗಳು ಪರಿಹಾರವಾಗುತ್ತವೆ'. ಡಾ. ಪಲ್ಪು ಈ ಸಲಹೆಯನ್ನು ತುಂಬ ಗಂಭೀರವಾಗಿ ಸ್ವೀಕರಿಸಿದರು.

ಈಳವರು ಮಾತ್ರವಲ್ಲ, ಎಲ್ಲ ಹಿಂದುಳಿದ ವರ್ಗದವರು ಮತ್ತು ದಲಿತರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಪಲ್ಪು ವಿರೋಧಿಸುತ್ತಿದ್ದರು. ದೀನ ದಲಿತರಿಗೆ ಆಗುತ್ತಿದ್ದ ಅನ್ಯಾಯಗಳನ್ನು ಪ್ರತಿಭಟಿಸಿ ಅದಕ್ಕೊಂದು ಶಾಶ್ವತವಾದ ಪರಿಹಾರ ಹುಡುಕುವುದು ಅವರ ಗುರಿಯಾಯಿತು. ಈಳವರನ್ನು ಸಂಘಟಿಸಿ ಹೋರಾಟ ನಡೆಸುವುದೇ ಅವರ ಸಂಕಷ್ಟಗಳ ನಿವಾರಣೆಗೆ ಸೂಕ್ತ ಪರಿಹಾರ ಎಂದು ಪಲ್ಪು ಭಾವಿಸಿದರು. ಆಗಾಗ ರಜೆ ಪಡೆದು ತಿರುವಾಂಕೂರು ಸಂಸ್ಥಾನಕ್ಕೆ ತೆರಳಿ ಸಂಘಟನೆಗೆ ಪ್ರಯತ್ನಿಸಿದರು. ಈಳವರು ಒಗ್ಗಟ್ಟಿನಿಂದ ಸಮಸ್ಯೆಗಳನ್ನು ಎದುರಿಸಿದರೆ ಪರಿಹಾರವನ್ನು ಕಂಡುಕೊಳ್ಳಬಹುದೆಂದು 'ಈಳವ ಮಹಾಜನಸಂಘ' ಎಂಬ ಸಂಘವನ್ನು ಹುಟ್ಟುಹಾಕಿದರು. ಅದಕ್ಕೊಂದು ನಿಯಮಾವಳಿಯನ್ನು ಬರೆದು ಮಲೆಯಾಳಿಯಲ್ಲಿ ಪ್ರಕಟಿಸಿದರು. ಮೈಯ್ನಾಡು, ಪರವೂರು ಮೊದಲಾದೆಡೆ ಸಭೆಗಳನ್ನು ಕರೆದರು. ಅದಕ್ಕೆ ಹೆಚ್ಚಿನವರು ಸ್ಪಂದಿಸಲಿಲ್ಲ.

ಇದರಿಂದ ಡಾ. ಪಲ್ಪು ಧೃತಿಗೆಡಲಿಲ್ಲ. ತಿರುವಾಂಕೂರು ಸಂಸ್ಥಾನದಲ್ಲಿ ಈಳವರಿಗೆ ಆಗುತ್ತಿರುವ ಅನ್ಯಾಯವನ್ನು ಅಂಕಿ ಅಂಶಗಳ ಸಹಿತ ಕಲೆ ಹಾಕಿದರು. 1881ರ ಜನಗಣತಿಯ ಆಧಾರದಂತೆ ತಿರುವಾಂಕೂರು ಸಂಸ್ಥಾನದಲ್ಲಿ ಆ ದಿನಗಳಲ್ಲಿ ಸುಮಾರು ಇಪ್ಪತ್ತೈದು ಸಾವಿರ ಈಳವ ಯುವಕರು ಇಂಗ್ಲಿಷ್ ವಿದ್ಯಾಭ್ಯಾಸ ಪಡೆದು ನೌಕರಿ ಮಾಡುವ ಅರ್ಹತೆ ಗಳಿಸಿದ್ದನ್ನು ನಮೂದಿಸಿ ಅವರಿಗೆ ಸರ್ಕಾರಿ ನೌಕರಿಯ ಅವಕಾಶ ನೀಡುವಂತೆ ನಮ್ರತೆಯಿಂದ ತಿರುವಾಂಕೂರು ಸಂಸ್ಥಾನಕ್ಕೆ ಭಿನ್ನವಿಸಿದರು. 13,176 ಮಂದಿ ಈಳವರ ಸಹಿ ಇರುವ ಮನವಿ ಪತ್ರದಲ್ಲಿ ಪಲ್ಪು ಅವರದೇ ಮೊದಲ ಸಹಿಯಾಗಿತ್ತು. ಅದನ್ನು 1895ರ ಮೇ 13ರಂದು ಬೆಂಗಳೂರಿನಿಂದ ಸಲ್ಲಿಸಿದ್ದರು

ಈ ಹೊತ್ತಿನಲ್ಲಿ ಅವರಿಗೆ ಸ್ವಾಮಿ ವಿವೇಕಾನಂದರು ಧಾರ್ಮಿಕ ಪುರುಷರ ನೇತೃತ್ವದಲ್ಲಿ ಸುಧಾರಣೆಗೆ ಪ್ರಯತ್ನ ನಡೆಸಬೇಕು ಎಂದು ಹೇಳಿದ್ದು ನೆನಪಿಗೆ ಬಂದಿತು. ನಾರಾಯಣಗುರುಗಳು ಆ ವೇಳೆಗೆ ಅರವಿಪ್ಪುರದಲ್ಲಿ ಶಿವಾಲಯ ಸ್ಥಾಪಿಸಿದ್ದು, ಅದಕ್ಕೆ ಅವರ್ಣರು, ಸವರ್ಣರೆಲ್ಲ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ದೇವಾಲಯದ ಆಡಳಿತಕ್ಕಾಗಿ ಸಮಿತಿಯೊಂದನ್ನು ಮಾಡಿಕೊಂಡು ಅದರ ಮೂಲಕ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಪ್ರಯತ್ನ ನಡೆಸುತ್ತಿರುವುದು ಗೊತ್ತಾಯಿತು. ಸ್ವಾಮೀಜಿ ಹೇಳಿದ್ದ ವ್ಯಕ್ತಿ ಇವರೇ ಎಂದು ಮನವರಿಕೆ ಆಯಿತು. ಅರವಿಪ್ಪುರಕ್ಕೆ ಹೋಗಿ ನಾರಾಯಣಗುರುಗಳನ್ನು ಭೇಟಿ ಮಾಡಿದರು. ಈಳವರ ಹಾಗೂ ಎಲ್ಲ ಶೂದ್ರರ ಸಮಸ್ಯೆಗಳ ನಿವಾರಣೆಗೆ ವಿಚಾರ ವಿಮರ್ಶೆ ನಡೆಸಿದರು.

ಅರವಿಪ್ಪುರದಿಂದ ಬೆಂಗಳೂರಿಗೆ ವಾಪಸಾದ ಪಲ್ಪು ತಮ್ಮ ಕರ್ತವ್ಯದಲ್ಲಿ ನಿರತರಾದರು.

ಅತ್ತ ಕೆಲಕಾಲ ಉತ್ತರ ತಿರುವಾಂಕೂರಿನಲ್ಲಿ ಪ್ರವಾಸ ಮಾಡಿದ ನಾರಾಯಣಗುರುಗಳು 1895ರಲ್ಲಿ ತಮ್ಮ ಶಿಷ್ಯ ಕುಮಾರನ್ ಆಶಾನ್‌ರೊಡನೆ ಬೆಂಗಳೂರಿಗೆ ಬಂದರು. ಗುರುಗಳನ್ನು ಸ್ವಾಗತಿಸುವ ಸಂದರ್ಭ ತಮಗೆ ಬಂದುದಕ್ಕೆ ಡಾ ಪಲ್ಪು ತುಂಬ ಸಂತೋಷಪಟ್ಟರು. ಗುರುಗಳು ಮತ್ತು ಅವರೊಂದಿಗೆ ಬಂದಿದ್ದ ಕುಮಾರನ್ ಆಶಾನ್ ಅವರೊಂದಿಗೆ ತಮ್ಮ ಸಮಾಜದ ಅಭ್ಯುದಯಕ್ಕಾಗಿ ಏನೇನು ಮಾಡಬಹುದೆಂಬುದನ್ನು ಚರ್ಚಿಸಿದರು. ಸಮಾಜದ ಭವಿಷ್ಯವು ಸುಶಿಕ್ಷಿತ ಯುವಕರನ್ನು ಅವಲಂಬಿಸಿದೆ ಎಂಬ ನಿರ್ಣಯಕ್ಕೆ ಬಂದರು. ತಾವು ಒಬ್ಬ ತರುಣನ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ಪಲ್ಪು ಹೇಳಿದರು. ಗುರುಗಳು ತಕ್ಷಣವೇ ತಮ್ಮ ಜೊತೆ ಇದ್ದ ಕುಮಾರನ್ ಹೆಸರನ್ನು ಸೂಚಿಸಿದರು. ಪಲ್ಪು ಅವರಿಗೂ ಇದು ಒಪ್ಪಿಗೆಯಾಯಿತು. ಗುರುಗಳ ಸೂಚನೆಯನ್ನು ಅವರು ಆದೇಶವೆಂದು ಬಗೆದರು.

ಡಾ. ಪಲ್ಪು ಆಗ ಬೆಂಗಳೂರಿನಲ್ಲಿ ತಮ್ಮ ಕುಟುಂಬದೊಂದಿಗೆ ಇದ್ದರು. ಕುಮಾರನ್ ಅವರ ಕುಟುಂಬದ ಸದಸ್ಯರಾಗಿ ಸೇರಿಕೊಂಡರು. ಆಗ ಅವರ ವಯಸ್ಸು 22. ಮುಂದಿನ ವಿದ್ಯಾಭ್ಯಾಸದ ಹೊಣೆಯನ್ನು ಡಾ. ಪಲ್ಪು ವಹಿಸಿಕೊಂಡಿದ್ದರಷ್ಟೆ. ಅವರನ್ನು ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗೆ ಸೇರಿಸಿದರು. ಈ ಸಂಸ್ಕೃತ ಕಾಲೇಜು ಮೇಲುಜಾತಿಯ ಹಿಂದುಗಳಿಗೆ ಮಾತ್ರವೇ ಮೀಸಲಾಗಿತ್ತು. ಮೈಸೂರು ಸಂಸ್ಥಾನದ ಲಿಂಗಾಯತರು ಅಬ್ರಾಹ್ಮಣರಾದ್ದರಿಂದ ಅವರಿಗೂ ಅಲ್ಲಿ ಪ್ರವೇಶವಿರಲಿಲ್ಲ. ಆದರೆ ಅಂದಿನ ದಿವಾನ ಸರ್ ಕೆ.ಶೇಷಾದ್ರಿ ಅಯ್ಯರ್ ಅವರು ಡಾ. ಪಲ್ಪು ಅವರನ್ನು ನಿಕಟವಾಗಿ ತಿಳಿದಿದ್ದರು. ಅವರ ಪರಿಚಯದ ಮೂಲಕ ಕಾಲೇಜು ಪ್ರವೇಶದ ನಿಯಮಗಳನ್ನು ಕುಮಾರನ್ ಅವರಿಗಾಗಿ ಸಡಿಲಗೊಳಿಸಿ ಪ್ರವೇಶ ನೀಡಲಾಯಿತು. ಆ ಕಾಲೇಜಿನಲ್ಲಿ ಕುಮಾರನ್ ಒಬ್ಬರೇ ಅಬ್ರಾಹ್ಮಣ ವಿದ್ಯಾರ್ಥಿ.

ಕುಮಾರನ್ ಆ ಕಾಲೇಜಿನಲ್ಲಿ 1896ರಿಂದ ಮೂರು ವರ್ಷ ಇದ್ದರು. ಅಲ್ಲಿ ತರ್ಕಶಾಸ್ತ್ರವನ್ನು ಐಚ್ಛಿಕವಾಗಿ ತೆಗೆದುಕೊಂಡು ನ್ಯಾಯವಿದ್ವಾನ್ ಪರೀಕ್ಷೆಗಾಗಿ ಕಲಿಯುತ್ತಿದ್ದರು. ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆದಿದ್ದರು. ಉತ್ತಮ ಅಂಕಗಳನ್ನು ಗಳಿಸಿದ್ದರು. ಹೆಚ್ಚು ಅಂಕ ಗಳಿಸಿದ್ದು ಇತರ ವಿದ್ಯಾರ್ಥಿಗಳಲ್ಲಿ ಮತ್ಸರದ ಉರಿ ಎಬ್ಬಿಸಿತು. ಅವರು ಪರೀಕ್ಷೆಯನ್ನು ತೆಗೆದುಕೊಳ್ಳದಂತೆ ತಡೆ ಒಡ್ಡಲು ಮುಂದಾದರು. ಅಬ್ರಾಹ್ಮಣನಿಗೆ ಕಾಲೇಜಿನಲ್ಲಿ ಪ್ರವೇಶ ಕಲ್ಪಿಸಿ ವೇದಶಾಸ್ತ್ರಗಳನ್ನು ಕಲಿಯಲು ಅವಕಾಶ ಕೊಟ್ಟದ್ದರ ವಿರುದ್ಧ ಪ್ರತಿಭಟನೆ ನಡೆಸಲು ಪ್ರಯತ್ನಿಸಿದರು. ಸಂಸ್ಕೃತ ಕಾಲೇಜಿನಲ್ಲಿ ಅಬ್ರಾಹ್ಮಣ ವಿದ್ಯಾರ್ಥಿಗೆ ಅವಕಾಶ ಕಲ್ಪಿಸಿದ ತಮ್ಮ ತೀರ್ಮಾನದ ವಿರುದ್ಧ ವಿದ್ಯಾರ್ಥಿಗಳು ಆಕ್ರೋಶಗೊಂಡಿರುವುದು ದಿವಾನರ ಗಮನಕ್ಕೆ ಬಂದಿತು. ಬಹುಸಂಖ್ಯೆಯ ವಿದ್ಯಾರ್ಥಿಗಳ ವಿರೋಧವನ್ನು ಕಟ್ಟಿಕೊಳ್ಳಲು ಅವರು ಇಷ್ಟಪಡಲಿಲ್ಲ. ತಾವೇ ನೀಡಿದ್ದ ಪ್ರವೇಶವನ್ನು ರದ್ದುಪಡಿಸಿ ಕುಮಾರನ್ ಕಾಲೇಜಿನಿಂದ ಹೊರ ಹೋಗುವಂತೆ ಮಾಡಿದರು. ಕುಮಾರನ್ ಅವರಿಗೆ ಅಂತಿಮ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಾಗಲಿಲ್ಲ. ಇದೇ ವೇಳೆಗೆ (1898ರಲ್ಲಿ) ಬೆಂಗಳೂರಿನಲ್ಲಿ ಪ್ಲೇಗ್ ರೋಗ ಕಾಣಿಸಿಕೊಂಡಿತು. ಕೂಡಲೇ ಕಾಲೇಜನ್ನು ಮುಚ್ಚಲಾಯಿತು. (ಇದೇ ಕುಮಾರನ್ ಆಶಾನ್ ಮುಂದೆ ಬಂಗಾಳಕ್ಕೆ ತೆರಳಿ ಸಂಸ್ಕೃತದಲ್ಲಿ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ವ್ಯಾಕರಣ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಪಾಂಡಿತ್ಯ ಗಳಿಸಿದರು. ಡಾ.ಪಲ್ಪು ಕುಟುಂಬದ ಸಾಂಗತ್ಯದಿಂದ ಇಂಗ್ಲಿಷನ್ನು ಕಲಿತು ಅದರಲ್ಲಿ ನಿರರ್ಗಳವಾಗಿ ಮಾತನಾಡಲು ಶಕ್ತರಾದರು. ರವೀಂದ್ರರ ಪ್ರಭಾವ, ಬಂಗಾಳಿ ಸಾಹಿತ್ಯದ ಪರಿಚಯದಿಂದ ತಮ್ಮ ಸಾಹಿತ್ಯ ಕೃಷಿಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು. ಋಷಿಸದೃಶ ಜೀವನ, ವಿಭೂತಿಪುರುಷ ನಾರಾಯಣಗುರುಗಳ ಸಾಮೀಪ್ಯ, ದಣಿವರಿಯದ ಸಂಘಟಕ ಹಾಗೂ ನಿಸ್ವಾರ್ಥ ಸೇವಾಕರ್ತ ಡಾ.ಪಲ್ಪು ಅವರ ಸಹಕಾರದಿಂದ ಆಧುನಿಕ ಮಲೆಯಾಳಂ ಸಾಹಿತ್ಯದ ಮಹಾಕವಿಯೆಂದು ಹೆಸರಾದರು. ಅವರು ಮಾರ್ಗ ಪ್ರವರ್ತಕರೆಂದು ಮಾನ್ಯತೆ ಪಡೆದಿದ್ದು ಸ್ವಾತಂತ್ರ್ಯಾನಂತರ ಕೇರಳ ಸರ್ಕಾರ ಅವರ ಹೆಸರಿನಲ್ಲಿ ಪ್ರಾರಂಭಿಸಿದ ಆಶಾನ್ ಪ್ರಶಸ್ತಿಗೆ ಕನ್ನಡದ ಎಂ.ಗೋಪಾಲಕೃಷ್ಣ ಅಡಿಗ, ಕೆ.ಎಸ್.ನರಸಿಂಹಸ್ವಾಮಿ, ಚಂದ್ರಶೇಖರ ಕಂಬಾರ ಅವರು ಪಾತ್ರರಾಗಿರುವುದು ಸ್ವಾರಸ್ಯಕರವಾದ ವಿದ್ಯಮಾನ).

ಪಲ್ಪು ಅವರು ಈಳವರ ಪ್ರತಿನಿಧಿಯಾಗಿ 1895ರ ಮೇ 13 ರಂದು ಸಲ್ಲಿಸಿದ್ದ ಸುದೀರ್ಘ ಮನವಿಗೆ ಒಂದು ವರ್ಷದ ನಂತರ, 1896ರ ಅಕ್ಟೋಬರ್ 1 ರಂದು ತಿರುವಾಂಕೂರು ಸಂಸ್ಥಾನದ ಪರವಾಗಿ ಉತ್ತರ ಬಂದಿತು. ಅದರಲ್ಲಿ '(ಮನವಿಯಲ್ಲಿ ಪ್ರಸ್ತಾಪವಾಗಿರುವ) ಈ ವಿಷಯಗಳು ಕೇವಲ ಈಳವರಿಗೆ

ಸಂಬಂಧಿಸಿದ್ದವಲ್ಲ. ಅನೇಕ ಜಾತಿಗಳ ಎಡೆಯಲ್ಲಿ ನಿಂತಿರುವ ಹಿಂದೂ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾದವು. ಈಳವರು ಸಾಮಾನ್ಯವಾಗಿ ಅನಕ್ಷರಸ್ಥರು. ಅವರು ವಿದ್ಯೆ ಕಲಿತು ಸರ್ಕಾರಿ ನೌಕರಿಗೆ ಪ್ರಯತ್ನ ಮಾಡುವುದಕ್ಕಿಂತ ಈಗ ಮಾಡಿಕೊಂಡು ಬರುತ್ತಿರುವ ಹೆಂಡ ಇಳಿಸುವ, ಕೃಷಿ ಮಾಡುವ, ಹಗ್ಗ ಹುರಿ ಹೊಸೆಯುವ ಕಸುಬುಗಳನ್ನೇ ಮುಂದುವರಿಸುವುದು ಒಳ್ಳೆಯದು' ಎಂಬ ನಿರ್ದಾಕ್ಷಿಣ್ಯವಾದ ಉತ್ತರವನ್ನು ನೀಡಿದ್ದರು ಅಂದಿನ ದಿವಾನ ಶಂಕರ ಸುಬ್ಬ ಅಯ್ಯರ್. ಹಿಂದುಳಿದ, ಅಸ್ಪೃಶ್ಯರ ಗುಂಪಿಗೆ ಸೇರಿದ ತಮ್ಮವರ ನ್ಯಾಯಬದ್ಧ ಬೇಡಿಕೆಗೆ ಮುಖಕ್ಕೆ ರಾಚಿದಂತೆ ಬಂದ ದಿವಾನರ ಉತ್ತರಕ್ಕೆ ತುಂಬ ಅಪಮಾನಿತರಾದ ಪಲ್ಪು ಎದೆಗುಂದಲಿಲ್ಲ. ಈಳವರನ್ನು ಜೊತೆಗೂಡಿಕೊಂಡು ತಿರುವಾಂಕೂರಿನ ಹಿಂದುಳಿದ ಹಾಗೂ ದಲಿತ ವರ್ಗದವರನ್ನೂ ಒಳಗೊಂಡು ಹೋರಾಟ ರೂಪಿಸಲು ಸಂಕಲ್ಪ ಮಾಡಿಕೊಂಡರು.

**ಪ್ಲೇಗ್ ಹಾವಳಿ**

1898ರಲ್ಲಿ ಮೈಸೂರು ಸರ್ಕಾರ ಪಲ್ಪು ಅವರನ್ನು ಹೆಚ್ಚಿನ ಸಂಶೋಧನಾ ಅಧ್ಯಯನಕ್ಕೆ ಇಂಗ್ಲೆಂಡಿಗೆ ಕಳುಹಿಸಲು ನಿರ್ಧರಿಸಿತು. ಅಷ್ಟರಲ್ಲಿ ಬೆಂಗಳೂರಿನಲ್ಲಿ ಪ್ಲೇಗ್ ಹಬ್ಬಿತು. ಸಾಂಕ್ರಾಮಿಕ ರೋಗದ ತೀವ್ರತೆಗೆ ಮೊದಲೇ ಎಚ್ಚರಗೊಂಡಿದ್ದ ಸಂಸ್ಥಾನ ಪ್ಲೇಗ್ ನಿಯಂತ್ರಣಕ್ಕೆ ಒಬ್ಬ ಆಂಗ್ಲ ಅಧಿಕಾರಿಯನ್ನು ನೇಮಿಸಿತು. ಅವರಿಗೆ ಸಹಾಯಕರಾಗಿ ಡಾ. ಪಲ್ಪು ಇದ್ದರು. ಡಾ. ಪಲ್ಪು ಈ ಸಂಕಷ್ಟ ಸಮಯದಲ್ಲಿ ಧೈರ್ಯದಿಂದ ಸಾವುನೋವುಗಳ ಮಧ್ಯೆ ನಿಂತು ರೋಗಿಗಳ ಸೇವೆಯಲ್ಲಿ ತತ್ಪರರಾದರು. ಇಂಗ್ಲೆಂಡಿಗೆ ಹೋಗುವುದನ್ನು ಮುಂದಕ್ಕೆ ಹಾಕಿದರು.

ರೈಲ್ವೆ ಉದ್ಯೋಗಿಯೊಬ್ಬರಿಂದ ಬೆಂಗಳೂರಿಗೆ ಸೋಂಕಿದ ಪ್ಲೇಗು ಸರ್ಕಾರವನ್ನೂ, ಸಾರ್ವಜನಿಕರನ್ನೂ ತೀವ್ರ ಸಂಕಷ್ಟಕ್ಕೆ ದೂಡಿತು. ಬೆಂಗಳೂರಿನಲ್ಲಿ ಆರಂಭವಾದ ಈ ಸಾಂಕ್ರಾಮಿಕ ರೋಗ ಮೈಸೂರಿಗೂ ಹರಡಿತು. ಧಾರವಾಡದಲ್ಲೂ ನಂತರ ಕಾಣಿಸಿಕೊಂಡಿತು. ಬೆಂಗಳೂರು ನಗರ ಮತ್ತು ದಂಡು ಪ್ರದೇಶದಲ್ಲಿ ಕಾಣಿಸಿಕೊಂಡ ಗೆಡ್ಡೆ ಪ್ಲೇಗ್ ನಿಯಂತ್ರಣ ಅಂದಿನ ಸಂಸ್ಥಾನದ ಆಡಳಿತಕ್ಕೆ ದೊಡ್ಡ ಸವಾಲಾಯಿತು. ಈಗಿನ ರೈಲ್ವೆ ನಿಲ್ದಾಣದ ದಕ್ಷಿಣ ಮತ್ತು ಪೂರ್ವ ಭಾಗಕ್ಕೆ ಹರಡಿದ್ದ ಕಿರಿದಾದ ವಸತಿ ಪ್ರದೇಶಗಳು ನೈರ್ಮಲ್ಯಕ್ಕೆ ಅಡ್ಡಿಯಾಗಿದ್ದವು. ಹಕೀಮರು, ಪಂಡಿತರನ್ನು ಹೆಚ್ಚಾಗಿ ಅವಲಂಬಿಸಿದ್ದ ಜನಕ್ಕೆ ಇಂಗ್ಲಿಷ್ ವೈದ್ಯಪದ್ಧತಿಯನ್ನು ಪರಿಚಯಿಸಲು ಸರ್ಕಾರ ದೊಡ್ಡಾಸ್ಪತ್ರೆಯನ್ನು ಆರಂಭಿಸಿತು. ಬೆಂಗಳೂರು ಪೇಟೆ ಪ್ರದೇಶದಲ್ಲಿ 3,393 ಜನ ಸತ್ತರು. ಸಾವಿರಾರು ಜನ ಸುತ್ತಮುತ್ತಲ ಜಿಲ್ಲೆಗಳಿಗೆ ಓಡಿ ಹೋದರು. ದಂಡು ಪ್ರದೇಶದಲ್ಲಿ 3,669 ಜನ ಸತ್ತರು. ಬೆಂಗಳೂರು ನಿರ್ಜನವಾದಂತಾಯಿತು. ಬಟ್ಟೆ ಗಿರಣಿಗಳು, ಶಾಲೆಗಳು ಮುಚ್ಚಿಹೋದವು. ನಗರದ ಜನ (ಈಗ ಬಸವನಗುಡಿ, ಮಲ್ಲೇಶ್ವರ ಬಡಾವಣೆಗಳಿರುವ ಸ್ಥಳ) ಕೃಷಿ ಜಮೀನುಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಇರಬೇಕಾಯಿತು. 1898ರ ಆಗಸ್ಟ್ 15ಕ್ಕೆ ಆರಂಭವಾದ ಪ್ಲೇಗ್ ಪಿಡುಗು ಡಿಸೆಂಬರ್ ವರೆಗೂ ಮುಂದುವರಿಯಿತು. ಮರುವರ್ಷ ಜೂನ್‌ನಲ್ಲಿ ಆರಂಭವಾಗಿ ಡಿಸೆಂಬರ್ ವರೆಗೆ ವ್ಯಾಪಿಸಿತು. ಬೆಂಗಳೂರು ಪೇಟೆಯ ಜನಸಂಖ್ಯೆಯಲ್ಲಿ ಶೇ 25ರಷ್ಟು ಜನ ಪ್ಲೇಗಿಗೆ ಬಲಿಯಾದರು. ಸಂಸ್ಥಾನದ ವಿವಿಧ ಭಾಗಗಳಿಂದ ಪ್ಲೇಗ್ ಪರಿಸ್ಥಿತಿಯನ್ನು ವರದಿ ಮಾಡಲು ಮೊದಲ ಬಾರಿಗೆ 50 ದೂರವಾಣಿ ಸಂಪರ್ಕ ಒದಗಿಸಲಾಯಿತು. 8400 ಮನೆಗಳನ್ನು ಕ್ರಿಮಿನಾಶಕಗಳಿಂದ ಶುದ್ಧಗೊಳಿಸಲಾಯಿತು. ಮನೆಗಳಿಗೆ ಗಾಳಿ, ಬೆಳಕು ಬರುವಂತೆ ಅನೇಕ ಮನೆಗಳ ಗೋಡೆಗಳನ್ನು ಒಡೆದು ಗವಾಕ್ಷಿಗಳನ್ನು ಕೊರೆದರು. 893 ಮನೆಗಳನ್ನು

ಸ್ವಾಧೀನಪಡಿಸಿಕೊಂಡು ಅವುಗಳನ್ನು ಒಡೆದು ರಸ್ತೆಗಳನ್ನು ವಿಸ್ತರಿಸಿ ನಗರದ ದಟ್ಟಣೆಯನ್ನು ನಿವಾರಿಸಲು ಪ್ರಯತ್ನ ಆರಂಭಿಸಲಾಯಿತು. ಹೊಸ ಮನೆಗಳನ್ನು ಕಟ್ಟುವವರಿಗೆ ಗಾಳಿ, ಬೆಳಕು ಸರಾಗವಾಗಿ ಬರುವಂತೆ ನಿಯಮಗಳನ್ನು ರೂಪಿಸಲಾಯಿತು. ಪೇಟೆಯ ಒಳಗಿನ ದಟ್ಟಣೆಯನ್ನು ನಿವಾರಿಸಲು ರೈಲ್ವೆನಿಲ್ದಾಣದ ದಕ್ಷಿಣ ಭಾಗದಲ್ಲಿ 400 ಎಕರೆ ಮತ್ತು ಉತ್ತರ ಭಾಗದಲ್ಲಿ 291 ಎಕರೆ ಪ್ರದೇಶವನ್ನು ವಶಪಡಿಸಿಕೊಂಡು ವಿಶಾಲವಾದ ಮನೆ ನಿವೇಶನಗಳನ್ನು ರೂಪಿಸಲಾಯಿತು. ಅಲ್ಲಿ ಕಡಿಮೆ ಕಂತಿನಲ್ಲಿ ಸರ್ಕಾರಿ ನೌಕರರಿಗೆ ನಿವೇಶನಗಳನ್ನು ಹಂಚಲಾಯಿತು. ಸಾರ್ವಜನಿಕರಿಗೂ ಮಾರಲಾಯಿತು. ಮನೆ ಕಟ್ಟಿಕೊಳ್ಳಲು ಸಾಲದ ಸೌಲಭ್ಯವನ್ನೂ ಒದಗಿಸಲಾಯಿತು.

ಪ್ಲೇಗ್ ಸಾಂಕ್ರಾಮಿಕದ ಹಾವಳಿ ಸಂಸ್ಥಾನದ ಆಡಳಿತವನ್ನು ಕಂಗೆಡಿಸುವ ಹತ್ತು ವರ್ಷಗಳ ಮೊದಲೇ ನಗರಕ್ಕೆ ದಕ್ಷಿಣ ಮತ್ತು ಉತ್ತರಕ್ಕೆ ಎರಡು ಹೊಸ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಲು 1889ರಲ್ಲಿ ಯೋಜನೆ ರೂಪಿಸಲಾಗಿತ್ತು. ತತ್ಕಾಲಕ್ಕೆ ಅವನ್ನು ಉತ್ತರ ಮತ್ತು ದಕ್ಷಿಣ ಬಡಾವಣೆಗಳೆಂದು ಕರೆಯುತ್ತಿದ್ದರೂ ಒಂದೆರಡು ವರ್ಷಗಳಲ್ಲಿ ಬಡಾವಣೆಗಳಲ್ಲಿ ನಿವೇಶನ ಹಾಗೂ ರಸ್ತೆಗಳ ನೀಲಿ ನಕ್ಷೆ ರೂಪಿಸಿ ಅಭಿವೃದ್ಧಿಪಡಿಸಲಾಯಿತು. 1895ರ ಸುಮಾರಿಗೆ ಅವುಗಳನ್ನು ಬೆಂಗಳೂರು ನಗರ ಮುನಿಸಿಪಾಲಿಟಿಗೆ ಹಸ್ತಾಂತರಿಸಲಾಯಿತು. ಉತ್ತರದ ಬಡಾವಣೆಯಲ್ಲಿ ಕಾಡುಮಲ್ಲೇಶ್ವರನ ಗುಡಿ ಇದ್ದುದರಿಂದ ಆ ಬಡಾವಣೆ ಮಲ್ಲೇಶ್ವರ ಎಂದು ಹೆಸರಾಯಿತು. ದಕ್ಷಿಣ ಬಡಾವಣೆ ಬಸವಣ್ಣನ ಗುಡಿಯ ಪ್ರದೇಶದಲ್ಲಿ ಇದ್ದ ಕಾರಣ ಅದು ಬಸವನಗುಡಿ ಎಂದಾಯಿತು. ಅಲ್ಲಲ್ಲಿ ವಿರಳವಾಗಿ ತಲೆ ಎತ್ತುತ್ತಿದ್ದ ಮನೆಗಳಿದ್ದ ಈ ಎರಡೂ ಬಡಾವಣೆಗಳಿಗೆ ಪ್ಲೇಗ್ ಹಾವಳಿಯ ನಂತರ ಹೆಚ್ಚು ಹೆಚ್ಚು ಜನರು ವಲಸೆ ಬಂದ ಕಾರಣ ಅವು ಅಭಿವೃದ್ಧಿ ಹೊಂದತೊಡಗಿದವು. ಈ ಬಡಾವಣೆಗಳಿಗೆ ಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದರಲ್ಲಿ ಆರೋಗ್ಯಾಧಿಕಾರಿ ಡಾ ಪಲ್ಪು ಅವರ ಪಾತ್ರವೂ ಗಣನೀಯವಾಗಿತ್ತು.

ಪ್ಲೇಗ್ ರೋಗ ನಿಯಂತ್ರಣಕ್ಕೆ ಬಂದ ಮೇಲೆ ಪಲ್ಪು ಸರ್ಕಾರದ ಅಪೇಕ್ಷೆಯಂತೆ 1899ರಲ್ಲಿ ಇಂಗ್ಲೆಂಡಿಗೆ ಹೋದರು. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಒಂದೂವರೆ ವರ್ಷ ಅಧ್ಯಯನ ನಡೆಸಿ ಸಿಪಿಎಚ್., ಎಫ್ ಆರ್ ಪಿ ಪದವಿಗಳನ್ನು ಪಡೆದರು. ಅಲ್ಲಿಂದ ಪ್ಯಾರಿಸ್, ರೋಮ್ ಮತ್ತು ಜರ್ಮನಿ ದೇಶಗಳನ್ನು ಸಂದರ್ಶಿಸಿ ಸ್ವದೇಶಕ್ಕೆ ವಾಪಸಾದರು. ಅಂದಿನ ದಿನಗಳಲ್ಲಿ ವಿದೇಶಕ್ಕೆ ತೆರಳಿ ಪಾಶ್ಚಾತ್ಯ ವೈದ್ಯಕೀಯ ಅಧ್ಯಯನವನ್ನು ನಡೆಸಿ ಬಂದವರು ಅತಿ ವಿರಳ ಸಂಖ್ಯೆಯಲ್ಲಿದ್ದರು.

1902ರಲ್ಲಿ ಸ್ವದೇಶಕ್ಕೆ ಆಗಮಿಸಿದ ಡಾ. ಪಲ್ಪು, ಆ ವೇಳೆಗೆ ಉನ್ನತ ಶಿಕ್ಷಣ ಪಡೆಯಲು ಹೋಗಿ ಕೊಲ್ಕತ್ತೆಯಿಂದ ವಾಪಸಾಗಿದ್ದ ಕುಮಾರನ್ ಆಶಾನ್ ಅವರೊಂದಿಗೆ ತಿರುವನಂತಪುರಕ್ಕೆ ಬಂದು ನಾರಾಯಣ ಗುರುಗಳನ್ನು ಭೇಟಿ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಸೇವೆ ಸಲ್ಲಿಸುತ್ತಲೇ ತಮಗೆ ಲಭ್ಯವಿದ್ದ ರಜೆಗಳನ್ನು ಬಳಸಿಕೊಂಡು ಅರವಿಪ್ಪುರಂ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದರು. ಧಾರ್ಮಿಕ ತಳಹದಿಯ ಮೇಲೆ ಕಟ್ಟುವ ಸಂಘಟನೆಯಿಂದ ಮಾತ್ರ ತಿರುವಾಂಕೂರು ಸಂಸ್ಥಾನದ ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಬದಲಾವಣೆಗಳು ಸಾಧ್ಯವಾಗಬಹುದು ಎಂಬ ಚಿಂತನೆಯೊಂದಿಗೆ ಗುರುಗಳೊಂದಿಗೆ ಚರ್ಚೆ ನಡೆಯುತ್ತಿದ್ದವು. ಆ ಮೊದಲೇ ಗುರುಗಳಿಂದ ಸ್ಥಾಪಿತವಾದ ದೇವಸ್ಥಾನಗಳು ಅವರ್ಣರಲ್ಲಿ ಚೈತನ್ಯ ಮೂಡಿಸಿದ್ದವು. ಗುರುಗಳಲ್ಲಿ ಜನರಿಗೆ ಇರುವ ಭಕ್ತಿ, ಗೌರವಗಳನ್ನು ಸಾಮಾಜಿಕ ಪರಿವರ್ತನೆಗೆ ಬಳಸಿಕೊಳ್ಳಬಹುದೆಂಬ ಭಾವನೆ ಮೂಡಿತು. 1899ರಲ್ಲಿ ಗುರುಗಳು ಮತ್ತು ಅವರ 11 ಮಂದಿ ಶಿಷ್ಯರು ರಿಜಿಸ್ಟರ್ ಮಾಡಿದ್ದ

'ಅರುವಿಪ್ಪುರ ಕ್ಷೇತ್ರ ಯೋಗ' ಸಂಘಟನೆಯನ್ನು ವಿಸ್ತೃತವಾಗಿ ಬೆಳೆಸಲು ಅವರೆಲ್ಲ ನಿರ್ಧರಿಸಿದರು. ನಾರಾಯಣಗುರುಗಳ ಹೆಸರು ಮತ್ತು ಅವರು ಬೋಧಿಸುತ್ತಿದ್ದ ತತ್ವವನ್ನು ಪ್ರತಿಬಿಂಬಿಸಲು 'ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ' ಎಂಬುದು 1903ರ ಮೇ 15 ರಂದು ರಿಜಿಸ್ಟರ್ ಆಗಿ ಅಸ್ತಿತ್ವಕ್ಕೆ ಬಂದಿತು. ಅದಕ್ಕೆ ನಾರಾಯಣಗುರುಗಳು ಅಧ್ಯಕ್ಷರು, ಪಲ್ಪು ಉಪಾಧ್ಯಕ್ಷರು, ಕುಮಾರನ್ ಆಶಾನ್ ಕಾರ್ಯದರ್ಶಿ (ಇದು ಸ್ವಾಮಿ ವಿವೇಕಾನಂದರು ಮಹಾಸಮಾಧಿ ಹೊಂದಿದ ಹತ್ತು ತಿಂಗಳಲ್ಲಿ ಆರಂಭವಾಯಿತು).

ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗ ನಡೆಸಿ ವಾಪಸು ಬಂದ ಪಲ್ಪು ಅವರು ಬೆಂಗಳೂರು ನಗರದ ಆರೋಗ್ಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡರು. ಆರೋಗ್ಯಾಧಿಕಾರಿಯಾಗಿದ್ದ ಕಾರಣ ಬೆಂಗಳೂರು ಮುನಿಸಿಪಾಲಿಟಿಗೆ ಪದನಿಮಿತ್ತ ಉಪಾಧ್ಯಕ್ಷರೂ ಆದರು.

1905ರಲ್ಲಿ ಸ್ಯಾನಿಟರಿ ಕಮೀಶನರ್ ಅವರಿಗೆ ಆಪ್ತ ಕಾರ್ಯದರ್ಶಿಯಾಗಿ ಬಡ್ತಿ ಹೊಂದಿದರು. ಮುಂದಿನ ಎರಡು ವರ್ಷಗಳಲ್ಲಿ ಮಾಸಿಕ 900 ರೂಪಾಯಿ ವೇತನದಲ್ಲಿ ಉಪ ಸ್ಯಾನಿಟರಿ ಕಮೀಶನರ್ ಹುದ್ದೆಗೆ ಬಡ್ತಿ ಪಡೆದರು.

ಸರ್ಕಾರಿ ಆದೇಶ 29–4–1911 ರ ಅನ್ವಯ ಡಾ. ಪಲ್ಪು ಅವರನ್ನು ವೈದ್ಯಾಧಿಕಾರಿಯಾಗಿ ನೇಮಿಸಿ ಶಿವಮೊಗ್ಗಕ್ಕೆ ವರ್ಗ ಮಾಡಲಾಯಿತು. ಅಲ್ಲಿ ಅವರು ಜಿಲ್ಲಾ ಸ್ಯಾನಿಟರಿ ಅಧಿಕಾರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದರು (ಶಿವಮೊಗ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸ್ಥಳೀಯರು ಅವರನ್ನು ಪಲ್ಲಪ್ಪ ಎಂದು ಕರೆಯುತ್ತಿದ್ದರಂತೆ)

1915ರ ಅಕ್ಟೋಬರ್ 1 ರ ಆದೇಶದಂತೆ ಡಾ. ಪಲ್ಪು ಅವರನ್ನು ಬೆಂಗಳೂರು ಸೆಂಟ್ರಲ್ ಜೈಲಿನ ಪ್ರಭಾರಿ ಅಧೀಕ್ಷಕರಾಗಿ ನಿಯೋಜಿಸಲಾಯಿತು. ಈ ಅವಧಿಯಲ್ಲಿ ನಡೆದ ಒಂದು ಪ್ರಸಂಗ: ಅರಮನೆಯಲ್ಲಿ ಕಾರಸ್ತಾನ ನಡೆಸುತ್ತಿದ್ದ ಕುಟಿಲ ಅಧಿಕಾರಿಗಳ ಸಂಚಿಗೆ ಬಲಿಯಾಗಿ ಇಬ್ಬರು ಅಮಾಯಕ ವ್ಯಕ್ತಿಗಳಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದ್ದು ಅದನ್ನು ಜಾರಿಗೊಳಿಸಲು ಪಲ್ಪು ಅವರಿಗೆ ಆದೇಶ ನೀಡಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನೂ ಕಳುಹಿಸಲಾಗಿತ್ತು. ಕಡತಗಳನ್ನು ಪರಿಶೀಲಿಸುತ್ತಿದ್ದ ಪಲ್ಪು ಅವರಿಗೆ ಶಿಕ್ಷೆಗೆ ಗುರಿಯಾದ ಇಬ್ಬರೂ ವ್ಯಕ್ತಿಗಳು ಯಾರದೋ ಸಂಚಿಗೆ ಬಲಿಯಾದವರೆಂದು ತಿಳಿಯಿತು. ತಮಗಿದ್ದ ಕಾನೂನು ಜ್ಞಾನ ಮತ್ತು ದೇವರ ಬಗೆಗಿದ್ದ ಶ್ರದ್ಧೆಯನ್ನು ಬಲವಾಗಿ ನಂಬಿದ್ದ ಪಲ್ಪು ಅದನ್ನೇ ಸ್ಪಷ್ಟವಾಗಿ ಬರೆದರು. ಗಲ್ಲು ಶಿಕ್ಷೆಯನ್ನು ಜಾರಿಗೊಳಿಸಿದರೆ ಅಮಾಯಕರಿಗೆ ನೈಸರ್ಗಿಕ ನ್ಯಾಯದ ಅವಕಾಶವನ್ನು ನಿರಾಕರಿಸಿದಂತಾಗುತ್ತದೆ ಎಂದು ಸರ್ಕಾರಕ್ಕೆ ಪತ್ರ ಬರೆದು ಗಲ್ಲು ಶಿಕ್ಷೆಯನ್ನು ಜಾರಿ ಮಾಡಲು ನಿರಾಕರಿಸಿದರು. ಆದರೆ, ಈ ಸಂಚನ್ನು ರೂಪಿಸಿದ್ದ ಸಂಸ್ಥಾನದ ಅಧಿಕಾರಿಗಳಿಗೆ ಪಲ್ಪು ಅವರ ದೃಢ ನಿರ್ಧಾರವನ್ನು ಎದುರಿಸಲು ಧೈರ್ಯವಿರಲಿಲ್ಲ. ಪಲ್ಪು ಕೆಲವು ದಿನಗಳಲ್ಲಿ ರಜೆಯ ಮೇಲೆ ಹೋಗಿದ್ದಾಗ ಹಂಗಾಮಿಯಾಗಿ ನಿಯುಕ್ತಿಗೊಂಡಿದ್ದ ಸೂಪರಿಂಟೆಂಡೆಂಟ್ ಅವರ ಮೂಲಕ ತಮ್ಮ ಸ್ವಾರ್ಥ ಸಾಧಿಸಿಕೊಂಡರು. ಅಮಾಯಕರಿಬ್ಬರು ಗಲ್ಲಿಗೇರಿದರು.

1917ರಲ್ಲಿ ಡಾ. ಪಲ್ಪು ಅವರನ್ನು ಬರೋಡ ಸಂಸ್ಥಾನಕ್ಕೆ ಎರವಲು ಸೇವೆಗೆ ನಿಯೋಜಿಸಲಾಯಿತು. ಅಲ್ಲಿ ಅವರ ಮಾಸಿಕ ವೇತನ 1200 ರೂಪಾಯಿಗಳಾಗಿತ್ತು. ಪಲ್ಪು ಅವರು ದಕ್ಷರು. ದೂರದೃಷ್ಟಿ ಇದ್ದವರು. ಬರೋಡ ಮಹಾರಾಜರಿಗೆ ಸಾರ್ವಜನಿಕ ಆರೋಗ್ಯ ಕುರಿತ ಸಲಹೆಗಾರರಾಗಿ ಇದ್ದಾಗ ಅಲ್ಲಿ ಒಂದು ವೈದ್ಯಕೀಯ ಪ್ರದರ್ಶನವನ್ನು ಏರ್ಪಡಿಸಿದರು. ಪ್ರದರ್ಶನದ ನಾವೀನ್ಯತೆ ಹಾಗೂ ಕಲ್ಪನೆಯನ್ನು ಮಹಾರಾಜರು ಮಾತ್ರವಲ್ಲದೆ, ಅದನ್ನು ವೀಕ್ಷಿಸಿದ ಗಣ್ಯ ನಾಗರಿಕರೂ ಮೆಚ್ಚಿಕೊಂಡರು. ಆ ಸಂದರ್ಭದಲ್ಲಿ

ಪಲ್ಪು ಬರೆದು ನಿರ್ದೇಶಿಸಿದ ನಾಟಕವೊಂದು ಪ್ರದರ್ಶನವಾಯಿತು. ಪಾಶ್ಚಾತ್ಯ ಜ್ಞಾನ ಮತ್ತು ಭಾರತೀಯ ಮೌಲ್ಯಗಳನ್ನು ಸಾಂಕೇತಿಕವಾಗಿ ಮೇಳೈಸುವಂತೆ ವಿವಿಧ ರೋಗಗಳನ್ನೇ ಪಾತ್ರಗಳನ್ನಾಗಿ ರೂಪಿಸಿದ ನಾಟಕ ಪರಿಣಾಮಕಾರಿಯಾಗಿತ್ತು. ನಾಟಕವನ್ನು ವೀಕ್ಷಿಸಿದ ನಂತರ ಮಹಾರಾಜರು ಪಲ್ಪು ಅವರ ಕಲ್ಪನೆಯನ್ನು ಪ್ರಶಂಸಿಸಿದರು. ಪಾಶ್ಚಾತ್ಯ ವೈಜ್ಞಾನಿಕ ದೃಷ್ಟಿ ಮತ್ತು ಭಾರತೀಯರ ಪ್ರಾಚೀನ ಆದರ್ಶಗಳನ್ನು ಅರಿತಿರುವ ಪಲ್ಪು ಅಂಥವರಿಂದ ಭಾರತದ ಉನ್ನತಿ ಸಾಧ್ಯವೆಂದು ಹೊಗಳಿದರು. ಸಂಸ್ಕೃತದಲ್ಲಿಯೂ ಪರಿಶ್ರಮವಿದ್ದ ಪಲ್ಪು ಉಪನಿಷತ್ತುಗಳನ್ನೂ ತಕ್ಕಮಟ್ಟಿಗೆ ಓದಿಕೊಂಡಿದ್ದುದು ಅವರ ಬರೋಡೆಯ ವೈದ್ಯಕೀಯ ಪ್ರದರ್ಶನ ಕಾಲದಲ್ಲಿ ಪ್ರಯೋಜನಕ್ಕೆ ಬಂದಿತ್ತು. ಅಲ್ಲಿನ ಸೇವೆ ಮುಗಿಸಿ ವಾಪಸು ಬಂದ ಅವರನ್ನು ಮೈಸೂರು ಸಂಸ್ಥಾನವು ಲಿಂಪ್ ಇನ್ಸ್‌ಟಿಟ್ಯೂಟ್ ನಿರ್ದೇಶಕರನ್ನಾಗಿ ನೇಮಿಸಿತು. ಆಗ ಅವರ ವೇತನ ಮಾಸಿಕ ರೂ. 2000. ನಿವೃತ್ತರಾಗುವವರೆಗೆ ಈ ಹುದ್ದೆಯಲ್ಲಿದ್ದರು.

**ನಿಷ್ಠುರ ಪ್ರಾಮಾಣಿಕತೆ**

ವೈದ್ಯಕೀಯ ಜ್ಞಾನದಲ್ಲಿ ಪಲ್ಪು ಅವರಿಗೆ ಸಮಾನರಾದವರು ಆಗ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ಸರ್ಕಾರಿ ಅಧಿಕಾರಿಯಾಗಿ ಅವರ ನಿಷ್ಠೆ, ಪ್ರಾಮಾಣಿಕತೆ ಮತ್ತು ದಕ್ಷತೆಗಳು ಪ್ರಶ್ನಾತೀತವಾಗಿದ್ದವು. ಅವರ ಕಡು ವಿರೋಧಿಗಳೂ ಮೆಚ್ಚಿಕೊಳ್ಳುವಂಥ ನಿಷ್ಠುರ ಪ್ರಾಮಾಣಿಕತೆ ಅವರದಾಗಿತ್ತು. ಎಂಥ ಪರಿಸ್ಥಿತಿಯಲ್ಲಿಯೂ ಅವರು ಅಧಿಕಾರ ಸ್ಥಾನವನ್ನು ದುರುಪಯೋಗಪಡಿಸಿಕೊಂಡವರಲ್ಲ. ಅವರು ಅಧಿಕಾರದಲ್ಲಿದ್ದಾಗ ದಿವಾನ ಪಿ.ಎನ್. ಟಿ.ಕೃಷ್ಣಮೂರ್ತಿ ಅವರ ಖಾಸಾ ಬಂಗಲೆವರೆಗೆ ಸಂಪರ್ಕ ರಸ್ತೆಯನ್ನು ನಿರ್ಮಿಸಲು ಪಲ್ಪು ಅವರಿಗೆ ತಿಳಿಸಿದ್ದರು. ಆ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು ಪಲ್ಪು. ಆದರೆ, ಸಾರ್ವಜನಿಕ ರಸ್ತೆಯಿಂದ ಖಾಸಾ ಬಂಗಲೆಯವರೆಗೆ ಮಾಡಿದ ರಸ್ತೆಗಾಗಿ ಬಳಸಿದ ಸಾಮಗ್ರಿ ಹಾಗೂ ಕೂಲಿ ವೆಚ್ಚದ ಬಿಲ್ ಅನ್ನು ಪ್ರತ್ಯೇಕವಾಗಿ ದಿವಾನರಿಗೆ ಕಳುಹಿಸಿ ಅದನ್ನು ಸರ್ಕಾರದ ಬೊಕ್ಕಸಕ್ಕೆ ಸಲ್ಲಿಸುವಂತೆ ಕೋರಿದ್ದರು. (ಕೃಷ್ಣಮೂರ್ತಿ ಅವರು 1901ರ ಮಾರ್ಚ್ 18 ರಿಂದ 1906ರ ಜೂನ್ 30 ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದರು).

ಪಲ್ಪು ತಮಗೆ ಶಾಲಾ ದಿನಗಳಲ್ಲಿ ಇಂಗ್ಲಿಷ್ ಕಲಿಕೆಗೆ ಔದಾರ್ಯ ತೋರಿಸಿದ್ದ ಗುರು ಫರ್ನಾಂಡಿಸ್ ಅವರಿಗೆ ಪ್ರತಿ ತಿಂಗಳೂ ಹಣ ಕಳುಹಿಸುತ್ತಿದ್ದರು. ಊರಿಗೆ ಹೋದಾಗ ಅವರನ್ನು ಭೇಟಿ ಮಾಡಿ ಬರುತ್ತಿದ್ದರು. ಇಲ್ಲಿದ್ದಾಗಲೂ ಬಡಬಗ್ಗರಿಗೆ ತನ್ನಿಂದಾದ ಸಹಾಯ ಮಾಡುತ್ತಿದ್ದರು. ಚಳಿಗಾಲದಲ್ಲಿ ಬೆಂಗಳೂರಿನ ರಸ್ತೆ ಬದಿಯಲ್ಲಿ ಚಳಿಯಿಂದ ನಡುಗುತ್ತಿದ್ದ ಬಡವರಿಗೆ ಸ್ವಂತ ಹಣದಲ್ಲಿ ಕಂಬಳಿ ವಿತರಿಸುತ್ತಿದ್ದರು.

ತಮ್ಮ ಸೇವೆಯ ಕಾಲದಲ್ಲಿ ಡಾ. ಪಲ್ಪು ಅನೇಕ ಆಡಳಿತಾತ್ಮಕ ಹುದ್ದೆಗಳನ್ನೂ ನಿರ್ವಹಿಸಬೇಕಾಗಿತ್ತು. ವಿಶ್ವೇಶ್ವರಯ್ಯನವರು ದಿವಾನರಾಗಿ ಕಾರ್ಯನಿರ್ವಹಿಸುತ್ತಿದ್ದ ದಿನಗಳು ಅವು. ವೈದ್ಯಾಧಿಕಾರಿಯಾಗಿದ್ದ ಪಲ್ಪು ಗುಡಿ ಕೈಗಾರಿಕೆಗಳ ವಸ್ತು ಪ್ರದರ್ಶನವೊಂದನ್ನು ಸಂಘಟಿಸಿದ್ದರು. ಗ್ರಾಮೀಣ ಜನತೆ ಹೊಸಬಗೆಯ ಕರಕುಶಲ ಪ್ರಯೋಗಗಳನ್ನು ಕೈಗೊಳ್ಳುವುದಕ್ಕೆ ಉತ್ತೇಜನಕಾರಿಯಾಗುವ ಬಗೆಬಗೆಯ ಪ್ರಾತ್ಯಕ್ಷಿಕೆಗಳನ್ನು ಪಲ್ಪು ಸಂಯೋಜಿಸಿದ್ದರು. ಪ್ರದರ್ಶನದಲ್ಲಿಯ ಪರಿಕಲ್ಪನೆ ಹಾಗೂ ಹೊಸತನಕ್ಕೆ ತುಂಬ ಸಂತೋಷಪಟ್ಟ ದಿವಾನ ವಿಶ್ವೇಶ್ವರಯ್ಯ ಅವರು ತಮ್ಮ ಎಂದಿನ ವ್ಯಾವಹಾರಿಕ ಧಾಟಿಯಲ್ಲಿ 'ಈ ವಸ್ತುಪ್ರದರ್ಶನ ನಿಮ್ಮ ವೈದ್ಯಕೀಯ ವೃತ್ತಿಯ ಜಾಡಿನಲ್ಲಿದೆಯೋ' ಎಂದು ಕೇಳಿದರು. ಮಾತಿನಲ್ಲಿದ್ದ ಕೀಟಲೆಯ ಧ್ವನಿಯನ್ನು ಅರ್ಥ ಮಾಡಿಕೊಂಡ ಪಲ್ಪು 'ಹೌದು ಸರ್, ತಮ್ಮ ಇಂಜಿನಿಯರಿಂಗ್ ವೃತ್ತಿಯಲ್ಲಿ ಹುದುಗಿದ್ದ ದಿವಾನಗಿರಿಯ

ಪ್ರತಿಭೆಯಂತೆ’ ಎಂದು ನಿರ್ಭಿಡೆಯಿಂದ ಉತ್ತರಿಸಿದರು. ವಿಶ್ವೇಶ್ವರಯ್ಯನವರು ಅದಕ್ಕೆ ಸಮ್ಮತಿಸುವಂತೆ ನಗೆಯಾಡಿದರು ಎಂದು ಸದಾಶಿವಂ ದಾಖಲಿಸಿದ್ದಾರೆ.

ಆಧುನಿಕ ವೈದ್ಯಪದ್ಧತಿಯ ಬಗ್ಗೆ ಹೊಂದಿದ್ದ ತಲಸ್ಪರ್ಶಿ ಜ್ಞಾನ ಮತ್ತು ಅರ್ಪಣಾ ಭಾವದ ಸೇವಾ ತತ್ಪರತೆಯ ಕಾರಣ ಪಲ್ಪು ಸಂಸ್ಥಾನದ ಆರೋಗ್ಯ ಇಲಾಖೆಯಲ್ಲಿ ಖ್ಯಾತಿ ಪಡೆದರು. ದಿವಾನರು ಮತ್ತು ರಾಜ ಪರಿವಾರಕ್ಕೂ ವೈದ್ಯಕೀಯ ಸಲಹೆಗಾರರಾದರು. ಮೈಸೂರು ಸಂಸ್ಥಾನಕ್ಕೆ ಮಾತ್ರವಲ್ಲದೆ, ಮಹಾರಾಜರ ಪರಿವಾರಕ್ಕೆ ಪಲ್ಪು ಸಲ್ಲಿಸಿದ ಸೇವೆಗೆ ಮೈಸೂರು ಮಹಾರಾಜರು ಎಷ್ಟು ಕೃತಜ್ಞರಾಗಿದ್ದರೆಂದರೆ, ಪಲ್ಪು ನಿವೃತ್ತರಾಗಿ ತಿರುವನಂತಪುರದಲ್ಲಿ ನೆಲೆಸಿದ ದಿನಗಳಲ್ಲಿ ಅವರ ಮನೆಗೂ ಭೇಟಿ ನೀಡಿ ಕುಶಲ ವಿಚಾರಿಸಿದ್ದರು.

1920ರ ನವೆಂಬರ್ ತಿಂಗಳಲ್ಲಿ ನಿವೃತ್ತರಾಗಿ ಕೇರಳಕ್ಕೆ ವಾಪಸಾದರು. ಕೆಲವು ಕಾಲದ ನಂತರ ತಿರುವನಂತಪುರದಲ್ಲಿ ತರವಾಡು ಮನೆ ಇದ್ದರೂ ಕೊಚ್ಚಿ, ಎರ್ನಾಕುಲಂ, ಅಲುವದಲ್ಲಿ ಕೆಲವು ಸಮಯ ನೆಲೆಸಿದರು. ಕೊನೆಗೆ ನಂದನಕೋಡು ಎಂಬಲ್ಲಿ ಮನೆಯೊಂದನ್ನು ಖರೀದಿಸಿ ಅಲ್ಲಿ ನೆಲೆಸಿದರು.

1903ರ ಮೇ 15ರಂದು ಅಸ್ತಿತ್ವಕ್ಕೆ ತಂದ ‘ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ’ (ಎಸ್‌ಎನ್‌ಡಿಪಿ) ಸಂಸ್ಥೆಯ ಸಂಸ್ಥಾಪಕ ಉಪಾಧ್ಯಕ್ಷರಾಗಿದ್ದ ಪಲ್ಪು, ಆ ಸಂಘಟನೆಗೆ ರಾಜಕೀಯ, ಸಾಮಾಜಿಕ ಜಾಗೃತಿಯ ವಿಧಾಯಕ ಕ್ರಮಗಳಿಗೆ ಪ್ರೇರಕರಾಗಿದ್ದರು. ಅವುಗಳಿಗೆ ಗುರುಗಳ ಆಧ್ಯಾತ್ಮಿಕ ದರ್ಶನ, ಕುಮಾರನ್ ಆಶಾನ್ ಅವರ ಸಾಹಿತ್ಯ ಸಂಘಟನೆಯ ಚಿಂತನೆಗಳು ಮೇಳೈಸಿ ಕೇರಳ ಸಮಾಜದ ಶೋಷಿತ ಸಮುದಾಯಗಳ ಉದ್ಧಾರಕ್ಕೆ ನೂತನ ಆಯಾಮವನ್ನು ಒದಗಿಸಿದ್ದವು.

ಎಸ್‌ಎನ್‌ಡಿಪಿಯ ಮೊಟ್ಟಮೊದಲ ವಾರ್ಷಿಕ ಸಮ್ಮೇಳನ 1904ರಲ್ಲಿ ಅರವಿಪ್ಪುರದಲ್ಲಿ ನಡೆದಾಗ ಡಾ.ಪಲ್ಪು ತಳ ಸಮುದಾಯಗಳ ಎಲ್ಲಾ ಸ್ತ್ರೀ ಪುರುಷರು ವಿದ್ಯಾವಂತರಾಗುವುದೇ ಶೂದ್ರ ಸಮುದಾಯಗಳ ಪ್ರಗತಿಗೆ ಇರುವ ಏಕೈಕ ಮಾರ್ಗ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಪಲ್ಪು ಅವರ ಒತ್ತಾಸೆಯಂತೆ ಪ್ರತಿ ವಾರ್ಷಿಕ ಸಮ್ಮೇಳನದಲ್ಲಿಯೂ ಪ್ರತ್ಯೇಕ ಮಹಿಳಾ ಸಮ್ಮೇಳನಗಳು ನಡೆಯುವುದಕ್ಕೆ ಏರ್ಪಾಟಾಯಿತು. ಸಂಸ್ಥಾಪಕ ಉಪಾಧ್ಯಕ್ಷರಾಗಿದ್ದ ಅವರು ಎರಡನೆಯ ವರ್ಷದಲ್ಲಿಯೇ ಉಪಾಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಟ್ಟರು. ಸಂಘಟನೆಯಲ್ಲಿ ಯಾವುದೇ ಸ್ಥಾನವನ್ನು ಬಯಸದೆ ಸಕ್ರಿಯವಾದ ಕಾರ್ಯಕರ್ತನಾಗಿ ಸೇವೆ ಸಲ್ಲಿಸುವುದಾಗಿ ಪ್ರಕಟಿಸಿ ನಿಜವಾದ ಸಮಾಜಸೇವಾ ಕಾರ್ಯಕರ್ತರಿಗೆ ಮಾದರಿಯನ್ನು ಒದಗಿಸಿದರು.

ನಾರಾಯಣಗುರುಗಳು, ಡಾ.ಪಲ್ಪು ಅವರಂತೆ ಶಿಕ್ಷಣವೇ ಶೂದ್ರ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಮತ್ತು ಸರ್ಕಾರಿ ಸೇವೆಗಳಲ್ಲಿ ಅವಕಾಶ ಪಡೆಯುವ ಮಾರ್ಗ ಎಂಬ ಅರಿವು ಆ ದಿನಗಳಲ್ಲಿ ವೀರಶೈವರು, ಒಕ್ಕಲಿಗರು ಮೊದಲಾದ ಸಮುದಾಯಗಳ ಮುಖಂಡರಲ್ಲಿ ಮೂಡಿದ್ದು ದೇಶದ ಪುನರುತ್ಥಾನದ ದೃಷ್ಟಿಯಿಂದ ಮಹತ್ವದ್ದು. ಈ ಬಗೆಯ ಚಿಂತನೆ ಪಾಶ್ಚಾತ್ಯ ಶಿಕ್ಷಣ ಪದ್ಧತಿಯಿಂದ ಮೂಡಿದ್ದರಿಂದ ಮೈಸೂರು ಸಂಸ್ಥಾನದಲ್ಲಿ ಹೆಚ್ಚಿನ ಸಾಂಸ್ಥಿಕ ಚಟುವಟಿಕೆಗಳು ಪ್ರಾರಂಭವಾದವು. 1903ರಲ್ಲಿ ತಿರುವಾಂಕೂರು ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ತಂದ ‘ಶ್ರೀನಾರಾಯಣ ಧರ್ಮ ಪರಿಪಾಲನಾ ಯೋಗಂ’(ಎಸ್.ಎನ್.ಡಿ.ಪಿ) ಸ್ವರೂಪದಲ್ಲಿ ಅಲ್ಲದಿದ್ದರೂ ತಮ್ಮ ತಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ಸಂಘಟನೆಗಳಿಗೆ ಪ್ರಯತ್ನಗಳಾದವು. 1905ರಲ್ಲಿ ಬೆಂಗಳೂರಿನಲ್ಲಿ ‘ಮೈಸೂರು ಲಿಂಗಾಯತ ವಿದ್ಯಾ ಶ್ರೇಯೋಭಿವೃದ್ಧಿ ಸಂಘ’ವು ವೀರಶೈವ– ಲಿಂಗಾಯತ ಸಮುದಾಯದ

ಗಣ್ಯ ಮುಖಂಡರಿಂದ ಸ್ಥಾಪನೆಯಾಯಿತು. ಒಂದು ವರ್ಷದ ನಂತರ 1906ರ ಏಪ್ರಿಲ್ ತಿಂಗಳಲ್ಲಿ 'ಒಕ್ಕಲಿಗರ ಸಂಘ'ಕ್ಕೆ ಚಾಲನೆಯಾಯಿತು. ಸಂಸ್ಥಾನದ ಈ ಎರಡು ಪ್ರಬಲ ಸಮುದಾಯಗಳಲ್ಲಿ ಮೂಡಿದ ಜಾಗೃತಿಯನ್ನು ಕಂಡ ಇತರ ಹಿಂದುಳಿದ ಸಮುದಾಯಗಳಲ್ಲಿ ದೇವಾಂಗ ಸಮುದಾಯವೂ ಸಂಘಟನೆಗೆ ಮುಂದಾಯಿತು. ಆದರೆ, ಪಲ್ಪು ಅವರು ಮೈಸೂರು ಸಂಸ್ಥಾನದಲ್ಲಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಅವರ ಪೂರ್ವಜರ ಕುಲಕಸುಬನ್ನು ಅವಲಂಬಿಸಿದ್ದ ಈಡಿಗ ಸಮುದಾಯ ಮೂರ್ತೆದಾರಿಕೆ ಮತ್ತು ವಾಣಿಜ್ಯ ವಹಿವಾಟಿನಲ್ಲಿ ತೊಡಗಿದ್ದರೂ ಶೈಕ್ಷಣಿಕ ಉದ್ದೇಶಕ್ಕಾಗಿ ಸಮುದಾಯದ ಸಂಘಟನೆಯನ್ನು ಆರಂಭಿಸಿದ್ದು ಪಲ್ಪು ಅವರು ನಿವೃತ್ತರಾಗಿ ಕೇರಳಕ್ಕೆ ಹೋದ ಇಪ್ಪತ್ತೈದು ವರ್ಷಗಳ ನಂತರ. ಶೇಂದಿ ಇಳಿಸುವ ಕಸುಬನ್ನು ಅವಲಂಬಿಸಿದ್ದು ಸಂಸ್ಥಾನದ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದ್ದ ಇಪ್ಪತ್ತಾರು ಜಾತಿಗಳವರನ್ನು ಈಡಿಗರೆಂದು ಸಂಘಟಿಸಲು ಸಂಸ್ಥೆಯನ್ನು ಕಟ್ಟುವ ಪ್ರಯತ್ನ 1944ರಲ್ಲಿ ಪ್ರಾರಂಭವಾಯಿತು. ಈಡಿಗರ ಮುಖಂಡರಾಗಿದ್ದ ರಾವ್ ಸಾಹೇಬ್ ಕಣೇಕಲ್ ನೆಟ್ಟಕಲ್ಲಪ್ಪ, ಅವರ ಪುತ್ರರಾದ ಕೆ.ಎನ್. ಗುರುಸ್ವಾಮಿ, ಉದ್ಯಮಿ ಕೆ.ವೆಂಕಟಸ್ವಾಮಿ ಮೊದಲಾದವರು ಇಪ್ಪತ್ತನೆಯ ಪ್ರಾರಂಭದ ಎರಡು ದಶಕಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಅಬ್ಕಾರಿ ಗುತ್ತಿಗೆದಾರರಾಗಿ ಅಭಿವೃದ್ಧಿ ಹೊಂದಿದ್ದರೂ, ಆ ದಿನಗಳಲ್ಲಿ ಸಂಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದ ಡಾ.ಪಲ್ಪು ಅವರ ಸಂಪರ್ಕಕ್ಕೆ ಬಂದಿದ್ದರೇ ಎಂಬುದಕ್ಕೆ ದಾಖಲೆಗಳು ಸಿಗುತ್ತಿಲ್ಲ. ತಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವುದಕ್ಕೆ ಆಸಕ್ತರಾಗಿದ್ದ ಈ ಮುಖಂಡರು ಪಲ್ಪು ಅವರು ಇಲ್ಲಿ ಅಧಿಕಾರದಲ್ಲಿ ಇದ್ದಾಗ ಸಂಪರ್ಕಕ್ಕೆ ಬಂದಿದ್ದರೆ, ಅಲ್ಲಿ ಕೇರಳದಲ್ಲಿ ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿಯೇ ಉಂಟಾಗಿದ್ದ ಜಾಗೃತಿ ಇಲ್ಲಿ ಮೈಸೂರಿನಲ್ಲಿಯೂ ಪ್ರಾರಂಭವಾಗುತ್ತಿತ್ತು. ಹಿಂದುಳಿದ ಸಮುದಾಯಗಳ ನೂರಾರು ಯುವಕ ಯುವತಿಯರು ಶಿಕ್ಷಣ ಪಡೆದು ಸಂಸ್ಥಾನದಲ್ಲಿ ಉದ್ಯೋಗ ಪಡೆದು ನಾಡಿನ ಅಭಿವೃದ್ಧಿಯಲ್ಲಿ ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಿತ್ತು.

**ತುಳುನಾಡಿನಲ್ಲಿ ಗುರುಗಳು**

ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ತಿರುವಾಂಕೂರು, ಕೊಚ್ಚಿ ಮತ್ತು ಮಲಬಾರ್ ಪ್ರಾಂತ್ಯಗಳಲ್ಲಿ ನಾರಾಯಣಗುರು ಅವರ ಅನುಯಾಯಿಗಳಾದ ಡಾ. ಪಲ್ಪು, ಕುಮಾರನ್ ಆಶಾನ್ ಮೊದಲಾದವರಿದ್ದ ಸಂಘಟನೆ ಎಸ್ಎನ್‌ಡಿಪಿಯಿಂದ ಆಗುತ್ತಿದ್ದ ಸಾಮಾಜಿಕ ಜಾಗೃತಿ ನೆರೆಯಲ್ಲಿದ್ದ ಕರ್ನಾಟಕದ ತುಳುನಾಡಿಗೂ ವಿಸ್ತರಿಸಲು ಹೆಚ್ಚು ಸಮಯ ಹಿಡಿಯಲಿಲ್ಲ. ಅದಕ್ಕೆ ಸಂಬಂಧಿಸಿದ ವಿದ್ಯಮಾನ ಚಾರಿತ್ರಿಕ ಮಹತ್ವ ಪಡೆದುಕೊಂಡಿದೆ.

ಮಂಗಳೂರಿನ ಹೊಯ್ಗೆ ಬಜಾರಿನಲ್ಲಿ ಬಿಲ್ಲವ ಕುಟುಂಬದಲ್ಲಿ 1865ರಲ್ಲಿ ಕೊರಗಪ್ಪ ಜನಿಸಿದರು. ಸಿ.ಅಬ್ದುಲ್ ರಹಿಮಾನ್ ಎಂಬುವರ ಜೊತೆ ಪಾಲುದಾರಿಕೆಯಲ್ಲಿ 'ಸಿ ಅಬ್ದುಲ್ ರಹಿಮಾನ್ ಮತ್ತು ಕೊರಗಪ್ಪ ಕಂಪನಿ' ಎಂಬ ವ್ಯಾಪಾರಿ ಸಂಸ್ಥೆಯನ್ನು ಪ್ರಾರಂಭಿಸಿದರು. ಒಣಮೀನಿನ ರಫ್ತು ವಹಿವಾಟಿನಲ್ಲಿ ಆ ಸಂಸ್ಥೆ ಅಗ್ರಸ್ಥಾನ ಗಳಿಸಿತ್ತು. ಕೊಲಂಬಿಯಾ, ಸಿಂಗಪುರ, ಅರೇಬಿಯಾ ಮೊದಲಾದ ದೇಶಗಳಿಗೆ ಒಣಮೀನಿನ ರಫ್ತಿನಲ್ಲಿ ಹೆಸರು ಮಾಡಿತ್ತು ಸಂಸ್ಥೆ. ಬ್ಯಾರಿಯೊಂದಿಗೆ ಬಿಲ್ಲವರು ಪಾಲುದಾರಿಕೆಯಲ್ಲಿ ನಡೆಸುತ್ತಿದ್ದ ವ್ಯಾಪಾರ ವಹಿವಾಟು ಅಂದಿನ ಸಾಮಾಜಿಕ ಸನ್ನಿವೇಶದಲ್ಲಿ ಸಾಮರಸ್ಯದಿಂದ ಕೂಡಿತ್ತು. ಆದರೆ ಆ ದಿನಗಳಲ್ಲಿ

ಬಿಲ್ಲವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಾಲಯಗಳಲ್ಲಿ ಪ್ರವೇಶವಿರಲಿಲ್ಲ. ಅವರನ್ನು ಮೇಲು ಜಾತಿಯವರು ಮುಟ್ಟಿಸಿಕೊಳ್ಳುತ್ತಲೂ ಇರಲಿಲ್ಲ.

ಶ್ರೀಮಂತರಾಗಿದ್ದ ಕೊರಗಪ್ಪನವರು ಒಮ್ಮೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣಕ್ಕೆ ವ್ಯಾಪಾರ ನಿಮಿತ್ತ ಭೇಟಿ ನೀಡಿದರು. ಮಂಗಳೂರಿನ ದೇವಾಲಯಗಳಲ್ಲಿ ಪ್ರವೇಶ ಇಲ್ಲದ ಕಾರಣ ಅಲ್ಲಿನ ಪ್ರಸಿದ್ಧ ಮಹಾಬಲೇಶ್ವರ ದೇವಾಲಯದಲ್ಲಿ ದೇವರ ದರ್ಶನಕ್ಕೆ ಮನಸ್ಸು ಮಾಡಿದರು. ಅವರ ಶ್ರೀಮಂತ ವೇಷಭೂಷಣಗಳನ್ನು ನೋಡಿದ ಅರ್ಚಕರು ಅವರನ್ನು ದೇವಾಲಯದ ಒಳಗೆ ಗೌರವಪೂರ್ವಕವಾಗಿ ಬರಮಾಡಿಕೊಂಡರು. ಪೂಜೆ ಮಾಡುವ ಮೊದಲು 'ಸಂಕಲ್ಪ'ಕ್ಕಾಗಿ ಗೋತ್ರದ ವಿವರಗಳನ್ನು ಕೇಳಿದಾಗ ಕೊರಗಪ್ಪನವರು ಬಿಲ್ಲವರೆಂದು ಗೊತ್ತಾಗಿ ಅವರನ್ನು ದೇವಾಲಯದಿಂದ ನಿರ್ದಾಕ್ಷಿಣ್ಯವಾಗಿ ಹೊರಕ್ಕೆ ಕಳಿಸಿದರು. ಅಷ್ಟೇ ಅಲ್ಲ, ಶೂದ್ರರಾಗಿದ್ದ ಅವರು ದೇವಾಲಯ ಪ್ರವೇಶಿಸಿ ಅದಕ್ಕೆ ಮೈಲಿಗೆ ಉಂಟು ಮಾಡಿದರೆಂದು ಅದರ ಶುದ್ಧೀಕರಣ ಕಾರ್ಯಕ್ಕೆ ದೊಡ್ಡ ಮೊತ್ತದ ದಂಡವನ್ನೂ ವಿಧಿಸಿ ಬಲವಂತವಾಗಿ ವಸೂಲು ಮಾಡಿದರು. ಇದರಿಂದ ಕೊರಗಪ್ಪನವರು ತುಂಬ ಅಪಮಾನಿತರಾಗಿ ವಾಪಸಾದರು.

ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ವಿಯಾಗಿದ್ದು ಸ್ಥಿತಿವಂತರಾಗಿದ್ದರೂ ಸಾಮಾಜಿಕವಾಗಿ ಕಡೆಗಣನೆಗೆ ಒಳಗಾಗಿ ಅಪಮಾನಿತರಾಗಿದ್ದ ಕೊರಗಪ್ಪನವರು ತಮ್ಮಂತೆಯೇ ನೊಂದಿದ್ದ ಶೆಡ್ಡೆ ಸೋಮಯ್ಯ ಮೇಸ್ತ್ರಿ, ಐತಪ್ಪ ಪೂಜಾರಿ, ಅಮ್ಮಣ್ಣ ಮೇಸ್ತ್ರಿ, ಕಂಟ್ರಾಕ್ಟರ್ ದೂಮಪ್ಪ ಮೊದಲಾದ ಬಿಲ್ಲವ ಮುಖಂಡರೊಂದಿಗೆ ತಮ್ಮ ನೋವನ್ನು ಹಂಚಿಕೊಂಡರು. ಆ ಸಂದರ್ಭದಲ್ಲಿ ನೆರೆಯ ತಿರುವಾಂಕೂರು ಸಂಸ್ಥಾನದಲ್ಲಿ ಈಳವ ಸಮುದಾಯಕ್ಕೆ ಸೇರಿದ ಧಾರ್ಮಿಕ ಮುಖಂಡರಾಗಿ ನಾರಾಯಣಗುರುಗಳು ತಮ್ಮವರಿಗಾಗಿ ದೇವಾಲಯಗಳನ್ನು ಸ್ಥಾಪಿಸುತ್ತಿರುವ ಸುದ್ದಿ ಪ್ರಚಾರದಲ್ಲಿತ್ತು. ಎಲ್ಲ ಮುಖಂಡರೂ ತಿರುವಾಂಕೂರು ಸಂಸ್ಥಾನಕ್ಕೆ ಹೋಗಿ ನಾರಾಯಣಗುರುಗಳನ್ನು ಭೇಟಿ ಮಾಡಿದರು. ತಮಗಾಗಿ ಮಂಗಳೂರಿನಲ್ಲಿ ದೇವಾಲಯವೊಂದನ್ನು ಸ್ಥಾಪಿಸುವಂತೆ ಕೋರಿದರು. ಗುರುಗಳು 1908ರಲ್ಲಿ ಮಂಗಳೂರಿಗೆ ಆಗಮಿಸಿದರು. ಬೊಕ್ಕಪಟ್ಣ, ಸುಲ್ತಾನ್ ಬತ್ತೇರಿ ಪ್ರದೇಶಕ್ಕೆ ಮಧ್ಯದಲ್ಲಿ ವಿಶಾಲವಾಗಿದ್ದ ಜಾಗವನ್ನು ಗುರುಗಳು ನೋಡಿದರು. ಅದು ಟಿಪ್ಪೂ ಸುಲ್ತಾನನ ಸೇನೆ ಬೀಡು ಬಿಟ್ಟ ಸಂದರ್ಭದಲ್ಲಿ ಕುದುರೆಗಳಿಗೆ ಮೇವಿಗಾಗಿ ಬಿಟ್ಟ ಜಾಗ 'ಕುದುರೆಹಳ್ಳಿ'ಯಾಗಿ ಹೆಸರಾಗಿ ಕ್ರಮೇಣ ಕುದ್ರೋಳಿಯೆಂದು ಬಳಕೆಗೆ ಬಂದಿತ್ತು. ಗುರುಗಳು ಅಲ್ಲಿ ಒಂದು ಬಾವಿಯನ್ನು ತೆಗೆಸಿ ಅದು ದೇವಾಲಯಕ್ಕೆ ಪ್ರಶಸ್ತ ಸ್ಥಳವೆಂದು ಗುರುತಿಸಿದರು. ಗರ್ಭಗುಡಿ ಮತ್ತು ತೀರ್ಥಬಾವಿಯ ಸ್ಥಳವನ್ನು ನಿರ್ದೇಶಿಸಿ ದೇವಾಲಯವನ್ನು ಕಟ್ಟಿಕೊಳ್ಳಲು ಸೂಚಿಸಿದರು. ಕೊರಗಪ್ಪನವರ ನೇತೃತ್ವದಲ್ಲಿ ಮುಳಿಹುಲ್ಲಿನ ಚಾವಣಿಯ ಸಣ್ಣ ದೇವಾಲಯ ನಾಲ್ಕು ವರ್ಷಗಳಲ್ಲಿ ನಿರ್ಮಾಣವಾಯಿತು. ನಾರಾಯಣಗುರುಗಳು ಮಂಗಳೂರಿಗೆ ಮತ್ತೆ ಬಂದು 1912ರ ಡಿಸೆಂಬರ್ 12 ರಂದು ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿದರು. ಮಂಗಳೂರಿನ ಕದ್ರಿ ಮಂಜುನಾಥ ದೇವಾಲಯದ ಸಮೀಪದಲ್ಲಿ ವಾಸವಿದ್ದ ಬಿಲ್ಲವರೊಬ್ಬರ ಮಗನನ್ನು ಗುರುತಿಸಿ ಅವನಿಗೆ 'ಕೃಷ್ಣ ಶಾಂತಿ' ಎಂದು ನಾಮಕರಣ ಮಾಡಿ ಪೂಜಾ ವಿಧಾನಗಳನ್ನು ಕಲಿಸಿ ದೇವಾಲಯದ ಪ್ರಥಮ ಅರ್ಚಕರನ್ನಾಗಿ ನೇಮಿಸಿದರು. ಕೊರಗಪ್ಪನವರು ಹಿಂದೆ ಗೋಕರ್ಣದಲ್ಲಿ ತಮಗಾಗಿದ್ದ ಅಪಮಾನವನ್ನು ನೆನಪಿಸಿಕೊಂಡು ಮಂಗಳೂರಿನ ಕುದ್ರೋಳಿಯಲ್ಲಿ ತಮ್ಮವರಿಗಾಗಿ ನಿರ್ಮಿಸಿ, ನಾರಾಯಣಗುರುಗಳು ಪ್ರತಿಷ್ಠಾಪಿಸಿದ ದೇವಾಲಯಕ್ಕೆ ಗೋಕರ್ಣನಾಥೇಶ್ವರನೆಂದು

ಹೆಸರಿಟ್ಟರು. 'ಇದು ತುಳುನಾಡಿನ ಎಲ್ಲ ಶೂದ್ರ ಸಮುದಾಯಕ್ಕೂ ಮುಕ್ತವಾಗಿ ತೆರೆದುಕೊಂಡ ದೇವಾಲಯವಾಯಿತು' ಎಂದು 'ತುಳುನಾಡಿನ ಬಿಲ್ಲವರು' ಕೃತಿಯಲ್ಲಿ ರಮಾನಾಥ್ ಕೋಟ್ಯಾನ್ ಬರೆದಿದ್ದಾರೆ.

ಕುದ್ರೋಳಿಯ ಶ್ರೀಗೋಕರ್ಣನಾಥ ದೇವಾಲಯ ನಂತರದ ವರ್ಷಗಳಲ್ಲಿ ಕರಾವಳಿಯಲ್ಲಿ ಮಾತ್ರವಲ್ಲದೆ, ದೇಶದಾದ್ಯಂತ ಪ್ರಖ್ಯಾತಿ ಪಡೆಯುವ ಸುಧಾರಣೆಗಳಿಗೆ ವೇದಿಕೆಯಾಯಿತು. 1991ರಲ್ಲಿ ಅದರ ನವೀಕರಣದ ಸಾರಥ್ಯ ವಹಿಸಿದ ದೇಶದ ಹಿರಿಯ ರಾಜಕೀಯ ಮುಖಂಡ ಬಿ. ಜನಾರ್ದನ ಪೂಜಾರಿ ಅವರು ಅದಕ್ಕೆ ಆಧುನಿಕ ಸೌಲಭ್ಯಗಳನ್ನು ಒದಗಿಸಿದರು. ನಾರಾಯಣಗುರುಗಳ ಆದರ್ಶವನ್ನು ಅನುಸರಿಸುತ್ತಲೇ ಮಹಿಳೆಯರನ್ನು ಕುರಿತ ಸಾಂಪ್ರದಾಯಿಕ ಅವಗಣನೆಗಳನ್ನು ನಿವಾರಿಸಲು ಕ್ರಮ ಕೈಗೊಂಡರು. ವಿಧವೆಯರನ್ನು ಆಹ್ವಾನಿಸಿ ಅವರಿಗೆ ಮಂಗಳದ್ರವ್ಯಗಳ ಕೊಡುಗೆ ನೀಡಿ ಅವರಿಗೆ ಅಂಟಿಸಿದ್ದ ಅಮಂಗಳದ ಛಾಯೆಯನ್ನು ನಿರ್ಲಕ್ಷಿಸಿದರು. ಪೂಜೆಯ ವಿಧಾನಗಳಲ್ಲಿ ಪರಿಶ್ರಮವಿದ್ದ ಪರಿಶಿಷ್ಟ ವರ್ಗಕ್ಕೆ ಸೇರಿದ ಹಿರಿಯ ವಿಧವೆಯೊಬ್ಬರನ್ನು ಆಹ್ವಾನಿಸಿ ಅವರಿಗೆ ಅರ್ಚಕರ ಹುದ್ದೆಯನ್ನು ನೀಡಿದರು. ದೇಶದ ಕೆಲವು ದೇವಾಲಯಗಳಿಗೆ ಮಹಿಳೆಯರ ಪ್ರವೇಶಕ್ಕೆ ಅಮಾನವೀಯ ಎನ್ನಿಸಬಹುದಾದ ಅನೇಕ ಬಗೆಯ ನಿರ್ಬಂಧಗಳು ಇಂದಿಗೂ ಮುಂದುವರಿದಿರುವ ಇಂದಿನ ದಿನಗಳಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ವಿಧವೆಯರನ್ನು ದೇವಾಲಯದ ಅರ್ಚಕರನ್ನಾಗಿ ನೇಮಿಸುವ ಕ್ರಾಂತಿಕಾರಕ ಹೆಜ್ಜೆಯನ್ನು ಜನಾರ್ದನ ಪೂಜಾರಿಯವರು ಕೈಗೊಂಡಿರುವುದು ಚರಿತ್ರಾರ್ಹ ಸಂಗತಿ.

ಕೇರಳದ ಆಧುನಿಕ ಸಮಾಜದ ಪುರೋಭಿವೃದ್ಧಿಗೆ ದೃಢವಾದ ಅಸ್ತಿಭಾರವನ್ನು ಹಾಕಿದ್ದ ಡಾ. ಪದ್ಮನಾಭನ್ ಪಲ್ಪು ನಿವೃತ್ತಿಯ ನಂತರವೂ ಸಮಾಜದ ಅಭಿವೃದ್ಧಿಗಾಗಿ ಹಲವು ಹೊಣೆಗಳನ್ನು ನಿರ್ವಹಿಸುತ್ತಿದ್ದು, 1950ರ ಜನವರಿ 25 ರಂದು (ಭಾರತ ಸಂವಿಧಾನ ಅಂಗೀಕಾರದ ಒಂದು ದಿನ ಮೊದಲು) ಇಹಲೋಕ ಯಾತ್ರೆಯನ್ನು ಮುಗಿಸಿದರು.

ಮೂವರು ಪುತ್ರರು ಮತ್ತು ಇಬ್ಬರು ಹೆಣ್ಣುಮಕ್ಕಳ ತಂದೆಯಾಗಿದ್ದ ಪಲ್ಪು ತಮ್ಮ ಗಳಿಕೆಯನ್ನು ಮಕ್ಕಳಿಗೆ ಹಂಚಲಿಲ್ಲ. ಎಲ್ಲವನ್ನೂ ಸಮಾಜದ ಒಳಿತಿಗಾಗಿಯೇ ಮೀಸಲಿಟ್ಟರು. ಅವರ ಉಯಿಲಿನಲ್ಲಿಯೂ ಅದನ್ನೇ ಸ್ಪಷ್ಟಪಡಿಸಿದ್ದರು.

**ಪಲ್ಪು ಅವರ ಉಯಿಲು**

'ನಾವೆಲ್ಲರೂ ಸಮಾಜಸೇವಕರು. ಆದ್ದರಿಂದ ಸಮಾಜದ ಒಳಿತಿಗಾಗಿ ಜೀವಿಸಲು ಬದ್ಧರಾಗಿರುವವರು. ನಾನು ಸಮಾಜದ ಒಳಿತಿಗಾಗಿ ನನ್ನ ಎಲ್ಲಾ ಸೊತ್ತುಗಳನ್ನು, ಮುಂದೆ ಸಂಪಾದಿಸುವ ಸಂಪಾದನೆಗಳನ್ನೆಲ್ಲ, ನನ್ನ ಹೆಂಡತಿ ಮಕ್ಕಳಿಗೆ ಸಿಗಬೇಕಾದ ಸೊತ್ತುಗಳೆಲ್ಲ ಸಮಾಜದ ಒಳಿತಿಗಾಗಿ ಮೀಸಲಿಡುತ್ತಿದ್ದೇನೆ..'

* * *

**ಡಾ.ಪದ್ಮನಾಭ ಪಲ್ಪು ಅವರ ಜೀವನದ ಪ್ರಮುಖ ಘಟನೆಗಳು**

ಜನನ: 1863 ನವೆಂಬರ್ 2

ತಂದೆ: ಟಿ.ಪಿ.ಪಲ್ಪು (ಮದಿಯಕುಟ್ಟಿ ಭಗವತಿ)

ತಾಯಿ: ಪಪ್ಪಮ್ಮ (ಟೊಪ್ಪಿಲ್ ಮಾತಾ ಪೆರುಮಾಳ್)

1883– ಮೆಟ್ರಿಕ್ಯುಲೇಶನ್ ಉತ್ತೀರ್ಣ

1885– ಮದ್ರಾಸ್ ಮೆಡಿಕಲ್ ಕಾಲೇಜು ಸೇರ್ಪಡೆ

1889 –ಎಲ್ಎಂ ಎಸ್ ಪದವಿ (ಋಛಿಜಟಿಛಿಚಿಣಜ ಎಟಿ ಟಜಜುಛಿಟಿಜ ಚಿಟಿಜ, ಣಡಿಂಜಡಿಥಿ)

1890– ತಿರುವಾಂಕೂರು ಸಂಸ್ಥಾನದಲ್ಲಿ ವೈದ್ಯಕೀಯ ಇಲಾಖೆಯಲ್ಲಿ ಉದ್ಯೋಗ ನಿರಾಕರಣೆ (ಬೇರೆ ಇಲಾಖೆಯಲ್ಲಿ ಗುಮಾಸ್ತೆಯ ಹುದ್ದೆ ನೀಡುವುದಾಗಿ ಭರವಸೆ, ವೇತನ–ರೂ.5). ಮದ್ರಾಸ್ ಸರ್ಕಾರದ ಸ್ಪೆಷಲ್ ವ್ಯಾಕ್ಸಿನೇಶನ್ ಇಲಾಖೆಯಲ್ಲಿ ವ್ಯಾಕ್ಸಿನ್ ಸೂಪರಿಂಟೆಂಡೆಂಟ್ ಹುದ್ದೆಗೆ ನೇಮಕ (ವೇತನ ರೂ.70). ಈ ಇಲಾಖೆ ಬೆಂಗಳೂರಿಗೆ ಸ್ಥಳಾಂತರವಾದಾಗ ಸೀನಿಯರ್ ಸೂಪರಿಂಟೆಂಡೆಂಟ್ ಹುದ್ದೆಗೆ ಬಡ್ತಿ

1891– ಮೈಸೂರು ಸಂಸ್ಥಾನದ ವ್ಯಾಕ್ಸಿನೇಷನ್ ಇಲಾಖೆ ಮುಖ್ಯಸ್ಥರಾಗಿ ನೇಮಕ (ವೇತನ ರೂ.100)

1892– ವಿವೇಕಾನಂದರ ಭೇಟಿ, ಅವರಿಗೆ ಮನೆಯಲ್ಲಿ ಆತಿಥ್ಯ

1893– ತಿರುವಾಂಕೂರು ಸಂಸ್ಥಾನದಲ್ಲಿ 'ಈಳವ ಮಹಾಜನಸಂಘ' ಸ್ಥಾಪನೆ, ಅರಸರಿಗೆ ಈಳವರ ಸಂಕಟ ಅರ್ಜಿ ಸಲ್ಲಿಕೆ. ಅಹವಾಲು ಅರ್ಜಿಗೆ 13,176 ಮಂದಿ ಈಳವರ ಸಹಿ ಸಂಗ್ರಹ. ಇದೇ ವರ್ಷ ಅರವಿಪ್ಪುರ ಕ್ಷೇತ್ರಕ್ಕೆ ಪ್ರವಾಸ ಮಾಡಿ ನಾರಾಯಣಗುರುಗಳ ಭೇಟಿ

1895– ನಾರಾಯಣಗುರುಗಳು ಮತ್ತು ಕುಮಾರನ್ ಆಶಾನ್ ಬೆಂಗಳೂರಿನ ಡಾ. ಪಲ್ಪು ನಿವಾಸಕ್ಕೆ ಭೇಟಿ, ಅಲ್ಲಿ ವಾಸ್ತವ್ಯ. ಈ ಸಂದರ್ಭದಲ್ಲಿ ಕುಮಾರನ್ ಆಶಾನ್ ಶಿಕ್ಷಣದ ಜವಾಬ್ದಾರಿಯನ್ನು ಸ್ವೀಕರಿಸಿ ಅವರನ್ನು ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗೆ ಸೇರಿಸಿದ್ದು.

1898– ಬೆಂಗಳೂರಿನಲ್ಲಿ ಪ್ಲೇಗ್ ಹಾವಳಿ.

1898–ಮೈಸೂರು ಸಂಸ್ಥಾನದಿಂದ ಉನ್ನತ ಅಧ್ಯಯನಕ್ಕೆ ನಿಯೋಜಿತರಾಗಿದ್ದರೂ ಪ್ಲೇಗ್ ಹಾವಳಿ ನಿರ್ವಹಣೆಗೆ ನಿಂತು ಬೆಂಗಳೂರು, ಕಾಮಸಮುದ್ರದಲ್ಲಿ ಕೆಲಸ.

1899– ಉನ್ನತ ಅಧ್ಯಯನಕ್ಕೆ ಇಂಗ್ಲೆಂಡಿಗೆ ಪ್ರಯಾಣ. ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಒಂದೂವರೆ ವರ್ಷ ಅಧ್ಯಯನ ನಡೆಸಿ ಸಿಪಿಎಚ್., ಎಫ್ ಆರ್ ಪಿ ಪದವಿ ಗಳಿಸಿ ಪ್ಯಾರಿಸ್, ರೋಮ್, ಜರ್ಮನಿ ದೇಶಗಳ ಸಂದರ್ಶನ. 1992– ಮೈಸೂರಿಗೆ ಆಗಮನ, ಬೆಂಗಳೂರು ನಗರದ ಆರೋಗ್ಯಾಧಿಕಾರಿಯಾಗಿ ನೇಮಕ(ಬೆಂಗಳೂರು ಮುನಿಸಿಪಾಲಿಟಿಗೆ ಪದನಿಮಿತ್ತ ಉಪಾಧ್ಯಕ್ಷ).

1903– ರಜೆ ಪಡೆದು ಅರವಿಪ್ಪುರ ಕ್ಷೇತ್ರಕ್ಕೆ ಭೇಟಿ, ಅಲ್ಲಿ 'ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ' (ಎಸ್ಎನ್‌ಡಿಪಿ) ಸ್ವಯಂಸೇವಾ ಸಂಘಟನೆಯ ಸ್ಥಾಪನೆಗೆ ಪ್ರೇರಣೆ, ಗೌರವದ ಉಪಾಧ್ಯಕ್ಷ ಸ್ಥಾನಕ್ಕೆ ನಾಮಕರಣ

1905– ಮೈಸೂರು ಸಂಸ್ಥಾನದ ಸ್ಯಾನಿಟರಿ ಕಮೀಷನರ್ ಗೆ ಆಪ್ತಕಾರ್ಯದರ್ಶಿಯಾಗಿ ನೇಮಕ.

1907–ಸ್ಯಾನಿಟರಿ ಕಮೀಷನರ್ ಹುದ್ದೆಗೆ ನೇಮಕ (ವೇತನ ರೂ.900)

1911– (ಏಪ್ರಿಲ್ 29) ಶಿವಮೊಗ್ಗ ಜಿಲ್ಲಾ ವೈದ್ಯಾಧಿಕಾರಿಯಾಗಿ ವರ್ಗ.

1915– ಬೆಂಗಳೂರು ಆರೋಗ್ಯಾಧಿಕಾರಿ, ಬೆಂಗಳೂರು ಸೆಂಟ್ರಲ್ ಜೈಲಿನ ಪ್ರಭಾರಿ ಅಧೀಕ್ಷಕ.

1917– ಬರೋಡ ಮಹಾರಾಜರಿಗೆ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಸಲಹೆಗಾರರಾಗಿ ನಿಯೋಜನೆ (ವೇತನ ರೂ.2000)
1919ರಲ್ಲಿ ನಿಯೋಜನೆಯಿಂದ ವಾಪಸು. ಸಿಡುಬು ನಿವಾರಕ ಲಸಿಕೆ ವಿಭಾಗದ ನಿರ್ದೇಶಕ ಹುದ್ದೆಗೆ ನೇಮಕ
1921– ಅದೇ ಹುದ್ದೆಯಲ್ಲಿ ನಿವೃತ್ತಿ. ಕೇರಳಕ್ಕೆ ವಾಪಸಾಗಿ ಕೊಚ್ಚಿ, ಎರ್ನಾಕುಲಂ, ಅಲುವದಲ್ಲಿ ಕೆಲವು ಸಮಯ ವಾಸ್ತವ್ಯ. ಕೊನೆಯಲ್ಲಿ ನಂದನಕೋಡು ಎಂಬಲ್ಲಿ ಮನೆಯೊಂದನ್ನು ಕೊಂಡು ಅಲ್ಲಿ ನೆಲೆಸಿದರು. ತಾವು ಹುಟ್ಟುಹಾಕಿದ ಎಸ್‌ಎನ್‌ಡಿಪಿಯ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡು, ಗುರುಗಳ ಮಹಾಪ್ರಸ್ಥಾನದ (1928) ನಂತರವೂ ಮಾರ್ಗದರ್ಶನ ನೀಡುತ್ತಾ ಸಮಾಜದ ಅಭಿವೃದ್ಧಿಯ ನೂರಾರು ಕೆಲಸಗಳಿಗೆ ಪ್ರೇರಕರಾದರು.
1950–(ಜನವರಿ 25) ಸ್ವತಂತ್ರ ಭಾರತ ಗಣರಾಜ್ಯವಾಗುವ ಮುನ್ನಾ ದಿನ ಇಹಲೋಕ ಯಾತ್ರೆಗೆ ವಿರಾಮ.

ಡಾ.ಪಲ್ಪು ಅವರಿಗೆ ಮೂರು ಗಂಡು, ಎರಡು ಹೆಣ್ಣು ಮಕ್ಕಳು. ಹಿರಿಯ ಪುತ್ರ ಗಂಗಾಧರ, ಬಾಲ್ಯದಿಂದ ಆಸ್ತಮಾ ಇದ್ದ ಕಾರಣ ಮದುವೆ ಆಗಲಿಲ್ಲ. ಎರಡನೆಯ ಪುತ್ರ ನಟರಾಜ. ನಾರಾಯಣಗುರು ಅವರ ಆಪ್ತಶಿಷ್ಯರಾಗಿ 'ನಟರಾಜ ಗುರು' ಎಂದೇ ಖ್ಯಾತರಾದರು. ವಿದೇಶಗಳಲ್ಲಿ ಗುರುಗಳ ಅಧ್ಯಯನ ಕೇಂದ್ರಗಳನ್ನು ತೆರೆದು ಅವರ ಸಂದೇಶಗಳನ್ನು ಸಾರುತ್ತಿರುವ ಅಪ್ರತಿಮ ಸಾಧಕ. ಮೂರನೆಯ ಪುತ್ರ ಹರಿಹರ. ಚಿತ್ರ ಕಲಾವಿದ. ಜಪಾನ್, ಚೀನಾ ಮೊದಲಾದ ಕಡೆ ಗುಡು ಕೈಗಾರಿಕೆಯಲ್ಲಿ ಅಧ್ಯಯನ ನಡೆಸಿ ಮತ್ತು ತರಬೇತಿ ಪಡೆದು ಬೆಂಗಳೂರಿನಲ್ಲಿ ಪಿಂಗಾಣಿ ಪಾತ್ರೆಗಳ ಕೈಗಾರಿಕೆ ಘಟಕಗಳನ್ನು ಸ್ಥಾಪಿಸಿದರು. ಜಪಾನಿ ಕನ್ಯೆಯೊಂದಿಗೆ ಮದುವೆ ಆಗಿದ್ದರು. ಹಿರಿಯ ಪುತ್ರಿ ಆನಂದಂ ಮದುವೆ ಆಗಲಿಲ್ಲ. ಎರಡನೆಯ ಪುತ್ರಿ ದಾಕ್ಷಾಯಿಣಿ. ಕೆ.ಎನ್.ಅಚ್ಯುತನ್ ಎಂಬುವರೊಂದಿಗೆ ಮದುವೆಯಾಗಿ ಮುಂಬೈಯಲ್ಲಿ ಬಾಂದ್ರಾದಲ್ಲಿ ನೆಲೆಸಿದ್ದಾರೆ (ಮಾಹಿತಿ: ಬಾಬು ಶಿವಪೂಜಾರಿ ಅವರ 'ಶ್ರೀನಾರಾಯಣಗುರು ವಿಜಯ ದರ್ಶನ, ಪುಟ 232)

* * *

**ಡಾ.ಪಲ್ಪು ಕುರಿತ ಅಧ್ಯಯನಕ್ಕೆ ಪೂರಕ ಕೃತಿಗಳು**

ಡಿವಿಜಿ ಸಮಗ್ರ ಕೃತಿಶ್ರೇಣಿ, ಸಂಪುಟ–1
ಶ್ರೀ ನಾರಾಯಣಗುರು ವಿಜಯದರ್ಶನ, ಲೇ: ಬಾಬು ಶಿವಪೂಜಾರಿ
ಕರ್ನಾಟಕದ ಸಮಗ್ರ ದಲಿತ ಸಾಹಿತ್ಯ ಚರಿತ್ರೆ, ಲೇ: ಎನ್.ಚಿನ್ನಸ್ವಾಮಿ ಸೋಸಲೆ
ಅ ಸೋಶಿಯಲ್ ಹಿಸ್ಟರಿ ಆಫ್ ಇಂಡಿಯಾ: ಲೇ: ಎಸ್.ಎನ್.ಸದಾಶಿವಂ
ತುಳುನಾಡಿನ ಬಿಲ್ಲವರು– ರಮಾನಾಥ್ ಕೋಟ್ಯಾನ್

****

## ಪ್ರತಿಸ್ಪಂದನೆ

ಯಶಸ್ವೀ ಜೀವನಯಾತ್ರೆ

ಇದು ನೆನಪುಗಳ ಮೆರವಣಿಗೆ ಎಂದು ಲೇಖಕರು ಹೇಳಿಕೊಂಡರೂ ಆತ್ಮಕಥನ ಎನ್ನಲಡ್ಡಿಯಿಲ್ಲ. ಹಲವಾರು ಆತ್ಮಕಥನಗಳು ಆತ್ಮವನ್ನು ವಂಚಿಸಿಕೊಂಡು ಸುಳ್ಳೇ ಬರೆದವಾಗಿರುತ್ತವೆ. ತಮ್ಮನ್ನು ತಾವು

ವೈಭವೀಕರಿಸಿಕೊಂಡು, ತುತ್ತೂರಿ ಊದುತ್ತವೆ. ಸತ್ಯವನ್ನು ಬರೆಯಲು ಬೇಕಾದ ಆತ್ಮಸ್ಥೈರ್ಯ ಇರುವುದಿಲ್ಲ. ಅದಕ್ಕೆ ಅಪವಾದವಾಗಿ 'ಮಿತ್ರ ಲಾಭ' ಎಂಬ ಕೃತಿಯು ಲಕ್ಷ್ಮಣ ಕೊಡಸೆಯವರ ಲೇಖನಿಯಿಂದ ಮೂಡಿ ಬಂದಿದೆ, ತಮ್ಮ ಅನುಭವವನ್ನು ಮುಚ್ಚುಮರೆಯಿಲ್ಲದೆಯೇ ಹಂಚಿಕೊಂಡಿದ್ದಾರೆ.

ಆತ್ಮಕಥನವು ಪರಿಪೂರ್ಣ, ಸಂಪೂರ್ಣವಾಗಿರಬೇಕೆಂಬ ನಿಯಮವೇನಿಲ್ಲ. ಆದರೆ ಸಾಮಾನ್ಯ ಓದುಗರು ವ್ಯಕ್ತಿಯೊಬ್ಬನ ಎಲ್ಲಾ ಮಗ್ಗಲುಗಳ ಬೆಳವಣಿಗೆ ಬಗ್ಗೆ ಸಹಜವಾಗಿಯೇ ಕುತೂಹಲಿಗಳಾಗಿರುತ್ತಾರೆ, ಇಲ್ಲಿ ಕೊಡಸೆಯವರು ತಮ್ಮ ವಿದ್ಯಾಭ್ಯಾಸ, ನಂತರ ಕೆಲಸದ ಬೇಟೆ, ನಿರುದ್ಯೋಗದ ಬವಣೆ, ಕೆಲಸ ಪಡೆದುಕೊಂಡು, ತಾವೊಬ್ಬ ಪತ್ರಕರ್ತನಾದ ವಿವರಗಳನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾ ಸಾಗುತ್ತಾರೆ. ಬಾಲ್ಯದಿಂದ ಪತ್ರಕರ್ತನಾಗಿ ಬೆಳೆದದ್ದರ ಹಾದಿಯತ್ತ ಮಾತ್ರ ಗಮನ ಹರಿಸಿ ಮಿಕ್ಕ ವಿವರಗಳತ್ತ ಗಮನ ಹರಿಸದೇ ಹೋದದ್ದರಿಂದ ಇದನ್ನು ನಾನು ಅರ್ಧ ಕಥನ ಎಂದು ಬಳಸಿದೆ. ಈ ಕಥನ ಕ್ರಿಯೆಯಲ್ಲಿ ಪೂರಕ ಘಟನಾವಳಿಗಳು ಕುತೂಹಲ ಹುಟ್ಟಿಸುತ್ತಾ ಓದುಗನ ಆಸಕ್ತಿಯನ್ನು ಕಾಪಿಡುತ್ತವೆ.

ಬಾಲ್ಯದಲ್ಲಿ ಅವರು ಕಂಡ ಮಲೆನಾಡಿನ ಚಿತ್ರಣ, ಹಳ್ಳಿಯ ಸಾಮಾಜಿಕ ಬದುಕು, ಗ್ರಾಮದ ಯಜಮಾನನ ಯಜಮಾನಿಕೆ, ದರ್ಪ, ಜಮೀನ್ದಾರಿ ಪದ್ಧತಿ, ಜೀತದಾಳುಗಳ ಮೇಲೆ ತೋರಿಸುವ ಅಬ್ಬರ, ಅ ಹಂತನ ಚಿತ್ರಣ ಸಹಜವಾಗಿ ಸಶಕ್ತವಾಗಿ ಮೂಡಿಬಂದಿದೆ. ಪ್ರಾದೇಶಿಕ ನುಡಿಗಟ್ಟುಗಳನ್ನು ಸಂರ್ದಭೋಚಿತವಾಗಿ, ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ.

ಮಲೆನಾಡಿನ ಪ್ರಕೃತಿಯ ಸುಂದರ ಸೊಬಗನ್ನು ವರ್ಣಿಸುತ್ತಲೇ, ಅಂದಿನ ಗ್ರಾಮೀಣ ಸಮಾಜದ ಸಾಮಾಜಿಕ, ಕೌಟುಂಬಿಕ ಬದುಕಿನ ವಿವರಗಳನ್ನು ಕುವೆಂಪು ಅವರಂತೆಯೇ ಕಟ್ಟಿ ಕೊಡಲು ಯತ್ನಿಸಿದ್ದಾರೆ, ಹೀಗಾಗಿ ಕೊಡಸೆಯವರ ಬರಹಗಳನ್ನು ಓದುವಾಗ ಕುವೆಂಪು ಕಾದಂಬರಿಗಳು ನೆನಪಾಗುತ್ತವೆ. ಅವರಂತೆ ಕೆಲವು ಸೂಕ್ಷ್ಮಾತಿ ಸೂಕ್ಷ್ಮ ವಿವರಗಳನ್ನು ಅಕ್ಷರ ರೂಪದಲ್ಲಿ ನಾಜೂಕಾಗಿ ಹೆಣೆದಿದ್ದಾರೆ. ಉದಾ: ಹೊರಗಿನಿಂದ ಮನೆಗೆ ಬಂದವರು ತಮ್ಮ ಮೆಟ್ಟನ್ನು ನಾಯಿಗಳಿಂದ ಕಾಪಾಡಲು ಮಾಡಿನ ಜಂತಿಗೆ ಸಿಗಿಸುವುದು ಮತ್ತು ಕಾಲನ್ನು ತೊಳೆದು ಕೊಳ್ಳುವ ವಿವರಗಳೂ ಇವೆ. ಪ್ರಸ್ತುತ ಕೊರೊನ ದೆಸೆಯಿಂದ ಮನೆಯ ಒಳಗೆ ಹೋಗುವ ಮುನ್ನ ಕೈಕಾಲು ತೊಳೆದುಕೊಳ್ಳ ಬೇಕೆಂಬ ವಿಚಾರ ಮುನ್ನೆಲೆಗೆ ಬಂದಿದೆಯಲ್ಲ.

ಅಂದಿನ ಜಮೀನ್ದಾರಿ ಪದ್ಧತಿ, ಆಳು-ಕಾಳು, ಅವರನ್ನು ಜಬರ್ದಸ್ತಿನಿಂದ ನಡೆಸಿಕೊಳ್ಳುವ ಶ್ರೀಮಂತಿಕೆಯ ಅಹಂಮಿಕೆ, ಅಂದಿನ ಐಭೋಗದ ವಸ್ತುಗಳಾದ ಟ್ರಾನ್ಸಿಸ್ಟರ್ ಮತ್ತು ಸೈಕಲ್‌ಗಳ ಚಿತ್ರಣ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ನೆನಪಿಸುತ್ತದೆ, ಹಾಗೆ ಇತಿಹಾಸದ ವಿವರಗಳೂ ಬರುತ್ತವೆ. ಲಾರ್ಡ ರಿಪ್ಪನ್ ಹುಲಿ ಶಿಕಾರಿ ಮಾಡಿದ ನೆನಪಿಗೆ ಆ ಊರಿಗೆ 'ರಿಪ್ಪನ್ ಪೇಟೆ' ಎಂಬ ಹೆಸರು ಬಂದಿತಂತೆ.

ಮಲೆನಾಡಿನ ಭಾಷಾ ಸಂಪತ್ತನ್ನು, ಆಡುನುಡಿಯ ಪದಕೋಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಕೊಡಸೆಯವರಿಗೆ ಸಾಧ್ಯವಾಗಿರುವುದು ಮೂಲತಃ ಅವರು ಸಾಹಿತ್ಯದ ವಿದ್ಯಾರ್ಥಿಯಾಗಿರುವುದು ಮತ್ತು ಅವರ ಸೂಕ್ಷ್ಮ ಸಂವೇದನೆ. ಅದರಲ್ಲೂ ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ ಪದಗಳು, "ಹ್ವಾಕೆ" "ಇಚ್ಚಾಲು" "ತ್ವಾಟ" "ಹ್ವಾದರ್ಸ" "ಮರದ ಚಂಡೆ"... ಮುಂತಾದವುಗಳು. ನಮ್ಮಮ್ಮನೊಂದಿಗೆ ಮರೆಯಾಗಿ ಹೋಗಿದ್ದ 'ಅರುಗಾಗು' ಪದ ಓದಿ ಖುಷಿಯಾಯಿತು. ಹಾಗೆ ಕೋಳಿ, ಮೊಲ, ಕಾಡುಕೋಳಿ, ಮಂಗಟ್ಟೆ, ಮಿಕ, ಅಳಿಲು, ಹಂದಿ, ಉಡ, ಹಾರುಬಡಿಯ... ಇವುಗಳ ಬೇಟೆ, ಬೇಟೆಯಾಡಿ ದಿಗ್ವಿಜಯದಿಂದ ಅವುಗಳನ್ನು ಹೊತ್ತು

ತಂದು ಶುಚಿಗೊಳಿಸಿ, ಕತ್ತರಿಸಿ, ಅದರಿಂದ ಆಹಾರ ತಯಾರಿಸುವ ವಿಧಾನವನ್ನು ಸವಿವರವಾಗಿ ವರ್ಣಿಸುವುದರ ಮೂಲಕ ಮಾಂಸಾಹಾರದ ಅಡಿಗೆ ರುಚಿಯ ಸವಿಯ ಘಮವನ್ನು ಉಣಬಡಿಸಿ, ಅವರೊಳಗಿನ ನಳನನ್ನು ಅನಾವರಣಗೊಳಿಸಿ ತಮ್ಮ ಪಾಕಶಾಸ್ತ್ರ ಪ್ರಾವೀಣ್ಯವನ್ನು ಮೆರೆದಿದ್ದಾರೆ.

ತಮ್ಮ ಬಾಲ್ಯದ ಅದರಲ್ಲೂ ಶಾಲೆ–ಓದುಗಳ ವಿವರಗಳತ್ತ ಹೆಚ್ಚು ಒತ್ತುಕೊಟ್ಟು, ಮನೆಯೊಳಗಿನ ಪ್ರಪಂಚಕ್ಕೆ ಪ್ರವೇಶಿಸದೇ ಹೋಗಿರುವುದರಿಂದ, ಅವರ ಯೌವನ ಪ್ರೀತಿ– ಪ್ರೇಮ–ಮದುವೆಯ ವಿವರಗಳನ್ನು ಜಾಣ್ಮೆಯಿಂದ ಕೈ ಬಿಟ್ಟಿದ್ದಾರೋ ಅಥವಾ ತೀರಾ ಸಂಕೋಚದ ಸ್ವಭಾವದ ಲೇಖಕರು ತಮ್ಮ ಖಾಸಗಿತನವನ್ನು ಕಾಪಾಡಿಕೊಳ್ಳಲು ಯತ್ನಿಸಿದ್ದಾರೋ ಏನೋ?

ಮಲೆನಾಡಿನ ಚಿತ್ರವನ್ನು ಎಷ್ಟು ಸಶಕ್ತವಾಗಿ ಕಟ್ಟಿಕೊಟ್ಟಿದ್ದಾರೋ ಅಷ್ಟೇ ಸಮರ್ಥವಾಗಿ ನಗರವಾಸಿಗಳ ಅದರಲ್ಲೂ ಆ ಕಾಲದಲ್ಲಿದ್ದ ವಠಾರದ ನಿವಾಸಿಗಳ ಬಡತನದ ಬವಣೆಯನ್ನೂ ವರ್ಣಿಸುತ್ತಲೇ ಓದುಗನ ಅಂತರಂಗದ ಕದ ತಟ್ಟಿ ತಾವು ಅನುಭವಿಸಿದ ಸಂಕಷ್ಟವನ್ನು ಬಿಚ್ಚಿಡುತ್ತಾರೆ. ಶೌಚಾಲಯದ ಸ್ಥಿತಿಗತಿಯನ್ನು ಹೇಳುವಾಗ ವಾಚ್ಯವಾಗಬಹುದಾದುದ್ದನ್ನು ಅತೀ ಮಾಡದೆ ಸಂಯಮ ತೋರಿದ್ದಾರೆ.

ಇಲ್ಲಿಯ ಬಹಳ ಮುಖ್ಯವಾದ ಅಂಶವೆಂದರೆ ಪತ್ರಿಕಾ ಜಗತ್ತಿನ ಚಿತ್ರಣ. ಪತ್ರಿಕಾ ರಂಗದಲ್ಲಿ ಖ್ಯಾತನಾಮರಾಗಿದ್ದವರ ಒಡನಾಟ, ವ್ಯಕ್ತಿ ದರ್ಶನ, ಇವೆಲ್ಲವೂ ಒಂದು ರೀತಿಯಲ್ಲಿ ಅಂದಿನ ಮುದ್ರಣ ಮಾಧ್ಯಮದ ಇತಿಹಾಸವನ್ನು ಹೇಳುತ್ತವೆ. ಎಂತೆಂತಹ ಪ್ರತಿಭಾವಂತರು ಬುದ್ಧಿವಂತರು, ಆ ಕಾಲದಲ್ಲಿ ಪತ್ರಿಕೆಯಲ್ಲಿ ಕೆಲಸ ಪಡೆದುಕೊಳ್ಳಲು ಹರಸಾಹಸ ಮಾಡುತ್ತಿದ್ದ ಬಗೆ, ತೀರಾ ಕಡಿಮೆ ಸಂಬಳಕ್ಕೆ ಅವರು ಕಷ್ಟಪಡುತ್ತಿದ್ದ ರೀತಿ, ಹಿರಿಯರಿಂದ ಕೆಲಸ ಕಲಿಯಲು ಅದೆಷ್ಟು ಉತ್ಸುಕರಾಗಿದ್ದರೆಂಬುದನ್ನು, ಕಲಿಕೆಗೆ ಅವರು ಕೊಡುತ್ತಿದ್ದ ಮಹತ್ವದ ಚಿತ್ರಣವನ್ನಿಲ್ಲಿ ಕಾಣಬಹುದು. ಲೇಖಕರು ಈ ಕೃತಿಯಲ್ಲಿ ಒಂದು ಕಾಲಘಟ್ಟದ ಸಾಮಾಜಿಕ, ಶೈಕ್ಷಣಿಕ, ಮತ್ತು ಮಾಧ್ಯಮದ ಕಿರು ಇತಿಹಾಸವನ್ನು ಪರೋಕ್ಷವಾಗಿ ಕಟ್ಟಿ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ 'ಮಿತ್ರ ಲಾಭ' ಅಧ್ಯಯನ ಯೋಗ್ಯ ಪುಸ್ತಕ. ಅಂದಿನ ಪತ್ರಕರ್ತರಿಗಿದ್ದ ಬದ್ಧತೆ, ಕರ್ತವ್ಯನಿಷ್ಠೆ, ಶ್ರಮಜೀವನ ಇಂದು ಕಾಣುವುದೆಲ್ಲಿ? ಇಂದಿನ ಪತ್ರಕರ್ತರು ಅವಶ್ಯ ಓದಬೇಕಾದ ಕೃತಿಯಿದು.

ಅವರ ಬಾಲ್ಯದ ಗೆಳೆಯ ತಿಮ್ಮಪ್ಪನ ಸ್ನೇಹ ಸಿಂಚನವನ್ನು ಹೆಜ್ಜೆ ಹೆಜ್ಜೆಗೂ ಸ್ಮರಿಸುತ್ತಾ, ಮಿತ್ರನೊಂದಿಗೆ ನಡೆಸಿದ ಯಾತ್ರೆ ಸ್ವಾರಸ್ಯಕರ.

**– ಮೀನಾ ಮೈಸೂರು**

***

**(ಈ ಬರಹದ ಸ್ವಲ್ಪ ಭಾಗವನ್ನು ಮೊದಲು ಫೇಸ್ ಬುಕ್ ನಲ್ಲಿ 'ನೆನಪು' ಹೆಸರಿನಲ್ಲಿ ಪ್ರಕಟಿಸಿದಾಗ ವ್ಯಕ್ತವಾದ ಕೆಲವು ಅನಿಸಿಕೆಗಳನ್ನು ಇಲ್ಲಿ ಕೊಡಲಾಗಿದೆ. ಅಲ್ಲಿ ಪ್ರಕಟವಾದಾಗ ಪ್ರತಿಕ್ರಿಯೆ ನೀಡಿ ಉತ್ತೇಜಿಸಿದ ಎಲ್ಲ ಸಹೃದಯ ಗೆಳೆಯ ಗೆಳತಿಯರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ)**

ಒಂದಿಂಚೂ ಬೇಸರಿಸದೆ ಓದಿಸಿಕೊಂಡು ಹೋದುದು ಈ ಕೃತಿಯ ವಿಶಿಷ್ಟತೆ. ತನ್ನ ಆತ್ಮೀಯ ಸ್ನೇಹಿತನ ನೆನಪು ಉಳಿಸಿಕೊಳ್ಳುವ ಪ್ರಯತ್ನ. ಇದು ನನಗೆ ಖುಷಿ ನೀಡಿದ ಬರಹ.

ಮಲೆನಾಡಿನ ಪರಿಸರದ ಆಗಿನ ಕಾಲಘಟ್ಟದ ಮಳೆ ಆಸರೆಯ ಬೇಸಾಯ ಕ್ರಮ, ರೈತಾಪಿ ಪಾರಿಭಾಷಿಕ ಪರಿಚಿತ ಪದಗಳ ಬಳಕೆ, ಶಿಕಾರಿಯ ಸಾಹಸಗಳ ವಿಶ್ಲೇಷಣೆ ಎಲ್ಲವೂ ಕುತೂಹಲಕಾರಿ.

ಅವಿದ್ಯಾವಂತ ತಂದೆ 'ಪಾಸಾಗುವವರೆಗೆ ಓದಬೇಕು, ಪಾಸಾಗದಿದ್ದರೆ ವಾಪಸಾಗಿ ಮೇಳಿ ಹಿಡಿಯಬೇಕು' ಎಂಬುದು ಇವತ್ತಿನ ಲೇಖಕರ ಯಶಸ್ವಿ ಬದುಕಿನ ಬುನಾದಿಯಾಗಿರುವುದು ಅದೆಷ್ಟು ಸತ್ಯ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಗಂಭೀರತೆ, ಆ ಪರೀಕ್ಷೆಗಾಗಿ ಆನಂದಪುರದಲ್ಲಿ ವಾಸ್ತವ್ಯ, ಪರೀಕ್ಷೆಗಳ ಮಧ್ಯೆ ಸೆಕೆಂಡ್ ಷೋ ಚಿತ್ರ ನೋಡಿಬಂದದ್ದು, ಈ ವಿವರಣೆಗಳು ನಮ್ಮನ್ನು ಆ ದಿನಗಳಿಗೆ ಕೊಂಡೊಯ್ಯುತ್ತವೆ.

ನಿರುದ್ಯೋಗದ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಾನಪದ ಮಾಹಿತಿ ಸಂಗ್ರಾಹಕರಾಗಿ ಸೇರಿ ಆ ನಂತರ 'ಜನಪ್ರಗತಿ', 'ಉದಯರವಿ' ವಾರಪತ್ರಿಕೆಯಲ್ಲಿ ದುಡಿಯುತ್ತಿದ್ದಾಗ ಕ್ರಿಯಾ ಪ್ರಕಾಶನ, ಅಭಿವ್ಯಕ್ತಿ ವಿಚಾರ ವೇದಿಕೆಗಳಲ್ಲಿ ತೊಡಗಿಕೊಳ್ಳುವ ವಿವರಗಳು ಕುತೂಹಲ ಮೂಡಿಸುತ್ತವೆ. ಕಠಿಣ ಪರಿಶ್ರಮದಿಂದ ಪ್ರಜಾವಾಣಿಯಲ್ಲಿ ಉಪಸಂಪಾದಕರಾಗಿ, ವರದಿಗಾರರಾಗಿ ಆಯ್ಕೆಗೊಂಡ ಕ್ಷಣದ ವಿವರ ಅತ್ಯಂತ ಆಸಕ್ತಿ ಹುಟ್ಟಿಸುತ್ತದೆ.

**– ಶೈಲಜಾ ಅಂಗಡಿ**

ಎಷ್ಟೊಂದು ಏರಿಳಿತಗಳು ತಣ್ಣನೆ, ಉದ್ವೇಗರಹಿತ ಬರಹ ಸಾಕಷ್ಟು ತಿಳಿದುಕೊಳ್ಳೋದಿದೆ.

**– ಮಮತಾ ಅರಸೀಕೆರೆ**

ನಿಮ್ಮ ಕಾಲದ ಉದ್ಯೋಗ ಪಡೆಯುವ ಹೋರಾಟದ ಜೀವನ ಮಾದರಿಯಾಗಿದೆ.

**–ಎನ್.ಶ್ರೀನಿವಾಸ್**

ಆಪ್ತ ಬರಹ

**– ಕೆ.ಬಿ.ರಂಗಸ್ವಾಮಿ**

ಬದುಕಿನ ದುಸ್ತರದ ಪಯಣ, ಸಾಧನೆಗೆ ಇಂಬು ನೀಡುವಂತಿದೆ ಬರಹ.

**– ಡಾ.ಹನಿಯೂರು ಚಂದ್ರೇಗೌಡ**

ಚಂದದ ನೆನಪುಗಳ ನಿವೇದನೆ.

**– ರಘುನಾಥ ಕೃಷ್ಣಮಾಚಾರ್**

ಪ್ರಜಾವಾಣಿ ಪುರವಣಿ ಬಗೆಗೆ ವೈಕುಂಠರಾಜು ಅವರು ಪದೇ ಪದೇ ಬೀಳುವ ಕನಸಿನಂತೆ ನೆನಪುಗಳನ್ನು ಮೆಲುಕು ಹಾಕುತ್ತಲೇ ಇದ್ದರು. ವಾರಪತ್ರಿಕೆಯ ಅವರ ಚುಚ್ಚುಮದ್ದು ಮುಂತಾದ ಬರಹಗಳಿಗೆ ವಿಧಾನಸೌಧದ ಆಫ್ ದ ರೆಕಾರ್ಡ್ ಗಳನ್ನು ಒದಗಿಸುವ ಕಾಯಕ ನನ್ನದಾಗಿತ್ತು. ನನ್ನ 'ಬದುಕು' ಎಂಬ ಕವಿತೆಯನ್ನು ಮೇಸ್ಟ್ರು ಸೆಲೆಕ್ಟ್ ಮಾಡಿ ಇಪ್ಪತ್ತೈದು ರೂಪಾಯಿ ಸಂಭಾವನೆ ಕಳಿಸಿದ್ದು ನೆನಪಾಯಿತು.

**– ವೈ.ಜಿ.ಅಶೋಕ್ ಕುಮಾರ್**

ಕಲ್ಲೆ ಅವರು ನನಗೂ ಗುರುಗಳು, ನಿಮ್ಮ ಬದುಕಿನ ಪಯಣ ಚೆನ್ನಾಗಿದೆ.

**– ಸನತ್ ಕುಮಾರ್ ಬೆಳಗಲಿ**

ತುಂಬ ಚೆನ್ನಾಗಿದೆ!! ನಿಮ್ಮ ತಲೆಮಾರಿನ ಹೋರಾಟದ ಕತೆಯೇ ನಮಗೆಲ್ಲಾ ಒಂದು ರೀತಿಯ ಪ್ರೇರಣೆ.

**– ರಾಜೇಶ್ ಎನ್.ನಾಯ್ಕ್, (ಅಮೆರಿಕದಲ್ಲಿ ಭಾರತದ ರಾಜತಾಂತ್ರಿಕ ಅಧಿಕಾರಿ)**

ನೀವು ಬರೆದುದೆಲ್ಲವನ್ನೂ ನಾನು ಕಣ್ಣಿನಿಂದ ನೋಡಿದಂತೆ ಆಪ್ತವಾಯಿತು.

**– ಕಾದಂಬಿನಿ ರಾವಿ**

ಮಂಡ್ಯ ನೆಲದ ಹೋರಾಟದ ದಾಖಲಾರ್ಹ ಲೇಖನ. ಜತೆಗೆ ಅಲ್ಲಿನ ಪತ್ರಿಕೆಗಳ ಪಾತ್ರಗಳ ನಿರ್ವಹಣೆ. ತುರ್ತುಸ್ಥಿತಿಯಲ್ಲಿನ ರಾಜಕೀಯ ಡೋಲಾಯಮಾನವನ್ನು ಚೆನ್ನಾಗಿ ತಿಳಿಸಿದ್ದೀರಿ.

**– ಸಂತೆಕೆಸಲಗೆರೆ ಪ್ರಕಾಶ್**

ಪೂರ್ಣ ಕಥನ ಒಂದು ರೀತಿ ಸಾಹಿತ್ಯ ಚರಿತ್ರೆಯೇ. ಪ್ರತಿಯೊಬ್ಬ ಲೇಖಕನದೂ ಒಂದೊಂದು ಸಾಹಿತ್ಯ ಚರಿತ್ರೆ ಇರುತ್ತಲ್ಲಾ, ಇದನ್ನು ಓದುತ್ತಿದ್ದಂತೆಯೇ ನನ್ನ ಸಾಹಿತ್ಯ.. ಸಾಂಸ್ಕೃತಿಕ ಚರಿತ್ರೆ ತೆರೆದುಕೊಳ್ಳುತ್ತಾ ಹೋಯಿತು. ಸರಳ ಹಾಗೂ ಆಕರ್ಷಕ. ಬರಹಕ್ಕೊಂದು ಚುಂಬಕ ಶಕ್ತಿ ಇದೆ. ನಿಮ್ಮ ಬರಹ ನನ್ನನ್ನು ಪ್ರಭಾವಿಸಿದೆ..

**– ಮಲ್ಲಿಕಾರ್ಜುನ ಮಹಾಮನೆ**